ಪುಟಾಣಿ ಶಿವಾಜಿ
ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ಕಲಬುರಗಿ ನಗರದಲ್ಲಿ ಗುರುವಾರ ನಡೆದ ಮೆರವಣಿಗೆಯಲ್ಲಿ ಶಿವಾಜಿ ವೇಷಭೂಷಣ ತೊಟ್ಟಿದ್ದ ಬಾಲಕ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 82,498 | ನಿಫ್ಟಿ 25,454 | ಚಿನ್ನ (Std. 10g) ₹1,61,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,60,700 (ಬೆಂಗಳೂರು)

ಶುದ್ಧ ನೀರು: ಪೂರೈಕೆ ಏರುಪೇರು

2,911 ಘಟಕ ಸ್ಥಗಿತ • ದುರಸ್ತಿಗೆ ಹಂಚಿಕೆಯಾಗಿದ್ದು ಕೇವಲ ₹50 ಸಾವಿರ

• ರಾಜೇಶ್ ರೈ ಚಟ್ಲ

ಬೆಂಗಳೂರು: ನಗರ ಮತ್ತು ಗ್ರಾಮೀಣ ಭಾಗದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಸರ್ಕಾರ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕಗಳು ನಿರ್ವಹಣೆ ಇಲ್ಲದೆ ಸೊರಗುತ್ತಿವೆ.

ಬೇಸಿಗೆ ಬಿರುಸುಗೊಳ್ಳುತ್ತಿರುವ ಹೊತ್ತಿನಲ್ಲಿ ಕುಡಿಯುವ ನೀರಿನ ಬೇಡಿಕೆಯೂ ದಿನೇ ದಿನೇ ಹೆಚ್ಚಾಗುತ್ತಿದೆ. ಇದೇ ಸಮಯದಲ್ಲಿ ನೀರು ಪೂರೈಕೆಯ ಘಟಕಗಳಿಗೂ ಗ್ರಹಣ ಬಡಿದಿದೆ.

‘31 ಜಿಲ್ಲೆಗಳ ಗ್ರಾಮೀಣ ಭಾಗಗಳಲ್ಲಿ ಅಳವಡಿಸಿರುವ ಒಟ್ಟು 19,407 ಶುದ್ಧ ನೀರಿನ ಘಟಕಗಳ ಪೈಕಿ, 2,911 ಘಟಕಗಳು ಸ್ಥಗಿತಗೊಂಡಿವೆ’ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮೂಲಗಳು ತಿಳಿಸಿವೆ.

ಶುದ್ಧ ನೀರಿನ ಪೂರೈಕೆಯಲ್ಲಿ ಆಡಳಿತ ವ್ಯವಸ್ಥೆಯ ವೈಫಲ್ಯ, ಕಲುಷಿತ ನೀರು ಕುಡಿದು ಸಂಭವಿಸಿದ ಸಾವು ನೋವುಗಳಿಗೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್ ಮತ್ತು ಲೋಕಾಯುಕ್ತವು ಸರ್ಕಾರಕ್ಕೆ ಈಗಾಗಲೇ ಚಾಟಿ ಬೀಸಿದೆ. ವಿಧಾನ ಮಂಡಲ ಅಧಿವೇಶನದಲ್ಲಿಯೂ ಈ ವಿಷಯ ಪ್ರಸ್ತಾಪಗೊಂಡಿದೆ. ಈ ಕಾರಣಕ್ಕೆ, ದುಃಸ್ಥಿತಿಯಲ್ಲಿರುವ ಘಟಕಗಳ ದುರಸ್ತಿಗೆ ಇಲಾಖೆ ಮುಂದಾಗಿದೆ.

ಸ್ಥಗಿತಗೊಂಡಿರುವ ಘಟಕಗಳನ್ನು ಪುನಶ್ಚೇತನಗೊಳಿಸಲು 2025–26ನೇ ಸಾಲಿನ ಜಲಜೀವನ್ ಮಿಷನ್ ಯೋಜನೆಯಲ್ಲಿ, ವಿಶೇಷ ಅಭಿವೃದ್ಧಿ ಯೋಜನೆ (ಎಸ್‌ಡಿಪಿ) ಮತ್ತು ವಿಶೇಷ ಅಭಿವೃದ್ಧಿ ಯೋಜನೇತರ (ನಾನ್ ಎಸ್‌ಡಿಪಿ) ಅನುದಾನದಲ್ಲಿ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಪ್ರತಿ ಘಟಕಕ್ಕೆ ತಲಾ ₹50 ಸಾವಿರದಂತೆ ಇಲಾಖೆಯು ಅನುದಾನ ಹಂಚಿಕೆ ಮಾಡಿದೆ. 2,446 ಘಟಕಗಳ ದುರಸ್ತಿಗೆ ಎಸ್‌ಡಿಪಿ ಅಡಿ ₹12.23 ಕೋಟಿ, 454 ಘಟಕಗಳ ದುರಸ್ತಿಗೆ ಎಸ್‌ಡಿಪಿ ಹೊರತಾದ ಮೂಲದಿಂದ ₹2.27 ಕೋಟಿ ಸೇರಿ ಒಟ್ಟು 2,900 ಘಟಕಗಳನ್ನು ಮತ್ತೆ ಕಾರ್ಯನಿರ್ವಹಿಸುವಂತೆ ಮಾಡಲು ₹15.50 ಕೋಟಿ ಒದಗಿಸಿದೆ.

‘ಶುದ್ಧ ನೀರು ಪೂರೈಕೆ ವಿಚಾರದಲ್ಲಿ ವೈಯಕ್ತಿಕವಾಗಿ ಗಮನಹರಿಸಬೇಕು. ದುಃಸ್ಥಿತಿಯಲ್ಲಿರುವ ಘಟಕಗಳನ್ನು ತುರ್ತಾಗಿ ದುರಸ್ತಿಗೊಳಿಸಿ ಈ ತಿಂಗಳ ಅಂತ್ಯದೊಳಗೆ ವರದಿ ಸಲ್ಲಿಸಬೇಕು. ಇದು ನ್ಯಾಯಾಲಯಕ್ಕೆ ಸಂಬಂಧಿಸಿದ ಪ್ರಕರಣ ಆಗಿರುವುದರಿಂದ ಗಂಭೀರವಾಗಿ ಪರಿಗಣಿಸಬೇಕು’ ಎಂದು ಸೂಪರಿಂಟೆಂಡೆಂಟ್ ಎಂಜಿನಿಯರ್‌ಗಳು ಮತ್ತು ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಇಲಾಖೆಯ ಆಯುಕ್ತ ಡಿ. ರಂದೀಪ್ ಸೂಚನೆ ನೀಡಿದ್ದಾರೆ.

‘ಶುದ್ಧ ನೀರಿನ ಘಟಕಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಟೆಂಡರ್ ಮೂಲಕ ಏಜೆನ್ಸಿಗಳಿಗೆ ವಹಿಸಲಾಗುತ್ತದೆ. ನಿರ್ವಹಣೆಯ ಅವಧಿ ಮುಗಿದ ಬಳಿಕ ಏಜೆನ್ಸಿಗಳು ಗ್ರಾಮ ಪಂಚಾಯಿತಿಗಳಿಗೆ ಘಟಕವನ್ನು ಹಸ್ತಾಂತರಿಸಬೇಕು. ಎಲ್ಲ ಘಟಕಗಳ ನಿರ್ವಹಣೆಗೆ ಪ್ರತಿ ಗ್ರಾಮ ಪಂಚಾಯಿತಿ ವಾರ್ಷಿಕ ₹36 ಸಾವಿರ ವೆಚ್ಚ ಮಾಡಲು ಅವಕಾಶವಿದೆ.

▶8

19,407	2,911	16,496	₹50 ಸಾವಿರ
ಶುದ್ಧ ನೀರಿನ ಒಟ್ಟು ಘಟಕಗಳು	ಸ್ಥಗಿತಗೊಂಡ ಘಟಕಗಳು	ಚಾಲ್ತಿಯಲ್ಲಿ ಇರುವ ಘಟಕಗಳು	ಪ್ರತಿ ಘಟಕದ ದುರಸ್ತಿಗೆ ಒದಗಿಸಿದ ಹಣ

‘ಶುದ್ಧ ನೀರು ಪೂರೈಕೆಗೆ ಕ್ರಮ’

ಏಜೆನ್ಸಿಗಳು ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲು ತೋರಿಸಿದ ಆಸಕ್ತಿಯನ್ನು ನಿರ್ವಹಣೆಗೆ ತೋರಿಸುವುದಿಲ್ಲ. ಏಜೆನ್ಸಿಗಳಿಂದ ಹಸ್ತಾಂತರವಾಗಿರುವ ಘಟಕಗಳನ್ನು ಗ್ರಾಮ ಪಂಚಾಯಿತಿಗಳು ಸರಿಯಾಗಿ ನಿರ್ವಹಿಸದಿರುವುದೂ ಸಮಸ್ಯೆಯಾಗಿದೆ. ಘಟಕಗಳ ಕಾರ್ಯನಿರ್ವಹಣೆಯ ಜೊತೆಗೆ, ಕುಡಿಯುವ ನೀರಿನ ಕೊರತೆ ಕಾಣಿಸಿಕೊಳ್ಳಬಹುದಾದ ಹಳ್ಳಿಗಳನ್ನು 15 ದಿನಗಳ ಮೊದಲೇ ಗುರುತಿಸಿ ಶುದ್ಧ ನೀರು ಪೂರೈಸಲು ಕ್ರಮ ತೆಗೆದುಕೊಳ್ಳಲಾಗುವುದು

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ

ಕಲಬುರಗಿಯಲ್ಲಿ ಅತೀ ಹೆಚ್ಚು ಘಟಕ ಸ್ಥಗಿತ

ಗ್ರಾಮೀಣಾಭಿವೃದ್ಧಿ ಇಲಾಖೆಯ ಹೊಣೆಹೊತ್ತ ಪ್ರಿಯಾಂಕ್ ಖರ್ಗೆ ಉಸ್ತುವಾರಿ ಸಚಿವರಾಗಿರುವ ಕಲಬುರಗಿ ಜಿಲ್ಲೆಯಲ್ಲೇ ಅತಿ ಹೆಚ್ಚು ಘಟಕಗಳು ಸ್ಥಗಿತಗೊಂಡಿವೆ.

‘ಕಲ್ಯಾಣ ಕರ್ನಾಟಕ ಭಾಗದಲ್ಲಿ ನೀರು ನೈಸರ್ಗಿಕವಾಗಿ ಆರ್ಸೆನಿಕ್ ಹಾಗೂ ಫ್ಲೋರೈಡ್ ಅಂಶ ಹೊಂದಿರುವುದರಿಂದ ಅಲ್ಲಿನ ನೀರು ಕುಡಿಯಲು ಯೋಗ್ಯವಾಗಿಲ್ಲ. ಈ ಭಾಗದಲ್ಲಿ ಅಳವಡಿಸಿದ ಘಟಕಗಳಲ್ಲಿ ಹೆಚ್ಚಿನವು ಜಲಮೂಲಗಳ ಕೊರತೆ, ಅಸಮರ್ಪಕ ಅನುಷ್ಠಾನ, ಅವೈಜ್ಞಾನಿಕ ಕಾಮಗಾರಿ, ಅನುದಾನ ಕೊರತೆ ಮತ್ತಿತರ ಕಾರಣಗಳಿಗೆ ಸ್ಥಗಿತಗೊಂಡಿವೆ. ಕೆಲವು ಘಟಕಗಳ ಬಾಗಿಲು ಮುಚ್ಚಿದ್ದು, ಯಂತ್ರಗಳು ತುಕ್ಕು ಹಿಡಿಯುತ್ತಿವೆ. ಕಲಬುರಗಿ ಜಿಲ್ಲೆಯಲ್ಲಿ ಅತೀ ಹೆಚ್ಚು 358 ಘಟಕಗಳು ಕೆಲಸ ಮಾಡುತ್ತಿಲ್ಲ. ಕೊಪ್ಪಳದಲ್ಲಿ 280, ಯಾದಗಿರಿಯಲ್ಲಿ 247, ವಿಜಯಪುರ ಜಿಲ್ಲೆಯಲ್ಲಿ 243 ಘಟಕಗಳು ನಿಷ್ಕ್ರಿಯವಾಗಿವೆ’ ಎಂದು ಇಲಾಖೆಯ ಮೂಲಗಳು ಹೇಳಿವೆ.

ಉಚಿತ ಕೊಡುಗೆ: ‘ಸುಪ್ರೀಂ’ ಚಾಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಚುನಾವಣೆಗೆ ಮುನ್ನ ಉಚಿತ ಕೊಡುಗೆಗಳು ಹಾಗೂ ಸಬ್ಸಿಡಿಗಳನ್ನು ಘೋಷಿಸುವ ರಾಜ್ಯ ಸರ್ಕಾರಗಳ ಪ್ರವೃತ್ತಿಯನ್ನು ಗುರುವಾರ ಕಟುವಾಗಿ ಟೀಕಿಸಿದ ಸುಪ್ರೀಂ ಕೋರ್ಟ್, ‘ಇಂತಹ ಯೋಜನೆಗಳ ವೆಚ್ಚಗಳ ಅಂತಿಮ ಹೊರೆ ತೆರಿಗೆದಾರರ ಮೇಲೆ ಬೀಳುತ್ತಿದೆ’ ಎಂದು ಅಭಿಪ್ರಾಯಪಟ್ಟಿದೆ.

‘ವಿದ್ಯುತ್ (ತಿದ್ದುಪಡಿ) ನಿಯಮಗಳು–2024’ರ ನಿಯಮ 23 ಅನ್ನು ಪ್ರಶ್ನಿಸಿ ತಮಿಳುನಾಡು ವಿದ್ಯುತ್ ವಿತರಣಾ ನಿಗಮ ಲಿಮಿಟೆಡ್ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಮತ್ತು ನ್ಯಾಯಮೂರ್ತಿ ವಿಪುಲ್ ಎಂ. ಪಂಚೋಲಿ ಅವರ ಪೀಠವು, ‘ದೇಶದ ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾಗಿರುವ ಇಂತಹ ನೀತಿಗಳನ್ನು ಮರುಪರಿಶೀಲಿಸುವುದು ಅತ್ಯಗತ್ಯ’ ಎಂದು ಹೇಳಿದೆ.

▶9

ಪೀಠದ ನುಡಿ

- ಉಳ್ಳವರು ಮತ್ತು ಬಡವರು ಎಂಬ ವ್ಯತ್ಯಾಸ ಗುರುತಿಸದೆಯೇ ವಿವೇಚನೆಯಿಲ್ಲದೆ ಜನರಿಗೆ ಇಂತಹ ಯೋಜನೆಗಳನ್ನು ನೀಡುವುದು ಓಲೈಕೆಯಲ್ಲದೇ ಬೇರೇನೂ ಅಲ್ಲ, ಇದು ದೇಶದ ಆರ್ಥಿಕ ಅಭಿವೃದ್ಧಿಗೆ ಅನುಕೂಲಕರವಲ್ಲ
- ದೇಶದ ಹೆಚ್ಚಿನ ರಾಜ್ಯಗಳು ವಿತ್ತೀಯ ಕೊರತೆ ಎದುರಿಸುತ್ತಿವೆ. ಆದರೂ, ಅಭಿವೃದ್ಧಿಯನ್ನು ಕಡೆಗಣಿಸಿ ಉಚಿತ ಕೊಡುಗೆಗಳನ್ನು ನೀಡುತ್ತಲೇ ಇವೆ. ಇಂತಹ ಪ್ರವೃತ್ತಿ ಇನ್ನೆಷ್ಟು ಕಾಲ ಮುಂದುವರಿಯುತ್ತದೆ?
- ರಾಜ್ಯಗಳು ಇಂತಹ ಚುನಾವಣಾ ಭರವಸೆಗಳಿಗಿಂತ ದೀರ್ಘಕಾಲೀನ ಅಭಿವೃದ್ಧಿ ಯೋಜನೆಗಳತ್ತ ಗಮನಹರಿಸಬೇಕು
- ರಾಜ್ಯಗಳು ಉಚಿತ ಆಹಾರ, ಸೈಕಲ್, ವಿದ್ಯುತ್ ಮತ್ತು ನೇರ ನಗದು ವರ್ಗಾವಣೆಯಂತಹ ಒಂದರ ನಂತರ ಒಂದರಂತೆ ಯೋಜನೆಗಳನ್ನು ನೀಡುವುದನ್ನು ಮುಂದುವರಿಸಿದರೆ, ಅಭಿವೃದ್ಧಿ ವೆಚ್ಚದ ಮೇಲೆ ಭಾರಿ ಪರಿಣಾಮ ಬೀರುತ್ತದೆ. ಅಂತಹ ಸನ್ನಿವೇಶದಲ್ಲಿ, ಹೆಚ್ಚಿನ ತೆರಿಗೆ ಹಣವು ಸಂಬಳ ಪಾವತಿಸಲು ಮತ್ತು ಈ ಯೋಜನೆಗಳಿಗೆ ಹಣಕಾಸು ಒದಗಿಸಲು ಮಾತ್ರ ಬಳಕೆಯಾಗಲಿದೆ. ದೀರ್ಘಾವಧಿಯ ಬೆಳವಣಿಗೆಗೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಬಳಸಲು ಬಹಳ ಕಡಿಮೆ ಹಣ ಉಳಿಯಲಿದೆ

ಹುಬ್ಬಳ್ಳಿಯಲ್ಲಿ ರಣಜಿ ಟ್ರೋಫಿ ಫೈನಲ್ 24ರಿಂದ

ಬೆಂಗಳೂರು: ಹುಬ್ಬಳ್ಳಿಯ ರಾಜನಗರದಲ್ಲಿರುವ ಕೆಎಸ್‌ಸಿಎ ಮೈದಾನದಲ್ಲಿ ಇದೇ 24ರಿಂದ 28ರವರೆಗೆ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯ ನಡೆಯಲಿದೆ. ಕರ್ನಾಟಕ ಮತ್ತು ಜಮ್ಮು–ಕಾಶ್ಮೀರ ತಂಡಗಳು ಮುಖಾಮುಖಿಯಾಗಲಿವೆ.

ಕರ್ನಾಟಕ ತಂಡವು ಲಖನೌನಲ್ಲಿ ಗುರುವಾರ ಮುಕ್ತಾಯವಾದ ಸೆಮಿಫೈನಲ್‌ನಲ್ಲಿ ಉತ್ತರಾಖಂಡದ ಎದುರು ಡ್ರಾ ಮಾಡಿಕೊಂಡಿತು. ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿದ್ದ ಕರ್ನಾಟಕ ಫೈನಲ್ ಪ್ರವೇಶಿಸಿತು. ಜಮ್ಮು–ಕಾಶ್ಮೀರ ತಂಡವು ಕಲ್ಯಾಣಿಯಲ್ಲಿ ನಡೆದಿದ್ದ ನಾಲ್ಕರ ಘಟ್ಟದ ಪಂದ್ಯದಲ್ಲಿ ಬಂಗಾಳವನ್ನು ಸೋಲಿಸಿತ್ತು.

ಚಿನಕುರುಳಿ ಪ್ರಕಾಶ್ ಶೆಟ್ಟಿ

‘ಮೊಬೈಲ್ ಬಿಡಿ– ಪುಸ್ತಕ ಹಿಡಿ’ ಅಭಿಯಾನ

ಬೆಂಗಳೂರು: ಮೊಬೈಲ್ ಗೀಳಿನಿಂದ ಮಕ್ಕಳನ್ನು ಹೊರತರಲು ಶಾಲಾ ಶಿಕ್ಷಣ ಇಲಾಖೆ ‘ಮೊಬೈಲ್ ಬಿಡಿ–ಪುಸ್ತಕ ಹಿಡಿ’ ಅಭಿಯಾನ ಆರಂಭಿಸಿದೆ.

ಮೊಬೈಲ್‌ನ ಅತಿಯಾದ ಬಳಕೆ ಓದು ಹಾಗೂ ಕ್ರೀಡೆ ಸೇರಿದಂತೆ ದೈಹಿಕ ಚಟುವಟಿಕೆಗಳ ಮೇಲಿನ ಆಸಕ್ತಿಯನ್ನು ಕುಗ್ಗಿಸುತ್ತದೆ. ವಿದ್ಯಾರ್ಥಿಗಳನ್ನು ಮೊಬೈಲ್ ಗೀಳಿನಿಂದ ಹೊರತರಲು ಸೂಕ್ತ ವಾತಾವರಣ ಕಲ್ಪಿಸುವ ಜವಾಬ್ದಾರಿಯನ್ನು ಆಯಾ ಶಾಲೆಗಳ ಶಿಕ್ಷಕರು, ಪೋಷಕರು, ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಗಳಿಗೆ (ಎಸ್‌ಡಿಎಂಸಿ) ನೀಡಲಾಗಿದೆ.

ಸೈಬರ್ ಅಪರಾಧ, ಆನ್‌ಲೈನ್ ವಂಚನೆ, ಡಿಜಿಟಲ್ ಅರೆಸ್ಟ್ ಹಾಗೂ ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ನೈಜ ಘಟನೆಗಳನ್ನು ಹಂಚಿಕೊಂಡಾಗ ಮಕ್ಕಳು ವಾಸ್ತವ ಸ್ಥಿತಿ ಅರ್ಥಮಾಡಿಕೊಳ್ಳುತ್ತಾರೆ. ವಿವಿಧ ಇಲಾಖೆಗಳ ಸಹಯೋಗದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಮಕ್ಕಳಿಗೆ ಯೋಗಾಭ್ಯಾಸ ಮಾಡಿಸಬೇಕು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.



ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಗಸ ಇರಲಿದೆ.

ಮೆಟ್ರೊದಲ್ಲಿ ಮದ್ಯ ಸಾಗಾಟಕ್ಕೆ ಅವಕಾಶ?

ಬೆಂಗಳೂರು ಮೆಟ್ರೊ ರೈಲು ನಿಗಮದ ಚರ್ಚೆಯ ಹಂತದಲ್ಲಿರುವ ವಿಚಾರ

ಮುಖ್ಯಾಂಶಗಳು
- ಸಂಪೂರ್ಣ ಪ್ಯಾಕ್ ಮಾಡಿದ ಮದ್ಯದ ಬಾಟಲಿ ಒಯ್ಯಬಹುದು?
- ಮೆಟ್ರೊ ನಿಯಮಾವಳಿ ಮಾರ್ಪಾಡು
- ದೆಹಲಿ ಮೆಟ್ರೊದಲ್ಲಿ ಸೀಮಿತ ಅವಕಾಶ ಇದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ನೀಲಿ ಮಾರ್ಗದಲ್ಲಿ ಮಿತಿಯೊಳಗೆ ಮದ್ಯ ಸಾಗಾಟ ಮಾಡಲು ಅವಕಾಶ ನೀಡುವ ಬಗ್ಗೆ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಚಿಂತನೆ ನಡೆಸಿದೆ. ಆಡಳಿತ ಮಂಡಳಿಯಲ್ಲಿ ಚರ್ಚೆಯ ಹಂತದಲ್ಲಿದ್ದು, ಅಂತಿಮಗೊಂಡಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಇತ್ತೀಚೆಗೆ ನಡೆದ ನಿಗಮದ ಆಡಳಿತ ಮಂಡಳಿಯ ಸಭೆಯಲ್ಲಿ ಈ ಕುರಿತು ಚರ್ಚೆಯಾಗಿತ್ತು. 'ಮೆಟ್ರೊ ಪ್ರಯಾಣಿಕರು ಸಂಪೂರ್ಣ ಪ್ಯಾಕ್ ಮಾಡಿದ ಮದ್ಯದ ಬಾಟಲಿಗಳನ್ನು ತೆಗೆದುಕೊಂಡು ಹೋಗಲು ಅವಕಾಶ ನೀಡಬಹುದು. ಈಗ ಅಂಥ ಅವಕಾಶ ಇಲ್ಲದೇ ಇರುವುದರಿಂದ ಅಂಥ ಪ್ರಯಾಣಿಕರು ಮೆಟ್ರೊ ಬಿಟ್ಟು ಬೇರೆ ಸಾರಿಗೆ ಬಳಸುತ್ತಿದ್ದಾರೆ ಎಂಬ ವಿಷಯ ಪ್ರಸ್ತಾಪವಾಗಿತ್ತು. ಅನುಮೋದನೆ ಸಿಕ್ಕಿದರೆ ಮೆಟ್ರೊ ನಿಯಮಾವಳಿಯಲ್ಲಿ ಮಾರ್ಪಾಡು ಮಾಡಲಾಗುವುದು' ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

'ಸದ್ಯ ದೆಹಲಿಯಲ್ಲಿ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಮೆಟ್ರೊ ಮಾರ್ಗದಲ್ಲಿ ಮದ್ಯ ಒಯ್ಯಲು ಅವಕಾಶ ನೀಡಲಾಗಿದೆ. ಅದೇ ಮಾದರಿಯನ್ನು ಇಲ್ಲಿಯೂ ಅನುಸರಿಸಲಾಗುವುದು. ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಮೆಟ್ರೊ ಮಾರ್ಗದಲ್ಲಿ ಸಂಚಾರ ಆರಂಭಗೊಂಡಾಗ ಮದ್ಯ ಒಯ್ಯಲು ಅವಕಾಶ ಸಿಗುವ ಸಾಧ್ಯತೆ ಇದೆ. ನೀಲಿ ಮಾರ್ಗವು ಪೂರ್ಣಗೊಂಡು ತೆರೆದುಕೊಳ್ಳಲು ಇನ್ನೆರಡು ವರ್ಷ ಬೇಕಾಗಬಹುದು' ಎಂದು ಹೇಳಿದ್ದಾರೆ.

ಸದ್ಯ ಬಿಎಂಆರ್‌ಸಿಎಲ್ 58 ನಿಷೇಧಿತ ವಸ್ತುಗಳನ್ನು ಪಟ್ಟಿಮಾಡಿದೆ. ಅದರಲ್ಲಿ, ಸ್ಫೋಟಕ, ಶಸ್ತ್ರಾಸ್ತ್ರ, ಚೂಪಾದ ವಸ್ತು, ರಾಸಾಯನಿಕ ಹಾಗೂ ಸುಲಭವಾಗಿ ದಹನಗೊಳ್ಳಬಲ್ಲ ಪದಾರ್ಥಗಳೂ ಸೇರಿವೆ. ಆಲ್ಕೋಹಾಲ್, ಸ್ಪಿರಿಟ್ ದಹನಗೊಳ್ಳಬಲ್ಲ ವಸ್ತುಗಳ ಪಟ್ಟಿಯಲ್ಲಿ ಇರುವುದರಿಂದ ಮದ್ಯ ಒಯ್ಯಲು ಅವಕಾಶ ನಿರಾಕರಿಸಲಾಗಿದೆ.

'ಮೆಟ್ರೊ ರೈಲುಗಳಲ್ಲಿ ಮದ್ಯ ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲು ನಿರ್ದಿಷ್ಟ ಕಾರಣವಿಲ್ಲ. ಜನರು, ಸದ್ಯ ಮದ್ಯ ಸೇವಿಸಿಯೂ ಪ್ರಯಾಣಿಸುತ್ತಿದ್ದಾರೆ. ಅದು ಮಿತಿ ಮೀರಿರಬಾರದು' ಎಂಬುದಾಗಿ ಅಧಿಕಾರಿಯೊಬ್ಬರು ಸಭೆಯಲ್ಲಿ ಹೇಳಿದ್ದರು. ಮಿತಿಯ ಪ್ರಮಾಣವೆಷ್ಟು ಎಂಬುದನ್ನು ಸ್ಪಷ್ಟವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಮತದಾರರ ಪಟ್ಟಿ: ದೋಷ ಸರಿಪಡಿಸುವಂತೆ ಡಿಕೆಶಿ ಪತ್ರ

ಮನೆವಾರು ಮ್ಯಾಪಿಂಗ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಹಲವು ಕಡೆಗಳಲ್ಲಿ ಮತದಾರರ ಪಟ್ಟಿಯಲ್ಲಿ ಲೋಪದೋಷಗಳು ಕಂಡುಬಂದಿದ್ದು, ಅದನ್ನು ಸರಿಪಡಿಸಲು ಬೀದಿವಾರು, ಮನೆವಾರು ಮ್ಯಾಪಿಂಗ್ ಮಾಡಬೇಕು' ಎಂದು ಆಗ್ರಹಿಸಿ ರಾಜ್ಯ ಚುನಾವಣಾ ಆಯೋಗಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪತ್ರ ಬರೆದಿದ್ದಾರೆ.

'ಮತದಾರರ ಪಟ್ಟಿಯಲ್ಲಿ ಒಂದೇ ಕುಟುಂಬದ ಮತದಾರರನ್ನು ಬೇರೆ ಬೇರೆ ಮತಗಟ್ಟೆಗಳು ಹಾಗೂ ಬೇರೆ ವಾರ್ಡ್‌ಗಳಿಗೆ ವಿಂಗಡಿಸಲಾಗಿದೆ. ಮತದಾರರ ವಿಳಾಸದಲ್ಲಿ ಮನೆ ಸಂಖ್ಯೆ, ರಸ್ತೆ ಸಂಖ್ಯೆ ತಪ್ಪಾಗಿ ನಮೂದಿಸಲಾಗಿದೆ. ಕೆಲವು ಮತದಾರರ ಹೆಸರು ಎರಡು ಹಾಗೂ ಹೆಚ್ಚು ಬಾರಿ ಸೇರ್ಪಡೆಯಾಗಿದ್ದರೆ, ಇನ್ನೂ ಕೆಲವರ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಕೆಲವು ಬೀದಿಗಳಲ್ಲಿರುವ ಮತದಾರರ ಹೆಸರು ಪಟ್ಟಿಯಲ್ಲಿ ಕಣ್ಮರೆಯಾಗಿದೆ. ಕೆಲವು ಮತದಾರರ ವಿಳಾಸ ಸರಿಯಾಗಿದ್ದರೂ ಅವರನ್ನು ಬೇರೆ ವಾರ್ಡ್‌ಗಳ ಪಟ್ಟಿಯಲ್ಲಿ ಸೇರಿಸಲಾಗಿದೆ' ಎಂದು ಪತ್ರದಲ್ಲಿ ಅವರು ವಿವರಿಸಿದ್ದಾರೆ.

'ಈ ತಪ್ಪುಗಳು ಕಣ್ತಪ್ಪಿನಿಂದ ಆಗಿರುವಂತೆ ಕಾಣುವುದಿಲ್ಲ. ರಾಜಕೀಯ ಪಕ್ಷಗಳಲ್ಲಿ ಗೊಂದಲ ಮೂಡಿಸಲು ಉದ್ದೇಶಪೂರ್ವಕವಾಗಿ, ವ್ಯವಸ್ಥಿತವಾಗಿ ನಡೆಸಿರುವಂತಿದೆ. ಇದರಿಂದ ಮತದಾರರ ಪಟ್ಟಿಯ ವಿಶ್ವಾಸಾರ್ಹತೆಗೆ ಧಕ್ಕೆ ಆಗಿದೆ. ಈ ಪ್ರಮಾದಗಳನ್ನು ಪಾರದರ್ಶಕವಾಗಿ ಹಾಗೂ ಶಾಶ್ವತವಾಗಿ ಸರಿಪಡಿಸಲು ಮ್ಯಾಪಿಂಗ್ ಮಾಡಬೇಕು' ಎಂದು ಅವರು ಆಗ್ರಹಿಸಿದ್ದಾರೆ.

'ಪ್ರತಿ ಮತಗಟ್ಟೆ ವ್ಯಾಪ್ತಿಯಲ್ಲಿರುವ ಎಲ್ಲ ಬೀದಿಗಳು, ಪ್ರತಿ ಬೀದಿಗಳಲ್ಲಿರುವ ಎಲ್ಲ ಮನೆಗಳು, ಪ್ರತಿ ಮನೆಯಲ್ಲಿರುವ ಎಲ್ಲ ಮತದಾರರನ್ನು ಮ್ಯಾಪಿಂಗ್ ಮಾಡಬೇಕು. ಇದರಿಂದ ಮತದಾರರ ಪಟ್ಟಿಯಲ್ಲಿ ನಿಖರತೆ ಕಾಪಾಡಿ, ನಕಲಿ ಮತದಾರರನ್ನು ತೆಗೆಯಲು ಹಾಗೂ ಕೈಬಿಟ್ಟಿರುವ ಮತದಾರರನ್ನು ಮತ್ತೆ ಸೇರಿಸಲು ಸಾಧ್ಯವಾಗಲಿದೆ. ಅರ್ಹ ಮತದಾರರು ಮತದಾನದ ಅವಕಾಶದಿಂದ ವಂಚಿತರಾಗದಂತೆ ನೋಡಿಕೊಳ್ಳಲು ಚುನಾವಣಾ ಆಯೋಗವು ವಿಶೇಷ ಪರಿಷ್ಕರಣೆ ಅಭಿಯಾನ ನಡೆಸಬೇಕು' ಎಂದೂ ಒತ್ತಾಯಿಸಿದ್ದಾರೆ.

SHRIRAM Finance

ಶ್ರೀರಾಮ್ ಫೈನಾನ್ಸ್ ಲಿಮಿಟೆಡ್,
ಲೀಗಲ್ ಡಿಪಾರ್ಟ್‌ಮೆಂಟ್,
ನಂ.145, ಶ್ಯಾಂತೋಮ್ ಹೈ ರೋಡ್, (3ನೇ ಮಹಡಿ),
ಮೈಲಾಪುರ, ಚೆನ್ನೈ-600 004. ಫೋನ್: 044-4392 5335

ನೋಂದಾಯಿತ ಕಚೇರಿ: ಶ್ರೀ ಟವರ್ಸ್, ಪ್ಲಾಟ್ ನಂ.14A, ಸೌತ್ ಫೇಸ್, ಇಂಡಸ್ಟ್ರಿಯಲ್ ಎಸ್ಟೇಟ್, ಗಿಂಡಿ, ಚೆನ್ನೈ, ತಮಿಳುನಾಡು, ಭಾರತ-600032

ಅನುಬಂಧ IV-A - (ನಿಯಮ 8(6) ರ ನಿಬಂಧನೆಯನ್ನು ನೋಡಿ)

ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಸೂಚನೆ

ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8(6) ರ ನಿಬಂಧನೆಯೊಂದಿಗೆ ಓದಲಾದ ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ (ಭದ್ರತೆ ಒದಗಿಸುವಿಕೆ) ಮತ್ತು ಪುನನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ 2002 ರ ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.

ಗಮನಿಸಿ: 2022 ರ ಸಿ. ಪಿ. ಸಂಖ್ಯೆ: 69-76 ರಲ್ಲಿ ದಿನಾಂಕ 09.11.2022 ರಂದು ಚೆನ್ನೈನ ಗೌರವಾನ್ವಿತ NCLT ಅವರು ಅನುಮೋದಿಸಿದ ವಿಲೀನ ಯೋಜನೆಯ ಪ್ರಕಾರ, ಮೆಸರ್ಸ್. ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿಮಿಟೆಡ್ ಅನ್ನು ಮೆಸರ್ಸ್. ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನೊಂದಿಗೆ ವಿಲೀನಗೊಳಿಸಲಾಯಿತು. ತರುವಾಯ, ಮೆಸರ್ಸ್. ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಹೆಸರನ್ನು ಮೆಸರ್ಸ್. ಶ್ರೀರಾಮ್ ಫೈನಾನ್ಸ್ ಲಿಮಿಟೆಡ್ ಎಂದು ಬದಲಾಯಿಸಲಾಗಿದೆ. ಈ ಮೇಲಿನ ಕಾರಣದಿಂದ, ದಿನಾಂಕ 30.11.2022 ರಂದು ಆದ ಹೆಸರಿನ ಬದಲಾವಣೆಗೆ ಅನುಸಾರವಾಗಿ ಶ್ರೀರಾಮ್ ಫೈನಾನ್ಸ್ ಲಿಮಿಟೆಡ್ ಸಂಯೋಜನೆ ಪ್ರಮಾಣಪತ್ರದ ಆಧಾರದ ಮೇಲೆ ದಿನಾಂಕ 30.11.2022 ರಿಂದ ಜಾರಿಗೆ ಬರುತ್ತದೆ.

ಶ್ರೀರಾಮ್ ಫೈನಾನ್ಸ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿ, ಸೆಕ್ಯೂರ್ಡ್ ಕ್ರೆಡಿಟರ್ (ಸುರಕ್ಷಿತ ಸಾಲದಾತ) ಅವರು ದಿನಾಂಕ 19.12.2025 ರಂದು **ಸಾಂಕೇತಿಕ ಸ್ವಾಧೀನವನ್ನು** ತೆಗೆದುಕೊಂಡಿರುವ, ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ ಇಡಲಾದ/ವಿಧಿಸಲಾದ, ಈ ಕೆಳಗೆ ವಿವರಿಸಿರುವ ಸ್ಥಿರ ಆಸ್ತಿಗಳನ್ನು ಶ್ರೀರಾಮ್ ಫೈನಾನ್ಸ್ ಲಿಮಿಟೆಡ್‌ನ ಸೆಕ್ಯೂರ್ಡ್ ಕ್ರೆಡಿಟರ್‌ಗೆ 25.09.2025 ರಂದು ಡಿಮ್ಯಾಂಡ್ ನೋಟಿಸ್ ಪ್ರಕಾರ, ದಿನಾಂಕ 24.09.2025 **ರಿಂದ ಬಾಕಿ ಇರುವ ರೂ.1,46,83,747/-** ಹಣಕ್ಕೆ ಹೆಚ್ಚುವರಿ ಬಡ್ಡಿ, ವೆಚ್ಚಗಳು, ಇತರ ಶುಲ್ಕಗಳು ಮತ್ತು ವೆಚ್ಚಗಳೊಂದಿಗೆ ಮರುಪಾವತಿಸುವುದಕ್ಕಾಗಿ ದಿನಾಂಕ 25.09.2025 ರಂದು SARFAESI ಕಾಯ್ದೆಯ 13(2) ರ ಅಡಿಯಲ್ಲಿ ಕೆಳಗೆ ತಿಳಿಸಲಾದ ಜಾಮೀನುದಾರರಿಗೆ ನೀಡಲಾದ ಬೇಡಿಕೆ ಸೂಚನೆಯ ಪ್ರಕಾರ, ದಿನಾಂಕ 24.03.2026 **ರಂದು ಮಧ್ಯಾಹ್ನ 2.00 ರಿಂದ ಸಂಜೆ 4.00 ರವರೆಗೆ ''ಎಲ್ಲಿ ಇದೆಯೋ ಹಾಗೆಯೇ'', ''ಇರುವುದೆಲ್ಲಾ ಹಾಗೆಯೇ ಇರುವಂತೆ'' ಮತ್ತು ''ಇರುವುದು ಏನಿದೆಯೋ ಹಾಗೆಯೇ''** ಆಧಾರದ ಮೇಲೆ ಮಾರಾಟ ಮಾಡಲಾಗುವುದು ಎಂದು ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು ಹಾಗೂ ಜಾಮೀನುದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ:

ಒಪ್ಪಂದ ಸಂಖ್ಯೆ. **PUNGATF1207310019**

ಜಾಮೀನುದಾರ/ಅಡಮಾನದಾರರ ಹೆಸರು ಮತ್ತು ವಿಳಾಸ: (i) **ಶ್ರೀ. ಪ್ರಕಾಶ ಆರ್ @ ಶ್ರೀ. ಆರ್. ಪ್ರಕಾಶ್, (ಸಾಲಗಾರ ಮತ್ತು ಅಡಮಾನದಾರ)** S/o (ಲೇಟ್) ರುದ್ರಪ್ಪ, ಮನೆ ಸಂಖ್ಯೆ. 13, 1ನೇ ಡಿವಿಷನ್ ಎಕ್ಸ್‌ಟೆನ್ಷನ್, ಸ್ಯಾಂಟಾ ರಸ್ತೆ, ಜಿಗಣಿ, ಬೆಂಗಳೂರು, ಆನೇಕಲ್ ತಾಲ್ಲೂಕು, ಕರ್ನಾಟಕ - 560 083, (ii) **ಶ್ರೀಮತಿ. ಭಾಗ್ಯಮ್ಮ (ಜಾಮೀನುದಾರ)** W/o (ಲೇಟ್) ರುದ್ರಪ್ಪ, ಮನೆ ಸಂಖ್ಯೆ. 13, 1ನೇ ಡಿವಿಷನ್ ಎಕ್ಸ್‌ಟೆನ್ಷನ್, ಸ್ಯಾಂಟಾ ರಸ್ತೆ, ಜಿಗಣಿ, ಬೆಂಗಳೂರು, ಆನೇಕಲ್ ತಾಲ್ಲೂಕು, ಕರ್ನಾಟಕ - 560 083, (iii) **ಶ್ರೀ. ಎಂ. ಹರೀಶ್ ಕುಮಾರ್, (ಜಾಮೀನುದಾರ)** S/o. ಶ್ರೀ. ಮರಿಯಪ್ಪ ಮನೆ ಸಂಖ್ಯೆ. 17, 1ನೇ ಡಿವಿಷನ್ ಎಕ್ಸ್‌ಟೆನ್ಷನ್, ಸ್ಯಾಂಟಾ ರಸ್ತೆ, ಜಿಗಣಿ, ಬೆಂಗಳೂರು, ಆನೇಕಲ್ ತಾಲ್ಲೂಕು, ಕರ್ನಾಟಕ - 560 083.

ಸ್ಥಿರ ಆಸ್ತಿಯ ವಿವರಣೆ: ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿ, ಜಿಗಣಿ ಗ್ರಾಮದ ಸರ್ವೆ ಸಂಖ್ಯೆ. 88 ಮತ್ತು ಹೊಸ ಸರ್ವೆ ಸಂಖ್ಯೆ. 88/1 ಅನ್ನು ಹೊಂದಿರುವ, ಸುಮಾರು Ac.0.3 ಗುಂಟಾಗಳಷ್ಟು ವಿಸ್ತಾರದ Ac.0.10 ಗುಂಟೆಯಷ್ಟು ಅಳತೆಯ ಜಮೀನು. **ಗಡಿಗಳು:** ಪೂರ್ವದಿಂದ: ಜಗನ್ನಾಥ ರೆಡ್ಡಿ, ಪಶ್ಚಿಮದಿಂದ: ನರಸಿಂಹ ರೆಡ್ಡಿಯವರ ಜಮೀನು, ಉತ್ತರದಿಂದ: ರಾಮಚಂದ್ರಪ್ಪ ಮತ್ತು ಕವಿತಾ ಅವರ ಜಮೀನು (ರಾಮಚಂದ್ರಪ್ಪ ಅವರ ಜಮೀನಿನಲ್ಲಿ ರಸ್ತೆಗಾಗಿ Ac.0.04 ಗುಂಟೆ ಜಮೀನು ಬಿಡಲಾಗಿದೆ), ದಕ್ಷಿಣದಿಂದ: ಚಂದ್ರಶೇಖರ್ ಅವರ ಜಮೀನು.

ತಿಳಿದಿರುವ ಋಣಭಾರಗಳು, ಯಾವುದಾದರೂ ಇದ್ದರೆ: ಇಲ್ಲ

ಮೀಸಲು ಬೆಲೆ:	ಇಎಂಡಿ: ಮೀಸಲು ಬೆಲೆಯ 10%	ಬಿಡ್ ಹೆಚ್ಚಳ:
ರೂ.63,73,000/-	ಅಂದರೆ ರೂ.6,37,300/-	ರೂ.50,000/-

ಇಎಂಡಿಯೊಂದಿಗೆ ಬಿಡ್ ಫಾರ್ಮ್ ಅನ್ನು ಸಲ್ಲಿಸಲು ಕೊನೆಯ ದಿನಾಂಕ ಅಥವಾ ದಿನಾಂಕ 23.03.2026 ರಂದು ಸಂಜೆ 5.00 ಗಂಟೆಯ ಮೊದಲು.

ಆಸ್ತಿ ಮತ್ತು ಸಂಬಂಧಿತ ದಾಖಲೆಗಳ ಪರಿಶೀಲನೆಯ ದಿನಾಂಕ ಮತ್ತು ಸಮಯ: ಪೂರ್ವ ಭೇಟಿ ವ್ಯವಸ್ಥೆಯ (ಅಪಾಯಿಂಟ್‌ಮೆಂಟ್) ಮೂಲಕ ಕೆಲಸದ ಸಮಯದಲ್ಲಿ

ಇ-ಹರಾಜಿನ ದಿನಾಂಕ ಮತ್ತು ಸಮಯ: 24.03.2026 ಮಧ್ಯಾಹ್ನ 2.00 ರಿಂದ ಸಂಜೆ 4.00 ರವರೆಗೆ.

ಆನ್‌ಲೈನ್ ಬಿಡ್‌ನಲ್ಲಿ ಭಾವಹಿಸಲು ಬಿಡ್‌ದಾರರು ನಮ್ಮ ಇ-ಹರಾಜು ಸೇವಾ ಪೂರೈಕೆದಾರರಾದ ಮೆಸರ್ಸ್. ಮುರ್ರೆ & ಕಂಪನಿಯ www.murrays.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ತಾಂತ್ರಿಕ ಸಹಾಯಕ್ಕಾಗಿ ದಯವಿಟ್ಟು ಮೆಸರ್ಸ್. ಮುರ್ರೆ & ಕಂಪನಿಯ ಸಹಾಯವಾಣಿ 044-24995208/24995219 ಮತ್ತು ಅಧಿಕೃತ ಅಧಿಕಾರಿ ಶ್ರೀಮತಿ. ಎಂ. ಮಗೇಶ್ವರಿ (ದೂರವಾಣಿ: 8939255112; ಮೇಲ್ ಐಡಿ: mageswari.m@shriramfinance.in) ಅವರನ್ನು ಸಂಪರ್ಕಿಸಿ. ನೋಂದಣಿ ಮತ್ತು ಇಎಂಡಿ ಸ್ಥಿತಿಗಾಗಿ ದಯವಿಟ್ಟು ಮೆಸರ್ಸ್. ಮುರ್ರೆ & ಕಂಪನಿಯನ್ನು ಸಂಪರ್ಕಿಸಿ, ದಯವಿಟ್ಟು property@murrays.in ಅನ್ನು ಸಂಪರ್ಕಿಸಿ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳನ್ನು ಶ್ರೀರಾಮ್ ಫೈನಾನ್ಸ್ ಲಿಮಿಟೆಡ್‌ನ https://www.shriramfinance.in/auction ವೆಬ್‌ಸೈಟ್‌ನಲ್ಲಿ ನೀಡಲಾಗಿದೆ.

ಸ್ಥಳ: ಚೆನ್ನೈ
ದಿನಾಂಕ: 20.02.2026

ಅಧಿಕೃತ ಅಧಿಕಾರಿ
ಶ್ರೀರಾಮ್ ಫೈನಾನ್ಸ್ ಲಿಮಿಟೆಡ್

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಅಇಂ(ವಿ)/ಪ್ರ(ಕಾ)ವೃ-ಉ/ಕಾನಿಇಂ(ವಿ)/ಸಕಾನಿಇಂ(ವಿ)-1/ಕ-807&808/25-26/3764 ದಿನಾಂಕ: 19.02.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ (ಕಾರ್ಯಾಚರಣೆ)ವೃತ್ತ-ಉತ್ತರ, ಬೆಂಗಳೂರುರವರ ವ್ಯಾಪ್ತಿಯಲ್ಲಿ ಕೆಳಕಂಡ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) **ಟೆಂಡರ್ ಸಂಖ್ಯೆ: KPTCL/2025-26/IND0279** ರ ಅನ್ವಯ ವಿವಿಧ ಉಪ-ಕೇಂದ್ರಗಳಿಗೆ 800-400/1-1-1A ratio ನ 66ಕೆವಿ ಪ್ರಸ್ತುತ ವಿದ್ಯುತ್ ಪರಿವರ್ತಕಗಳ 42 ಸಂಖ್ಯೆಗಳ ವಿನ್ಯಾಸ, ತಯಾರಿಕೆ, ಪರೀಕ್ಷೆ ಮತ್ತು ಪೂರೈಕೆಗಾಗಿ ಟೆಂಡರ್.

2) **ಟೆಂಡರ್ ಸಂಖ್ಯೆ: KPTCL/2025-26/IND0278** ರ ಅನ್ವಯ ವಿವಿಧ ಉಪ-ಕೇಂದ್ರಗಳಿಗೆ 1200-800/1-1-1A ratio ನ 66ಕೆವಿ ಪ್ರಸ್ತುತ ವಿದ್ಯುತ್ ಪರಿವರ್ತಕಗಳ 30 ಸಂಖ್ಯೆಗಳ ವಿನ್ಯಾಸ, ತಯಾರಿಕೆ, ಪರೀಕ್ಷೆ ಮತ್ತು ಪೂರೈಕೆಗಾಗಿ ಟೆಂಡರ್.

ಬಿಡ್‌ಗಳನ್ನು KPP Portal ಮೋಡ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ. ಮೇಲ್ಕಂಡ ಟೆಂಡರ್‌ಗಳ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಲಾಗಿನ್ ಮಾಡುವ ಮೂಲಕ ದಿನಾಂಕ: 20.02.2026 ರಂದು ಅಥವಾ ನಂತರ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- **ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ) ವೃತ್ತ-ಉತ್ತರ,**
ಕವಿಪ್ರನಿನಿ, ಯು.ಎ.ಎಸ್. ಕ್ಯಾಂಪಸ್, ಹೆಬ್ಬಾಳ, ಬೆಂಗಳೂರು-560064.

ಬಡ ವಿದ್ಯಾರ್ಥಿಗಳಿಗೆ 'ವಿದ್ಯಾನಿಧಿ'

ವಿದ್ಯಾಶಂಕರ್

ಮೈಸೂರು: 'ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ವಿಟಿಯು)ದಲ್ಲಿ ಬಡ ವಿದ್ಯಾರ್ಥಿಗಳಿಗೆಂದು 'ವಿದ್ಯಾನಿಧಿ' ಯೋಜನೆ ಆರಂಭಿಸಲಾಗಿದ್ದು, ಈವರೆಗೆ ₹ 60 ಲಕ್ಷ ಸಂಗ್ರಹವಾಗಿದೆ' ಎಂದು ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್ ತಿಳಿಸಿದರು.

'ವಾರ್ಷಿಕ ₹ 35ಸಾವಿರ ಪಾವತಿಸಲು ಸಾಧ್ಯವಾಗದ ಬಹಳಷ್ಟು ವಿದ್ಯಾರ್ಥಿಗಳು ಸಹಾಯ ಕೋರಿ ನನ್ನ ಬಳಿಗೆ ಬರುತ್ತಾರೆ. ಅಂಥವರ ನೆರವಿಗೆ ವಿದ್ಯಾನಿಧಿ ಆರಂಭಿಸಿದ್ದೇನೆ. ವಂತಿಗೆ ಸಂಗ್ರಹ ಪ್ರಮಾಣ ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಾಗಲಿದೆ' ಎಂದರು.

'ಡಿಎಚ್ ಬೆಂಗಳೂರು–2040 ಶೃಂಗ' ಇಂದು

ಪ್ರಜಾವಾಣಿ ವಾರ್ತೆ

PURAVANKARA PRESENTS DH BENGALURU 2040 SUMMIT

ಬೆಂಗಳೂರು: ನಗರದ ಅಭಿವೃದ್ಧಿಯ ರೂಪುರೇಷೆಗಳನ್ನು ಆಳವಾಗಿ ವಿಶ್ಲೇಷಿಸಲು 'ಪ್ರಜಾವಾಣಿ'ಯ ಸೋದರ ಪತ್ರಿಕೆಯಾದ 'ಡೆಕ್ಕನ್ ಹೆರಾಲ್ಡ್' ಫೆ.20ರಂದು (ಶುಕ್ರವಾರ) ಅರಮನೆ ರಸ್ತೆಯಲ್ಲಿರುವ ಶಾಂಗ್ರಿಲಾ ಹೋಟೆಲ್‌ನಲ್ಲಿ 'ಡಿಎಚ್ ಬೆಂಗಳೂರು 2040 ಶೃಂಗ'ವನ್ನು ಆಯೋಜಿಸಿದೆ.

'ಗ್ರೇಟರ್ ಬೆಂಗಳೂರಿನ ಸಬಲೀಕರಣ' ಘೋಷಣೆಯೊಂದಿಗೆ ಈ ಶೃಂಗ ನಡೆಯಲಿದೆ. ನೀತಿ ನಿರೂಪಕರು, ಕಾರ್ಪೊರೇಟ್ ವಲಯದ ದಿಗ್ಗಜರು, ಉದ್ಯಮಿಗಳು, ಕಲಾವಿದರು, ಸಾಮಾಜಿಕ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಬೆಳಿಗ್ಗೆ 10ರಿಂದ ಸಂಜೆವರೆಗೆ ವಿವಿಧ ಗೋಷ್ಠಿಗಳು ನಡೆಯಲಿವೆ.

ಕ್ರಿಕೆಟಿಗ ರಾಹುಲ್ ದ್ರಾವಿಡ್ ಮುಖ್ಯ ಭಾಷಣ ಮಾಡಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್, ಶಾಸಕ ಸಿ.ಎನ್. ಅಶ್ವತ್ಥನಾರಾಯಣ, ಬಿ.ಎಲ್. ಶಂಕರ್, ಉಮಾ ಮಹದೇವನ್, ಹರ್ಷ ಗುಪ್ತ, ಮಹೇಶ್ವರ ರಾವ್, ರಾಮ್ ಪ್ರಸಾತ್ ಮನೋಹರ್ ಸೇರಿದಂತೆ ವಿವಿಧ ಕ್ಷೇತ್ರಗಳ ಪ್ರಮುಖರು ಗೋಷ್ಠಿಗಳಲ್ಲಿ ಭಾಗವಹಿಸಲಿದ್ದು, ಬೆಂಗಳೂರಿಗೆ ಸಂಬಂಧಿಸಿದಂತೆ ವಿಚಾರ ಮಂಡಿಸಲಿದ್ದಾರೆ.

ಉನ್ನತ ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ, ಜಾಗತಿಕ ಸಾಂಸ್ಕೃತಿಕ ರಾಜಧಾನಿಯಾಗಿ ಬೆಂಗಳೂರು, ಬೆಂಗಳೂರು ನಿರ್ಮಾಣಕ್ಕೆ ಸಂಬಂಧಿಸಿದಂತೆ ಚೌಕಟ್ಟು, ಭವಿಷ್ಯದಲ್ಲಿ ಉದ್ಯೋಗಾವಕಾಶ, ಸಂಚಾರ ದಟ್ಟಣೆ ನಿರ್ವಹಣೆ ಸೇರಿ ವಿವಿಧ ವಿಷಯಗಳ ಮೇಲೆ ಗೋಷ್ಠಿಗಳು ನಡೆಯಲಿವೆ.

ಕೇಂದ್ರೀಯ ವಿದ್ಯಾಲಯ ಡಿಆರ್‌ಡಿಒ, ಸಿ.ವಿ. ರಾಮನ್‌ನಗರ, ಬೆಂಗಳೂರು–560093

KENDRIYA VIDYALAYA DRDO
C.V. RAMAN NAGAR, BENGALURU-560093
Website : https://drdobangalore.kvs.ac.in/
Email : kvdrdobangalore@gmail.com Phone : 080-25243919

Ref : KV.DRDO/SF/2025-26/891 Dated : 17.02.2026

ಗುತ್ತಿಗೆ ಆಧಾರದ ಮೇಲೆ ಅಧ್ಯಾಪಕರ ನೇಮಕಾತಿಗಾಗಿ–2026–27

ಬೆಂಗಳೂರಿನ ಕೇಂದ್ರೀಯ ವಿದ್ಯಾಲಯ ಡಿಆರ್‌ಡಿಒ, ಸಿ.ವಿ.ರಾಮನ್‌ನಗರ, ಬೆಂಗಳೂರು–560093 ಇಲ್ಲಿ 2026–27ನೇಯ ಶೈಕ್ಷಣಿಕ ವರ್ಷಕ್ಕಾಗಿ ಅರೆಕಾಲಿಕ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ಆಯ್ಕೆಪಟ್ಟಿಯನ್ನು (ಪ್ಯಾನಲ್) ಸಿದ್ಧಪಡಿಸಲು, ಅಭ್ಯರ್ಥಿಗಳ (18 ರಿಂದ 65 ವಯೋಮಾನದವರು) ಸಂದರ್ಶನವನ್ನು ಈ ಕೆಳಗಿನಂತೆ ನಡೆಸಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳ ಸೇವೆಗಳನ್ನು ಅವರು ನೀಡಿದ ಆದ್ಯತೆಗೆ ಅನುಗುಣವಾಗಿ ಮತ್ತು ಅಗತ್ಯವಿರುವಾಗ ಈ ಶಾಲೆಗಳಲ್ಲಿ ತೆಗೆದುಕೊಳ್ಳಲಾಗುತ್ತದೆ.

ಸಂದರ್ಶನದ ದಿನಾಂಕ	ಹುದ್ದೆ/ವಿಷಯ – ಅಧ್ಯಾಪಕರು
26.02.2026 (Thursday) 09.00 AM to 02.00 PM	A) ಸ್ನಾತಕೋತ್ತರ ಶಿಕ್ಷಕರು (PGT) ಇಂಗ್ಲಿಷ್, ಹಿಂದಿ, ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಕಂಪ್ಯೂಟರ್ ವಿಜ್ಞಾನ B) ಪದವೀಧರ–ಸ್ನಾತಕ ಶಿಕ್ಷಕರು (PGT) ಹಿಂದಿ, ಇಂಗ್ಲಿಷ್, ಗಣಿತ, ವಿಜ್ಞಾನ, ಸಮಾಜ ಅಧ್ಯಯನ, ಸಂಸ್ಕೃತ C) ಪ್ರಾಥಮಿಕ ಶಿಕ್ಷಕರು (PRT) D) ವೃತ್ತಿ ಕೌಶಲ್ಯ ತರಬೇತುದಾರರು (Vocational Skill Coaches) ಯೋಗ ತರಬೇತುದಾರ, ಕನ್ನಡ ಶಿಕ್ಷಕ, ಸಂಗೀತ ಶಿಕ್ಷಕ, ನೃತ್ಯ ಶಿಕ್ಷಕ, ಕ್ರೀಡಾ ತರಬೇತುದಾರರು, ಕಲೆ ಮತ್ತು ಕರಕುಶಲ ಶಿಕ್ಷಕರು, ಕಂಪ್ಯೂಟರ್ ಬೋಧಕರು, ನರ್ಸ್, ವೈದ್ಯರು, ವಿಶೇಷ ಶಿಕ್ಷಕರು.

ಎಲ್ಲಾ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಕೇಂದ್ರೀಯ ವಿದ್ಯಾಲಯ ಡಿ ಆರ್ ಡಿ ಒ, ಸಿ.ವಿ. ರಾಮನ್‌ನಗರ, ಬೆಂಗಳೂರು–560093 ನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಮತ್ತು ಪ್ರಮಾಣ ಪತ್ರಗಳ ಮೂಲ ಮತ್ತು ಫೋಟೋ ಕಾಪಿಗಳು ಮತ್ತು ಪಾಸ್ಪೋರ್ಟ್ ಭಾವಚಿತ್ರದೊಂದಿಗೆ ಹಾಜರಾಗಬೇಕು. ಎಲ್ಲಾ ಹುದ್ದೆಗಳ ನೋಂದಣಿಯನ್ನು ಅದೇ ದಿನ ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 2.00 ರವರೆಗೆ ಮಾಡಲಾಗುತ್ತದೆ.

ಗಮನಿಸಿ : ವಿದ್ಯಾರ್ಹತೆ ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್‌ಗೆ ಭೇಟಿ ನೀಡಿ. ಅಂತರ್ಜಾಲದಲ್ಲಿ ಆವೇದನಾ ಪತ್ರವನ್ನು (Google Form) ನ್ನು ತುಂಬಿ ಕಳುಹಿಸಿದವರು ಅವಶ್ಯವಾಗಿ ಸಂದರ್ಶನಕ್ಕೆ ಹಾಜರಾಗಬೇಕೆಂದು ಕೋರುತ್ತೇವೆ. www.drdobangalore.kvs.ac.in

ಸಹಿ/– ಪ್ರಾಂಶುಪಾಲರು

AstraZeneca

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರ ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರ ಕಳೆದಿವೆ ಎಂದು ಷೇರುದಾರ ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ನಕಲಿ ಷೇರು ಪ್ರಮಾಣಪತ್ರ ನೀಡುವಂತೆ ಷೇರುದಾರ ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.2/–)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು: ಷೇರು ಪ್ರಮಾಣಪತ್ರ ಸಂಖ್ಯೆ	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು: ವಿಶಿಷ್ಟ ಸಂಖ್ಯೆಗಳು	ಷೇರುದಾರರ ಹೆಸರು
J000681	50	13379	1882651 - 1882700	ಜಾಯ್ ಮುಖೋಪಾಧ್ಯಾಯ್
	25	13380	1882701 - 1882725	

ಈ ಸೂಚನೆ ಪ್ರಕಟವಾದ ದಿನಾಂಕದಿಂದ 15 ದಿನಗಳಲ್ಲಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಬರದಿದ್ದರೆ, ಕಂಪನಿಯು ಜನವರಿ 25, 2022 ರ ದಿನಾಂಕದ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/P/CIR/2022/8ರ ಪ್ರಕಾರ ಕಂಪನಿಯ ಕ್ಲೈಮ್ ಮಾಡದ ಸಸ್ಪೆನ್ಸ್ ಖಾತೆಯಿಂದ ಷೇರುಗಳು ಮತ್ತು ಲಾಭಾಂಶವನ್ನು ಪಡೆಯಲು ಅರ್ಹತೆ ಪತ್ರಗಳನ್ನು ನೀಡಲು ಮುಂದುವರಿಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: 19.02.2026

ಭಾವನಾ ಅಗ್ರವಾಲ್
ಮುಖ್ಯ ಹಣಕಾಸು ಅಧಿಕಾರಿ ಮತ್ತು ನಿರ್ದೇಶಕರು

ಇಂದು–ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಹೆಬ್ಬಾಳ ವಿಭಾಗದ ಸಿ-7 ಉಪ ವಿಭಾಗದಲ್ಲಿ ಫೆ.20 ಮತ್ತು 21ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ಈ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಕೆಎಂಎಫ್, ವೈಎನ್‌ಕೆ ನ್ಯೂ ಟೌನ್ 208, 407, 'ಬಿ' ಸೆಕ್ಟರ್, ಅಲ್ಲಾಳಸಂದ್ರ, ಶಾರದನಗರ, ಜನಪ್ರಿಯ, ಅನ್ರಿಯಾ, ಮಾರುತಿ ನಗರ, ಕೋಗಿಲು, ಬಿ.ಬಿ ರಸ್ತೆ ಯಲಹಂಕ ಇತ್ಯಾದಿ. ಬಾಗಲೂರು ಕ್ರಾಸ್, ವೆಂಕಟಾಲ, ನಿಟ್ಟೆ ಕಾಲೇಜು, ಬಿಎಸ್‌ಎಫ್, ಐಎಎಫ್, ಇಂಟರ್‌ನ್ಯಾಷನಲ್ ಸ್ಕೂಲ್, ಕಾಗೆನ್ ಅಡ್ಯಾನ್ ಕಾಲೇಜು, ರಾಯಣ್ಣನ ಶಾಲೆ ಪಾಲನಹಳ್ಳಿ, ದ್ವಾರಕಾನಗರ ಇತ್ಯಾದಿ. ಪೂರ್ವಂಕರ ಆರ್‌ಎಂಜೆಡ್ ಗ್ಯಾಲೇರಿಯಾ, ತಿರುಮಲ ನಗರ, ಅಟ್ಟೂರು ಬಡಾವಣೆ 1ನೇ ಅಡ್ಡರಸ್ತೆಯಿಂದ 10ನೇ ಅಡ್ಡರಸ್ತೆ, ಎಸ್ಪಾರ್ಟ್ಸ್ ಬಡಾವಣೆ, ದೊಡ್ಡಬೆಟ್ಟಹಳ್ಳಿ, ಟಿಪ್ಪು ವೃತ್ತ, ಚಿಕ್ಕಬೆಟ್ಟಹಳ್ಳಿ, ಕಾವೇರಿ ಬಡಾವಣೆ, ಗಿರಿಧಾಮನಗರ, ಎಎಂಎಸ್ ಬಡಾವಣೆ, ಡಿಫೆನ್ಸ್ ಬಡಾವಣೆ, ಎಂ.ಎಸ್. ಪಾಳ್ಯ, ಶಿಕ್ಷಕರ ಬಡಾವಣೆ, ಬಿಇಎಲ್ 6ನೇ ಬ್ಲಾಕ್, ಎಚ್‌ಎಂಟಿ 3ನೇ ಬ್ಲಾಕ್, ಎಚ್‌ಎಂಟಿ 4ನೇ ಬ್ಲಾಕ್, ಎಚ್‌ಎಂಟಿ 6ನೇ ಬ್ಲಾಕ್

ಎಸ್‌ಸಿಎಲ್ ಟೆಕ್ನಾಲಜಿ ಕಾರ್ಯಾಗಾರ

ಬೆಂಗಳೂರು: ಸೆಮಿ ಕಂಡಕ್ಟರ್ ವಿನ್ಯಾಸ ಪರಿಸರ ವ್ಯವಸ್ಥೆ ಬಲಪಡಿಸುವ ನಿಟ್ಟಿನಲ್ಲಿ ನಗರದ ಕೇಂಬ್ರಿಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಎಎಸ್‌ಐಟಿ ಡಿಸೈನ್ ಫ್ಲೋ ಯೂಸಿಂಗ್ ಎಸ್‌ಸಿಎಲ್ ಟೆಕ್ನಾಲಜಿ ಕಾರ್ಯಾಗಾರವನ್ನು ಫೆ.23ರಿಂದ ಐದು ದಿನ ಹಮ್ಮಿಕೊಳ್ಳಲಾಗಿದೆ. ಚಿಪ್ಸ್ ಟು ಸ್ಟಾರ್ಟ್ ಅಪ್ ಉಪಕ್ರಮದಡಿಯಲ್ಲಿ ಆಯೋಜಿಸಲಾಗಿರುವ ಕಾರ್ಯಾಗಾರದಲ್ಲಿ ತಜ್ಞರು, ಬೋಧಕರು, ವಿದ್ಯಾರ್ಥಿಗಳು ಭಾಗಿಯಾಗುವರು. ಚಿಪ್ ವಿನ್ಯಾಸದ ಕುರಿತು 85 ಸಾವಿರ ಎಂಜಿನಿಯರ್‌ಗಳಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

WANTED TWO B.A., B.Ed., Social Science/ Kannada to teach in English Medium. Apply to the Headmistress: St. Teresa's Girls High School, Chamarajpet, Bangalore-560018, with proper resume by 27.02.2026.

REAL ESTATE SELLING

Sites

Electronic City

'ELECTRONIC CITY Phase-1Premium BDA Approved Residential Sites for Sale RERA Approved Project Excellent Connectivity & Prime Location Call Now: 8884949145'

BUSINESS

Business to Business

Hotel & Restaurant

WELL FURNISHED Restaurant with well equipped kitchen & Everything in 1000 Sft area for SALE or RENT in Posh Vijaya Bank Layout, Bannerghatta Road. Lease Agreement Transferable. For Details Call: 9900001954

WANTED
A FAST GROWING INSTITUTE LOOKING
EXPERIENCED FACULTY
SUBJECTS REQUIRED: PHYSICS, MATHEMATICS, CHEMISTRY.
QUALIFICATION: IIT Graduates / B.Ed Mandatory
ELIGIBILITY CRITERIA: Minimum 5 Years Teaching Experience.
PROVEN EXPERIENCE IN NEET, JEE and other Competitive Exams Coaching.
Email : hamsa221@gmail.com
9686664983/9686664985

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

General

General

WE DO FUNDING & Solutions/ Settlements for disputed properties under Bank,High Court, Civil/DC/AC/ Tribunal/Tahsildar courts pending cases. Contact Verna Developers, Barton Centre, MG Road,Blr. 9620253180.

PERSONAL

Change of Name

CHANGE OF NAME
We, **Ranjan Harsha Rao** & **Nikitha Sushma,** R/at No. 42, 3rd Cross, Yelachenahalli, Bengaluru-560078, have changed our minor daughter's name (Birth Certificate No. 803162/ B/B/2022/002275 dtd 03.01.2022) from **LASYA NITARA RAO** to **VAMIKA NIDHI RAO** vide affidavit dated 19-02-2026 before notary C.K. Anupama, Bengaluru

I, CHETHAN JAYANTHA, S/o JAYANTHA, r/a, # 1206, 2nd A Main, 7th Block, BSK 3rd Stage, 2nd Phase, Hosakerehalli, Bangalore 560085, hereby declare that both the names CHETHAN J and CHETHAN JAYANTHA refers to me only. Vide Affidavit dated 19/02/2026 before the Notary T. Venkategowda, Bangalore

CHANGE OF NAME
I, DASHNI SAINATH BHONSLE W/o. Sainath Bhonsle, residing at. House no 8,Lakeview garden layout.K channasandra, Bangalore 560043, Have Changed my Name to **DASHMI SAINATH BHONSLE** vide affidavit Dated 19.02.2026 sworn before Notary R. Jyshree, Bangalore Rural Dist.

CHANGE OF NAME
I, **GEETHA JAIN** and **GEETHA,** W/o Rakesh Kumar Jain, R/at # 1002, Svasa Homes 10th Floor, Tower-1 Block Bhava, 5th Main Road Svasa Homes K G Nagar Bengaluru-560019, declare that the above names pertain to me only & henceforth I shall be known as **GEETHA JAIN** vide affidavit dated 19-02-2026 before notary L Gopalakrishna, Bengaluru.

CHANGE OF NAME
I, **SANTHOSHA B N,** residing at No.6, 2nd A Cross, Eshwari Nagar, Hosakerehalli, Bengaluru - 560085, have changed my name to **SANTHOSH B N** vide affidavit dated 16-02-2026 before notary K.V. Bachi Reddy, Bengaluru. Henceforth I shall be known as **SANTHOSH B N** only

WE, PUNIT DASHOTTAR and SHWETA DASHOTTAR resident at D410 Nandini Citadel Noble Residence, Chandrashekarpura, Akshayanagar, Bengaluru-560076 has changed our Minor Son's name from SOURISH DASHOTTAR to SOURISH PUNIT DASHOTTAR vide affidavit dated 18/02/2026 sworn before notary Jalandhara, Bengaluru

ಕರ್ನಾಟಕದ ಅತಿ ದೊಡ್ಡ OG ಸೀರೆ ಉತ್ಸವ 2.0
100000+ ಸೀರೆಗಳು 10,000+ವಿನ್ಯಾಸ 1000+ವಿಧಗಳು
MYSORE SILKS Weaver's OG Seere Utsava By Sulakshmi Silks
ನೇರ ನೇಕಾರರಿಂದ ಕನಿಷ್ಠ ಬೆಲೆಯ ಖಾತರಿ
100 ವರ್ಷಗಳ ವಿಶ್ವಾಸಾರ್ಹ ಪರಂಪರೆ
SULAKSHMI SILKS
18ನೇ ಯಿಂದ 28ನೇ ಫೆಬ್ರವರಿ 2026
11 AM TO 9 PM
SIGNATURE SILK SAREE COLLECTIONS
• ಶುದ್ಧ ಮೈಸೂರು ಸಿಲ್ಕ್ • ಕಾಂಜೀವರಂ • ಪಟೋಲ
• ಬನಾರಸ್ • ಉಪ್ಪಾದ • ಪೈಥಾನಿ • ಚಂದೇರಿ • ಗದ್ವಾಲ್,
• ಇಳಕಲ್ • ಪೋಚಂಪಲ್ಲಿ • ಭಾಗಲ್ಪುರ್ • ಇಕತ್ • ಆರ್ನಿ
• ಜಮಧಾನಿ • ಮುಗ • ಕ್ರೇಪ್ • ಗಜ್ಜಿ • ಬಂಧನಿ
• ಕಾಟನ್ ಕ್ಲಾಸಿಕ್ಸ್ • ಬೆಂಗಳೂರು ಸಿಲ್ಕ್ ಮತ್ತು ಇತರೆ.
ಶ್ರೀ ಸೂರ್ಯೋದಯ ಕಲ್ಯಾಣ ಮಂಟಪ
ವೆಸ್ಟ್ ಆಫ್ ಕಾರ್ಡ್ ರೋಡ್, ವಿಜಯನಗರ
99727 18898 | 96631 27606
93531 38343 | 98863 06643

REQUIRED
LAND FOR PETROLEUM COMPANY.
RENT Rs 30/50 PER SQ FT + PROFIT SHARING WITHOUT INVESTMENT, FOR 20 YEARS LICENSE AVAILABLE WITH US 8000 - 15,000 Sft. ON ANY 60 FT WIDE MAIN ROAD IN BLORE CITY, PROPERTY TAX PAID BY COMPANY.
Contact:
96861 75666/ 99451 55688

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

BMS Educational Trust
BMS ACADEMY FOR PROFESSIONAL COURSES
In Association with
Sri Chaitanya ACADEMY
Coaching Classes for JEE, NEET & KCET with PUC/10+2
JEE (Advance + Mains)
NEET (Medical Aspirants)
KCET (Engineering Aspirants)
FEATURES
-PUC Classes @ BMSCW (PU) Campus
-Experience Faculties for PUC & JEE / NEET / KCET
-Daily Practice Papers (DDPs) & Regular Assignments
-Weekly Tests & Monthly Grand Tests with Detailed Analysis
Contact us at:
BMS Academy for Professional Courses
BMS College of Engineering Campus,
Bull Temple Rd, Basavanagudi, Bengaluru-19
89717 36008 | 90365 10011
bmsiasacademy@gmail.com www.bmsacademy.org.in
LIMITED SEATS - ENROLL NOW!
Your success is our commitment.

INVEST WHERE THE CITY IS GROWING
Premium Plotted Development Near Mysore Airport
Located on NH-766 Highway Approach, ensuring seamless connectivity to key city hubs.
MUDA & RERA APPROVED
• 500 m from Toll Plaza
• High-Growth Investment Corridor
• Ready-to-Build Residential Plots
• World-Class Infrastructure & Amenities
• Wide Roads | Green Environment Excellent Planned Layout
Available Sizes:
30 × 40 | 30 × 50 | 40 × 60
Avail Exclusive Inaugural Offer for Limited Plots
Enquire Now. Call:
96069 07153 / 63663 84517

INDEPENDENT LIVING IN A PRIME LOCATION
30×40, 4 BHK Premium Residence at Vijayanagar 4th Stage, Mysore
Thoughtfully designed for modern families seeking privacy, space, and long-term value.
Configuration:
Stilt + 2 Floors (2BHK Each Floor)
Total Built-Up: 32 Squares
Private Lift (4 - Passenger Capacity)
Key Highlights:
• Neo-Modern Elevation with Premium Finishes
• Teak Wood Main Door
• Engineered Wood Internal Doors
• UPVC Windows with Mosquito Mesh
• Jaquar/Equivalent Plumbing Fittings
• S.S/Aluminium Balcony Railings
• Vitrified Flooring & Granite Staircase
• Ample Water Storage with Sump & OHT
Book Your Site Visit Today
Call: +91 96069 07153

384 ಮಂದಿಗೆ ಪಿಎಚ್‌.ಡಿ ಪಡೆಯಲು ಅವಕಾಶ

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪ್ರಕ್ರಿಯೆ

• ಯುಜಿಸಿಯ ಹೊಸ ಮಾರ್ಗಸೂಚಿ ಪಾಲನೆ

• ಎ.ಎಂ.ಸುರೇಶ

ಬೆಂಗಳೂರು: ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಹೊಸ ಮಾರ್ಗಸೂಚಿಗೆ ಅನುಗುಣವಾಗಿ ಬೆಂಗಳೂರು ವಿಶ್ವವಿದ್ಯಾಲಯ ಪಿಎಚ್‌.ಡಿ ಪ್ರವೇಶ ಪ್ರಕ್ರಿಯೆಯನ್ನು ಆರಂಭಿಸಿದ್ದು, ಒಟ್ಟು 36 ವಿಭಾಗಗಳಲ್ಲಿ 384 ಮಂದಿಗೆ ಪ್ರವೇಶ ಪಡೆಯಲು ಅವಕಾಶ ಸಿಗಲಿದೆ.

ಮಹಿಳಾ ಅಧ್ಯಯನ ಮತ್ತು ಸಮಾಜ ಕಾರ್ಯ ವಿಭಾಗ ಹೊರತುಪಡಿಸಿ ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್ ಹಾಗೂ ವಿಶ್ವವಿದ್ಯಾಲಯದ ಸಂಯೋಜನೆ ಪಡೆದಿರುವ ಐದು ಕಾಲೇಜುಗಳಲ್ಲಿ ಪಿಎಚ್‌.ಡಿಗೆ ಪ್ರವೇಶ ಪಡೆಯಬಹುದು. ವಿಷಯವಾರು ಮೀಸಲಾತಿಗೆ ಅನುಗುಣವಾಗಿ ಇರುವ ಸೀಟುಗಳ ಸಂಖ್ಯೆಯನ್ನು ಪ್ರಕಟಿಸಲಾಗಿದೆ.

ಇದೇ ಮೊದಲ ಬಾರಿಗೆ ಸಂದರ್ಶನ ವನ್ನು ಪರಿಚಯಿಸಲಾಗಿದೆ. ಶೇ 70ರಷ್ಟು ಅಂಕಗಳಿಗೆ ಲಿಖಿತ ಪರೀಕ್ಷೆ ಹಾಗೂ ಶೇ 30ರಷ್ಟು ಅಂಕಗಳಿಗೆ ಸಂದರ್ಶನ ನಿಗದಿಪಡಿಸಲಾಗಿದೆ.

ಈ ಎರಡರಿಂದ ಶೇ 50ರಷ್ಟು ಅಂಕಗಳು ಹಾಗೂ ಸ್ನಾತಕೋತ್ತರ ಪದವಿಯಲ್ಲಿನ ಶೇ 50ರಷ್ಟು ಅಂಕಗಳನ್ನು ಪರಿಗಣಿಸಿ ಅಂತಿಮ ಅರ್ಹತಾ ಪಟ್ಟಿ ಸಿದ್ಧಪಡಿಸ ಲಾಗುತ್ತದೆ. ಲಿಖಿತ ಪರೀಕ್ಷೆಯಲ್ಲಿ ಕನಿಷ್ಠ ಶೇ 50ರಷ್ಟು ಅಂಕಗಳನ್ನು ಗಳಿಸಿದರೆ ಮಾತ್ರ ಸಂದರ್ಶನಕ್ಕೆ ಪರಿಗಣಿಸಲಾಗುತ್ತದೆ ಎಂದು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಪ್ರೊ.ಚಂದ್ರಕಾಂತ್ ಕರಿಗಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರವೇಶ ಪರೀಕ್ಷೆಯಲ್ಲೂ ಬದಲಾವಣೆ ಮಾಡಲಾಗಿದೆ. ಹಿಂದೆ ನಿರ್ದಿಷ್ಟ ವಿಷಯದಲ್ಲಿ ಶೇ 90ರಷ್ಟು ಪ್ರಶ್ನೆಗಳನ್ನು ಹಾಗೂ ಸಂಶೋಧನೆಗೆ ಸಂಬಂಧಿಸಿದ ಶೇ 10ರಷ್ಟು ಪ್ರಶ್ನೆ ಗಳನ್ನು ಕೇಳಲಾಗುತ್ತಿತ್ತು. ಆದರೆ, ಈ ಬಾರಿ ಎರಡಕ್ಕೂ ಸಮಾನ ಆದ್ಯತೆ ನೀಡಿ ತಲಾ ಶೇ 50ರಷ್ಟು ಪ್ರಶ್ನೆಗಳನ್ನು ನಿಗದಿಪಡಿಸಲಾಗಿದೆ.

ಯುಜಿಸಿ, ಸಿಎಸ್‌ಐಆರ್, ಜೆಆರ್‌ಎಫ್ ಸೇರಿದಂತೆ ವಿವಿಧ ಫೆಲೋಶಿಪ್ ಪಡೆದಿರುವ, ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ), ರಾಜ್ಯಮಟ್ಟದ ಅರ್ಹತಾ ಪರೀಕ್ಷೆಯಲ್ಲಿ (ಎಸ್‌ಎಲ್‌ಇಟಿ) ಪಾಸಾಗಿರುವ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆ ಬರೆಯುವ ಅಗತ್ಯವಿಲ್ಲ. ಅವರು ನೇರವಾಗಿ ಪಿಎಚ್‌.ಡಿಗೆ ಪ್ರವೇಶ ಪಡೆಯಬಹುದು. ಇವರಿಗೆ ಶೇ 50ರಷ್ಟು ಸೀಟುಗಳನ್ನು ಮೀಸಲಿಡಲಾಗುತ್ತದೆ.

ಮಾರ್ಚ್ ಕೊನೆಯ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಪ್ರವೇಶ ಪರೀಕ್ಷೆ ನಡೆಯಲಿದೆ. ಏಪ್ರಿಲ್ ಅಂತ್ಯಕ್ಕೆ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಿ, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ ಎಂದು ಸಹಾಯಕ ಕುಲಸಚಿವ (ಮೌಲ್ಯಮಾಪನ) ಮಹೇಶ್ ತಿಳಿಸಿದರು.

ಲಭ್ಯ ಸೀಟುಗಳ ಪೈಕಿ 110 ಸೀಟುಗಳು ಮ್ಯಾನೇಜ್‌ಮೆಂಟ್ ರಿಸರ್ಚ್ ಸೆಂಟರ್ಸ್ ಅಡಿ ಲಭ್ಯವಿವೆ. ವಿಶ್ವವಿದ್ಯಾಲಯದ ಸಂಯೋಜನೆ ಹೊಂದಿರುವ ಐದು ಕಾಲೇಜುಗಳಲ್ಲಿ ಪಿಎಚ್‌.ಡಿಗೆ ಮಾರ್ಗದರ್ಶನ ಮಾಡಲು ಅರ್ಹತೆ ಹೊಂದಿರುವ ಬೋಧಕರನ್ನು ಗುರುತಿಸಿ ಪಟ್ಟಿ ಮಾಡಲಾಗಿದೆ.

ಪ್ರಾಧ್ಯಾಪಕರು ಎಂಟು ಅಭ್ಯರ್ಥಿಗಳಿಗೆ, ಸಹ ಪ್ರಾಧ್ಯಾಪಕರು ಆರು ಅಭ್ಯರ್ಥಿ ಗಳಿಗೆ ಹಾಗೂ ಸಹಾಯಕ ಪ್ರಾಧ್ಯಾಪಕರು ನಾಲ್ಕು ಅಭ್ಯರ್ಥಿಗಳಿಗೆ ಮಾರ್ಗದರ್ಶನ ಮಾಡಬಹುದು. ಜ್ಞಾನಭಾರತಿ ಕ್ಯಾಂಪಸ್ ಮತ್ತು ಐದು ಕಾಲೇಜುಗಳಲ್ಲಿ ಒಟ್ಟಾರೆ 100 ಮಂದಿ ಬೋಧಕ ಸಿಬ್ಬಂದಿ ಪಿಎಚ್‌.ಡಿಗೆ ಮಾರ್ಗದರ್ಶನ ಮಾಡುವ ಅರ್ಹತೆ ಹೊಂದಿದ್ದಾರೆ ಎಂದು ವಿವರಿಸಿದರು.

'25 ಮಂದಿಗೆ ಅವಕಾಶ ಇಲ್ಲ'

'ನಿವೃತ್ತಿಗೆ ಮೂರು ವರ್ಷ ಇರುವ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರಿಗೆ ಪಿಎಚ್‌.ಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಲು ಅವಕಾಶ ಇಲ್ಲ. ಹೀಗಾಗಿ ವಿವಿಧ ವಿಭಾಗಗಳ 25 ಮಂದಿ ಬೋಧಕರಿಗೆ ಈ ಬಾರಿ ಮಾರ್ಗದರ್ಶಕರಾಗಲು ಸಾಧ್ಯವಿಲ್ಲದಂತಾಗಿದೆ.

ಪಿಎಚ್‌.ಡಿ ಮಾಡಲು ರೆಗ್ಯೂಲರ್ ಅಭ್ಯರ್ಥಿಗಳಿಗೆ ಮೂರು ವರ್ಷ ಹಾಗೂ ಸೇವೆಯಲ್ಲಿ ಇರುವ ಅಭ್ಯರ್ಥಿಗಳಿಗೆ ಐದು ವರ್ಷ ನಿಗದಿಪಡಿಸಲಾಗಿದೆ. ಪರಿಸ್ಥಿತಿ ಆಧರಿಸಿ ಇದನ್ನು ವಿಸ್ತರಣೆ ಮಾಡಲು ಅವಕಾಶವಿದೆ. ಮಾರ್ಗದರ್ಶಕರು ಮಧ್ಯದಲ್ಲೇ ನಿವೃತ್ತಿಯಾದರೆ ಅಭ್ಯರ್ಥಿಗಳಿಗೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ಯುಜಿಸಿ ಈ ತೀರ್ಮಾನ ತೆಗೆದುಕೊಂಡಿದೆ' ಎಂದು ಕರಿಗಾರ್ ತಿಳಿಸಿದರು.

ಸಂಶೋಧನೆಗೆ ಇಸ್ರೊ ಅನುದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವ ಸಹಿತ ಗಗನಯಾನ ಯೋಜನೆಗಾಗಿ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸೂಕ್ಷ್ಮಜೀವಿಗಳ ಮೇಲ್ವಿಚಾರಣಾ ಯೋಜನೆಗೆ ನಗರದ 'ಪ್ರಯೋಗ' ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ರಿಸರ್ಚ್ ಸಂಸ್ಥೆಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ರೆಸ್ಪಾಂಡ್ ಅನುದಾನ ಲಭಿಸಿದೆ.

ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆ ಕೈಗೊಳ್ಳಲು ಅನುದಾನ ನೀಡಲಾಗಿದೆ. ಈ ಯೋಜನೆ ದೇಶದ ಮುಂಬರುವ ಮಾನವ ಸಹಿತ ಬಾಹ್ಯಾಕಾಶ ಕಾರ್ಯಾಚರಣೆಗೆ ಪೂರಕವಾಗಿ ನಡೆಯಲಿದೆ. ಗಗನಯಾತ್ರಿಗಳ ಆರೋಗ್ಯ ಮತ್ತು ಬಾಹ್ಯಾಕಾಶ ನೌಕೆಯ ನೈರ್ಮಲ್ಯಕ್ಕೆ ನಿರ್ಣಾಯಕವಾದ ಸೂಕ್ಷ್ಮಜೀವಿ ಮೇಲ್ವಿಚಾರಣಾ ವ್ಯವಸ್ಥೆಗಳನ್ನು ಬಲಪಡಿಸುವ ಗುರಿ ಹೊಂದಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

ಈ ಯೋಜನೆಯ ನೇತೃತ್ವವನ್ನು ಪ್ರಯೋಗದ ಸಂಶೋಧಕಿ ರಮ್ಯಾ ಪ್ರಭು ವಹಿಸಿದ್ದು, ವೆಂಕಟ ಕೃಷ್ಣ, ಓಂ ಪ್ರಕಾಶ್ ಮತ್ತು ಸಾಯಿ ಹರ್ಷಿಣಿ ತಂಡದಲ್ಲಿರುತ್ತಾರೆ ಎಂದು ಹೇಳಿದೆ.

ರಮ್ಯಾ ಪ್ರಭು ಮಾತನಾಡಿ, 'ಇಸ್ರೊದಿಂದ ಈ ಯೋಜನೆಯನ್ನು ಪಡೆಯಲು ಸಂತೋಷವಾಗಿದೆ. ಬಾಹ್ಯಾಕಾಶ ನೌಕೆಯ ಪರಿಸರದಲ್ಲಿ ಸೂಕ್ಷ್ಮಜೀವಿಯ ಇರುವಿಕೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ದೀರ್ಘಾವಧಿಯ ಕಾರ್ಯಾಚರಣೆಗಳಲ್ಲಿ ಗಗನಯಾತ್ರಿಗಳ ಸುರಕ್ಷತೆಗಾಗಿ ಈ ಯೋಜನೆಯು ಅಗತ್ಯವಾಗಿದೆ' ಎಂದು ಹೇಳಿದರು.

'ಅತ್ಯಾಧುನಿಕ ಪ್ರಯೋಗಾಲಯ ಹೊಂದಿರುವ 'ಪ್ರಯೋಗ' ಸಂಸ್ಥೆಗೆ, ಇಸ್ರೊದಿಂದ ಯೋಜನೆ ಪಡೆಯುವುದು ಒಂದು ಮಹತ್ವದ ಮೈಲಿಗಲ್ಲು' ಎಂದು ಪ್ರಯೋಗದ ಸಂಶೋಧನಾ ನಿರ್ದೇಶಕ ಕೆ. ಎಸ್. ನಾಗಭೂಷಣ ಅವರು ಹೇಳಿದ್ದಾರೆ.

'ಶಿವಾಜಿ ಹೆಸರಿನಲ್ಲಿ ಧರ್ಮ ರಾಜಕಾರಣ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದೇ ಧರ್ಮಕ್ಕೆ ಸೀಮಿತವಾಗದೇ ಆಡಳಿತ ನಡೆಸಿದ ಶಿವಾಜಿ ಮಹಾರಾಜರ ಹೆಸರನ್ನು ಕೇಸರೀಕರಣಗೊಳಿಸಿ ರಾಜಕಾರಣ ಮಾಡುವುದು ಸರಿಯಲ್ಲ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

'ಶಿವಾಜಿ ಮಹಾರಾಜರ ಆಡಳಿತ ಅವಧಿಯಲ್ಲಿ ಎಲ್ಲ ಧರ್ಮದವರಿಗೂ ಧಾರ್ಮಿಕ ಸ್ವಾತಂತ್ರ್ಯ ಇತ್ತು. ರಾಜರಾಗಿ ಅವರು ಎಲ್ಲ ಧರ್ಮಗಳ ಪರ ನಿಂತಿದ್ದರು. ಸರ್ವ- ಧರ್ಮ ಸಹಿಷ್ಣುತೆಗೆ ಶಿವಾಜಿಯ ಆಡಳಿತ ಮಾದರಿಯಾಗಿತ್ತು. ಎಲ್ಲ ಸಮುದಾಯದ ಗೌರವಾನ್ವಿತ ವ್ಯಕ್ತಿಗಳನ್ನು ತಮ್ಮ ಆಡಳಿತದಲ್ಲಿ ತೊಡಗಿಸಿದ್ದರು' ಎಂದು ಹೇಳಿದರು.

'ಶಿವಾಜಿ ಅವರು ಕರ್ನಾಟಕ ಭಾಷೆ ಹಾಗೂ ರಾಜ್ಯದ ಮೇಲೆ ಅಪಾರವಾದ ಪ್ರೇಮವನ್ನಿರಿಸಿಕೊಂಡಿದ್ದರು.

ವಿಜಯನಗರ ಸಾಮ್ರಾಜ್ಯ ಪತನವೇಳೆ ಅದರ ಅವಶೇಷಗಳನ್ನು ಕಂಡು, ಔರಂಗಜೇಬನ ವಿರುದ್ಧ ಧಿಕ್ಕಾರ ಕೂಗಿದ್ದರು. ಅವರ ಇತಿಹಾಸವನ್ನು ಸರಿಯಾಗಿ ತಿಳಿದುಕೊಳ್ಳಬೇಕು' ಎಂದು ತಿಳಿಸಿದರು.

ಸಂಭಾಜಿ ಸಮಾಧಿ: 'ಶಿವಾಜಿ ಪುತ್ರ ಸಂಭಾಜಿ ಅವರ ಸಮಾಧಿ ಕನಕಗಿರಿ ಕ್ಷೇತ್ರದ ಖಾಸಗಿ ಸ್ಥಳದಲ್ಲಿ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾನೂನು ತೊಡಕನ್ನು ಬಗೆಹರಿಸಿಕೊಂಡು ಸಮಾಧಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಶಿವರಾಜ್ ತಂಗಡಗಿ ಹೇಳಿದರು.

ಗೋಸಾಯಿ ಮಹಾಸಂಸ್ಥಾನ ಮಠದ ಮಂಜುನಾಥ ಭಾರತಿ ಸ್ವಾಮೀಜಿ, ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಎಚ್.ಮರಿಯೋಜಿ ರಾವ್, ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಪಾಗೋಜಿ, ಕರ್ನಾಟಕ ಮರಾಠ ಸಮಾಜದ ರಾಜ್ಯಾಧ್ಯಕ್ಷ ಎಸ್.ಸುರೇಶ್ ರಾವ್ ಸಾಠೆ, ಮರಾಠ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಸುನೀಲ್ ರಾವ್ ಭಿಸ್ಸೆ, ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಉಪಸ್ಥಿತರಿದ್ದರು.

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮದಲ್ಲಿ ಸಚಿವ ಶಿವರಾಜ ತಂಗಡಗಿ, ಮಂಜುನಾಥ ಭಾರತಿ ಸ್ವಾಮೀಜಿ, ಬಿ.ಎಚ್‌ ಮರಿಯೋಜಿರಾವ್ ಪುಷ್ಪನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ಜೆಇಇ ಮೇನ್: ಅಲೆನ್ ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ

ನಾಥನ್ ಜೈಸ್



ಶಿವ್ ಮೆಹ್ರಾ

ಸಿದ್ಧಾರ್ಥ ರಾಮನಾಥ್

ಬೆಂಗಳೂರು: 'ಅಲೆನ್ ಬೆಂಗಳೂರು ಕೇಂದ್ರದ ಮೂವರು ವಿದ್ಯಾರ್ಥಿಗಳು ಜೆಇಇ ಮುಖ್ಯ ಪರೀಕ್ಷೆಯಲ್ಲಿ 99.99 ಪರ್ಸೆಂಟೈಲ್ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ' ಎಂದು ದಕ್ಷಿಣ ವಲಯದ, ವಲಯ ಮುಖ್ಯಸ್ಥ ಮಹೇಶ್ ಯಾದವ್ ತಿಳಿಸಿದ್ದಾರೆ.

ಸಾಥನ್ ಜೈಸ್ 99.99, ಸಿದ್ಧಾರ್ಥ್ ರಾಮನಾಥ್ 99.99 ಹಾಗೂ ಶಿವ್ ಮೆಹ್ರಾ 99.99 ಪರ್ಸೆಂಟೈಲ್ ಪಡೆದಿದ್ದಾರೆ. ಇದಲ್ಲದೆ, ನಾಥನ್ ಜೈಸ್ ಭೌತ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ 100 ಪರ್ಸೆಂಟೈಲ್ ಪಡೆದಿದ್ದಾರೆ ಎಂದು ತಿಳಿಸಿದ್ದಾರೆ.

'ಸಮರ್ಪಕ ಮಾರ್ಗದರ್ಶನದ ಫಲವಾಗಿ ಕೇಂದ್ರದ 37 ವಿದ್ಯಾರ್ಥಿಗಳು 99.90 ಪರ್ಸೆಂಟೈಲ್ ಗಳಿಸಿದ್ದಾರೆ. ಈ ಸಾಧನೆ ವಿದ್ಯಾರ್ಥಿಗಳ ಪರಿಶ್ರಮ, ಪೋಷಕರ ಪ್ರೋತ್ಸಾಹ, ಶಿಕ್ಷಕರ ಶ್ರಮದ ಪ್ರತಿಫಲವಾಗಿದೆ' ಎಂದು ಮಹೇಶ್ ಯಾದವ್ ಹೇಳಿದ್ದಾರೆ.

'ಉನ್ನತ ಪರ್ಸೆಂಟೈಲ್ ನೊಂದಿಗೆ ಜೆಇಇ ಮೇನ್ ಅರ್ಹತೆ ಪಡೆಯುವ ಕನಸು ನನಸಾದಂತಾಗಿದೆ. ಅಲೆನ್ ಸೇರಿದ ನಂತರ ನನ್ನ ಅಧ್ಯಯನ ಕ್ರಮಬದ್ಧವಾಯಿತು. ನಿಯಮಿತ ಪರೀಕ್ಷೆ ಮತ್ತು ವಿಶ್ಲೇಷಣಾತ್ಮಕ ಮೌಲ್ಯಮಾಪನ ನನ್ನ ವಿಷಯ ಜ್ಞಾನ ಹೆಚ್ಚಿಸಿತು' ಎಂದು ವಿದ್ಯಾರ್ಥಿ ನಾಥನ್ ಜೈಸ್ ಅನುಭವ ಹಂಚಿಕೊಂಡಿದ್ದಾರೆ.

ಬಸವನಗುಡಿ: ಸಾಂಸ್ಕೃತಿಕ ಸಂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ 'ಪರಮ್ ಫೌಂಡೇಶನ್' ವತಿಯಿಂದ 'ಪರಮ್ ಕಲ್ಚರ್' ಅಡಿ 'ಪರಮ್ ವಿಹಾರ' ಎಂಬ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಫೆ. 22ರಂದು ಬಸವನಗುಡಿಯ ಡಿವಿಜಿ ರಸ್ತೆಯಲ್ಲಿರುವ 'ಅಬಲಾಶ್ರಮ'ದಲ್ಲಿ ಸಂಜೆ 6 ಗಂಟೆಗೆ ಕಾರ್ಯಕ್ರಮ ನಡೆಯಲಿದೆ.

ಉದಯೋನ್ಮುಖ ಕಲಾವಿದರಿಗಾಗಿ ಮುಡಿಪಾಗಿಟ್ಟಿರುವ ಈ ವೇದಿಕೆಯಲ್ಲಿ ಮೊದಲಿಗೆ ಸುಮಧುರವಾದ 'ಸುಗಮ ಸಂಗೀತ' ಕಾರ್ಯಕ್ರಮ ಮೂಡಿಬರಲಿದೆ. ಯುವ ಗಾಯಕ ಸ್ಕಂದೇಶ್ ಎಸ್. ಅವರ ಗಾಯನಕ್ಕೆ ಕೀಬೋರ್ಡ್ ವಾದಕ ಜಯವರ್ಧನ ಹಾಗೂ ತಬಲಾ ವಾದಕ ರೋಹಿತ್ ಕುಲಕರ್ಣಿ ಅವರು ಸಾಥ್ ನೀಡಲಿದ್ದಾರೆ. ಬಳಿಕ ಹೆಜ್ಜೆಗಳ ನಾದದೊಂದಿಗೆ ಕಥಕ್ ನೃತ್ಯ ವೈಭವ ಅನಾವರಣಗೊಳ್ಳಲಿದ್ದು, ನಂತರ ಆಕರ್ಷಕ ಕಥಕ್ ನೃತ್ಯ ಪ್ರದರ್ಶನ ಇದೆ.

'ಪರಮ್ ಫೌಂಡೇಶನ್' ಹಾಗೂ 'ಪ್ರಕೃತಿ' ಸಂಸ್ಥೆಯ ಸಹಯೋಗದಲ್ಲಿ ಮೂಡಿ ಬರುತ್ತಿರುವ ಈ ಕಾರ್ಯಕ್ರಮ ಒಟ್ಟು 2 ತಾಸು ನಡೆಯಲಿದ್ದು, ಕಲಾಭಿಮಾನಿಗಳಿಗೆ ರಸದೌತಣ ಉಣಬಡಿಸಲಿದೆ.

ಕಾರ್ಯಕ್ರಮಕ್ಕೆ ಉಚಿತ ಪ್ರವೇಶ ಇರಲಿದೆ.

ನಗರದಲ್ಲಿ ಇಂದು

ಸಂತ ನಿಳೋಬ ಮಹಾರಾಜ ಅವರ ಸಪ್ತಾಹ ಮಹೋತ್ಸವ: ಕಾಕಡಾರತಿ, ಜ್ಞಾನೇಶ್ವರಿ ಗ್ರಂಥ ಪಾರಾಯಣ, ಪಂಢರಿ ಭಜನೆ, ಕೀರ್ತನೆ, ಪ್ರವಚನ, ಆಯೋಜನೆ ಹಾಗೂ ಸ್ಥಳ: ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ಸುಭೇದಾರ್ ಛತ್ರಂ ರಸ್ತೆ ಕ್ರಾಸ್, ಗಾಂಧಿನಗರ, ಬೆಳಿಗ್ಗೆ 5ರಿಂದ

ಮಹಿಳೆಯರ ಸಮಾವೇಶ: ಅಧ್ಯಕ್ಷತೆ: ಅಹಲ್ಯಾ ಎಸ್., ಅತಿಥಿಗಳು: ತೇಜಸ್ವಿನಿ ಅನಂತಕುಮಾರ್, ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಆಯೋಜನೆ: ಭಾರತೀಯ ವಿದ್ವತ್ ಪರಿಷತ್, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

26ನೇ ವಾರ್ಷಿಕೋತ್ಸವ: ಕನಕದಾಸರ ಆರಾಧನಾ ಮಹೋತ್ಸವ, ಗಾಯನ: ಜಯತೀರ್ಥ ಮೇವುಂಡಿ, ತಬಲಾ: ಅಕ್ಷಯ್ ಜೋಶಿ, ಹಾರ್ಮೋನಿಯಂ: ಶ್ರೀರಕ್ಷ ಶಾನಭೋಗ್, ಅತಿಥಿ: ಆರ್.ಕೆ. ಪದ್ಮನಾಭ, ಆಯೋಜನೆ: ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ, ಸ್ಥಳ: ವೆಂಕೋಬಾಚಾರ್ಯ ಸ್ಮೃತಿ ಸಾಂಸ್ಕೃತಿಕ ಮಂಟಪ, ದೇವಗಿರಿ ವೆಂಕಟೇಶ್ವರ ದೇವಸ್ಥಾನ, ಬನಶಂಕರಿ 2ನೇ ಹಂತ, ಸಂಜೆ 5

ಜಯತೀರ್ಥ ಮೇವುಂಡಿ

ಏಕವ್ಯಕ್ತಿ ಭರತನಾಟ್ಯ: ಮಂದಾರ ಸಿ.ಕೆ., ಆಯೋಜನೆ: ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

'ಥ್ರೆಡ್ಸ್ ಆಫ್ ಥಾಟ್ಸ್' ಕಲಾ ಪ್ರದರ್ಶನ: ವೇಣುಗೋಪಾಲ್ ವಿ.ಜಿ., ಜೆ. ಸೆಂಥಿಲ್ ಕುಮಾರ್, ನಿಂಗನಗೌಡ ಸಿ. ಪಾಟೀಲ, ಅತಿಥಿ: ಸಿ.ಎಸ್. ಕೃಷ್ಣಸೆಟ್ಟಿ, ಆಯೋಜನೆ ಹಾಗೂ ಸ್ಥಳ: ಆರ್ಟ್ ಹೌಸ್, #63, ಅರಮನೆ ರಸ್ತೆ, ವಸಂತನಗರ, ಸಂಜೆ 6

'ಕನ್ನಡ ಸಿನಿಮಾಗಳ ಮೂಲಕ ಸಂಸ್ಕೃತಿ ಮತ್ತು ಅಸ್ಮಿತೆ' ವಿಷಯದ ಬಗ್ಗೆ ಉಪನ್ಯಾಸ: ವಿದ್ಯಾಶಂಕರ್ ಎನ್., ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಹೆರಿಟೇಜ್ ಅಕಾಡೆಮಿ, ಕೋರಮಂಗಲ, ಸಂಜೆ 6.30

ಉಡುಪ ಸಂಗೀತೋತ್ಸವ: ಗಾಯನ: ಬೇಗಂ ಪರ್ವಿನ್ ಸುಲ್ತಾನ್, ಹಾರ್ಮೋನಿಯಂ: ರವೀಂದ್ರ ಕಾಟೋಟಿ, ತಬಲಾ: ಓಜಸ್ ಅಧ್ಯ, ಸಿತಾರ್ ವಾದನ: ಪುರ್ಬಯನ್ ಚಟರ್ಜಿ, ಆಯೋಜನೆ: ಉಡುಪ ಪ್ರತಿಷ್ಠಾನ, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಸಂಜೆ 7

'ಜ್ಞಾನ ದೇಗುಲ' ನಾಟಕ ಪ್ರದರ್ಶನ: ನಿರ್ದೇಶನ: ಸಿದ್ದೇಶ್ವರ ನನಸುಮನೆ, ಆಯೋಜನೆ: ಜನಪದರು ಸಾಂಸ್ಕೃತಿಕ ವೇದಿಕೆ, ಸ್ಥಳ: ಬಿ.ಪಿ.ವಾಡಿಯಾ ಸಭಾಂಗಣ, ಬಸವನಗುಡಿ, ಸಂಜೆ 7

ಕೇಂದ್ರೀಯ ವಿದ್ಯಾಲಯ,
KENDRIYA VIDYALAYA
Azadi Ka Amrit Mahotsav
ರಾಷ್ಟ್ರೀಯ ವೈಮಾನಿಕ ಪ್ರಯೋಗಶಾಲೆ ಪರಿಸರ, ಬೆಂಗಳೂರು–560017
(An Autonomous Body under Ministry of Education, Govt of India)
Tel: 080-25211610, Website: https://nal.kvs.ac.in, Email: kvnal05@gmail.com
KV Code: 1048, CBSE AFFILIATION NO.-800015, UDISE CODE: 29200312170
संदर्भ: फा.सं.13350/केवि (एनएएल)/2025–26/ दिनांक:19/02/2026
2026–2027ರ ಅವಧಿಗೆ ಅಗತ್ಯ ಆಧಾರಿತ ಗುತ್ತಿಗೆ ಶಿಕ್ಷಕ ಸಮಿತಿಯನ್ನು ಸಿದ್ಧಪಡಿಸಲು ಕೆವಿ ಎನ್‌ಎಎಲ್ ಬೆಂಗಳೂರಿನಲ್ಲಿ ವಾಕ್–ಇನ್ ಸಂದರ್ಶನವನ್ನು 17/03/2026 ರಂದು ನಡೆಸಲಾಗುವುದು. ವಿವರಗಳಿಗಾಗಿ ವಿದ್ಯಾಲಯ ವೆಬ್‌ಸೈಟ್: https://nal.kvs.ac.in ಗೆ ಭೇಟಿ ನೀಡಿ.
Sd/ Principal, KV NAL

ತೆರಿಗೆ ಸಂಗ್ರಹದಲ್ಲಿ ಹಿಂದುಳಿದ ಪಾಲಿಕೆಗಳು

ಆರ್ಥಿಕ ವರ್ಷ ಮುಗಿಯುತ್ತಿದ್ದರೂ ಶೇ 57ರಷ್ಟು ಸಾಧನೆ
• ಉತ್ತರ ನಗರ ಪಾಲಿಕೆಗೆ ಕೊನೆಯ ಸ್ಥಾನ

• ಆರ್. ಮಂಜುನಾಥ್

ಬೆಂಗಳೂರು: ಐದು ನಗರ ಪಾಲಿಕೆಗಳು 2026–27ನೇ ಸಾಲಿನ ಬಜೆಟ್ ಸಿದ್ಧತೆಗೆ ಅಣಿಯಾಗುತ್ತಿವೆ. ಆದರೆ, ಐದು ತಿಂಗಳಲ್ಲಿ ಸಂಪನ್ಮೂಲ ಕ್ರೋಡೀಕರಣದಲ್ಲಿ ಹಿಂದುಳಿದ್ದು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 57ರಷ್ಟು ಮಾತ್ರ ಆಸ್ತಿ ತೆರಿಗೆಯನ್ನು ಸಂಗ್ರಹಿಸಿವೆ.

2025–26ನೇ ಸಾಲಿನ ಮೊದಲ ಎರಡು ತಿಂಗಳಲ್ಲಿಯೇ ₹2 ಸಾವಿರ ಕೋಟಿಗೂ ಹೆಚ್ಚು ತೆರಿಗೆ ಸಂಗ್ರಹವಾಗಿತ್ತು. ನಂತರ, ಬಿಬಿಎಂಪಿಯಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ ಐದು ನಗರ ಪಾಲಿಕೆ ರಚನೆಯಾಗುವ ಪ್ರಕ್ರಿಯೆಯಲ್ಲಿ ಆಸ್ತಿ ತೆರಿಗೆ ಸಂಗ್ರಹ ನನೆಗುದಿಗೆ ಬಿದ್ದಿದೆ.

2024–25ನೇ ಸಾಲಿನಲ್ಲಿ ಫೆಬ್ರುವರಿ 13ರವರೆಗೆ ಒಟ್ಟು ₹4,547 ಕೋಟಿ ಆಸ್ತಿ ತೆರಿಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂಗ್ರಹವಾಗಿತ್ತು. ಅದೇ ವ್ಯಾಪ್ತಿಯಲ್ಲಿ ಐದು ನಗರ ಪಾಲಿಕೆಗಳಿದ್ದರೂ, ತೆರಿಗೆ ಸಂಗ್ರಹದಲ್ಲಿ ಈ ವರ್ಷ ಒಂದೂವರೆ ಸಾವಿರ ಕೋಟಿಯಷ್ಟು ಕಡಿಮೆಯಾಗಿದೆ.

ಬಿಬಿಎಂಪಿಯ ಬಜೆಟ್ ಅನ್ನು ಐದು ನಗರ ಪಾಲಿಕೆಗಳಿಗೆ ವಿಭಜನೆ ಮಾಡಲಾಗಿತ್ತು. ಅದರಲ್ಲಿ ಆಸ್ತಿ ತೆರಿಗೆ ಸಂಗ್ರಹವೇ ಪ್ರಮುಖ ಸಂಪನ್ಮೂಲವಾಗಿದ್ದರೂ ಅದನ್ನು ಸಂಗ್ರಹಿಸುವಲ್ಲಿ ಹೊಸ ನಗರ ಪಾಲಿಕೆಗಳು ವಿಫಲವಾಗಿವೆ. 2025ರ ಸೆಪ್ಟೆಂಬರ್‌ನಿಂದ ರಸ್ತೆ ಪರಿಶೀಲನೆ, ಪಾದಚಾರಿ ಮಾರ್ಗದಲ್ಲಿ ಕಸ ತೆರವು ಪರಿಶೀಲನೆ ಎಂದು ನಗರ ಪಾಲಿಕೆ ವ್ಯಾಪ್ತಿಗೆ ಬಂದಿರುವ ಹೊಸ ಆಯುಕ್ತರು, ಅಧಿಕಾರಿಗಳೆಲ್ಲರೂ ಬೀದಿಗಿಳಿದಿದ್ದಾರೆ. ಆದರೆ, ಸಂಪನ್ಮೂಲ ಕ್ರೋಡಿಕರಣದಲ್ಲಿ ಹಿಂದೆ ಬಿದ್ದಿದ್ದಾರೆ.

'ನಗರ ಪಾಲಿಕೆಯಲ್ಲಿ ಹಣವಿಲ್ಲ, ಅನುದಾನವಿಲ್ಲ' ಎಂಬುದೇ ಮೊದಲ ಮಾತಾಗಿರುವಾಗ, ಸಂಪನ್ಮೂಲ ಕ್ರೋಡೀಕರಿಸದೆ ಹೊಸ ಬಜೆಟ್‌ನಲ್ಲಿ ಸರ್ಕಾರದ ಅನುದಾನದ ಮೇಲೆ ಹೆಚ್ಚಿನ ನಿಗಾವಹಿಸಿ ಸಿದ್ಧತೆ ನಡೆಸಿದ್ದಾರೆ.

ಉತ್ತರ ಕೊನೆ: ಐದು ನಗರ ಪಾಲಿಕೆಗಳಲ್ಲಿ ಬೆಂಗಳೂರು ಉತ್ತರ ನಗರ ಪಾಲಿಕೆ ಆಸ್ತಿ ತೆರಿಗೆ ಸಂಗ್ರಹದಲ್ಲಿ ತುಂಬಾ ಹಿಂದೆ ಇದೆ. ₹1,242 ಕೋಟಿ ಪೈಕಿ ₹651 ಕೋಟಿ ಅಷ್ಟೇ ಸಂಗ್ರಹಿಸಿ ಕೊನೆ ಸ್ಥಾನದಲ್ಲಿದೆ.

ಆಸ್ತಿ ತೆರಿಗೆಯಲ್ಲಿ ಅತಿಹೆಚ್ಚು ಕೊಡುಗೆ ನೀಡುವ ಪೂರ್ವ ನಗರ ಪಾಲಿಕೆಯಲ್ಲೂ ಕಳೆದ ಆರ್ಥಿಕ ವರ್ಷಕ್ಕಿಂತ ಶೇ 16.10ರಷ್ಟು ಕಡಿಮೆ ಸಂಗ್ರಹವಾಗಿದೆ. ₹1,000 ಕೋಟಿಯ ಗಡಿ ದಾಟಿದ್ದರೂ ಒಟ್ಟಾರೆ ಪ್ರಮಾಣದಲ್ಲಿ ಶೇ 60ರಲ್ಲೇ ಇದೆ. ಪಶ್ಚಿಮ, ಕೇಂದ್ರ, ದಕ್ಷಿಣ ನಗರ ಪಾಲಿಕೆಗಳೂ ಆಸ್ತಿ ತೆರಿಗೆ ಸಂಗ್ರಹದಲ್ಲಿ ಹೆಚ್ಚಿನ ಸಾಧನೆ ಮಾಡಿಲ್ಲ.

'ಆರ್ಥಿಕ ವರ್ಷದ ಕೊನೆಯ ತಿಂಗಳು ಮಾರ್ಚ್‌ನಲ್ಲಿ ಬಾಕಿ ಉಳಿದಿರುವ ಆಸ್ತಿ ತೆರಿಗೆಯನ್ನು ಸಂಗ್ರಹಿಸಲು ಯೋಜಿಸಲಾಗಿದೆ. ಅತಿ ಹೆಚ್ಚು ಪ್ರಯಾಸಪಟ್ಟರೂ ಶೇ 85ರ ಆಸುಪಾಸಿನಲ್ಲಿ ಸಂಗ್ರಹ ಸಾಧ್ಯವಾಗಬಹುದು. ಶೇ 100ರಷ್ಟು ಗುರಿ ಮುಟ್ಟಲು ಸಾಧ್ಯ ಇಲ್ಲ' ಎಂದು ಅಧಿಕಾರಿಗಳು ತಿಳಿಸಿದರು.

'ವಾಸ್ತವದಲ್ಲಿ ಅಧಿಕ ತೆರಿಗೆ ಸಂಗ್ರಹ'

'ನಮ್ಮದು ಸಿಬಿಡಿ ಪ್ರದೇಶವಾಗಿದ್ದು, ಇಲ್ಲಿ ಹೊಸ ಕಟ್ಟಡಗಳು ನಿರ್ಮಾಣವಾಗುವುದಿಲ್ಲ. ವಾಣಿಜ್ಯ ಕಟ್ಟಡಗಳೇ ಹೆಚ್ಚಿದ್ದು, ಅವುಗಳಿಂದ ಪ್ರತಿವರ್ಷ ನಿರ್ದಿಷ್ಟ ತೆರಿಗೆ ಮಾತ್ರ ಬರುತ್ತದೆ. ಸಾಮಾನ್ಯವಾಗಿ, ಪ್ರತಿ ವರ್ಷ ಶೇ 20ರಷ್ಟು ಹೆಚ್ಚು ಗುರಿ ನೀಡಲಾಗುತ್ತದೆ. ಅಭಿವೃದ್ಧಿಯಾಗುತ್ತಿರುವ ನಗರ ಪಾಲಿಕೆಗಳಲ್ಲಿ ಸಂಗ್ರಹ ಹೆಚ್ಚಾಗಲು ಸಾಧ್ಯವಿದೆ. ಆದರೆ, ಕೇಂದ್ರ ನಗರ ಪಾಲಿಕೆಯಲ್ಲಿ ಒಂದೇ ರೀತಿಯ ತೆರಿಗೆ ಸಂಗ್ರಹವಾಗುತ್ತದೆ. ಹೀಗಾಗಿ, ಗುರಿಯನ್ನು ಹೊರತುಪಡಿಸಿದರೆ, ನಾವು ಹೆಚ್ಚಿನ ಸಂಗ್ರಹವನ್ನೇ ಮಾಡಿದ್ದೇವೆ. ಇಲ್ಲಿನ ಬಹುತೇಕ ವಾಣಿಜ್ಯೋದ್ಯಮಿಗಳು ಮಾರ್ಚ್‌ನಲ್ಲಿ ತೆರಿಗೆ ಪಾವತಿಸುತ್ತಾರೆ. ಮುಂದಿನ ತಿಂಗಳು ಸಂಗ್ರಹ ಹೆಚ್ಚಾಗಲಿದ್ದು, ವಾಸ್ತವದ ಗುರಿಯಲ್ಲಿ ಶೇ 5ರಿಂದ ಶೇ 6ರಷ್ಟು ಹೆಚ್ಚು ತೆರಿಗೆ ಸಂಗ್ರಹವಾಗಲಿದೆ' ಎಂದು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ಹೇಳಿದರು.

ಆಸ್ತಿ ತೆರಿಗೆ ಸಂಗ್ರಹ (ಕೋಟಿಗಳಲ್ಲಿ)

ನಗರ ಪಾಲಿಕೆ	2025–26ರ ಗುರಿ	ಸಂಗ್ರಹ	ಶೇಕಡವಾರು
ದಕ್ಷಿಣ	₹1,228.85	₹745.33	60.65
ಪೂರ್ವ	₹1,673.46	₹1,010.42	60.38
ಪಶ್ಚಿಮ	₹1,281.59	₹761.35	59.41
ಕೇಂದ್ರ	₹1,273.78	₹724.77	56.90
ಉತ್ತರ	₹1,242.33	₹651.92	52.48
ಒಟ್ಟು	₹6,700	₹3,893.79	57.96

21,73,617 ಐದು ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಆಸ್ತಿಗಳು

4,53,117 ಐದು ನಗರ ಪಾಲಿಕೆ ವ್ಯಾಪ್ತಿಯಲ್ಲಿ ತೆರಿಗೆ ಪಾವತಿಸಬೇಕಿರುವವರು

₹903ಕೋಟಿ ತೆರಿಗೆ ಪಾವತಿಯಾಗಬೇಕಾದ ಮೊತ್ತ

1,80,795 ಐದು ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ತೆರಿಗೆ ಸುಸ್ತಿದಾರರು

₹644.81ಕೋಟಿ ಸುಸ್ತಿದಾರರಿಂದ ಬಾಕಿಯಿರುವ ಮೊತ್ತ

ಸುದ್ದಿ 2 ನಿಮಿಷ

ಬನ್ನೇರುಘಟ್ಟ ಇಎಸ್‌ಝಡ್ ಮಾರ್ಚ್ 16ರಂದು ವಿಚಾರಣೆ

ನವದೆಹಲಿ: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಪರಿಸರ ಸೂಕ್ಷ್ಮ ಪ್ರದೇಶವನ್ನು (ಇಎಸ್‌ಝಡ್) ರಾಜ್ಯ ಸರ್ಕಾರ ಕಡಿಮೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಾರ್ಚ್ 16ರಂದು ವಿಚಾರಣೆ ನಡೆಸಲಿದೆ.

ಪರಿಸರಕ್ಕೆ ಸಂಬಂಧಿಸಿದ ಸುಮಾರು 20 ಮೇಲ್ಮನವಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ, 'ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನು ಮಾರ್ಚ್ 16ರಂದು ಮಧ್ಯಾಹ್ನ ವಿಚಾರಣೆ ನಡೆಸಿ ಇತ್ಯರ್ಥ ಮಾಡಲಾಗುವುದು' ಎಂದು ತಿಳಿಸಿತು.

ಬನ್ನೇರುಘಟ್ಟ ಇಎಸ್‌ಝಡ್ ವ್ಯಾಪ್ತಿಯನ್ನು 268 ಚದರ ಕಿ.ಮೀ.ನಿಂದ 168 ಚದರ ಕಿ.ಮೀ.ಗೆ ಇಳಿಸಿರುವ ಕರ್ನಾಟಕ ಸರ್ಕಾರದ ಕ್ರಮ ಪ್ರಶ್ನಿಸಿ ಬೆಂಗಳೂರಿನ ನಿವಾಸಿ ಬೆಳ್ಳಿಯಪ್ಪ ಮತ್ತಿತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಕೇಂದ್ರ ಉನ್ನತಾಧಿಕಾರ ಸಮಿತಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.

ಸಮಿತಿಯು ಸುಪ್ರೀಂ ಕೋರ್ಟ್‌ಗೆ ಜನವರಿ 7ರಂದು 524 ಪುಟಗಳ ವರದಿ ಸಲ್ಲಿಸಿತ್ತು. ಯಾವುದೇ ವೈಜ್ಞಾನಿಕ, ಪರಿಸರ ಅಥವಾ ಭೂದೃಶ್ಯ ಮಟ್ಟದ ಅಧ್ಯಯನ ಹಾಗೂ ಮೌಲ್ಯಮಾಪನ ನಡೆಸದೆಯೇ ಪರಿಸರ ಸೂಕ್ಷ್ಮ ಪ್ರದೇಶವನ್ನು ನಿರಂತರವಾಗಿ ಕಡಿತ ಮಾಡಲಾಗಿದೆ ಎಂದೂ ಸಮಿತಿ ವರದಿಯಲ್ಲಿ ಉಲ್ಲೇಖಿಸಿತ್ತು. ಸರ್ಕಾರದ ಕ್ರಮವನ್ನು ಸಿಇಸಿ ಕಟುವಾಗಿ ಟೀಕಿಸಿತ್ತು. ಈ ಕ್ರಮವು ಉದ್ಯಾನದ ಪರಿಸರ ವಿಜ್ಞಾನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂದು ಅಭಿಪ್ರಾಯಪಟ್ಟಿತ್ತು.

ಸಮಯ ಪಾಲಿಸದ ಬಾರ್‌ಗಳು ಸಿ.ಎಂಗೆ ಸುರೇಶ್ ಕುಮಾರ್ ಪತ್ರ

ಬೆಂಗಳೂರು: 'ರಾಜಸ್ವ ಸಂಗ್ರಹಣೆ ಎಂಬುದು ಸಾಮಾಜಿಕ ಸ್ವಾಸ್ಥ್ಯದ ಸಮಾಧಿಯ ಮೇಲೆ ನಡೆಯಬಾರದು' ಎಂದು ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಹೇಳಿದ್ದಾರೆ.

'ರಾಜ್ಯದ ಅನೇಕ ಕಡೆಗಳಲ್ಲಿ, ಅದರಲ್ಲೂ ಮುಖ್ಯವಾಗಿ ವಸತಿ ಪ್ರದೇಶಗಳ ಬಳಿ ಬಾರ್‌ಗಳು ಮತ್ತು ಮದ್ಯದಂಗಡಿಗಳು ಬೆಳಿಗ್ಗೆ 10 ಗಂಟೆ ನಂತರ ತೆರೆಯಬೇಕು ಎಂಬ ನಿಯಮವಿದ್ದರೂ ಮುಂಜಾನೆ 5 ಗಂಟೆಗೆ ಬಾಗಿಲು ತೆರೆಯುತ್ತಿರುವುದು ಆತಂಕದ ವಿಚಾರ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

'ಬೆಳಗಿನ ಜಾವ ಮನೆಗಳಲ್ಲಿ ಮಕ್ಕಳು ಶಾಲೆಗೆ ಹೋಗುವ, ಗೃಹಿಣಿಯರು ಅಡುಗೆ ಮಾಡಿ ಸಂಸಾರವನ್ನು ತೂಗಿಸುವ ಸಮಯ. ಈ ವೇಳೆ ಮನೆ ಯಜಮಾನ ಅಥವಾ ಯುವಕರು ಮದ್ಯದಂಗಡಿ ಮುಂದೆ ಸರದಿಯಲ್ಲಿ ನಿಲ್ಲುವ, ಮದ್ಯ ಕುಡಿಯುವ ದೃಶ್ಯ ಆಯಾ ಕುಟುಂಬದ ನೆಮ್ಮದಿಗೆ ಕೊಳ್ಳಿ ಇಟ್ಟಂತೆ ಮಾಡುತ್ತದೆ' ಎಂದಿದ್ದಾರೆ.

'ಬಹುತೇಕ ಕಡೆ ನಿಯಮ ಉಲ್ಲಂಘನೆಯಾಗಿ 24 ಗಂಟೆಗಳ ಕಾಲವೂ ಬಾರ್‌ಗಳು ರಾಜಾರೋಷವಾಗಿ ನಡೆಯುತ್ತಿವೆ. ಇದಕ್ಕೆ ಸಾಕ್ಷಿಯಾಗಿ ಗುರುವಾರ ಬೆಳಿಗ್ಗೆ ನನ್ನ ಕ್ಷೇತ್ರದಲ್ಲಿ ನಾನು ಕೈಗೊಳ್ಳುವ ದಿನಕ್ಕೊಂದು ವಾರ್ಡ್ ನಡಿಗೆ ಕಾರ್ಯಕ್ರಮದ ಸಂದರ್ಭದಲ್ಲಿ ಬೆಳಿಗ್ಗೆ 6.30ಕ್ಕೆ ಬಾರ್ ತೆರೆದಿರುವುದನ್ನು ಗಮನಿಸಿದೆ. ಅಲ್ಲಿನ ಪರಿಸ್ಥಿತಿ ನೋಡಿ ಬಾರ್‌ನವರನ್ನು ತರಾಟೆಗೆ ತೆಗೆದುಕೊಂಡು ಮುಚ್ಚಿಸಬೇಕಾಯಿತು. ಅಧಿಕಾರಿಗಳು, ಬಾರ್ ಮಾಲೀಕರಿಗೆ ನಿಯಮದ ಅರಿವು ಇರಲಿಲ್ಲವೇ' ಎಂದು ಸುರೇಶ್ ಕುಮಾರ್ ಪ್ರಶ್ನಿಸಿದ್ದಾರೆ.

'ಕುಡಿತದ ಚಟಕ್ಕೆ ಬಲಿಯಾದ ಕುಟುಂಬಗಳ ಹೆಣ್ಣು ಮಕ್ಕಳು ಕಣ್ಣೀರಿನಲ್ಲಿ ಕೈ ತೊಳೆಯುವಂತಾಗಿದೆ. ಅವರ ಕಣ್ಣೀರು ಸರ್ಕಾರದ ಬೊಕ್ಕಸಕ್ಕೆ ಸೇರುವ ಆದಾಯಕ್ಕಿಂತ ಭಾರವಾಗಿದೆ. ಅಂತಹ ನೊಂದ ಜೀವಿಗಳ ಶಾಪ ಜನಪ್ರತಿನಿಧಿಗಳಾದ ನಮಗೆ ತಟ್ಟುವುದು ಬೇಡ. ಆದ್ದರಿಂದ ಬಾರ್‌ಗಳ ಸಮಯ ಪಾಲನೆ ಬಗ್ಗೆ ತಾವು ಕಟ್ಟುನಿಟ್ಟಿನ ಆದೇಶ ಹೊರಡಿಸಬೇಕು' ಎಂದು ಅವರು ಮನವಿ ಮಾಡಿದ್ದಾರೆ.

ಚಿಟಿಕೆ ಸುದ್ದಿ

'ನಮ್ಮ ಪವರ್ ರನ್' ಮಾರ್ಚ್ 15ಕ್ಕೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಗೌರವ ಸಮರ್ಪಿಸಲು ಸೂತ್ರ ಫಿಟ್ನೆಸ್ ಸಂಸ್ಥೆಯು ಡಾ.ಪುನೀತ್ ರಾಜ್‌ಕುಮಾರ್ ಚಾರಿಟೆಬಲ್ ಟ್ರಸ್ಟ್ ಸಹಯೋಗದಲ್ಲಿ ಮಾರ್ಚ್ 15ರಂದು ನೈಸ್ ರಸ್ತೆಯಲ್ಲಿ 'ನಮ್ಮ ಪವರ್ ರನ್' ಹಮ್ಮಿಕೊಂಡಿದೆ.

ಪುನೀತ್

ಇದು ನಾಲ್ಕನೇ ಆವೃತ್ತಿಯಾಗಿದ್ದು, 5ಕೆ, 10ಕೆ ಮತ್ತು 21.1ಕೆ ವಿಭಾಗವಾರು ಓಟ ನಡೆಯಲಿದೆ. ಹೊಸಕೆರೆಹಳ್ಳಿ ಟೋಲ್ ಜಂಕ್ಷನ್‌ನಿಂದ ಈ ಓಟಗಳು ಪ್ರಾರಂಭವಾಗಲಿವೆ. ನೋಂದಣಿ ಮಾಡಿಕೊಂಡವರಿಗೆ ಮಾತ್ರ ಈ ಓಟದಲ್ಲಿ ಪಾಲ್ಗೊಳ್ಳಲು ಅವಕಾಶ ಇರಲಿದೆ. 'ನಿಮ್ಮ ಆರೋಗ್ಯವೇ ಶಕ್ತಿ' ಎಂಬ ಶೀರ್ಷಿಕೆಯಡಿ ಈ ಓಟ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ನೋಂದಣಿಗೆ: nammapowerrun.com

ಪ್ರಬಂಧ ಸ್ಪರ್ಧೆ

ನೆಲಮಂಗಲ: ಸಂವಿಧಾನ ಓದು ಅಭಿಯಾನ–ಕರ್ನಾಟಕ ಮತ್ತು ಹರ್ಷ ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ ಫೆ.28ಕ್ಕೆ ಸಂವಿಧಾನ ಕುರಿತು ಪದವಿ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆ. ಒಂದು ಕಾಲೇಜಿನಿಂದ 5 ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವಿದ್ದು, ಪ್ರಾಂಶುಪಾಲರ ದೃಢೀಕರಣ ಪತ್ರ ಅಗತ್ಯ. ಮೊ.ಸಂ. 9606945415, 9448324727.

ಸಲಹಾ ಸಮಿತಿಗೆ ರಾಮಪ್ರಸಾತ್

ಬೆಂಗಳೂರು: ಸ್ಮಾರ್ಟ್ ವಾಟರ್ ವಲಯದ ಜಾಗತಿಕ ಸಂಸ್ಥೆಯಾದ 'ಸ್ಮಾರ್ಟ್ ವಾಟರ್ ನೆಟ್‌ವರ್ಕ್ಸ್ ಫೋರಮ್' 5ನೇ ಹಿರಿಯ ಯುಟಿಲಿಟಿ ಸಲಹಾ ಸಮಿತಿಗೆ ಭಾರತದ ಏಕೈಕ ಪ್ರತಿನಿಧಿಯಾಗಿ ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ಆಯ್ಕೆಯಾಗಿದ್ದಾರೆ.



ರಾಮಪ್ರಸಾತ್ ಮನೋಹರ್

ಆಸ್ಟ್ರೇಲಿಯಾ, ಕೆನಡಾ, ಪೋರ್ಚುಗಲ್, ಬ್ರೆಜಿಲ್, ಅಮೆರಿಕದ ತಜ್ಞರು ಈ ಸಮಿತಿಯಲ್ಲಿದ್ದಾರೆ. ಈ ಸದಸ್ಯರು ಜಾಗತಿಕ ಮಟ್ಟದಲ್ಲಿ ನೀರಿನ ಸವಾಲು, ಅದನ್ನು ಎದುರಿಸಲು ಅಗತ್ಯವಾದ ಕಾರ್ಯತಂತ್ರಗಳನ್ನು ಗುರುತಿಸುವ ಕೆಲಸ ಮಾಡಲಿದ್ದಾರೆ.

ಬಗೆಹರಿದ ಬಿಕ್ಕಟ್ಟು; ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಮಾತುಕತೆ ಫಲಪ್ರದ

ಭೂಭರ್ತಿಗೆ ತ್ಯಾಜ್ಯ ವಿಲೇವಾರಿ ಆರಂಭ

ಪ್ರಜಾವಾಣಿ ವಾರ್ತೆ

ಭೂಭರ್ತಿ ಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿ ಗುರುವಾರ ಬೆಳಿಗ್ಗೆಯಿಂದ ಆರಂಭವಾಯಿತು (ಎಡಚಿತ್ರ). ನಗರದ ಹೊಸಗುಡ್ಡದಹಳ್ಳಿ ಪೈಪ್‌ಲೈನ್ ರಸ್ತೆಯಲ್ಲಿ ಗುರುವಾರ ಕಸದ ರಾಶಿ ಕಂಡುಬಂದಿತು –ಪ್ರಜಾವಾಣಿ ಚಿತ್ರ

ಕೆ.ಆರ್.ಪುರ: ಮಿಟ್ಟಗಾನಹಳ್ಳಿ– ಬೆಳ್ಳಹಳ್ಳಿ– ಕಣ್ಣೂರು ಭೂಭರ್ತಿ ಪ್ರದೇಶದಲ್ಲಿ ಕಾಂಪ್ಯಾಕ್ಟರ್‌ಗಳು ಗುರುವಾರ ಬೆಳಿಗ್ಗೆಯಿಂದ ತ್ಯಾಜ್ಯ ವಿಲೇವಾರಿ ಮಾಡುತ್ತಿವೆ.

ಗ್ರಾಮಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡುವಂತೆ ಆಗ್ರಹಿಸಿ ಸ್ಥಳೀಯರು ಕಾಂಪ್ಯಾಕ್ಟರ್‌ಗಳನ್ನು ಎರಡು ದಿನದಿಂದ ತಡೆ ಹಿಡಿದಿದ್ದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಮಹದೇವಪುರ ವಿಧಾನಸಭೆ ಕ್ಷೇತ್ರದ ಶಾಸಕಿ ಮಂಜುಳಾ ಲಿಂಬಾವಳಿ ಹಾಗೂ ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ ಮುಖಂಡರೊಂದಿಗೆ ಬುಧವಾರವೇ ಮಾತುಕತೆ ನಡೆಸಿದರು. ತಲಾ ₹90 ಕೋಟಿ ಅನುದಾನದ ಭರವಸನೆಯನ್ನೂ ನೀಡಿದ್ದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಎಸ್ಮಾ ಜಾರಿಯ ಎಚ್ಚರಿಕೆಯನ್ನೂ ನೀಡಿದ್ದರು. ಈ ಬೆಳವಣಿಗೆ ನಂತರ, ಗುರುವಾರ ಬೆಳಿಗ್ಗೆಯಿಂದ ಕಾಂಪ್ಯಾಕ್ಟರ್‌ಗಳಿಂದ ತ್ಯಾಜ್ಯ ವಿಲೇವಾರಿಗೆ ಯಾರೂ ತಡೆ ಹಾಕಿಲ್ಲ.

ನಗರದಲ್ಲಿ ಉಳಿದ ತ್ಯಾಜ್ಯ: ತ್ಯಾಜ್ಯ ತುಂಬಿದ ಕಾಂಪ್ಯಾಕ್ಟರ್‌ಗಳು ಬೆಳ್ಳಹಳ್ಳಿ ಮುಖ್ಯರಸ್ತೆಯಲ್ಲೇ ಮಂಗಳವಾರ ಬೆಳಿಗ್ಗೆಯಿಂದ ನಿಂತಿದ್ದರಿಂದ, ಗುರುವಾರ ಬೆಳಿಗ್ಗೆಯಿಂದ ಅವುಗಳಲ್ಲಿದ್ದ ತ್ಯಾಜ್ಯ ವಿಲೇವಾರಿಯಾಗಿದೆ. ಆದರೆ, ನಗರದ ಹಲವು ಪ್ರದೇಶಗಳಲ್ಲಿ ತ್ಯಾಜ್ಯ ತುಂಬಿದ ಆಟೊಗಳು ರಸ್ತೆಗಳಲ್ಲೇ ನಿಂತಿದ್ದವು.

ಕೆಲವು ಪ್ರದೇಶಗಳಲ್ಲಿ ತ್ಯಾಜ್ಯ ಸಂಗ್ರಹವಾಗದ್ದರಿಂದ, ರಸ್ತೆಯಲ್ಲಿ ಕಸದ ರಾಶಿ ಬಿದ್ದಿತ್ತು. ಗುರುವಾರ ಸಂಜೆಯಿಂದ ನಗರದಿಂದಲೂ ತ್ಯಾಜ್ಯ ಸಾಗಣೆ ಆರಂಭವಾಗಿದ್ದು, ಶನಿವಾರದ ವೇಳೆಗೆ ಎಲ್ಲ ತ್ಯಾಜ್ಯ ಸಾಗಣೆಯಾಗಲಿದೆ ಎನ್ನಲಾಗಿದೆ.

ಶಾಸಕರ ಕ್ಷೇತ್ರದಲ್ಲಿ ಕಸವನ್ನೇ ತೆಗೆಸುವುದಿಲ್ಲ: ಡಿಸಿಎಂ

ಬೆಂಗಳೂರು: 'ಬಿಜೆಪಿ ನಾಯಕರು ಕಸ ವಿಲೇವಾರಿಗೆ ಬಿಡುವುದು ಬೇಡ. ಅವರೇ ಕಸವನ್ನು ಇಟ್ಟುಕೊಳ್ಳಲಿ. ಯಾರು ಬಿಡುವುದಿಲ್ಲವೋ ಅವರ ಕ್ಷೇತ್ರದಲ್ಲಿ ಕಸವನ್ನೇ ತೆಗೆಯುವುದಿಲ್ಲ, ತೆಗೆಸುವುದಿಲ್ಲ. ಆಗ ಜನರೇ ಅವರಿಗೆ ಉಗಿಯುತ್ತಾರೆ. ಮೈಕ್ ಹಾಕಿ ಪ್ರಚಾರ ಮಾಡಿಸುತ್ತೇನೆ. ಅವರ ಕಾಲು ಕಟ್ಟಿಕೊಳ್ಳಲು ಆಗುತ್ತದೆಯೇ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಅಸ್ಸಾಂ ರಾಜ್ಯಕ್ಕೆ ತೆರಳುವುದಕ್ಕೆ ಮುನ್ನ, ಗುರುವಾರ ಬೆಳಿಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, 'ಕಸವನ್ನು ಎಲ್ಲಾದರೂ ಒಂದು ಕಡೆ ಹಾಕಬೇಕಲ್ಲವೇ? ಮೊದಲಿನಿಂದಲೂ ಹೇಗೆ ಸಂಪ್ರದಾಯವಿತ್ತೋ ಅದೇ ರೀತಿ ಮಾಡಿಕೊಂಡು ಬರುತ್ತಿದ್ದೇವೆ. ಬಿಜೆಪಿ ಹಾಗೂ ನಮ್ಮ ಸಮಯದಲ್ಲಿ ತೀರ್ಮಾನ ಮಾಡಿದ್ದು ಇದೇ ರೀತಿ' ಎಂದರು.

'ನಾವು ಅಭಿವೃದ್ಧಿಗೆ ಸಾವಿರಾರು ಕೋಟಿ ಹಣ ಕೊಟ್ಟಿದ್ದೇವೆ. ಇನ್ನೆಷ್ಟು ಕೊಡಲು ಸಾಧ್ಯ? ₹20 ಕೋಟಿ, ₹30 ಕೋಟಿ ಸೇರಿದಂತೆ ₹50ರಿಂದ ₹100 ಕೋಟಿ ಹಣವನ್ನು ಅಭಿವೃದ್ಧಿಗೆ ಕೊಡುತ್ತಾ ಬಂದಿದ್ದೇವೆ. ಅವರೂ ಅರ್ಥ ಮಾಡಿಕೊಳ್ಳಬೇಕು. ಕಸ ವಿಲೇವಾರಿಗೆ ನಾಲ್ಕು ಕಡೆ ಜಮೀನುಗಳನ್ನು ನೋಡಿದ್ದೆವು. ಭೂಮಿ ಸಮಸ್ಯೆಯಿಂದ ಎರಡು ಕಡೆ ಅಂತಿಮ ಮಾಡಿದ್ದೇವೆ. ಟೆಂಡರ್ ಕೂಡ ಕರೆಯಲಾಗಿದೆ' ಎಂದರು.

'ಕಮಿಷನ್ ಹಿಂದೆ ಇತ್ತು, ಈಗಲೂ ಇದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಮಿಷನ್ ಹಿಂದೆಯೂ ಇತ್ತು, ಈಗಲೂ ಇದೆ, ಮುಂದೆಯೂ ಇರಲಿದೆ. ಅದನ್ನು ಪತ್ತೆ ಮಾಡಲು ಸಾಧ್ಯ ಇಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಕಾಮಗಾರಿಯ ಬಿಲ್ ಪಾವತಿಗೆ ಕಮಿಷನ್ ಪಡೆಯುವ ಬಗ್ಗೆ ಗುತ್ತಿಗೆದಾರರು ಮಾಡಿರುವ ಆರೋಪಗಳ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಪರಿಹಾರಕ್ಕಾಗಿ ದಾರಿ ಹುಡುಕಬೇಕಲ್ಲವೇ? ಅವರು ಈ ವಿಷಯವನ್ನು ಮುಖ್ಯಮಂತ್ರಿ ಮತ್ತು ಲೋಕಾಯುಕ್ತರ ಗಮನಕ್ಕೆ ತರಲಿ' ಎಂದರು.

'ಬಿಲ್ ಮೊತ್ತ ಅಷ್ಟೊಂದು ಬಾಕಿ ಯಾಕೆ ಆಗಿದೆ ಎನ್ನುವ ಬಗ್ಗೆ ಚಿಂತನೆ ಆಗಬೇಕು. ಬಜೆಟ್ ಬೆಂಬಲ ಇಲ್ಲದೇ ಬಿಜೆಪಿ ತನ್ನ ಅವಧಿಯಲ್ಲಿ ಕಾಮಗಾರಿ ಗಳಿಗೆ ಟೆಂಡರ್ ನೀಡಿದೆ. ಕಾಮಗಾರಿ ಮುಗಿದಿದೆ. ಹಣ ಪಾವತಿಸಲು ಸಮಯಬೇಕು. ಹಿಂದಿನ ಸರ್ಕಾರ ಮಾಡಿರುವ ತಪ್ಪು ಅದು. ನೀರಾವರಿ, ಲೋಕೋಪಯೋಗಿ ಇಲಾಖೆಯಲ್ಲಿ ಹೆಚ್ಚಿನ ಮೊತ್ತ ಬಾಕಿಯಿದೆ. ಕಾಮಗಾರಿ ನಿಲ್ಲಿಸಲು ಆಗುವುದಿಲ್ಲ. ತಮಗೆ ಸೂಕ್ತವೆನಿಸಿದ ಕಡೆ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸುತ್ತಾರೆ' ಎಂದರು.

'ಗುತ್ತಿಗೆದಾರರನ್ನು ದಾರಿ ತಪ್ಪಿಸುವ ಕೆಲಸ ನಡೆಯುತ್ತಿದೆ. ಬೇರೆ ಸಚಿವರ ವಿಚಾರದಲ್ಲಿ ನಾನು ಉತ್ತರ ಕೊಡಲು ಆಗುವುದಿಲ್ಲ. ಅವರೇ ಸ್ಪಷ್ಟನೆ ಕೊಡಬೇಕು' ಎಂದು ಹೇಳಿದರು.

'ಲೋಕೋಪಯೋಗಿ ಇಲಾಖೆಯಲ್ಲಿ ₹12 ಸಾವಿರ ಕೋಟಿ ಬಾಕಿ ಇತ್ತು. ₹3 ಸಾವಿರ ಕೋಟಿ ಕೊಡಲಾಗಿದೆ. ಬಾಕಿ ಉಳಿಯಲು ಹಿಂದಿನ ಬಿಜೆಪಿ ಸರ್ಕಾರ ಕಾರಣ' ಎಂದು ಆರೋಪಿಸಿದರು.

ಗೊಂದಲ ಸರಿಪಡಿಸಬೇಕು: 'ನಮ್ಮ ಹೈಕಮಾಂಡ್ ಗಟ್ಟಿ ಇದೆ. ಯಾರೂ ಅಲ್ಲಾಡಿಸಲು ಆಗುವುದಿಲ್ಲ. ಗೊಂದಲ ಗಳನ್ನು ಹೈಕಮಾಂಡ್ ಸರಿಪಡಿಸಬೇಕು ಎಂಬುದು ನಮ್ಮ ಮನವಿ' ಎಂದೂ ಹೇಳಿದರು.

ಸಚಿವ ಸತೀಶ ಜಾರಕಿಹೊಳಿ ಅವರಿಗೆ ಪ್ರೆಸ್ ಕ್ಲಬ್‌ನಿಂದ 'ವರ್ಷದ ವ್ಯಕ್ತಿ' ಪ್ರಶಸ್ತಿ ಪ್ರದಾನ

'ಮೂಢನಂಬಿಕೆಯಿಂದ ಹಣ–ಸಮಯ ವ್ಯಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನರನ್ನು ಸರಿದಾರಿಗೆ ತರಲು ಮೂಢನಂಬಿಕೆ ವಿರುದ್ಧ ಜಾಗೃತಿ ಅಭಿಯಾನ ಮಾಡಲಾಗುತ್ತಿದೆಯೇ ಹೊರತು, ಇದರ ಹಿಂದೆ ಯಾವುದೇ ಧರ್ಮ, ಸಮುದಾಯ ವಿರೋಧಿಸುವ ಉದ್ದೇಶವಿಲ್ಲ. ಮೂಢನಂಬಿಕೆಯಿಂದ ಜನರು ಕಷ್ಟಕ್ಕೆ ಒಳಗಾಗಿ, ಹಣ ಮತ್ತು ಸಮಯ ವ್ಯಯಮಾಡುತ್ತಿದ್ದಾರೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅಭಿಪ್ರಾಯಪಟ್ಟರು.

ಪ್ರೆಸ್ ಕ್ಲಬ್ ಆಫ್ ಬೆಂಗಳೂರು ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 'ವರ್ಷದ ವ್ಯಕ್ತಿ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

'ಅಧಿಕಾರ ಮತ್ತು ಹಣ ಶಾಶ್ವತವಲ್ಲ. ನಾವು ಮಾಡಿದ ಕೆಲಸಗಳು ಮಾತ್ರ ಕೊನೆಯವರೆಗೂ ಉಳಿಯುತ್ತವೆ. ಆದ್ದರಿಂದ ಆ ನಿಟ್ಟಿನಲ್ಲಿ ಸಮಾಜಮುಖಿ ಕೆಲಸ ಮಾಡುತ್ತಿದ್ದೇನೆ. ಜನ ಪರವಾದ, ಜನರನ್ನು ಸರಿದಾರಿಗೆ ತರುವ ಕಾರ್ಯ ಕೈಗೊಂಡಿದ್ದೇನೆ. ಅಸಾಧ್ಯವಾದದ್ದನ್ನು ಸಾಧಿಸಿ ತೋರಿಸಬೇಕೆಂಬ ಛಲ ಹೊಂದಿದ್ದೇನೆ. ಕನಿಷ್ಠ 10 ವರ್ಷ ರಾಜಕೀಯದಲ್ಲಿ ಇರಲಿದ್ದು, ಕರ್ನಾಟಕದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತೇನೆ' ಎಂದರು.

ಸತೀಶ ಜಾರಕಿಹೊಳಿ ಅವರಿಗೆ 'ವರ್ಷದ ವ್ಯಕ್ತಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಿವಕುಮಾರ್ ಬೆಳ್ಳಿತಟ್ಟೆ, ಶರಣ ಬಸಪ್ಪ, ರವಿವರ್ಮ ಕುಮಾರ್, ರಿಜ್ವಾನ್ ಅರ್ಷದ್, ಶ್ರೀಧರ್, ಬಿ.ಎನ್.ಮೋಹನ್ ಕುಮಾರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪ್ರದಾನ ಮಾಡಿದ ವಕೀಲ ರವಿವರ್ಮ ಕುಮಾರ್, 'ಧರ್ಮದ, ಜಾತಿಯ ಹೆಸರಿನಲ್ಲಿ ರಾಜಕಾರಣ ಮಾಡುತ್ತಿರುವ ರಾಜಕಾರಣಿಗಳು ವಚನ ಭ್ರಷ್ಟರು. ನಾವು ಮೂಢನಂಬಿಕೆಗೆ ವಿರುದ್ಧ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು. ಸತೀಶ ಜಾರಕಿಹೊಳಿ ಅವರು ವೈಜ್ಞಾನಿಕ ಮನೋಭಾವ ಹೊಂದಿದ್ದಾರೆ. ಅವರು ಮುಂದೊಂದು ದಿನ ರಾಜ್ಯದ ಮುಖ್ಯಮಂತ್ರಿ ಆಗಲಿ' ಎಂದು ಆಶಿಸಿದರು.

ಮುಖ್ಯಮಂತ್ರಿ ಅವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, 'ಸೈದ್ಧಾಂತಿಕ ರಾಜಕಾರಣ ಅಳಿವಿನ ಅಂಚಿನಲ್ಲಿರುವ ಈ ಕಾಲಘಟ್ಟದಲ್ಲಿ, ಸತೀಶ ಜಾರಕಿಹೊಳಿ ಅವರು ಮಾನವ ಬಂಧುತ್ವ ವೇದಿಕೆಯ ಮೂಲಕ ಇಡೀ ರಾಜ್ಯದಲ್ಲಿ ಸೈದ್ಧಾಂತಿಕ ಪಡೆಯನ್ನು ಕಟ್ಟುತ್ತಿದ್ದಾರೆ. ಸಾಮಾಜಿಕ ನ್ಯಾಯದ ಕನ್ನಡಿಯಲ್ಲಿ ಅವರ ಬಿಂಬಗಳು ಸ್ಪಷ್ಟವಾಗಿ ಕಾಣಿಸುತ್ತಿವೆ' ಎಂದು ಶ್ಲಾಘಿಸಿದರು.

ಶಾಸಕ ರಿಜ್ವಾನ್ ಅರ್ಷದ್, 'ಸತೀಶ ಜಾರಕಿಹೊಳಿ ಅವರು ತಾವು ನಂಬಿದ ಸಿದ್ಧಾಂತವನ್ನು ಪಾಲಿಸಿಕೊಂಡು ರಾಜಕೀಯ ಜೀವನದಲ್ಲಿ ಮುಂದೆ ಬಂದಿದ್ದಾರೆ' ಎಂದು ಶ್ಲಾಘಿಸಿದರು.

ಪ್ರೆಸ್‌ಕ್ಲಬ್ ಅಧ್ಯಕ್ಷ ಶ್ರೀಧರ್ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಾಲು ಸೇತುವೆ ನಿರ್ಮಾಣ

'ಮಲೆನಾಡು ಭಾಗದ ಜನರು ಮಳೆಗಾಲದ ಅವಧಿಯಲ್ಲಿ ಹಳ್ಳ–ಕೊಳ್ಳಗಳನ್ನು ದಾಟಲು ಕಾಲು ಸಂಕ ಅವಲಂಬಿಸುತ್ತಾರೆ. ಕಾರವಾರದಲ್ಲಿ ತೂಗುಸೇತುವೆಯ ಮೂಲಕ ಮಕ್ಕಳು ಸಾಗುತ್ತಿದ್ದ ಫೋಟೋ 20 ವರ್ಷಗಳ ಹಿಂದೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿತ್ತು. ಅದನ್ನು ನೋಡಿ ನಾನು ಮರುಗಿದ್ದೆ. ಈಗಲೂ ಆ ಫೋಟೋ ನನ್ನ ಕಣ್ಣಮುಂದಿದೆ. ಲೋಕೋಪಯೋಗಿ ಇಲಾಖೆ ನನಗೆ ದೊರೆತ ಬಳಿಕ ಮೊದಲು ಮಲೆನಾಡು ಭಾಗದಲ್ಲಿ ಕಾಲು ಸೇತುವೆ ನಿರ್ಮಾಣಕ್ಕೆ ಆದ್ಯತೆ ನೀಡಿದೆ. ಈಗಾಗಲೇ 400 ಕಾಲು ಸೇತುವೆ ನಿರ್ಮಿಸಲಾಗಿದೆ. ಇನ್ನೂ 400 ಕಾಲು ಸೇತುವೆ ನಿರ್ಮಿಸಲಾಗುವುದು' ಎಂದು ಜಾರಕಿಹೊಳಿ ಹೇಳಿದರು.

ಸ್ಪಂದಿಸದೇ ಇದ್ದರೆ ಮಾರ್ಚ್ 2ರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆಗೆ ನಿರ್ಧಾರ

ಸಾರಿಗೆ ನೌಕರರ ಮುಷ್ಕರ ಸದ್ಯ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪರಿಷ್ಕರಣೆ, ಹಿಂಬಾಕಿ ನೀಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಬೆಂಗಳೂರು ಚಲೊ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ರಾಜ್ಯ ಸರ್ಕಾರ ಮಾರ್ಚ್ 2ರ ಒಳಗೆ ಬೇಡಿಕೆಗಳನ್ನು ಈಡೇರಿಸದೇ ಇದ್ದರೆ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

38 ತಿಂಗಳ ಹಿಂಬಾಕಿ ನೀಡಿಲ್ಲ. 2024ರ ಜನವರಿಯಿಂದ ವೇತನ ಪರಿಷ್ಕರಣೆ ನಡೆಸಬೇಕಿತ್ತು. ಹಲವು ಬಾರಿ ಸರ್ಕಾರದೊಂದಿಗೆ ಮಾತುಕತೆ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಗುರುವಾರ ಬೆಂಗಳೂರು ಚಲೊ ಕಾರ್ಯಕ್ರಮವನ್ನು ಸ್ವಾತಂತ್ರ್ಯ ಉದ್ಯಾನದಲ್ಲಿ ಜಂಟಿ ಕ್ರಿಯಾ ಸಮಿತಿ ಹಮ್ಮಿಕೊಂಡಿತ್ತು.

ಸರ್ಕಾರದ ಸ್ಪಂದನೆ ನೋಡಿ ಮುಂದಿನ ಹೋರಾಟದ ಬಗ್ಗೆ ಗುರುವಾರ ಸಂಜೆ 4ಕ್ಕೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಮಿತಿ ಮುಖಂಡರು ಹೇಳಿದ್ದರು. ಈ ನಡುವೆ ಕೆಲವರು ಗುರುವಾರ ಸಂಜೆಯಿಂದಲೇ ಮುಷ್ಕರ ನಡೆಯಲಿದೆ ಎಂದು ಸುದ್ದಿ ಹಬ್ಬಿಸಿದ್ದರು. 'ಯಾವುದೇ ಮುಷ್ಕರ ಕೈಗೊಳ್ಳುವುದಿಲ್ಲ. ನಾಲ್ಕು ನಿಗಮಗಳಲ್ಲಿ 1.10 ಲಕ್ಷಕ್ಕೂ ಅಧಿಕ ನೌಕರರಿದ್ದು, ಅವರ ಭವಿಷ್ಯವನ್ನೂ ನೋಡಿಕೊಳ್ಳಬೇಕಾಗುತ್ತದೆ. ಉದ್ವೇಗದಲ್ಲಿ ನಿರ್ಧಾರ ಕೈಗೊಳ್ಳಲಾಗುವುದಿಲ್ಲ' ಎಂದು ಮುಖಂಡರು ಸ್ಪಷ್ಟಪಡಿಸಿದರು.

ಮಾತುಕತೆಗೆ ಬನ್ನಿ: 'ಸರ್ಕಾರವು 38 ತಿಂಗಳ ಹಿಂಬಾಕಿಯಲ್ಲಿ 26 ತಿಂಗಳ ಹಿಂಬಾಕಿಯನ್ನು ಬಿಡುಗಡೆ ಮಾಡುವುದಾಗಿ ಬುಧವಾರ ಘೋಷಿಸಿದೆ. ಅಲ್ಲದೇ ವೇತನ ಪರಿಷ್ಕರಣೆಯನ್ನು 2025ರ ಏಪ್ರಿಲ್ 1ಕ್ಕೆ ಅನ್ವಯವಾಗುವಂತೆ ಮಾಡಲು ಸಾರಿಗೆ ಕಾರ್ಮಿಕ ಮುಖಂಡರೊಂದಿಗೆ ಚರ್ಚೆ ನಡೆಸಲು ಸಾರಿಗೆ ಸಚಿವರು ಸೂಚನೆ ನೀಡಿದ್ದಾರೆ. ನಾವು ಒಂದು ಹೆಜ್ಜೆ ಮುಂದೆ ಬಂದಿದ್ದೇವೆ. ನೀವು ಕೂಡ ಒಂದು ಹೆಜ್ಜೆ ಮುಂದೆ ಬಂದರೆ ಸಮಸ್ಯೆ ಇತ್ಯರ್ಥವಾಗುತ್ತದೆ. ಈ ಬಗ್ಗೆ ಮಾತುಕತೆಗೆ ಬನ್ನಿ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ತಿಳಿಸಿದರು.

'ಸರ್ಕಾರದ ನಿರ್ಧಾರವನ್ನು ನಾವು ಒಪ್ಪುವುದಿಲ್ಲ. ಎಲ್ಲ 38 ತಿಂಗಳ ಹಿಂಬಾಕಿ ನೀಡಬೇಕು. 2025ರಿಂದ ವೇತನ ಪರಿಷ್ಕರಣೆ ಮಾಡಿದರೆ ಒಂದು ವರ್ಷ ನಷ್ಟವಾಗುತ್ತದೆ. 2024ರ ಜನವರಿಯಿಂದಲೇ ವೇತನ ಪರಿಷ್ಕರಿಸಬೇಕು' ಎಂದು ಪ್ರತಿಭಟನಕಾರರು ಉತ್ತರಿಸಿದರು.

ಕ್ರಿಯಾ ಸಮಿತಿಯ ಬಿ. ಜಯದೇವ ಅರಸ್, ವಿಜಯ ಭಾಸ್ಕರ ಡಿ.ಎ., ಎಚ್.ಎಸ್. ಮಂಜುನಾಥ್, ಸಿದ್ದನಗೌಡ ಪಾಟೀಲ, ಪ್ರಕಾಶ್, ಜ್ಯೋತಿ ಅನಂತಸುಬ್ಬರಾವ್, ಎಚ್.ಡಿ. ರೇವಪ್ಪ, ಮೋಹನ್‌ದಾಸ್ ಇದ್ದರು.



ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಹೋರಾಟದ ಮುಂದಿನ ನಿರ್ಧಾರವನ್ನು ಪ್ರಕಟಿಸಿದ ಸಂದರ್ಭದಲ್ಲಿ ಮುಖಂಡರ ನಿಲುವನ್ನು ಸಾರಿಗೆ ನೌಕರರು ವಿರೋಧಿಸಿದರು–ಪ್ರಜಾವಾಣಿ ಚಿತ್ರ

ನೌಕರರ ವಿರೋಧ

ಪ್ರತಿಭಟನೆಯನ್ನು ಗುರುವಾರ ಒಂದೇ ದಿನಕ್ಕೆ ಮುಕ್ತಾಯಗೊಳಿಸಿರುವುದನ್ನು ಜಯದೇವ ಅರಸ್ ಘೋಷಣೆ ಮಾಡುತ್ತಿದ್ದಂತೆ ಕೆಲವು ನೌಕರರು ವಿರೋಧ ವ್ಯಕ್ತಪಡಿಸಿದರು. 'ಪ್ರತಿಭಟನೆ ಸ್ಥಗಿತಗೊಳಿಸಬಾರದು, ನ್ಯಾಯ ಸಿಗುವವರೆಗೆ ಧರಣಿ ಕುಳಿತುಕೊಳ್ಳಬೇಕು, ಮುಷ್ಕರ ನಡೆಸಬೇಕು' ಎಂದು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಸಲಹೆ ನೀಡಿದರು. 'ನೀವು ಪ್ರತಿಭಟನೆ ಸ್ಥಗಿತಗೊಳಿಸಲು ಎಷ್ಟು ತೆಗೆದುಕೊಂಡಿದ್ದೀರಿ' ಎಂದು ಕೆಲವರು ಪ್ರಶ್ನಿಸಿದರು.

ಕೆಲ ಹೊತ್ತು ಗೊಂದಲದ ಗೂಡಾಯಿತು. ವಿರೋಧ ವ್ಯಕ್ತಪಡಿಸಿ ಕೂಗಾಡುತ್ತಿದ್ದವರನ್ನು ನಿಯಂತ್ರಿಸಿ, ಕೆಲವರನ್ನು ಹೊರಗೆ ಕಳಿಸಿ ಪೊಲೀಸರು ಗೊಂದಲ ತಿಳಿಗೊಳಿಸಿದರು.

'ನೀರಿನ ಸಮಸ್ಯೆ ಬಗೆಹರಿಸಿ, ಇಲ್ಲವೇ ಶಿಕ್ಷೆ ಎದುರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಳ್ಳಣ್ಣ ಗಾರ್ಡನ್ ಸಹಿತ ಹಲವು ಪ್ರದೇಶ ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ದೂರುಗಳು ಬಂದಿವೆ. ಸಬೂಬು ಹೇಳದೇ ಶುದ್ಧ ಕುಡಿಯುವ ನೀರಿನ ಸಂಪರ್ಕ ಯಾವಾಗ ನೀಡುತ್ತೀರಿ ಎನ್ನುವುದನ್ನು ದಿನಾಂಕ ಸಹಿತ ಹೇಳಿ, ಇಲ್ಲದಿದ್ದರೆ ಕಠಿಣ ಕ್ರಮ ಎದುರಿಸಿ...'

ಕೆ.ಜೆ.ಜಾರ್ಜ್

ಸರ್ವಜ್ಞನಗರ ಕ್ಷೇತ್ರ ವ್ಯಾಪ್ತಿಯಲ್ಲಿ ದೂರುಗಳು ಬಂದ ಕಾರಣ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕಾರಿಗಳನ್ನು ಸಚಿವ ಕೆ.ಜೆ.ಜಾರ್ಜ್ ಅವರು ತರಾಟೆಗೆ ತೆಗೆದುಕೊಂಡ ಪರಿ ಇದು.

ಕೆ.ಜಿ. ಹಳ್ಳಿ ವ್ಯಾಪ್ತಿಯಲ್ಲಿ ಸಂಚರಿಸಿ ಸ್ಥಳೀಯರ ಸಮಸ್ಯೆಗಳನ್ನು ಆಲಿಸಿದ ಸಚಿವರು, 'ಪ್ರಜಾಪ್ರಭುತ್ವದಲ್ಲಿ ಜನರೇ ಪ್ರಭುಗಳು. ಅವರು ಕೇಳಿದ ಕೆಲಸ ಮಾಡಿಕೊಡಬೇಕು, ವಿಳಂಬ ಮಾಡಬೇಡಿ' ಎಂದು ಸೂಚನೆ ನೀಡಿದರು.

'ಕ್ಷೇತ್ರ ಪರ್ಯಟನೆ ಮಾಹಿತಿ ನೀಡಿದರೂ ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿ ಹಾಜರಾಗಿಲ್ಲ. ಮುಂದೆ ಈ ರೀತಿ ಮಾಡಿದರೆ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಮೆಟ್ರೊ ಕಾಮಗಾರಿ ಮುಗಿಸಿ: 'ಹಿಂದೆ ನಗರಾಭಿವೃದ್ಧಿ ಸಚಿವನಾಗಿದ್ದಾಗ 6 ಎಕರೆ ಜಾಗ ನೀಡಿದ್ದು, ಇಲ್ಲಿ ಸುಸಜ್ಜಿತ ಮೆಟ್ರೊ ನಿಲ್ದಾಣ ನಿರ್ಮಾಣವಾಗಬೇಕು. ವೆಂಕಟೇಶಪುರ ಬಳಿ ಹಾಗೂ ನಾಗವಾರ ಮೆಟ್ರೊ ನಿಲ್ದಾಣಗಳ ಬಳಿ ನಡೆಯುತ್ತಿರುವ ರಸ್ತೆ, ಮಳೆ ನೀರು ಹಾಗೂ ಒಳಚರಂಡಿ ಕಾಮಗಾರಿಗಳನ್ನು ವೇಗವಾಗಿ ಮುಗಿಸಬೇಕು' ಎಂದರು.

ಅಹವಾಲು ಆಲಿಕೆ: ಪಿಳ್ಳಣ್ಣ ಗಾರ್ಡನ್‌ನ ಐದು ಬ್ಲಾಕ್‌ಗಳಲ್ಲಿ ಕಾಲ್ನಡಿಗೆಯಲ್ಲೇ ಸಂಚರಿಸಿದ ಸಚಿವ ಕೆ.ಜೆ.ಜಾರ್ಜ್ ಅವರು, ಕೊಳೆಗೇರಿ ಅಭಿವೃದ್ಧಿ ಮಂಡಳಿ ಮನೆಗಳ ನವೀಕರಣ ಹಾಗೂ ಶುದ್ಧ ಕುಡಿಯುವ ನೀರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಆಲಿಸಿದರು. ವಿನೋಬಾ ನಗರ, ಭಾರತ್ ಮಾತಾ ಬಡಾವಣೆಯಲ್ಲೂ ಸ್ಥಳೀಯರು ನೀರಿನ ಸಮಸ್ಯೆ ಬಗೆಹರಿಸುವಂತೆ ಕೋರಿದರು.

ಕೆ.ಜಿ. ಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಸುಮಿತ್ರ ಮುನಿರಾಜು, ಹೆಣ್ಣೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಎ. ಪುಲಿಕೇಶಿ ಹಾಗೂ ಅಮರ್‌ನಾಥ್ ಉಪಸ್ಥಿತರಿದ್ದರು.

ಚೈರೋಸ್ ಭೀಮಯ್ಯ ಕಪ್ ಹಾಕಿ ಇಂದಿನಿಂದ

ಬೆಂಗಳೂರು: ನಗರದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಅರೇನಾದಲ್ಲಿ ಚೈರೋಸ್ ಭೀಮಯ್ಯ ಹಾಕಿ ಕಪ್ ಟೂರ್ನಿ ಇದೇ 20ರಿಂದ 22ರವರೆಗೆ ನಡೆಯಲಿದೆ.

ಕೂರ್ಗ್ ಚಾಲೆಂಜರ್ಸ್ ಚಿಕ್ಕಪೇಟ್ ಅಸೋಸಿಯೇಷನ್ ಆಶ್ರಯದಲ್ಲಿ ಹಾಕಿ ಕರ್ನಾಟಕ ಮತ್ತು ಹಾಕಿ ಇಂಡಿಯಾ ಸಹಯೋಗದಲ್ಲಿ ನಡೆಯುತ್ತಿರುವ ಈ ಟೂರ್ನಿಯು ಸಮಾರೋಪ 22ರಂದು ನಡೆಯಲಿದ್ದು, ಭಾರತದ ಮಾಜಿ ಅಂತರರಾಷ್ಟ್ರೀಯ ಗೋಲ್‌ಕೀಪರ್ ಹಾಗೂ ಹಾಕಿ ಕರ್ನಾಟಕ ಅಧ್ಯಕ್ಷ ಎ.ಬಿ. ಸುಬ್ಬಯ್ಯ ಅತಿಥಿಯಾಗಿದ್ದಾರೆ.

ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ ಇಂದಿನಿಂದ

ಮಂಗಳೂರು: ನಗರದ ಕಾಸ್ಮೊಪೊಲಿಟನ್ ಕ್ಲಬ್ ಆಯೋಜಿಸಿರುವ ರಾಜ್ಯಮಟ್ಟದ ಆಹ್ವಾನಿತ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್‌ಷಿಪ್ ಬಾವುಟಗುಡ್ಡದಲ್ಲಿರುವ ಕ್ಲಬ್‌ನ ಕ್ರೀಡಾಂಗಣದಲ್ಲಿ ಫೆ.20ರಿಂದ ಮಾರ್ಚ್ 1ರವರೆಗೆ ನಡೆಯಲಿದೆ.

ಪೆರೋಲ್ ಮೇಲೆ ಬಂದು ದರೋಡೆ

ಪೊಲೀಸ್ ಸಮವಸ್ತ್ರದಲ್ಲಿ ಮನೆಗೆ ನುಗ್ಗಿ ನಗದು, ಚಿನ್ನ ದೋಚಿದ್ದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಮವಸ್ತ್ರದಲ್ಲಿ ರಿಯಲ್ ಎಸ್ಟೇಟ್ ಏಜೆಂಟ್ ಮನೆಗೆ ನುಗ್ಗಿ ₹20 ಲಕ್ಷ ನಗದು ಮತ್ತು ಚಿನ್ನದ ಆಭರಣ ದೋಚಿ ಪರಾರಿಯಾಗಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಬ್ಯಾಡರಹಳ್ಳಿ ಠಾಣೆಯ ಪೊಲೀಸರಿಗೆ ಒಬ್ಬ ದರೋಡೆಕೋರನ ಸುಳಿವು ಲಭಿಸಿದೆ. ಮತ್ತೊಬ್ಬನ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಬಿ.ಇ.ಎಲ್ ಲೇಔಟ್ ನಿವಾಸಿ ಹೊಂಬಾಳೇಗೌಡ ಅವರ ಮನೆಯಲ್ಲಿ ಸೋಮವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಪೊಲೀಸ್ ಸಮವಸ್ತ್ರದಲ್ಲಿ ಬಂದಿದ್ದ ಇಬ್ಬರು, ಮನೆಯಲ್ಲಿದ್ದವರನ್ನು ಬೆದರಿಸಿ ₹20 ಲಕ್ಷ ನಗದು, 500 ಗ್ರಾಂ ಚಿನ್ನಾಭರಣ ದರೋಡೆ ಮಾಡಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿಗಳಿಗಾಗಿ ಪೊಲೀಸರು ಶೋಧ ನಡೆಸುತ್ತಿದ್ದರು. ತನಿಖೆ ವೇಳೆ ಮಹತ್ವದ ಸುಳಿವು ಸಿಕ್ಕಿದೆ ಎಂದು ಮೂಲಗಳು ಹೇಳಿವೆ.

'ಪ್ರಕರಣ ದಾಖಲಾದ ಮೇಲೆ ಸುಕೊ (ಸೀನ್ ಆಫ್ ಕ್ರೈಂ) ತಂಡ ಮತ್ತು ಬೆರಳಚ್ಚು ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಅಲ್ಲಿ ಪತ್ತೆಯಾದ ಬೆರಳಚ್ಚುಗಳನ್ನು ಪರೀಕ್ಷೆ ಮಾಡಿದಾಗ, ಅದು ಈಗಾಗಲೇ ಜೈಲಿನಲ್ಲಿ ಇರುವ ಒಬ್ಬ ಕೈದಿಯ ಬೆರಳಚ್ಚಿಗೆ ಹೋಲಿಕೆ ಆಗುತ್ತಿದೆ. ನ್ಯಾಯಾಲಯದ ಅನುಮತಿ ಪಡೆದು ಬಾಡಿ ವಾರಂಟ್ ಮೇಲೆ ಆತನನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಗುವುದು' ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ದರೋಡೆ ನಡೆದ ಮರುದಿನವೇ ಮತ್ತೆ ಜೈಲಿಗೆ?: 'ಕೈದಿ ಪೆರೋಲ್ ಮೇಲೆ ಹೊರಕ್ಕೆ ಬಂದಿದ್ದ. ದರೋಡೆ ನಡೆದ ಮರುದಿನವೇ ಮತ್ತೆ ಜೈಲಿಗೆ ವಾಪಸ್ ಹೋಗಿರುವುದು ಗೊತ್ತಾಗಿದೆ. ಜೈಲಿನಿಂದ ಹೊರಬಂದು ದರೋಡೆ ಮಾಡಿ, ಮತ್ತೆ ಜೈಲು ಸೇರಿದರೆ ಪೊಲೀಸರಿಗೆ ಯಾವುದೇ ಸುಳಿವು ಸಿಗುವುದಿಲ್ಲ ಎಂದು ಭಾವಿಸಿ ಕೃತ್ಯ ಎಸಗಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಹೊಂಬಾಳೇಗೌಡ ಅವರು ಜಮೀನು ಮಾರಾಟ ಮಾಡಿದ್ದು, ಮನೆಯಲ್ಲಿ ಹಣ ಇಟ್ಟಿದ್ದರು. ಈ ವಿಚಾರ ದರೋಡೆಕೋರರಿಗೆ ಗೊತ್ತಾಗಿತ್ತು. ರಿಯಲ್ ಎಸ್ಟೇಟ್ ಏಜೆಂಟ್ ಮನೆಯಲ್ಲಿ ಹಣವಿದೆ ಎಂಬ ಮಾಹಿತಿ ದರೋಡೆಕೋರರಿಗೆ ಹೇಗೆ ಗೊತ್ತಾಯಿತು ಎನ್ನುವ ಆಯಾಮದಲ್ಲೂ ತನಿಖೆ ಸಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಡಿವಿಆರ್ ಹೊತ್ತೊಯ್ದಿರುವ ಆರೋಪಿಗಳು: ಮನೆಯಲ್ಲಿದ್ದವರ ಮೊಬೈಲ್‌ಗಳು, ಸಿಸಿಟಿವಿ ಕ್ಯಾಮೆರಾದ ಡಿವಿಆರ್ ಅನ್ನು ತೆಗೆದುಕೊಂಡು ಹೋಗಿದ್ದಾರೆ. ಹೀಗಾಗಿ, ಅಕ್ಕಪಕ್ಕದ ಮನೆಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಸಂಗ್ರಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪಿಎಸ್ಐ ಎಂದು ಹೇಳಿ ಕೃತ್ಯ?

ರಿಯಲ್ ಎಸ್ಟೇಟ್ ಏಜೆಂಟ್ ಜತೆಗೆ ಗುತ್ತಿಗೆದಾರರಾಗಿರುವ ಹೊಂಬಾಳೇಗೌಡ ಅವರು ಸೋಮವಾರ ಮಧ್ಯಾಹ್ನ 3 ಗಂಟೆಗೆ ಪತ್ನಿ ಮಂಗಳಮ್ಮ ಮತ್ತು ಮೊಮ್ಮಗಳ ಜತೆ ಮನೆಯಲ್ಲಿದ್ದರು. ಈ ವೇಳೆ ಪೊಲೀಸ್ ಸಮವಸ್ತ್ರದಲ್ಲಿ ಬಂದ ಇಬ್ಬರು ವ್ಯಕ್ತಿಗಳು, ಬಾಗಿಲು ತಟ್ಟಿದ್ದರು. ಹೊಂಬಾಳೇಗೌಡ ಬಾಗಿಲು ತೆರೆದಾಗ, ಇಬ್ಬರ ಪೈಕಿ ಒಬ್ಬ ತನ್ನನ್ನು ಯಲಹಂಕ ಠಾಣೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಎಂದು ಪರಿಚಯಿಸಿಕೊಂಡಿದ್ದ. ನಂತರ, ಏಕಾಏಕಿ ಕೈಯಲ್ಲಿ ಡೈರಿ ಹಿಡಿದುಕೊಂಡು ಮನೆಯೊಳಗೆ ಪ್ರವೇಶಿಸಿದ್ದ. ಹೊಂಬಾಳೇಗೌಡ ಪ್ರತಿಕ್ರಿಯಿಸುವ ಮೊದಲೇ ಖಾಕಿ ಸಮವಸ್ತ್ರದಲ್ಲಿದ್ದ ಮತ್ತೊಬ್ಬ ಕೂಡ ಒಳಗೆ ಪ್ರವೇಶಿಸಿದ್ದ. ಬಳಿಕ ಇಬ್ಬರು ದರೋಡೆಕೋರರು, ಮನೆಯಲ್ಲಿದ್ದವರ ಕೈಕಾಲಿಗೆ ಟೇಪ್‌ನಿಂದ ಬಿಗಿದು, ದರೋಡೆ ಮಾಡಿಕೊಂಡು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

11ನೇ ಆರೋಪಿಗೆ ಜಾಮೀನು

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ 11ನೇ ಆರೋಪಿ ನಾಗರಾಜು ಅವರಿಗೆ 57ನೇ ಸಿಸಿಎಚ್ ನ್ಯಾಯಾಲಯ ಗುರುವಾರ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಪತ್ನಿಯ ಅನಾರೋಗ್ಯದ ಕಾರಣ ನೀಡಿ, ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು, ಕೆಲ ಷರತ್ತುಗಳೊಂದಿಗೆ ಜಾಮೀನು ಮಂಜೂರು ಮಾಡಿದರು. ಪ್ರತಿನಿತ್ಯ ಬೆಳಿಗ್ಗೆ, ಸಂಜೆ ಕಾಮಾಕ್ಷಿಪಾಳ್ಯ ಠಾಣೆಗೆ ತೆರಳಿ ಸಹಿ ಹಾಕಲು ಸೂಚಿಸಿದರು.

ಪತಿ ಎದುರೇ ಪತ್ನಿ ಕೊಲೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಪಟ್ಟಣದ ಪೇಟೆ ಬೀದಿ ಸಮೀಪದ ಮನೆಯೊಂದಕ್ಕೆ ನುಗ್ಗಿ ವೃದ್ಧೆಯನ್ನು ಕೊಲೆ ಮಾಡಿ, ಆಭರಣಗಳನ್ನು ದೋಚಿದ್ದ ಆರೋಪಿಯನ್ನು, ಬುಧವಾರ ರಾತ್ರಿಯೇ ಪೊಲೀಸರು ಬಂಧಿಸಿದ್ದಾರೆ.

ಕೊಲೆಯಾದ ಶೋಭಾ (68) ಪತಿಯೊಂದಿಗೆ ವಾಸವಿದ್ದರು. ಪತಿಗೆ ಕೈಕಾಲುಗಳು ಸ್ವಾಧೀನ ಇರಲಿಲ್ಲ. ಬುದ್ಧಿಮಾಂದ್ಯ ಕಾಯಿಲೆಯಿಂದ ನರಳುತ್ತಿದ್ದರು. ಬುಧವಾರ ಸಂಜೆ ಆರೋಪಿ ಕೊಲೆ ಮಾಡಿ, ಆಭರಣ ದೋಚಿದ್ದ.

ಶೋಭಾ

ಶಿವಕುಮಾರ್

ಕೊಲೆ ಮಾಹಿತಿ ತಿಳಿದ ಪೊಲೀಸರು ತಕ್ಷಣ ಕಾರ್ಯಪ್ರವೃತ್ತರಾಗಿ ಶ್ವಾನದಳದೊಂದಿಗೆ ಪರಿಶೀಲನೆ ನಡೆಸಿದರು. ಸ್ಥಳೀಯರೆ ಕೃತ್ಯ ಎಸಗಿದ್ದಾರೆ ಎಂದು ಅಂದಾಜಿಸಿದ ಪೊಲೀಸರು ಪೇಟೆ ಬೀದಿಯಲ್ಲಿ ದಿನಸಿ ಅಂಗಡಿ ನಡೆಸುತ್ತಿದ್ದ ಆರೋಪಿ ಶಿವಕುಮಾರ್(43) ಅವರನ್ನು ಬುಧವಾರ ರಾತ್ರಿ ಅವರ ಮನೆಯಲ್ಲಿ ಬಂಧಿಸಿದ್ದಾರೆ.

'ವಿಪರೀತ ಸಾಲ ಮಾಡಿಕೊಂಡಿದ್ದರಿಂದ ಕೊಲೆ ಮಾಡಿ, ಆಭರಣ ದೋಚಿದ್ದಾನೆ ಎಂದು ತಿಳಿದುಬಂದಿದೆ' ಎಂದು ಪೊಲೀಸರು ತಿಳಿಸಿದರು.

ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್ ಭರತ್‌ಗೌಡ, ಎಎಸ್ಐ ರಘು, ಕಾನ್‌ಸ್ಟೆಬಲ್ ಬಸವರಾಜು, ಚನ್ನೇಗೌಡ ಭಾಗವಹಿಸಿದ್ದರು.

ಶಾರ್ಟ್ ಸರ್ಕಿಟ್ ಶಂಕೆ, ಪ್ರಕರಣ ದಾಖಲು

ಬೆಂಕಿ ಅವಘಡ: ವೃದ್ಧ ಸಜೀವ ದಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃದ್ಧರೊಬ್ಬರು ಮನೆಯಲ್ಲಿ ಸಜೀವ ದಹನವಾಗಿರುವ ಘಟನೆ ಕೆಂಗೇರಿ ಸಮೀಪದ ಮೈಲಸಂದ್ರದಲ್ಲಿ ಗುರುವಾರ ನಸುಕಿನ ವೇಳೆ ನಡೆದಿದ್ದು, ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಲಾರಪ್ಪ(80) ಸಜೀವದಹನ ಆದವರು.

ಅಗ್ನಿ ಅವಘಡಕ್ಕೆ ಕಾರಣ ಗೊತ್ತಾಗಿಲ್ಲ. ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಅವಘಡ ಸಂಭವಿಸಿರುವ ಶಂಕೆ ವ್ಯಕ್ತವಾಗಿದೆ.

ಘಟನಾ ಸ್ಥಳಕ್ಕೆ ಅಗ್ನಿಶಾಮಕ, ತುರ್ತುಸೇವಾ ದಳದ ಸಿಬ್ಬಂದಿ ಹಾಗೂ ಸೀನ್ ಆಫ್ ಕ್ರೈಂ (ಸುಕೊ) ತಂಡದ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆಸಲಾಗುತ್ತಿದೆ. ತನಿಖೆ ಪೂರ್ಣವಾದ ಮೇಲೆ ಕಾರಣ ಪತ್ತೆ ಆಗಲಿದೆ ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಮೈಲಸಂದ್ರದಲ್ಲಿ ನಡೆದ ಘಟನೆ
- ಸುಟ್ಟು ಕರಕಲಾದ ಸ್ಥಿತಿಯಲ್ಲಿ ಮೃತದೇಹ ಪತ್ತೆ
- ಕಾರಣ ಪತ್ತೆಗಾಗಿ ತನಿಖೆ ಆರಂಭ

'ಮೈಲಾರಪ್ಪ ಅವರಿಗೆ ನಾಲ್ವರು ಮಕ್ಕಳಿದ್ದು ಎಲ್ಲರೂ ಪ್ರತ್ಯೇಕ ಮನೆಗಳಲ್ಲಿ ವಾಸವಿದ್ದಾರೆ. ಮೈಲಾರಪ್ಪ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಮೊಮ್ಮಕ್ಕಳು ಪ್ರತಿನಿತ್ಯ ಮನೆಗೆ ಬಂದು ಮೈಲಾರಪ್ಪ ಅವರ ಯೋಗಕ್ಷೇಮ ವಿಚಾರಿಸುತ್ತಿದ್ದರು. ಬುಧವಾರ ರಾತ್ರಿ ಊಟ ಮಾಡಿ ಮಲಗಿದ್ದರು. ಆ ಸಂದರ್ಭದಲ್ಲಿ ಅವಘಡ ಸಂಭವಿಸಿದೆ. ಮಾಹಿತಿ ತಿಳಿದು ಸ್ಥಳಕ್ಕೆ ತೆರಳಿ ಬೆಂಕಿ ನಂದಿಸುವಷ್ಟರಲ್ಲಿ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

'ನಾಲ್ವರು ಮಕ್ಕಳಿಗೂ ಮೈಲಾರಪ್ಪ ಅವರು ಆಸ್ತಿ ಪಾಲು ಮಾಡಿಕೊಟ್ಟಿದ್ದರು. ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಗಲಾಟೆ ನಡೆದಿರಲಿಲ್ಲ ಎಂಬುದು ತನಿಖೆಯಿಂದ ಗೊತ್ತಾಗಿದೆ. ಆದರೂ, ಅಗ್ನಿ ಅವಘಡಕ್ಕೆ ಕಾರಣ ಏನು ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ' ಎಂದು ನೈರುತ್ಯ ವಿಭಾಗದ ಡಿಸಿಪಿ ಅನಿತಾ ಹದ್ದಣ್ಣನವರ್ ತಿಳಿಸಿದರು.

ರೈಲು ನಿಲ್ದಾಣದ ಬಳಿ ಕಾರಿಗೆ ಬೆಂಕಿ

ಬೆಂಗಳೂರು: ಮೆಜೆಸ್ಟಿಕ್ ಬಳಿಯ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ವಾಹನ ನಿಲುಗಡೆ ಪ್ರದೇಶದಲ್ಲಿದ್ದ ಕಾರೊಂದು ಬೆಂಕಿಗೆ ಆಹುತಿಯಾಗಿದೆ. ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ಬೆಂಕಿ ಅವಘಡದಲ್ಲಿ ಕಾರು ಸಂಪೂರ್ಣ ಸುಟ್ಟು ಕರಕಲಾಗಿದೆ.

ಬೆಂಕಿ ಹೊತ್ತಿಕೊಂಡಿರುವುದನ್ನು ಗಮನಿಸಿದ್ದ ಸ್ಥಳೀಯರು, ಅಗ್ನಿಶಾಮಕ ಹಾಗೂ ತುರ್ತುಸೇವಾ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬರುವಷ್ಟರಲ್ಲಿ ಕಾರು ಸುಟ್ಟು ಹೋಗಿತ್ತು. ಕಾರಿನ ಪಕ್ಕದಲ್ಲಿದ್ದ ಇತರೆ ವಾಹನಗಳನ್ನು ಸ್ಥಳದಿಂದ ತೆರವುಗೊಳಿಸಲಾಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಘಟನೆಗೆ ಸಂಬಂಧಿಸಿದಂತೆ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಲಯನ್ಸ್ ಸಾಹಿತ್ಯ ಹಬ್ಬ

ಆನೇಕಲ್‌ನ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ನಡೆದ 'ಅಲಯನ್ಸ್ ಸಾಹಿತ್ಯ ಹಬ್ಬ' ದಲ್ಲಿ ಪ್ರಸ್ತುತಿ ಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮದ ನೋಟ

ಮರದಲ್ಲಿತ್ತು ಅಸ್ಥಿಪಂಜರ

ದೊಡ್ಡಬಳ್ಳಾಪುರ: ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದ ಬ್ಯಾಂಕ್ ಸರ್ಕಲ್ ಬಳಿಯ ಕಾರ್ಖಾನೆಗೆ ಸೇರಿದ ನಿರ್ಜನ ಪ್ರದೇಶದ ಮರವೊಂದರಲ್ಲಿ ನೇತಾಡುತ್ತಿದ್ದ ಅಸ್ಥಿಪಂಜರ ಗುರುವಾರ ಪತ್ತೆಯಾಗಿದೆ.

ಪ್ರದೇಶದ ಸ್ವಚ್ಛತಾ ಕಾರ್ಯದ ವೇಳೆ ಮರದ ಕೆಳಗೆ ಮೂಳೆಗಳು ದೊರೆತಿದ್ದು, ಮರದ ಮೇಲೆ ನೋಡಿದಾಗ ಬುರುಡೆ ನೇತಾಡು ತ್ತಿರುವುದು ಕಂಡು ಬಂದಿದೆ.

ಹಲವು ಗಂಟೆಗಳ ತನಿಖೆ ಬಳಿಕ ಸುಮಾರು ಆರು ತಿಂಗಳ ಹಿಂದೆ ಇದೇ ಕಂಪನಿಯಲ್ಲಿ ಸೆಕ್ಯುರಿಟಿ ಗಾರ್ಡ್ ಕೆಲಸ ನಿರ್ವಹಿಸುತ್ತಿದ್ದ ಎನ್ನಲಾದ ಕೊರಟಗೆರೆ ಮೂಲದ ದೇವರಾಜ್ ಎಂಬುವವರ ಮೃತ ದೇಹ ಎಂದು ದೃಢಪಟ್ಟಿದೆ.

ಕೊರಟಗೆರೆ ದೇವರಾಜ್ ಕೋಳೂರಿನಲ್ಲಿ ವಾಸವಿದ್ದರು ಎನ್ನಲಾಗಿದೆ. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಂದಿನಿ ಉತ್ಪನ್ನಗಳ ಕುರಿತು 'ರೀಲ್ಸ್' ಮಾಡಿ ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್

ಅಪಪ್ರಚಾರ: ವೈದ್ಯೆ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳದ(ಕೆಎಂಎಫ್) ಉತ್ಪನ್ನಗಳ ಕುರಿತು ಅಪಪ್ರಚಾರ ನಡೆಸಿದ್ದ ಆರೋಪದ ಮೇಲೆ ವೈದ್ಯೆ ವಿರುದ್ಧ ಮಲ್ಲೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಎಂಎಫ್‌ನ ಆರ್.ಪದ್ಮಾವತಿ ಅವರು ನೀಡಿದ ದೂರಿನ ಮೇರೆಗೆ ಮಲ್ಲೇಶ್ವರದಲ್ಲಿರುವ ಮಣಿಪಾಲ ಆಸ್ಪತ್ರೆಯ ಚರ್ಮರೋಗ ತಜ್ಞೆ ಶರಣ್ಯಾ ಪದ್ಮಾ ಅವರ (ಬಾಲಾಜಿ ಕ್ಲಿನಿಕ್, ಮಾಲೂರು) ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 353(1)(ಬಿ) ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ 66(ಡಿ) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಫೆ.8ರಂದು ನಂದಿನಿ ಉತ್ಪನ್ನಗಳ ಬಗ್ಗೆ 'ರೀಲ್ಸ್' ಮಾಡಿ ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು. ಆ 'ರೀಲ್ಸ್'ನಲ್ಲಿ, ನಂದಿನಿ ಉತ್ಪನ್ನಗಳಾದ ಕ್ರೀಮ್ ಬನ್, ಸ್ಟ್ರಾಬೆರಿ ಫ್ಲೇವರ್ಡ್ ಮಿಲ್ಕ್ ಹಾಗೂ ತಂಪು ಪಾನೀಯಗಳ ಕುರಿತು ಅಪಪ್ರಚಾರ ಮಾಡಿದ್ದರು. ಈ ಉತ್ಪನ್ನಗಳನ್ನು ದಿನನಿತ್ಯ ಸೇವಿಸುವುದರಿಂದ ಅನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆ ಇರುತ್ತದೆ. ಸ್ಟಿರಾಯ್ಡ್‌ನಂತಹ ಔಷಧ ನೀಡಬೇಕಾಗುತ್ತದೆ. ದೀರ್ಘಾವಧಿಯಲ್ಲಿ ಕ್ಯಾನ್ಸರ್ ಬರುತ್ತದೆ. ಸ್ಟ್ರಾಬೆರಿ ಫ್ಲೇವರ್ಡ್ ಮಿಲ್ಕ್‌ನಲ್ಲಿ ನೈಸರ್ಗಿಕ ಸ್ಟ್ರಾಬೆರಿ ಇರುವುದಿಲ್ಲ. ಬದಲಾಗಿ ಕೃತಕ ಬಣ್ಣ ಹಾಕಿ ತಯಾರು ಮಾಡಲಾಗಿರುತ್ತದೆ. ಈ ರೀತಿಯ ಉತ್ಪನ್ನಗಳಿಗೆ ಭಾರತೀಯ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್ಎಸ್ಎಸ್ಎಐ) ಹೇಗೆ ಅನುಮತಿ ನೀಡಿದೆ' ಎಂಬುದಾಗಿ 'ರೀಲ್ಸ್'ನಲ್ಲಿ ವೈದ್ಯೆ ಪ್ರಶ್ನಿಸಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಕೆಎಂಎಫ್ ಸರ್ಕಾರಿ ಸಂಸ್ಥೆ. ಈ ರೀತಿಯ ವಸ್ತುಗಳ ಉತ್ಪಾದನೆ ಹಾಗೂ ಮಾರಾಟ ಮಾಡಿ ಲಾಭ ಮಾಡುತ್ತಿರುವ ಭ್ರಮೆಯಲ್ಲಿ ಸರ್ಕಾರ ಇರಬಾರದು. ಈ ಉತ್ಪನ್ನಗಳು ನಿಜವಾಗಿಯೂ ಆಹಾರ ಅಲ್ಲವೇ ಅಲ್ಲ. ಬದಲಿಗೆ ವಿಷಕಾರಿಯಾಗಿದ್ದು, ಈ ರೀತಿಯ ಉತ್ಪನ್ನಗಳನ್ನು ಕೆಎಂಎಫ್ ಮಾರುಕಟ್ಟೆಗೆ ಬಿಡಬಾರದು ಎಂಬುದಾಗಿಯೂ 'ರೀಲ್ಸ್' ವೈದ್ಯೆ ಹೇಳಿದ್ದಾರೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಸಾಮಾಜಿಕ ಜಾಲತಾಣದಲ್ಲಿ ನಂದಿನಿ ಹಾಲಿನ ಉತ್ಪನ್ನಗಳ ಕುರಿತು ಅಪಪ್ರಚಾರ ಮಾಡಿ ತಪ್ಪು ಸಂದೇಶ ನೀಡಿ ಸಾರ್ವಜನಿಕರಿಗೆ ದಿಕ್ಕು ತಪ್ಪಿಸುತ್ತಿರುವ ಶರಣ್ಯಾ ಪದ್ಮಾ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಕೆಎಂಎಫ್ ಅಧಿಕಾರಿಗಳು ಕೋರಿದ್ದಾರೆ.

ಆಧಾರ ರಹಿತ ಆರೋಪ: ಕೆಎಂಎಫ್ ಹೇಳಿಕೆ

'ಕೆಎಂಎಫ್ ಉತ್ಪನ್ನಗಳ ಕುರಿತು ಆಧಾರ ರಹಿತವಾದ ಆರೋಪ ಮಾಡಿರುವುದು ಮಹಾಮಂಡಳದ ಗಮನಕ್ಕೆ ಬಂದಿದೆ. ನಂದಿನಿ ಉತ್ಪನ್ನಗಳು ಸೇವನೆಗೆ ಅಸುರಕ್ಷಿತವೆಂದು ತಪ್ಪಾಗಿ ಪ್ರಚಾರ ಮಾಡುತ್ತಿರುವುದರಿಂದ ಬಾಲ್ಯದಿಂದಲೇ ನಂದಿನಿ ಬ್ರ್ಯಾಂಡ್‌ನೊಂದಿಗೆ ಬೆಳೆದಿರುವ ಕೋಟ್ಯಂತರ ಗ್ರಾಹಕರಲ್ಲಿ ಅನಗತ್ಯ ಗೊಂದಲ ಉಂಟಾಗಿದೆ. ಕರ್ನಾಟಕ ಹಾಲು ಮಹಾಮಂಡಳವು ಕಾನೂನುಬದ್ಧ ಸಂಸ್ಥೆ. ಎಫ್ಎಸ್ಎಸ್ಎಐ ನಿಗದಿಪಡಿಸಿರುವ ಎಲ್ಲ ಆಹಾರ ಸುರಕ್ಷತಾ ಮಾನದಂಡಗಳು ಹಾಗೂ ಅನುಮೋದಿತ ವಿಧಾನಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದೆ. ನಂದಿನಿ ಹಾಲು ಹಾಗೂ ಹಾಲಿನ ಉತ್ಪನ್ನಗಳೆಲ್ಲವೂ ಸೇವನೆಗೆ ಸಂಪೂರ್ಣ ಸುರಕ್ಷಿತವಾಗಿದ್ದು, ಗ್ರಾಹಕರು ಆತಂಕ ಪಡಬೇಕಿಲ್ಲ. ಕೆಎಂಎಫ್ ಭರವಸೆ ನೀಡುವುದರೊಂದಿಗೆ ಆಧಾರ ರಹಿತ ಹಾಗೂ ತಪ್ಪುದಾರಿಗೆಳೆಯುವ ಹೇಳಿಕೆಗಳನ್ನು ಖಂಡಿಸಲಾಗುವುದು' ಎಂದು ಕೆಎಂಎಫ್ ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ರಮ ಬಂಧನ: ಪರಿಹಾರಕ್ಕೆ ಆದೇಶ

₹2 ಲಕ್ಷ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಕ್ತಿಯೊಬ್ಬರನ್ನು ವಶಕ್ಕೆ ಪಡೆದು ನಾಲ್ಕು ದಿನ ಪೊಲೀಸ್ ಠಾಣೆಯಲ್ಲಿ ಅಕ್ರಮವಾಗಿ ಇರಿಸಿಕೊಂಡು, ನಂತರ ಎಫ್‌ಐಆರ್ ದಾಖಲಿಸಿ ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ಹಾಜರುಪಡಿಸಿದ ಪ್ರಕರಣವೊಂದರಲ್ಲಿ ಹೈಕೋರ್ಟ್, ಬಂಧಿತ ವ್ಯಕ್ತಿಗೆ ಪರಿಹಾರ ರೂಪವಾಗಿ 2 ಲಕ್ಷ ಪಾವತಿಸುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಈ ಕುರಿತಾದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಹಿರಿಯ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾಯಮೂರ್ತಿ ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

‘ಬಂಧನ ಅಕ್ರಮ ಎಂಬುದು ಸಾಬೀತಾಗಿದ್ದು, ಬಂಧಿತ ರವಿ ಅವರಿಗೆ ಉಂಟಾಗಿರುವ ದೈಹಿಕ ಹಾಗೂ ಮಾನಸಿಕ ಹಾನಿಗಾಗಿ ₹2 ಲಕ್ಷ ಪರಿಹಾರ, ಅರ್ಜಿದಾರರಿಗೆ ವ್ಯಾಜ್ಯದ ವೆಚ್ಚ ರೂಪದಲ್ಲಿ ₹50 ಸಾವಿರ ಪಾವತಿಸಬೇಕು’ ಎಂದು ಪೀಠ ಆದೇಶಿಸಿದೆ.

‘ಈ ಪರಿಹಾರದ ಮೊತ್ತವನ್ನು ತಪ್ಪಿತಸ್ಥ ಅಧಿಕಾರಿಗಳಿಂದ ವಸೂಲಿ ಮಾಡಬೇಕು. ಇಲಾಖಾ ತನಿಖೆ ನಡೆಸಿದ ನಂತರ ಪೊಲೀಸ್ ಠಾಣೆ ಅಥವಾ ಇಲಾಖೆ ಅಧಿಕಾರಿಗಳ ವಿರುದ್ಧ ತಪ್ಪಿನ ಹೊಣೆ ನಿಗದಿಪಡಿಸಬೇಕು’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?

ಕಲ್ಲು ಒಡೆಯುವ ಕಾರ್ಮಿಕ ರವಿ ಅವರನ್ನು ಗಂಗಮ್ಮನ ಗುಡಿ ಠಾಣೆಯ ಪೊಲೀಸರು 2025ರ ಅಕ್ಟೋಬರ್ 14ರಂದು ಬಂಧಿಸಿದ್ದರು. ಈ ಸಂಬಂಧ ರವಿ ಪತ್ನಿ ಎಂ.ವಿ.ವರಲಕ್ಷ್ಮಿ ನೀಡಿದ ದೂರು ಆಧರಿಸಿ ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಡಿವೈಎಸ್‌ಪಿ ಅಕ್ಟೋಬರ್ 17ರಂದು ಸಂಜೆ 7.45ಕ್ಕೆ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದರು.

ತದನಂತರ ರವಿ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿದ್ದ ಪೊಲೀಸರು, ಅಕ್ಟೋಬರ್ 18ರಂದು ಸಂಜೆ 5ಕ್ಕೆ ನಗರದ 49ನೇ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಈ ಹಿನ್ನೆಲೆಯಲ್ಲಿ ವರಲಕ್ಷ್ಮಿ ಅವರು, ‘ಕರ್ನಾಟಕ ಮಾನವ ಹಕ್ಕುಗಳ ಆಯೋಗ’ಕ್ಕೆ ದೂರು ನೀಡಿದ್ದರು. ಅಂತೆಯೇ, ಹೈಕೋರ್ಟ್‌ಗೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿ, ‘ಪತಿಯ ಬಂಧನವನ್ನು ಅಕ್ರಮ ಎಂದು ಘೋಷಿಸಬೇಕು ಮತ್ತು ಬಿಡುಗಡೆಗೆ ಆದೇಶಿಸಬೇಕು’ ಎಂದು ಕೋರಿದ್ದರು.

‘ಯಾವುದೇ ವ್ಯಕ್ತಿಯನ್ನು ಬಂಧಿಸಿದಾಗ, ಭಾರತೀಯ ನ್ಯಾಯ ಸುರಕ್ಷಾ ಸಂಹಿತಾ–2023ರ (ಬಿಎನ್‌ಎಸ್‌ಎಸ್) ಅಧ್ಯಾಯ 5ರಲ್ಲಿ ಉಲ್ಲೇಖಿಸಿರುವ ಪ್ರಕ್ರಿಯೆ ಮತ್ತು ಜೋಗಿಂದರ್ ಕುಮಾರ್ v/s ಉತ್ತರ ಪ್ರದೇಶದ ಸರ್ಕಾರದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಪಾಲಿಸಬೇಕು. ಇಲ್ಲವಾದಲ್ಲಿ ವ್ಯಕ್ತಿಯೊಬ್ಬನಿಗೆ ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಕೊಡಮಾಡಿರುವ ಜೀವಿಸುವ ಮತ್ತು ವೈಯಕ್ತಿಕ ಸ್ವಾತಂತ್ರ್ಯ ರಕ್ಷಣೆಯ ಹಕ್ಕುಗಳ ಉಲ್ಲಂಘನೆಯಾಗುತ್ತದೆ’ ಎಂದು ಪೀಠ ಅಭಿಪ್ರಾಯಪಟ್ಟಿದೆ.

ರಾಯಣ್ಣನ ಪ್ರತಿಮೆಗೆ ಮಸಿ ಬಳಿದ ಕಿಡಿಗೇಡಿಗಳು

ಬೆಳಗಾವಿ: ಮಚ್ಚೆ ಗ್ರಾಮದಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಪ್ರತಿಮೆಗೆ ಗುರುವಾರ ರಾತ್ರಿ ಕಿಡಿಗೇಡಿಗಳು ಮಸಿ ಬಳಿದಿದ್ದಾರೆ. ಇದರಿಂದ ಸ್ಥಳದಲ್ಲಿ ಕೆಲಹೊತ್ತು ಬಿಗುವಿನ ವಾತಾವರಣ ನಿರ್ಮಾಣವಾಯಿತು.

ಮೊದಲಿದ್ದ ರಾಯಣ್ಣ ಮೂರ್ತಿಗೆ ಕಪ್ಪು ಬಣ್ಣವೇ ಇತ್ತು. ಅದರ ಮೇಲೆಯೇ ಮತ್ತೆ ಕರಿ ಮಸಿ ಸುರಿದಿದ್ದಾರೆ. ಹೀಗಾಗಿ, ಯಾರೂ ಇದನ್ನು ಗಮನಿಸಿರಲಿಲ್ಲ. ರಾತ್ರಿ ಗ್ರಾಮದ ಕೆಲವು ಯುವಕರ ಗಮನಕ್ಕೆ ಬಂದಿದೆ. ಕೆಲವೇ ನಿಮಿಷ ಗಳಲ್ಲಿ ಹಲವರು ಸೇರಿ ಘೋಷಣೆ ಕೂಗಿದರು. ಸ್ಥಳಕ್ಕೆ ಧಾವಿಸಿದ ಪೊಲೀಸರು ಭದ್ರತಾ ಕ್ರಮ ಕೈಗೊಂಡರು. ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ, ಡಿಸಿಪಿ ನಾರಾಯಣ ಭರಮನಿ ಕೂಡ ಸ್ಥಳಕ್ಕೆ ಧಾವಿಸಿ, ಪರಿಸ್ಥಿತಿ ಪರಿಶೀಲಿಸಿದರು.

68 ‘ಮ್ಯೂಲ್ ಹೆರ್ಡರ್’ಗಳ ಬಂಧನ

ವೈಯಕ್ತಿಕ ಮಾಹಿತಿ ಸಂಗ್ರಹಿಸಿ ಖಾತೆ ತೆರೆದು ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್‌ನಲ್ಲಿ ನಕಲಿ ಖಾತೆಗಳನ್ನು ತೆರೆದು ಜನರಿಗೆ ವಂಚಿಸುತ್ತಿದ್ದ ಸೈಬರ್ ಜಾಲದ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ರಾಜ್ಯ ಸೈಬರ್ ಕಮಾಂಡ್ ಘಟಕದ ಅಧಿಕಾರಿಗಳು, ಇದುವರೆಗೆ 68 ‘ಮ್ಯೂಲ್ ಹೆರ್ಡರ್’ಗಳನ್ನು (ಬ್ಯಾಂಕ್ ಖಾತೆಗಳನ್ನು ಸೈಬರ್ ವಂಚಕರಿಗೆ ಮಾರಾಟ ಮಾಡುವವರು) ಬಂಧಿಸಿದ್ದಾರೆ.

ರಾಜ್ಯದಾದ್ಯಂತ ಮ್ಯೂಲ್ ಅಕೌಂಟ್‌ಗಳ (ನಕಲಿ ಖಾತೆಗಳು) ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಸೈಬರ್ ವಂಚನೆಗಳಿಗೆ ಬಳಸಲಾಗುತ್ತಿದ್ದ ಮ್ಯೂಲ್ ಬ್ಯಾಂಕ್ ಖಾತೆಗಳನ್ನು ಒಟ್ಟುಗೂಡಿಸುತ್ತಿದ್ದ ಮ್ಯೂಲ್ ಹೆರ್ಡರ್‌ಗಳನ್ನು ಪತ್ತೆ ಮಾಡಲಾಗುತ್ತಿದೆ. ಕಳೆದ ಡಿಸೆಂಬರ್‌ನಿಂದ ಫೆಬ್ರುವರಿ 19ರ ವರೆಗೆ ಒಟ್ಟು 68 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಸೈಬರ್ ಕಮಾಂಡ್ ಸೆಂಟರ್‌ನ ಡಿಜಿಪಿ ಪ್ರಣವ್ ಮೊಹಂತಿ ತಿಳಿಸಿದ್ದಾರೆ.

‘ಸಾಮಾನ್ಯರ ವೈಯಕ್ತಿಕ ಮಾಹಿತಿ ಹಾಗೂ ದಾಖಲೆ ಸಂಗ್ರಹಿಸಿ ತಮ್ಮ ಹಾಗೂ ತಮ್ಮ ಸಂಬಂಧಿಕರ ಹೆಸರಿನಲ್ಲಿ ಮ್ಯೂಲ್ ಹೆರ್ಡರ್‌ಗಳು ಅನೇಕ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆದಿದ್ದರು. ಆ ಖಾತೆಗಳನ್ನು ಸೈಬರ್ ವಂಚಕರಿಗೆ ಮಾರಾಟ ಮಾಡಿ ಹಣ ಪಡೆಯುತ್ತಿದ್ದರು’ ಎಂದು ತಿಳಿಸಿದ್ದಾರೆ.

‘ಇದುವರೆಗೆ ನಡೆದಿರುವ ವಿಶೇಷ ಕಾರ್ಯಾಚರಣೆಯಲ್ಲಿ ಒಟ್ಟು 60 ಪ್ರಕರಣ ದಾಖಲು ಮಾಡಲಾಗಿದೆ. ಬ್ಯಾಂಕ್‌ನಲ್ಲಿ ತೆರೆಯಲಾಗಿದ್ದ 869 ನಕಲಿ ಖಾತೆ ಪತ್ತೆಹಚ್ಚಲಾಗಿದೆ. ನ್ಯಾಯಾಲಯದಿಂದ ಶೋಧನಾ ವಾರಂಟ್ ಪಡೆದು 35 ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು. ದೇಶದಾದ್ಯಂತ ಎನ್‌ಸಿಆರ್‌ಪಿ ಪೋರ್ಟಲ್‌ನಲ್ಲಿ ಈ ನಕಲಿ ಖಾತೆಗಳ ವಿರುದ್ಧ 8,788 ದೂರು ದಾಖಲಾಗಿದ್ದವು’ ಎಂದು ಮಾಹಿತಿ ನೀಡಿದ್ದಾರೆ.

‘ಬ್ಯಾಂಕ್ ಖಾತೆಗಳಲ್ಲಿದ್ದ ₹13.43 ಕೋಟಿ ಹಣದ ವರ್ಗಾವಣೆಗೆ ತಡೆಯೊಡ್ಡಲಾಗಿದೆ. 869 ನಕಲಿ ಖಾತೆಗಳಲ್ಲಿ ₹85 ಕೋಟಿ ವರ್ಗಾವಣೆ ಆಗಿರುವುದು ಪತ್ತೆಯಾಗಿದೆ. 35 ಎಟಿಎಂ ಕಾರ್ಡ್, 37 ಪಾಸ್‌ಬುಕ್, 80 ಮೊಬೈಲ್, 28 ಚೆಕ್‌ಬುಕ್, 22 ಸಿಮ್‌ಗಳನ್ನು ಆರೋಪಿಗಳಿಂದ ಜಪ್ತಿ ಮಾಡಲಾಗಿದೆ’ ಎಂದು ಮಾಹಿತಿ ನೀಡಿದರು.

ಪ್ರತ್ಯೇಕ ‘ಗ್ಯಾರಂಟಿ’ ಸಚಿವಾಲಯ: ಸಿ.ಎಂಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನ ಹಾಗೂ ಸಮನ್ವಯಕ್ಕೆ ಐಎಎಸ್ ಅಧಿಕಾರಿ ನೇತೃತ್ವದಲ್ಲಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕು ಎಂಬುದು ಸೇರಿದಂತೆ 13 ಬೇಡಿಕೆಗಳಿರುವ ಮನವಿ ಪತ್ರವನ್ನು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮುಖ್ಯಮಂತ್ರಿಗೆ ಸಲ್ಲಿಸಿದ್ದಾರೆ.

ದಿನೇಶ್ ಗೂಳಿಗೌಡ

2026-27ನೇ ಸಾಲಿನ ಬಜೆಟ್‌ನಲ್ಲಿ ಈ ಎಲ್ಲ ಯೋಜನೆಗಳನ್ನು ಸೇರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ ದಿನೇಶ್, ಆರೋಗ್ಯ, ಕೃಷಿ, ತಂತ್ರಜ್ಞಾನ ಮತ್ತು ಆಡಳಿತ ಸುಧಾರಣೆಗೆ ಪೂರಕವಾದ ಅಂಶಗಳನ್ನು ಒಳಗೊಂಡ ಸಮಗ್ರ ಪ್ರಸ್ತಾವವನ್ನು ಮಂಡಿಸಿದರು.

‘ಬೆಂಗಳೂರಿನ ಹೊರವಲಯದ ಕೆಂಪೇಗೌಡ ಬಡಾವಣೆಯಲ್ಲಿ ಸುಮಾರು 20 ಎಕರೆ ಪ್ರದೇಶದಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನೂತನ ಘಟಕ ಸ್ಥಾಪಿಸಲು ಅನುದಾನ ಮೀಸಲಿಡಬೇಕು, ಪ್ರತಿದಿನ 5 ಸಾವಿರ ಸೀರೆಗಳ ಉತ್ಪಾದನೆಗೆ ಅನುಕೂಲವಾಗುವಂತೆ ಮೈಸೂರು ರೇಷ್ಮೆ ಸೀರೆಯ ಹೊಸ ಉತ್ಪಾದನಾ ಘಟಕ ಆರಂಭಿಸಬೇಕು. ಕೃಷಿ-ಕೈಗಾರಿಕೆಗಳಿಗೆ ಸಮರ್ಪಕ ನೀರು ಪೂರೈಸಲು ವೈಜ್ಞಾನಿಕ ಸಲಹೆ ನೀಡಲು ಜಲ ಆಯೋಗ ರಚಿಸಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

‘ಹಾಲು ಉತ್ಪಾದಕರಿಗೆ ನೀಡುತ್ತಿರುವ ಪ್ರೋತ್ಸಾಹ ಧನವನ್ನು ₹7ಕ್ಕೆ ಹೆಚ್ಚಿಸಬೇಕು, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು ₹ 2 ಕೋಟಿಯಿಂದ ₹ 4 ಕೋಟಿಗೆ ಹೆಚ್ಚಿಸಬೇಕು, ಉದ್ಯೋಗಾಧಾರಿತ ಎಐ ಕೌಶಲ ಡಿಪ್ಲೊಮಾ ಕೋರ್ಸ್ ಆರಂಭಿಸಬೇಕು. ಹುಬ್ಬಳ್ಳಿಯಲ್ಲಿರುವ ಕಾನೂನು ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರವನ್ನು ಮೈಸೂರಿನಲ್ಲಿ ಸ್ಥಾಪಿಸಬೇಕು’ ಎಂದೂ ಬೇಡಿಕೆ ಮುಂದಿಟ್ಟಿದ್ದಾರೆ.

ಕಡಬದ ಯುವಕ ಐರ್ಲೆಂಡ್‌ನಲ್ಲಿ ನಿಗೂಢ ಸಾವು

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ: ಐರ್ಲೆಂಡ್‌ನಲ್ಲಿ ಉದ್ಯೋಗದಲ್ಲಿದ್ದ ಕಡಬ ತಾಲ್ಲೂಕಿನ ಕುಟ್ರುಪಾಡಿ ವಿಮಲಗಿರಿಯ ಸಾಂಜೊ ಸುನಿಲ್ (31) ನಿಗೂಢವಾಗಿ ಮೃತಪಟ್ಟಿದ್ದಾರೆ.

ಸಾಂಜೊ ಸುನಿಲ್

‘ಐರ್ಲೆಂಡ್‌ನ ಡಬ್ಲಿನ್ ನಗರದ ಫಿಂಗ್ಲಾಸ್ ಚಾರ್ಲ್ಸ್‌ಟೌನ್ ಪ್ರದೇಶದಲ್ಲಿ ಅವರು ವಾಸವಾಗಿದ್ದರು. ಸಾಂಜೊ ಸುನಿಲ್ ವಾಸವಿದ್ದ ಮನೆಯಲ್ಲಿ ಗುರುವಾರ ಬೆಳಿಗ್ಗೆ ಅವರ ಮೃತದೇಹ ಪತ್ತೆಯಾಗಿದೆ ಎಂಬ ಮಾಹಿತಿ ಸಿಕ್ಕಿದೆ’ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐರಿಷ್ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿದ್ದಾರೆ. ಮೇಲ್ನೋಟಕ್ಕೆ ಇದು ಆತ್ಮಹತ್ಯೆಯಂತೆ ಕಂಡುಬಂದಿದೆ. ತನಿಖೆ ಆರಂಭಿಸಲಾಗಿದೆ ಎಂದು ಅಲ್ಲಿನ ಪೊಲೀಸರು ಕುಟುಂಬದವರಿಗೆ ಮಾಹಿತಿ ನೀಡಿದ್ದಾರೆ ಎಂದು ಗೊತ್ತಾಗಿದೆ. ಮೃತರಿಗೆ ಪತ್ನಿ, ತಂದೆ, ತಾಯಿ, ಇಬ್ಬರು ಸಹೋದರರು ಇದ್ದಾರೆ.

ಬಾಗಲಕೋಟೆಯಲ್ಲಿ ಕಿಡಿಗೇಡಿಗಳಿಂದ ಕೃತ್ಯ

ಶಿವಾಜಿ ಜಯಂತಿ: ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಶಿವಾಜಿ ಜಯಂತಿ ಪ್ರಯುಕ್ತ ಗುರುವಾರ ನಡೆದಿದ್ದ ಬೃಹತ್ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆಸಲಾಗಿದೆ.

ಮೆರವಣಿಗೆಯು ಪಂಕಾ ಮಸೀದಿ ಮಾರ್ಗವಾಗಿ ಹೋಗುವಾಗ ಕೆಲ ಕಿಡಿಗೇಡಿಗಳು ಕಲ್ಲು ತೂರಾಟ ಮಾಡಿದ್ದಾರೆ. ಈ ವೇಳೆ ಎಸ್‌ಪಿ ಸಿದ್ಧಾರ್ಥ ಗೋಯಲ್ ಅವರ ತಲೆಗೆ ಗಾಯವಾಗಿದೆ.

ಗೋಯಲ್ ಅವರ ಶರ್ಟ್ ಮೇಲೆ ರಕ್ತದ ಕಲೆಯಾಗಿದೆ. ತಲೆ ಪೂರ್ತಿ ಕವರ್ ಆಗಿರುವಂತಹ ಹೆಲ್ಮೆಟ್ ಧರಿಸಿದ ಅವರು ಕೂಡಲೇ ವಾಹನದಲ್ಲಿ ತೆರಳಿದ್ದಾರೆ. ಪೊಲೀಸ್ ಬಿಗಿ ಬಂದೋಬಸ್ತ್ ನಡುವೆ ಮೆರವಣಿಗೆ ನಡೆದಿದ್ದರೂ ಕಲ್ಲು ತೂರಾಟ ನಡೆದಿದೆ.

ಶಿವಾಜಿ ಸಮಿತಿ ಮೆರವಣಿಗೆಯಲ್ಲಿ ಸಾವಿರಾರು ಯುವಕರು ಸೇರಿದ್ದರು. ಯುವಕರು ವಾಗ್ವಾದಕ್ಕೆ ಇಳಿದಿದ್ದನ್ನು ವಿಡಿಯೊದಲ್ಲಿ ಸೆರೆ ಸಿಕ್ಕಿದೆ.

ಕಲ್ಲು ತೂರಾಟ ಮಾಡಿದವರ ಬಂಧನಕ್ಕೆ ಆಗ್ರಹ: ಜಿಲ್ಲಾ ಪೊಲೀಸ್ ವರಿಷ್ಠ ಸಿದ್ಧಾರ್ಥ ಅವರ ಮೇಲೆ ಕೆಲ ಮುಸ್ಲಿಂ ಯುವಕರು ಕಲ್ಲು ತೂರಾಟ ಮಾಡಿದ್ದಾರೆ. ಕೂಡಲೇ ಕಲ್ಲು ತೂರಾಟ ಮಾಡಿದವರನ್ನು ಬಂಧಿಸಬೇಕು ಎಂದು ಹಿಂದೂ ಜಾಗರಣ ವೇದಿಕೆ ಮುಖಂಡ ಕುಮಾರಸ್ವಾಮಿ ಹಿರೇಮಠ ಆಗ್ರಹಿಸಿದ್ದಾರೆ.

ಶಿವಾಜಿ ಜಯಂತಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನರು

ಘಟನೆಗೆ ಸಂಬಂಧಿಸಿದ ವಿಡಿಯೊಗಳು ಪೊಲೀಸರ ಬಳಿ ಇವೆ. ಅವುಗಳ ಆಧಾರದ ಮೇಲೆ ಕಲ್ಲು ತೂರಾಟ ಮಾಡಿದವರನ್ನು ಕೂಡಲೇ ಬಂಧಿಸಬೇಕು. ಅವರ ಬಂಧನಕ್ಕೆ ಮುಂದಾಗದಿದ್ದರೆ ಅವರು ಪರಾರಿಯಾಗಲಿದ್ದಾರೆ ಎಂದು ಆರೋಪಿಸಿದರು.

ಕೆಲವೇ ದಿನಗಳಲ್ಲಿ ವಿಶ್ವ ಪ್ರಸಿದ್ಧ ಹೋಳಿ ಹಬ್ಬ ಬರಲಿದೆ. ಅದನ್ನೂ ಶಾಂತಿಯುತವಾಗಿ ನಡೆಸುವ ನಿಟ್ಟಿನಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಆಗಬೇಕು. ಐಜಿಪಿ ಅವರಿಗೂ ದೂರು ನೀಡಲಾಗುವುದು ಎಂದರು.

ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠ ಸಿದ್ಧಾರ್ಥ ಗೋಯಲ್ ಅವರ ಶರ್ಟಿನ ಮೇಲೆ ರಕ್ತದ ಕಲೆ

ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನದ 26ನೇ ವಾರ್ಷಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ

ವಿದ್ಯಾಭೂಷಣರಿಗೆ ಸಂಗೀತ ಸಾಧನಾ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಶಸ್ತಿ ಸ್ವೀಕರಿಸುವವರು ಶುದ್ಧವಾಗಿರಬೇಕು ಹಾಗೂ ಪ್ರಶಸ್ತಿ ನೀಡುವವರು ಸಹ ಅಷ್ಟೇ ಪರಿಶುದ್ಧರಾಗಿರಬೇಕು’ ಎಂದು ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಹೇಳಿದರು.

ನಗರದಲ್ಲಿ ಗುರುವಾರ ಏರ್ಪಡಿಸಿದ್ದ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನದ 26ನೇ ವಾರ್ಷಿಕೋತ್ಸವ ಸಂಭ್ರಮ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಹಣ ಕೊಟ್ಟು ಪ್ರಶಸ್ತಿಗಳನ್ನು ತೆಗೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್ಲವೂ ವ್ಯಾಪಾರವಾಗಿದೆ. ನಿತ್ಯ ಪತ್ರಿಕೆಗಳಲ್ಲಿ ಈ ರೀತಿಯ ಸುದ್ದಿಗಳನ್ನು ನೋಡುತ್ತಿದ್ದೇವೆ. ಆದರೆ, ರಾಘವೇಂದ್ರ ಸೇವಾ ಪ್ರತಿಷ್ಠಾನ ನಿಜವಾದ ಸಾಧಕರನ್ನು ಗುರುತಿಸಿ ಪ್ರಶಸ್ತಿ, ನೀಡುವ ಮೂಲಕ ಒಳ್ಳೆಯ ಕೆಲಸ ಮಾಡುತ್ತಿದೆ’ ಎಂದು ತಿಳಿಸಿದರು.

ಗುರುವಾರ ನಡೆದ ಕಾರ್ಯಕ್ರಮದಲ್ಲಿ ಗಾಯಕ ವಿದ್ಯಾಭೂಷಣ ಅವರಿಗೆ ಜೀವಮಾನ ಸಂಗೀತ ಸಾಧನಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಗೌರಿ ನಾಗರಾಜ್, ಎನ್.ಸಂತೋಷ್ ಹೆಗ್ಡೆ, ನಾಗರಾಜ್, ಆರ್.ಕೆ.ಪದ್ಮನಾಭ ಇದ್ದರು

ಇದೇ ವೇಳೆ ‘ಗುರು ರಾಘವೇಂದ್ರ ಸಂಸ್ಮರಣ ಮರಣೋತ್ತರ ಪ್ರಶಸ್ತಿ’ಯನ್ನು ಮಾಧವ ಗುರುರಾಜಾಚಾರ್ ಗುಡಿ ಅವರ ಪರವಾಗಿ ರಮಾ ಮಾಧವ ಗುಡಿ ಪ್ರಶಸ್ತಿ ಸ್ವೀಕರಿಸಿದರು.

‘50ನೇ ವರ್ಷದ ಜೀವಮಾನ ಸಂಗೀತ ಸಾಧನಾ ಪ್ರಶಸ್ತಿ’ ಹಾಗೂ ‘ಶ್ರೀ ರಾಘವೇಂದ್ರ ಹರಿದಾಸ ಸಂಗೀತ ಸೇವಾ ಶಿರೋಮಣಿ’ ಪ್ರಶಸ್ತಿಯನ್ನು ಗಾಯಕ ವಿದ್ಯಾಭೂಷಣ ಅವರಿಗೆ ನೀಡಲಾಯಿತು.

ಇದಕ್ಕೂ ಮುನ್ನ ಸೋಸಲೆ ಸಮೀರಾಚಾರ್, ವಸಂತ್ ಕುಮಾರ್ ಕುಂಬಳೆ, ಕೆ.ಎಸ್.ಸುನಿಲ್, ಎಂ.ಸಿ. ಶ್ರೀನಿವಾಸ್ ಅವರು ಪುರಂದರ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ವಿದ್ವಾಂಸ ಆರ್.ಕೆ.ಪದ್ಮನಾಭ ಅಧ್ಯಕ್ಷತೆ ವಹಿಸಿದ್ದರು ಸಂಗೀತ ನಿರ್ದೇಶಕ ಪುತ್ತೂರು ನರಸಿಂಹ ನಾಯಕ್ ಹಾಜರಿದ್ದರು. ಪ್ರತಿಷ್ಠಾನದ ಅಧ್ಯಕ್ಷೆ ಗೌರಿ ನಾಗರಾಜ್, ಕಾರ್ಯದರ್ಶಿ ನಾಗರಾಜ್, ಉಪಾಧ್ಯಕ್ಷೆ ವೀಣಾ ಸುರೇಶ್, ದೇವಸ್ಥಾನದ ಉಪಾಧ್ಯಕ್ಷ ಬಾಲಚಂದ್ರ ಇದ್ದರು.

ಕರ್ನಾಟಕ ಸೌಧ: ಕಳಪೆ ನಿರ್ವಹಣೆಗೆ ಕಿಡಿ

ತಿರುಪತಿ ತಿರುಮಲದಲ್ಲಿರುವ ಯಾತ್ರಿ ನಿವಾಸ: ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಕ್ಕೆ ಮುಜರಾಯಿ ಇಲಾಖೆ ಚಿಂತನೆ

• ಸ್ನೇಹಾ ರಮೇಶ್

ಬೆಂಗಳೂರು: ತಿರುಪತಿಯ ತಿರುಮಲದಲ್ಲಿರುವ 'ಕರ್ನಾಟಕ ಪ್ರವಾಸಿ ಸೌಧ'ದ ನಿರ್ವಹಣೆಯ ಬಗ್ಗೆ ವ್ಯಾಪಕ ದೂರುಗಳು ಬರುತ್ತಿರುವುದರಿಂದ ಸೌಧದ ಉಸ್ತುವಾರಿಯನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ (ಕೆಎಸ್‌ಟಿಡಿಸಿ) ಹಸ್ತಾಂತರಿಸಲು ಮುಜರಾಯಿ ಇಲಾಖೆ ಚಿಂತನೆ ನಡೆಸಿದೆ.

8 ತಿಂಗಳ ಹಿಂದಷ್ಟೇ ಉದ್ಘಾಟನೆಗೊಂಡ ಈ ಕಟ್ಟಡವು ಕರ್ನಾಟಕದ ಯಾತ್ರಿಗಳಿಗಾಗಿ ಸುಮಾರು 300 ಕೊಠಡಿಗಳನ್ನುಹೊಂದಿದೆ. ಯಾತ್ರಿ ನಿವಾಸಗಳ ನಿರ್ವಹಣೆಯಲ್ಲಿ ಕೆಎಸ್‌ಟಿಡಿಸಿ ಪರಿಣತಿ ಹೊಂದಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯ ಇಲ್ಲಿನ ಕೊಠಡಿಗಳಿಗೆ ಒಂದು ದಿನಕ್ಕೆ ₹2,000ದಿಂದ ₹4,900ರವರೆಗೆ ದರ ನಿಗದಿ ಮಾಡಲಾಗಿದೆ. ಇಲಾಖೆಯಿಂದ ನಿಗಮಕ್ಕೆ ಹಸ್ತಾಂತರವಾದ ಬಳಿಕ ದರಗಳು ದುಬಾರಿಯಾಗಬಹುದು ಮತ್ತು ಧಾರ್ಮಿಕ ಕೇಂದ್ರವು ವಾಣಿಜ್ಯೀಕರಣಗೊಳ್ಳಬಹುದು ಎಂಬ ಆತಂಕವನ್ನು ಭಕ್ತರು ವ್ಯಕ್ತಪಡಿಸಿದ್ದಾರೆ.

'ಕರ್ನಾಟಕದ ಯಾತ್ರಿಕರಿಗೆ ಸಹಾಯ ಮಾಡಲು ಮುಜರಾಯಿ ಇಲಾಖೆಯು ಆಸ್ತಿಯ ಮೇಲೆ ಕೋಟಿಗಟ್ಟಲೆ ಖರ್ಚು ಮಾಡಿದೆ. ಈಗ, ಅದನ್ನು ಕೆಎಸ್‌ಟಿಡಿಸಿಗೆ ಹಸ್ತಾಂತರಗೊಳಿಸುವುದು ಸರಿಯಲ್ಲ' ಎಂದು ವರ್ಷಕ್ಕೆ ಕನಿಷ್ಠ ನಾಲ್ಕು ಬಾರಿ ತಿರುಪತಿಗೆ ಭೇಟಿ ನೀಡುವ ವಸಂತ್ ಕೆ. ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ವಸತಿ ಸೌಕರ್ಯವು ದೇವಾಲಯಕ್ಕೆ ಹತ್ತಿರದಲ್ಲಿದೆ. ಕರ್ನಾಟಕದ ಯಾತ್ರಿಕರಿಗೆ ಉಳಿದುಕೊಳ್ಳಲು ಅತ್ಯುತ್ತಮ ಆಯ್ಕೆಯಾಗಿದೆ. ಈಗ ಕೈಗೆಟುಕುವ ದರ ಇದ್ದು, ಹೆಚ್ಚು ಮಾಡಿದರೆ ಯಾತ್ರಿಗಳಿಗೆ ಹೊರೆಯಾಗಲಿದೆ ಎಂದು ಮತ್ತೊಬ್ಬ ಯಾತ್ರಿ ಆತಂಕ ವ್ಯಕ್ತಪಡಿಸಿದರು.

ದರ ಹೆಚ್ಚಳವಿಲ್ಲ: ರಾಮಲಿಂಗಾರೆಡ್ಡಿ



ಮುಜರಾಯಿ ಇಲಾಖೆಯು ವಸತಿ ಸೌಕರ್ಯದ ದರದ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೊಂದಿರುತ್ತದೆ. ದರ ಹೆಚ್ಚಾಗುವುದಿಲ್ಲ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದ್ದಾರೆ.

'ಬೆಡ್‌ಶೀಟ್‌ಗಳನ್ನು ಪ್ರತಿದಿನ ಬದಲಾಯಿಸಬೇಕು. ಶೌಚಾಲಯಗಳನ್ನು ಸ್ವಚ್ಛಗೊಳಿಸಬೇಕು. ನಿರ್ವಹಣೆ ತುಂಬಾ ಕಳಪೆಯಾಗಿದೆ ಎಂಬ ದೂರು ಬಂದಿರುವುದರಿಂದ ನಿರ್ವಹಣೆಗಾಗಿ ಕೆಎಸ್‌ಟಿಡಿಸಿಗೆ ಒಪ್ಪಿಸುವುದು ಒಳ್ಳೆಯದು' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಮುಂದೆಯೂ ದರ ನಿರ್ಧರಿಸುವ ಅಧಿಕಾರವು ಮುಜರಾಯಿ ಇಲಾಖೆಯದ್ದಾಗಿರುತ್ತದೆ. ಲಾಭವನ್ನು ಕೆಎಸ್‌ಟಿಡಿಸಿ ಮತ್ತು ಮುಜರಾಯಿ ಇಲಾಖೆಯ ನಡುವೆ ಹಂಚಿಕೊಳ್ಳಲಾಗುತ್ತದೆ. ಈ ಪ್ರಸ್ತಾವವನ್ನು ಶೀಘ್ರದಲ್ಲೇ ಅನುಮೋದನೆಗಾಗಿ ಸಚಿವ ಸಂಪುಟದ ಮುಂದೆ ಇಡಲಾಗುವುದು' ಎಂದು ಹೇಳಿದ್ದಾರೆ.

'ಕಳಪೆ ನಿರ್ವಹಣೆ'

'ಕಟ್ಟಡ ನಿರ್ಮಾಣಗೊಂಡು ಒಂದು ವರ್ಷ ಕೂಡ ಆಗಿಲ್ಲ. ನಿರ್ವಹಣೆ ತೀರ ಕಳಪೆಯಾಗಿದೆ. ಚಪ್ಪಲಿ ಧರಿಸದೆ ಕೊಠಡಿಗೆ ಕಾಲಿಡಲೂ ಸಾಧ್ಯವಿಲ್ಲ. ಹಳೇ ಕಟ್ಟಡ ಎಂಬಂತೆ ಭಾಸವಾಗುತ್ತಿದೆ' ಎಂದು ತಿರುಮಲ ತಿರುಪತಿ ದೇವಸ್ಥಾನಗಳ ಟ್ರಸ್ಟ್ ಮಂಡಳಿಯ ಸದಸ್ಯ ಎಸ್. ನರೇಶ್ ಕುಮಾರ್ ಬೇಸರ ವ್ಯಕ್ತಪಡಿಸಿದರು.

'ತಿರುಮಲದ ಪ್ರಮುಖ ಸ್ಥಳದಲ್ಲಿ ಈ ಸೌಧ ಇದೆ. ಅನೇಕ ರಾಜ್ಯಗಳಿಗೆ ಇಂಥ ಪ್ರಯೋಜನ ಸಿಕ್ಕಿಲ್ಲ. ಆದರೆ ಈ ಅನುಕೂಲ ಸದ್ಬಳಕೆಯಾಗುತ್ತಿಲ್ಲ' ಎಂದು ಹೇಳಿದರು.

ಪ್ರಜಾವಾಣಿ ಫೋನ್-ಇನ್ ಕಾರ್ಯಕ್ರಮ

ಪ್ರಶ್ನೆ ಕೇಳಿ, ಸಮಸ್ಯೆ ಬಗೆಹರಿಸಿಕೊಳ್ಳಿ

ಎಸ್‌ಎಸ್‌ಎಲ್‌ಸಿ, ಪಿಯು ಪರೀಕ್ಷೆ ನಿರ್ಭೀತಿಯಿಂದ ಎದುರಿಸುವುದು ಹೇಗೆ?

- ಸುಗಮ ಪರೀಕ್ಷೆಗೆ ಏನೆಲ್ಲ ವ್ಯವಸ್ಥೆ ಕೈಗೊಳ್ಳಲಾಗಿದೆ?
- ವಿದ್ಯಾರ್ಥಿಗಳು ನಿರಾತಂಕವಾಗಿ ಪರೀಕ್ಷೆ ಎದುರಿಸಲು ಏನು ಮಾಡಬೇಕು?
- ವೆಬ್‌ಕಾಸ್ಟಿಂಗ್ ಆತಂಕ ನಿವಾರಿಸಲು ಪ್ರಯತ್ನಗಳೇನು?
- ಪರೀಕ್ಷೆ-1 ಎಲ್ಲರೂ ಬರೆಯುವುದು ಕಡ್ಡಾಯವೇ?
- ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಏನೆಲ್ಲ ತರಬಹುದು

ಪಾಲ್ಗೊಳ್ಳುವವರು

ಪ್ರಕಾಶ್ ನಿಟ್ಟಾಲಿ
ಅಧ್ಯಕ್ಷ, ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ

ಎಚ್.ಎನ್. ಗೋಪಾಲಕೃಷ್ಣ
ನಿರ್ದೇಶಕ, ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ

ದಿನಾಂಕ 21.02.2026 ಶನಿವಾರ
ಕರೆ ಮಾಡಿ
ಸಮಯ: ಮಧ್ಯಾಹ್ನ12.30 ರಿಂದ 1.30ಗಂಟೆಯವರೆಗೆ
ದೂರವಾಣಿ: 080 45557230

ಯೋಜನೆ ಮರುಜಾರಿಗೆ ನೀತಿ ಮತ್ತು ಯೋಜನಾ ಆಯೋಗ ಶಿಫಾರಸು

ಶಾಲಾ ಬಾಲಕಿಯರಿಗೆ ಉಚಿತ ಬೈಸಿಕಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲಾ ಬಾಲಕಿಯರಿಗೆ ಬೈಸಿಕಲ್ ಉಚಿತ ವಿತರಣಾ ಯೋಜನೆಯನ್ನು ಪುನರಾರಂಭಿಸಬೇಕು ಎಂದು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ ಶಿಫಾರಸು ಮಾಡಿದೆ.

ಆಯೋಗದ ಅಧ್ಯಕ್ಷ ಬಿ.ಆರ್. ಪಾಟೀಲ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ಸಲ್ಲಿಸಿದ ವರದಿಯಲ್ಲಿ ಈ ಶಿಫಾರಸು ಮಾಡಿದೆ. ಮಾಧ್ಯಮಿಕ ಹಂತದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣ ತಗ್ಗಿಸಲು, ಗ್ರಾಮೀಣ ಬಾಲಕಿಯರ ಶಿಕ್ಷಣದ ಮುಂದುವರಿಕೆಯ ಆಶಯದ ಭಾಗವಾಗಿ ಬೈಸಿಕಲ್‌ಗಳ ಉಚಿತ ವಿತರಣೆಯ ಅಗತ್ಯವಿದೆ ಎಂದು ಹೇಳಲಾಗಿದೆ.

ಸರ್ಕಾರಿ ಶಾಲೆಗಳ ಮೂಲಸೌಕರ್ಯ ಸುಧಾರಣೆಗೆ ವಿಶೇಷ ಅನುದಾನ ಮೀಸಲಿಡಬೇಕು. ಮುಂದಿನ ಮೂರು ವರ್ಷಗಳಲ್ಲಿ ಅನುಸರಣೆ ಪ್ರಮಾಣವನ್ನು ಕನಿಷ್ಠ ಶೇ 50ಕ್ಕೆ ಹೆಚ್ಚಿಸಬೇಕು. ರಾಜ್ಯ ಸಲಹಾ ಮಂಡಳಿಯನ್ನು ರಚಿಸಿ ಅನುಷ್ಠಾನದ ಮೇಲ್ವಿಚಾರಣೆ ನಡೆಸಬೇಕು. ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಗಳನ್ನು ಬಲಪಡಿಸಬೇಕು. ರಚನೆ ಹಾಗೂ ಕಾರ್ಯವಿಧಾನದಲ್ಲಿ ರಾಜಕೀಯ ಹಸ್ತಕ್ಷೇಪವನ್ನು ತಪ್ಪಿಸಬೇಕು ಎಂದು ಶಿಫಾರಸು ಮಾಡಲಾಗಿದೆ.

ರಾಜ್ಯವು ಶಿಕ್ಷಣದಲ್ಲಿ ಡಿಜಿಟಲ್ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಬಳಕೆಗೆ ಸಮಗ್ರ ನೀತಿ ರೂಪಿಸಲು ಉನ್ನತಾಧಿಕಾರ ಸಮಿತಿಯನ್ನು ರಚಿಸಬೇಕು. ಎಲ್ಲಾ ಪ್ರಮುಖ ಯೋಜನೆಗಳ ಅನುಷ್ಠಾನ ಮೇಲ್ವಿಚಾರಣೆ, ಸಾರ್ವಜನಿಕ ಶಿಕ್ಷಣದ ಮೇಲ್ವಿಚಾರಣೆ ಹಾಗೂ ಸುಧಾರಣೆಗಾಗಿ ಸರ್ಕಾರಿ ಶಾಲಾ ಅಭಿವೃದ್ಧಿ ಪ್ರಾಧಿಕಾರ (ಜಿಎಸ್‌ಡಿಎ) ಸ್ಥಾಪಿಸಬೇಕು ಎಂದು ಆಯೋಗ ಹೇಳಿದೆ.

ಯುಜಿಸಿ, ಎಐಸಿಟಿಇ ಮುಂತಾದ ಕೇಂದ್ರ ಸಂಸ್ಥೆಗಳಿಂದ ಸಂಶೋಧನಾ ಅನುದಾನದಲ್ಲಿ ಭಾರಿ ಕಡಿತವಾಗಿದೆ. ಇದರಿಂದ ಸಂಶೋಧನೆ, ಪೇಟೆಂಟ್ ಚಟುವಟಿಕೆ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಶ್ರೇಯಾಂಕಗಳಲ್ಲಿ ಹಿನ್ನಡೆಯಾಗಿದೆ. ಇಂತಹ ಬೆಳವಣಿಗೆಗಳ ಮೇಲೆ ನಿಗಾವಹಿಸಲು ಕರ್ನಾಟಕ ರಾಜ್ಯ ಸಂಶೋಧನಾ ಅನುದಾನ ಪ್ರತಿಷ್ಠಾನ (ಕೆಎಸ್‌ಆರ್‌ಜಿಎಫ್) ಸ್ಥಾಪನೆ ಮಾಡಬೇಕು ಎಂದು ವರದಿ ಶಿಫಾರಸು ಮಾಡಿದೆ.

ಹಸಿರು ವಲಯ ವಿಸ್ತರಣೆ: ರಾಜ್ಯವು ಹವಾಮಾನ ಬದಲಾವಣೆಯನ್ನು ಎದುರಿಸಲು ನವೀಕೃತ ಹಾಗೂ ವೈಜ್ಞಾನಿಕ ಆಧಾರದ ಸಮಗ್ರ ಕ್ರಿಯಾ ಯೋಜನೆಯನ್ನು ರೂಪಿಸಬೇಕು. ನಗರ ಪ್ರದೇಶಗಳಲ್ಲಿ ಹಸಿರು ವಲಯ ವಿಸ್ತರಣೆ ಮಾಡಬೇಕು. ಪ್ರವಾಹ, ಭೂಕುಸಿತ, ಬರ ಮುಂತಾದ ಪ್ರಕೃತಿ ವಿಕೋಪಗಳಿಗೆ ತಕ್ಷಣದ ಪ್ರತಿಕ್ರಿಯೆ ನೀಡುವ ವ್ಯವಸ್ಥೆಯನ್ನು ಬಲಪಡಿಸಬೇಕು. ಶಾಲಾ ಮತ್ತು ಉನ್ನತ ಶಿಕ್ಷಣ ಪಠ್ಯಕ್ರಮಗಳಲ್ಲಿ ಹವಾಮಾನ ಬದಲಾವಣೆ ಕುರಿತ ಅಧ್ಯಯನವನ್ನು ಒಳಗೊಳ್ಳಬೇಕು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆರೋಗ್ಯ ಕ್ಷೇತ್ರದಲ್ಲಿ ಈಗಾಗಲೇ ಸಾಕಷ್ಟು ಯೋಜನೆಗಳಿದ್ದು, ಅಗತ್ಯ ಅನುದಾನವನ್ನೂ ನೀಡಲಾಗಿದೆ. ಹಾಗಾಗಿ, ಹೊಸ ಯೋಜನೆ ರೂಪಿಸುವ ಬದಲು ಇರುವ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಒತ್ತು ನೀಡಬೇಕು. ಶಾಲಾ ಬಾಲಕಿಯರಿಗೆ ಶುಚಿತ್ವದ ಪ್ಯಾಡ್‌ಗಳನ್ನು ವಿತರಿಸುವ ಕಾರ್ಯವನ್ನು ಮುಂದುವರಿಸಬೇಕು ಎಂದು ವರದಿ ಹೇಳಿದೆ.

ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಅಧ್ಯಕ್ಷ ಬಿ.ಆರ್.ಪಾಟೀಲ ಅವರು ಸಿದ್ದರಾಮಯ್ಯ ಅವರಿಗೆ ವರದಿಯನ್ನು ಗುರುವಾರ ಸಲ್ಲಿಸಿದರು. ಸಾಂಖ್ಯಿಕ ಮತ್ತು ಯೋಜನಾ ಸಚಿವ ಡಿ.ಸುಧಾಕರ್ ಉಪಸ್ಥಿತರಿದ್ದರು

ಪ್ರಮುಖ ಶಿಫಾರಸುಗಳು

- ಅಂಗನವಾಡಿ, ಆಶಾ ಕಾರ್ಯಕರ್ತೆಯರ ನೌಕರಿ ಕಾಯಂ
- ಪ್ರಾಣಿ–ಮಾನವ ಸಂಘರ್ಷ ತಪ್ಪಿಸಲು ಶ್ರೀಲಂಕಾ ಮಾದರಿ ಆನೆಧಾಮ
- ಸೋಲಾರ್ ಬೇಲಿ ನಿರ್ಮಾಣಕ್ಕೆ ನೀಡುತ್ತಿರುವ ಸಬ್ಸಿಡಿ ಶೇ 90ಕ್ಕೆ ಹೆಚ್ಚಳ
- ದುಡಿಯುವ ಮಹಿಳೆಯರಿಗೆ ವಸತಿನಿಲಯಗಳ ಸ್ಥಾಪನೆ
- ಲೈಂಗಿಕ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಅಭಿವೃದ್ಧಿ ಮಂಡಳಿ
- ಬೀದಿ ವ್ಯಾಪಾರಿಗಳ ಹಿತಾಸಕ್ತಿ ರಕ್ಷಣೆಗೆ ಪ್ರತ್ಯೇಕ ನೀತಿ
- ಕೃಷಿ ಯೋಜನೆಗಳ ಒಗ್ಗೂಡಿಸುವಿಕೆ, ಸಮನ್ವಯ ಕಾರ್ಯಕ್ರಮ

ಆರ್‌ಟಿಇ: ಪಿಯುವರೆಗೆ ವಿಸ್ತರಣೆ

ಶಿಕ್ಷಣ ಹಕ್ಕು ಕಾಯ್ದೆಯನ್ನು (ಆರ್‌ಟಿಇ) ದ್ವಿತೀಯ ಪಿಯುವರೆಗೂ ವಿಸ್ತರಿಸಬೇಕು. ಪರಿಣಾಮಕಾರಿ ಅನುಷ್ಠಾನಕ್ಕೆ ಸಮಗ್ರ ಮಾರ್ಗಸೂಚಿ ಸಿದ್ಧಪಡಿಸಬೇಕು ಎಂದು ರಾಜ್ಯ ಯೋಜನಾ ಆಯೋಗ ಹೇಳಿದೆ.

ಪ್ರಸ್ತುತ ಕಾಯ್ದೆಯು 6ರಿಂದ 14 ವರ್ಷದ ಮಕ್ಕಳಿಗೆ ಅನ್ವಯಿಸುತ್ತದೆ. ಕಾಯ್ದೆಗೆ ತಿದ್ದುಪಡಿ ತಂದು 15–18 ವರ್ಷದ ಮಕ್ಕಳಿಗೂ ಅನ್ವಯಿಸಬೇಕು. 4–6 ವರ್ಷದ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಬೇಕು ಎಂದು ಶಿಫಾರಸು ಮಾಡಿದೆ.

ಭರ್ತಿಗೂ ಮೊದಲು ಮರುಪರಿಶೀಲನೆ

ವಿಶ್ವವಿದ್ಯಾಲಯಗಳು ಮತ್ತು ಸರ್ಕಾರಿ ಕಾಲೇಜುಗಳಲ್ಲಿ ಹಲವು ಬೋಧನಾ ಹುದ್ದೆಗಳು ಖಾಲಿ ಇವೆ. ಆದರೆ, ಭವಿಷ್ಯದ ಅಗತ್ಯಗಳನ್ನು ಪರಿಗಣಿಸದೆ ಇವುಗಳನ್ನು ತಕ್ಷಣ ಭರ್ತಿ ಮಾಡುವುದು ಸೂಕ್ತವಲ್ಲ ಎಂದು ವರದಿ ಹೇಳಿದೆ.

ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಯಾಂತ್ರೀಕರಣ ಹಾಗೂ ಉದ್ಯಮ ವಲಯದ ವೇಗವಾದ ಬದಲಾವಣೆಗಳನ್ನು ಗಮನದಲ್ಲಿ ಇಟ್ಟುಕೊಂಡು ಪದವಿ ಕಾರ್ಯಕ್ರಮಗಳ ಮರುಪರಿಶೀಲನೆ ಅಗತ್ಯ. ಹೊಸ ವಿಷಯಗಳ ಸೇರ್ಪಡೆ, ಕೌಶಲಾಧಾರಿತ ಮತ್ತು ಅಂತರಶಾಖಾ ಶಿಕ್ಷಣಕ್ಕೆ ಆದ್ಯತೆ ನೀಡಬೇಕಿದೆ. ಅದಕ್ಕಾಗಿ ತಜ್ಞರ ಸಮಿತಿ ರಚಿಸಿ ಆರು ತಿಂಗಳ ಒಳಗೆ ಮೌಲ್ಯಮಾಪನ ಮಾಡಬೇಕು. ನಂತರ ಹುದ್ದೆಗಳನ್ನು ಭರ್ತಿ ಮಾಡಬೇಕು. ಅಲ್ಲಿಯವರೆಗೂ ಅತಿಥಿ ಉಪನ್ಯಾಸಕರನ್ನು ಬಳಸಿಕೊಳ್ಳಬೇಕು ಎಂದು ಶಿಫಾರಸು ಮಾಡಲಾಗಿದೆ.

ಕೆಮಿಕಲ್ ಟ್ಯಾಂಕ್ ಸ್ಫೋಟ: ನೋಟಿಸ್

ನವದೆಹಲಿ: ಮಂಡ್ಯ ಬಸರಾಳು ಹೋಬಳಿ ಕಾರೇಕಟ್ಟೆ ಗ್ರಾಮದ ಸಮೀಪ ಕೀರ್ತಿ ಕೆಮಿಕಲ್ ಕಾರ್ಖಾನೆಯನ್ನು ಸ್ಥಳಾಂತರ ಮಾಡುವ ವೇಳೆ ಕೆಮಿಕಲ್ ಟ್ಯಾಂಕ್ ಸ್ಫೋಟಗೊಂಡು ಇಬ್ಬರು ಮೃತಪಟ್ಟ ಘಟನೆ ಸಂಬಂಧ ಮಾನವ ಹಕ್ಕು ಆಯೋಗವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಈ ಸಂಬಂಧ ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಿರುವ ಆಯೋಗವು, ದುರ್ಘಟನೆ ಬಗ್ಗೆ ಎರಡು ವಾರಗಳೊಳಗೆ ವಿಸ್ತೃತ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಮಂಡ್ಯ ಪೊಲೀಸ್ ವರಿಷ್ಠಾಧಿಕಾರಿಗೆ ನಿರ್ದೇಶನ ನೀಡಿದೆ.

ಅಡ್ಡಗಟ್ಟಿ ಬೆದರಿಕೆ: ಮೂವರ ಬಂಧನ

ಮುಸ್ಲಿಂ ಸ್ನೇಹಿತೆಯೊಂದಿಗೆ ಬೈಕ್‌ನಲ್ಲಿ ತೆರಳುತ್ತಿದ್ದ ಬಾಲಕ

ಚಿಕ್ಕಮಗಳೂರು: ಸ್ನೇಹಿತೆಯನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಹೋಗುತ್ತಿದ್ದ 17 ವರ್ಷದ ಬಾಲಕನನ್ನು ನಗರದ ಮಾರ್ಕೆಟ್ ರಸ್ತೆಯ ಜ್ಯೋತಿ ಸರ್ಕಲ್‌ನಲ್ಲಿ ಅಡ್ಡಗಟ್ಟಿ ನಂತರ ಮನೆಗೆ ನುಗ್ಗಿ ಹಲ್ಲೆ ಮಾಡಿದ ಆರೋಪದಲ್ಲಿ ಎಂಟು ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

'ತಮಿಳು ಕಾಲೊನಿಯ ಪರಿಶಿಷ್ಟ ಜಾತಿಗೆ ಸೇರಿದ ಬಾಲಕ, ಮುಸ್ಲಿಂ ಸಮುದಾಯದ ಸ್ನೇಹಿತೆಯನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಹೋಗುತ್ತಿದ್ದಾಗ ಮುಸ್ಲಿಂ ಯುವಕರ ಗುಂಪು ಅಡ್ಡಗಟ್ಟಿ ಜಗಳ ಮಾಡಿದೆ' ಎಂದು ಮೂಲಗಳು ತಿಳಿಸಿವೆ.

ಬಳಿಕ ದೂರು ನೀಡಿರುವ ಬಾಲಕನ ಚಿಕ್ಕಪ್ಪ ಸುಮನ್, 'ಜಗಳ ಬಿಡಿಸಿಕೊಂಡು ತಮಿಳು ಕಾಲೊನಿಯ ನಮ್ಮ ಮನೆಗೆ ಬಂದ ನಂತರ ಮುಸ್ಲಿಂ ಯುವಕರ ಗುಂಪು ಮನೆಗೆ ನುಗ್ಗಿ ನಮ್ಮ ಮೇಲೆ ಹಲ್ಲೆ ಮಾಡಿದೆ. ಕೀಳು ಜಾತಿಯ ನಿಮಗೆ ಮುಸ್ಲಿಂ ಹುಡುಗಿಯ ಸ್ನೇಹ ಬೇಕಾ ಎಂದು ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಿದ್ದಾರೆ. ರಹಿ, ನಯಾಜ್, ಫರಾಜ್, ತಮೀಮ್, ಆಜಮ್, ತಬ್ರಿಜ್, ನಹಿಲ್, ಅಹಮ್ಮದ್ ಹನೀಫ್ ಎಂಬುವರ ವಿರುದ್ಧ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಬಾಲಕನ ಮೇಲೆ ಹಲ್ಲೆ ನಡೆದಿಲ್ಲ. ಆದರೆ, ಅವರನ್ನು ಹೆದರಿಸಿದ್ದಾರೆ. ಎಂಟು ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದು, ಮೂವರನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ದಯಾಮ ತಿಳಿಸಿದರು.

ಘಾನಾ: ಹಕ್ಕಿಪಿಕ್ಕಿ ಸಮುದಾಯದ 26 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಅನುಮತಿ ಇಲ್ಲದೆ ಗಿಡಮೂಲಿಕೆ ಉತ್ಪನ್ನಗಳನ್ನು ಮಾರಾಟ ಮಾಡಿದ ಆರೋಪದ ಮೇರೆಗೆ ರಾಜ್ಯದ ಹಕ್ಕಿಪಿಕ್ಕಿ ಸಮುದಾಯಕ್ಕೆ ಸೇರಿದ 26 ಜನರನ್ನು ಆಫ್ರಿಕಾದ ಘಾನಾದಲ್ಲಿ ಬಂಧಿಸಲಾಗಿದೆ.

ಬಂಧಿತರಲ್ಲಿ 12 ಜನ ಮಹಿಳೆಯರು ಮತ್ತು 14 ಜನ ಪುರುಷರಿದ್ದಾರೆ.

ಗಿಡಮೂಲಿಕೆ ಉತ್ಪನ್ನಗಳನ್ನು ಮಾರಾಟ ಮಾಡಲು ಇವರು ಬಿಸಿನೆಸ್ ವೀಸಾದ ಮೇಲೆ ಆಫ್ರಿಕಾದ ಪುಟ್ಟ ರಾಷ್ಟ್ರ ಘಾನಾದ ಟುಮು ನಗರಕ್ಕೆ ತೆರಳಿದ್ದರು.

'ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗೆ ಸೇರಿದ 26 ಜನರಲ್ಲಿ 24 ಜನರು ಆರು ತಿಂಗಳ ಹಿಂದೆ ಹಾಗೂ ಇಬ್ಬರು ಎರಡು ತಿಂಗಳ ಹಿಂದೆ ಘಾನಾಗೆ ತೆರಳಿದ್ದರು. ಇವರನ್ನು ಎರಡು ದಿನಗಳ ಹಿಂದೆ ಬಂಧಿಸಲಾಗಿದೆ ಎಂಬುದಾಗಿ ಘಾನಾದಲ್ಲಿರುವ ಸಮುದಾಯದ ಸದಸ್ಯರೊಬ್ಬರು ತಿಳಿಸಿದ್ದಾರೆ. ಈ ಕುರಿತು ಘಾನಾದಲ್ಲಿರುವ ಭಾರತೀಯ ರಾಯಭಾರ ಕಚೇರಿಗೆ ಮಾಹಿತಿ ನೀಡಲಾಗಿದೆ' ಎಂದು ಕರ್ನಾಟಕ ಹಕ್ಕಿಪಿಕ್ಕಿ ಬುಡಕಟ್ಟು ಸಂಘಟನೆಯ ಅಧ್ಯಕ್ಷ ಆರ್. ಪುನೀತ್ ಕುಮಾರ್ ತಿಳಿಸಿದ್ದಾರೆ.

'ಘಾನಾ ಸರ್ಕಾರದ ಅನುಮತಿ ಪಡೆಯದೇ ಗಿಡಮೂಲಿಕೆಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ನಾಗರಿಕರು ಪೊಲೀಸರಿಗೆ ದೂರು ನೀಡಿದ್ದರು. ಕಾರ್ಯಪ್ರವೃತ್ತರಾದ ಪೊಲೀಸರು ಮೊದಲು ನಾಲ್ವರನ್ನು ಬಂಧಿಸಿದ್ದರು. ಬಳಿಕ ವಾಸಸ್ಥಳವನ್ನು ಪತ್ತೆ ಮಾಡಿ ಉಳಿದವರನ್ನು ಬಂಧಿಸಿದ್ದಾರೆ' ಎಂದು ಮಾಹಿತಿ ನೀಡಿದರು.

'ಸಮುದಾಯದ ಜನರು ಪ್ರತಿ ವರ್ಷ ಗಿಡಮೂಲಿಕೆ ಉತ್ಪನ್ನಗಳನ್ನು ಮಾರಾಟ ಮಾಡಲು ಆಫ್ರಿಕಾದ ವಿವಿಧ ದೇಶಗಳಿಗೆ ತೆರಳುತ್ತಾರೆ. ಈ ಉತ್ಪನ್ನಗಳು ನೈಸರ್ಗಿಕವಾಗಿರುವುದರಿಂದ ಆಫ್ರಿಕನ್ ದೇಶಗಳಲ್ಲಿ ಅನುಮತಿ ಪಡೆಯುವ ಅಗತ್ಯವಿಲ್ಲ. ಆದರೆ, ಘಾನಾದಲ್ಲಿ ನಿಯಮಗಳು ಭಿನ್ನವಾಗಿವೆ. ಈ ಬಗ್ಗೆ ಅರಿವಿರದೇ ತೊಂದರೆ ಆಗಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಕ್ಷಣ ಮಧ್ಯಪ್ರವೇಶಿಸಿ ಹಕ್ಕಿಪಿಕ್ಕಿ ಸಮುದಾಯದ ಜನರನ್ನು ಸ್ವದೇಶಕ್ಕೆ ಕರೆತರಲು ಸಹಾಯ ನೀಡಬೇಕು' ಎಂದು ಮನವಿ ಮಾಡಿದರು.

ವಿಐಟಿ ಉಪಾಧ್ಯಕ್ಷ ಶಂಕರ್ ವಿಶ್ವನಾಥನ್‌ರಿಗೆ ಗೌರವ ಡಾಕ್ಟರೇಟ್

'ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ನಿರ್ವಹಣೆ' ವಿಭಾಗದಲ್ಲಿ ವಿಐಟಿ ಉಪಾಧ್ಯಕ್ಷ ಶಂಕರ್ ವಿಶ್ವನಾಥನ್‌ರಿಗೆ ಥೈಲ್ಯಾಂಡ್ ವಿವಿಯಿಂದ ಗೌರವ ಡಾಕ್ಟರೇಟ್ ಪ್ರದಾನ

ಬೆಂಗಳೂರು : ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ(ವಿಐಟಿ) ಸಂಸ್ಥೆಯ ಉಪಾಧ್ಯಕ್ಷ ಶಂಕರ್ ವಿಶ್ವನಾಥನ್‌ರಿಗೆ ಥೈಲ್ಯಾಂಡ್‌ನ ರಾಜಮಂಗಲ ಯುನಿವರ್ಸಿಟಿ ಆಫ್ ಟೆಕ್ನಾಲಜಿ ಕೃಂಗ್‌ತೆಪ್(ಆರ್‌ಎಂಯುಟಿಕೆ) ವಿಶ್ವವಿದ್ಯಾಲಯವು 'ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ನಿರ್ವಹಣೆ' ವಿಭಾಗದಲ್ಲಿ ಗೌರವ ಡಾಕ್ಟರೇಟ್ (ಪಿಎಚ್.ಡಿ) ಪದವಿ ನೀಡಿ ಗೌರವಿಸಿದೆ.

ವಿಶ್ವವಿದ್ಯಾಲಯದ ಕೌನ್ಸಿಲ್ ಸರ್ವಾನುಮತದಿಂದ ಈ ನಿರ್ಧಾರವನ್ನು ಕೈಗೊಂಡಿದ್ದು, ಶಂಕರ್ ವಿಶ್ವನಾಥನ್ ಅವರ ವಿಶಿಷ್ಟ ನಾಯಕತ್ವ, ವೃತ್ತಿಪರ ಸಾಧನೆಗಳು ಮತ್ತು ಎಂಜಿನಿಯರಿಂಗ್ ಕ್ಷೇತ್ರಕ್ಕೆ ಅವರು ನೀಡಿದ ಗಣನೀಯ ಕೊಡುಗೆಗಳನ್ನು ಗುರುತಿಸಿ ಈ ಪ್ರತಿಷ್ಠಿತ ಪದವಿಯನ್ನು ನೀಡಲಾಗಿದೆ.

ಥೈಲ್ಯಾಂಡ್‌ನ ಪ್ರಿವಿ ಕೌನ್ಸಿಲ್ ಸದಸ್ಯ ಪಲಕಾರ್ನ್ ಸುವನ್ನರತ್ ಮತ್ತು ಆರ್‌ಎಂಯುಟಿಕೆ ಅಧ್ಯಕ್ಷ ಡಾ.ಪಿಚೈ ಜನ್ಮನಿ ಈ ಗೌರವ ಪದವಿ ಪ್ರದಾನ ಮಾಡಿದರು.

ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ(ವಿಐಟಿ) ಸಂಸ್ಥೆಯ ಉಪಾಧ್ಯಕ್ಷ ಶಂಕರ್ ವಿಶ್ವನಾಥನ್‌ರಿಗೆ ಥೈಲ್ಯಾಂಡ್(ಆರ್‌ಎಂಯುಟಿಕೆ) ವಿವಿ ಗೌರವ ಡಾಕ್ಟರೇಟ್ (ಪಿಎಚ್‌ಡಿ) ಪದವಿ ನೀಡಿ ಗೌರವಿಸಿದೆ.

ಈ ಪದವಿ ಸಂಸ್ಥೆಯ ಶ್ರೇಷ್ಠ ಸೇವೆ ಮತ್ತು ವೃತ್ತಿಪರ ನೈಪುಣ್ಯತೆಗಾಗಿ ನೀಡುವ ಅತ್ಯುನ್ನತ ಶೈಕ್ಷಣಿಕ ಮಾನ್ಯತೆಯಾಗಿದೆ.

ಗೌರವ ಸ್ವೀಕರಿಸಿ ಮಾತನಾಡಿದ ಡಾ.ಶಂಕರ್ ಅವರು, ಭಾರತ ಮತ್ತು ಥೈಲ್ಯಾಂಡ್ ನಡುವಿನ ಸಾಂಸ್ಕೃತಿಕ ಮತ್ತು ಜ್ಞಾನ ವ್ಯವಸ್ಥೆಯ ಸಾಮ್ಯತೆಯನ್ನು ಸ್ಮರಿಸಿದರು. ಅಲ್ಲದೆ, ಎರಡೂ ದೇಶಗಳ ನಡುವೆ ಶೈಕ್ಷಣಿಕ ಸಹಯೋಗವು ಇನ್ನಷ್ಟು ಹೆಚ್ಚಾಗಬೇಕು. ಆ ಮೂಲಕ ವಿದ್ಯಾರ್ಥಿಗಳ ಔದ್ಯೋಗಿಕ ಬದುಕಿಗೆ ನೆರವಾಗುವ ನಿಟ್ಟಿನಲ್ಲಿ ಅನೇಕ ಪ್ರಯತ್ನಗಳು ನಡೆಯಬೇಕಿದೆ. ವಿಶೇಷವಾಗಿ ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಈ ಸಹಯೋಗ ನೆರವಾಗಲಿದೆ. ವಿಶ್ವದ ಪ್ರಮುಖ ಕಂಪನಿಗಳಿಗೆ ತಂತ್ರಜ್ಞಾನದ ಹೊಸ ಆವಿಷ್ಕಾರಗಳಿಗೆ ವಿದ್ಯಾರ್ಥಿಗಳು ತೆರೆದುಕೊಳ್ಳಲು ಎರಡೂ ದೇಶಗಳ ಪರಸ್ಪರ ಸಹಕಾರ ಅಗತ್ಯ ಎಂದು ಅವರು ಆಶಿಸಿದರು.

ಈ ಸಮಾರಂಭದಲ್ಲಿ ವಿಐಟಿ ಚಾನ್ಸಲರ್ ಡಾ.ಜಿ. ವಿಶ್ವನಾಥನ್, ರಮಣಿ ಬಾಲಸುಂದರಂ, ಸಹಾಯಕ ಉಪಾಧ್ಯಕ್ಷೆ ಕಾದಂಬರಿ ಎಸ್.ವಿಶ್ವನಾಥನ್ ಮತ್ತು ಡಾ.ಶ್ರವಣ್ ಕೃಷ್ಣ ಉಪಸ್ಥಿತರಿದ್ದರು.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

'ಗುತ್ತಿಗೆದಾರರ ಬಾಕಿ ಬಿಲ್ ನೀಡದಿದ್ದರೆ ಕಾಮಗಾರಿ ಸ್ಥಗಿತ'

ಬೆಳಗಾವಿ: 'ರಾಜ್ಯ ಸರ್ಕಾರ ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರ ಬಾಕಿ ಉಳಿದಿರುವ ₹37 ಸಾವಿರ ಕೋಟಿ ಬಿಲ್ ಅನ್ನು ತಕ್ಷಣ ಪಾವತಿಸದಿದ್ದರೆ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗುವುದು. ಏಪ್ರಿಲ್ ನಂತರ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕುಟುಂಬ ಸಮೇತ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು' ಎಂದು ರಾಜ್ಯ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಎಚ್ಚರಿಕೆ ನೀಡಿದರು.

'ರಾಜ್ಯದಲ್ಲಿ ಮೂರು ವರ್ಷಗಳಿಂದ ಯಾವುದೇ ಕಾಮಗಾರಿಯ ಬಿಲ್ ನೀಡಿಲ್ಲ. ಬೆಳಗಾವಿ ಜಿಲ್ಲೆಯಲ್ಲೇ ₹3,458 ಕೋಟಿ ಬಾಕಿಯಿದೆ. ನಾವು ನಮ್ಮ ಆಸ್ತಿಗಳನ್ನು ಅಡವಿಟ್ಟು ಕಾಮಗಾರಿಗಳನ್ನು ಮುಗಿಸಿದ್ದೇವೆ. ಮಾಡಿದ ಕೆಲಸಕ್ಕೆ ಕೂಲಿ ಕೇಳುತ್ತಿದ್ದೇವೆ' ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ಹಿಂದಿನ ಸರ್ಕಾರದಂತೆ ಪ್ರಸಕ್ತ ಕಾಂಗ್ರೆಸ್ ಸರ್ಕಾರದಲ್ಲೂ ಬಿಲ್ ಪಾವತಿಗೆ ಕಮಿಷನ್ ನಿಗದಿ ಮಾಡಲಾಗಿದೆ. ವಿಳಂಬಕ್ಕೆ ಇದೂ ಕೂಡ ಕಾರಣ
ಆರ್.ಮಂಜುನಾಥ್, ಅಧ್ಯಕ್ಷ, ರಾಜ್ಯ ಕಾರ್ಯನಿರತ ಗುತ್ತಿಗೆದಾರರ ಸಂಘ

'ಬಾಕಿ ಬಿಲ್ ನೀಡುವಂತೆ ಈಗಾಗಲೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಲೋಕೋಪ ಯೋಗಿ ಸಚಿವ ಸತೀಶ ಜಾರಕಿಹೊಳಿ ಅವರಿಗೆ ಮನವರಿಕೆ ಮಾಡಿದ್ದೇವೆ. ಆದರೆ, ಈವರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ಸಭೆಯನ್ನೂ ಕರೆಯುವ ಸೌಜನ್ಯ ತೋರಿಸಿಲ್ಲ' ಎಂದು ದೂರಿದರು.

ಖಾಸಗಿತನದ ವಿಡಿಯೊ ಸೆರೆ: ಆರೋಪಿಗಳು ಪೊಲೀಸ್ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಮಹಿಳಾ ಅಧಿಕಾರಿಯೊಬ್ಬರ ಖಾಸಗಿತನದ ವಿಡಿಯೊಗಳನ್ನು ಸೆರೆಹಿಡಿದು ₹50 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ ಮೂವರು ಯೂಟ್ಯೂಬರ್‌ಗಳನ್ನು ಹೆಚ್ಚಿನ ತನಿಖೆಗಾಗಿ ಪೊಲೀಸರು ಗುರುವಾರದಿಂದ 3 ದಿನ ಕಸ್ಟಡಿಗೆ ಪಡೆದರು.

ಗೋಕಾಕನ ಅಬ್ದುಲ್ ರಷೀದ್ ನಜರ್ ಅಹಮದ್ ಮಕಾನದಾರ (51), ಸಮೀರ್ ನಿಸಾರ್ ಅಹಮದ್ ಶೇಖ್ (32) ಮತ್ತು ಗೋಕಾಕ ತಾಲ್ಲೂಕು ಘಟಪ್ರಭಾದ ಮೊಹಮ್ಮದ್ ದಿಲಾವರ ನಜೀರ್‌ಅಹಮದ್ ಬಾಳೇಕುಂದ್ರಿ (45) ಅವರನ್ನು ಮಾಳಮಾರುತಿ ಠಾಣೆ ಪೊಲೀಸರು ಇಲ್ಲಿನ 2ನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

‘ಸಿನಿಮಾನೇ ಮುಂದಿನ ಹಾದಿ’

‘ಗಿಣಿರಾಮ’, ‘ಅನುರೂಪ’, ‘ನಿನಗಾಗಿ’ ಧಾರಾವಾಹಿಗಳ ಮೂಲಕ ಖ್ಯಾತಿ ಪಡೆದ ನಟ ರಿತ್ವಿಕ್ ಮಠದ್ ‘ಮಾರ್ನಮಿ’ ಸಿನಿಮಾ ಮೂಲಕ ನಾಯಕನಾಗಿ ಮತ್ತೆ ಬೆಳ್ಳಿಪರದೆಗೆ ಬಂದಿದ್ದಾರೆ. ಸಿನಿಮಾ ಇಂದು(ಫೆ.20) ತೆರೆಕಾಣುತ್ತಿದ್ದು, ಈ ಸಂದರ್ಭದಲ್ಲಿ ಸಿನಿಮಾ ರಂಜನೆ ಜೊತೆ ಮಾತಿಗೆ ಸಿಕ್ಕಾಗ...

• ಅಭಿಲಾಷ್ ಪಿ.ಎಸ್.

• ನಟನೆಯತ್ತ ಆಕರ್ಷಣೆ ಹುಟ್ಟಿದ್ದು ಹೇಗೆ?

ನಾನು ದಾವಣಗೆರೆ ಸಮೀಪದ ದೊಡ್ಡಬ್ಬಿಗೆರೆ ಎಂಬ ಪುಟ್ಟಹಳ್ಳಿಯವನು. ಬೆಳೆದಿದ್ದು ಬೆಳಗಾವಿಯ ಹಿಡಕಲ್‌ನಲ್ಲಿ. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಅದೇ ಊರಲ್ಲಿ ಪೂರ್ಣಗೊಳಿಸಿ, ಡಿಗ್ರಿಗೆ ಬೆಳಗಾವಿಗೆ ಬಂದೆ. ಬಳಿಕ ಕೆಲಸ ಮಾಡುತ್ತೇನೆ ಎಂದು ಸುಳ್ಳು ಹೇಳಿ ಬೆಂಗಳೂರಿಗೆ ಬಂದೆ. ನಟನಾಗಬೇಕು ಎಂಬುದು ನನ್ನ ಉದ್ದೇಶವಾಗಿತ್ತು. ಜೊತೆಗೆ ಬೆಂಗಳೂರು ನಗರ ನನ್ನನ್ನು ಸೆಳೆದಿತ್ತು. ಸುಮಾರು 16 ವರ್ಷಗಳ ಹಿಂದೆ ಇಲ್ಲಿಗೆ ಬಂದಿಳಿದು ಗಾಂಧಿ ನಗರದ ಮೂಲಕ ಅಕ್ಕನ ಮನೆಗೆ ತೆರಳುತ್ತಿದ್ದಾಗ ಅಲ್ಲಿ ನಿಲ್ಲಿಸಿರುವ ಹೀರೊಗಳ ಕಟೌಟ್‌ಗಳು ನನ್ನನ್ನು ಮತ್ತಷ್ಟು ಹುರಿದುಂಬಿಸಿದವು.

ಅಂದಹಾಗೆ ನನಗೆ ನಟನೆಯ ಹುಚ್ಚು ಹಿಡಿಸಿದ್ದು ಪ್ರಾಥಮಿಕ ಶಾಲೆಯಲ್ಲಿ ನೋಡಿದ್ದ ‘ನಿಸರ್ಗ ದೇವತೆ’ ಎಂಬ ನಾಟಕ. ಬಳಿಕ ಪಿಯುಸಿಯಲ್ಲಿದ್ದಾಗ ಮೊದಲ ಬಾರಿ ನಟ ಸುದೀಪ್ ಅವರನ್ನು ಕಣ್ಣಾರೆ ನೋಡಿದ್ದೆ. ಸೂಪರ್‌ಸ್ಟಾರ್ ಒಬ್ಬರನ್ನು ಅಷ್ಟು ಹತ್ತಿರದಿಂದ ನೋಡಿದ್ದು ಅದೇ ಮೊದಲು. ಇದಾಗಿ ಒಂದು ವಾರ ಕನಸಲ್ಲಿ ಅವರೇ ಬರುತ್ತಿದ್ದರು. ನಾನು ಇವರಂತೇ ಆಗಬೇಕು ಎಂಬುದು ದೃಢವಾಗಿ ಮನಸ್ಸಲ್ಲಿ ಉಳಿಯಿತು.

• ಧಾರಾವಾಹಿಯ ಮೆಟ್ಟಿಲುಗಳಲ್ಲಿ ಕಲಿತದ್ದು ಏನು?

ಕ್ಯಾಮೆರಾ ಮುಂದೆ ಕಾಣಿಸಿಕೊಳ್ಳಬೇಕು ಎನ್ನುವ ಆಸೆ ಎಲ್ಲರಿಗೂ ಇರುತ್ತದೆ. ಸಿನಿಮಾದಲ್ಲಿ ವರ್ಷಕ್ಕೆ ಗರಿಷ್ಠ 150 ದಿನವಷ್ಟೇ ಕ್ಯಾಮೆರಾ ಮುಂದೆ ಇರಲು ಸಾಧ್ಯ. ಧಾರಾವಾಹಿಯಲ್ಲಿ ಪ್ರತಿದಿನ ಕ್ಯಾಮೆರಾ ಮುಂದೆ ಕಾಣಿಸಿಕೊಳ್ಳುವುದೇ ನಟನಿಗಿರುವ ಪ್ಲಸ್ ಪಾಯಿಂಟ್. ಈ ಹೆಜ್ಜೆಗಳಲ್ಲಿ ಕಲಿಕೆ ಇದ್ದೇ ಇರುತ್ತದೆ. ನಿತ್ಯ ನಟನೆ ಮಾಡುತ್ತಾ ನೈಪುಣ್ಯತೆ ನಮಗೆ ಅರಿವಿಲ್ಲದಂತೇ ಬರುತ್ತದೆ. ಅದರಲ್ಲೂ ಮುಖ್ಯವಾಗಿ ‘ಗಿಣಿರಾಮ’ ನನ್ನ ಕನಸುಗಳನ್ನು ಈಡೇರಿಸಿದ ಧಾರಾವಾಹಿ. ಆ ರೀತಿಯ ಪಾತ್ರ ಮಾಡಬೇಕು ಎನ್ನುವ ಕನಸು ಇತ್ತು. ನನ್ನೊಳಗಿನ ನಟನೆಯ ಸಾಮರ್ಥ್ಯವನ್ನು ಪ್ರದರ್ಶಿಸಲು, ನನ್ನನ್ನು ಪ್ರಯೋಗಕ್ಕೆ ಒಡ್ಡಿಕೊಳ್ಳಲು ಇದು ವೇದಿಕೆ ನೀಡಿತು.

• ಕರಾವಳಿ ಭಾಗದ ಕಥೆಗೆ ಹೊಂದಿಕೊಂಡಿದ್ದು ಹೇಗೆ?

ಇದಕ್ಕಾಗಿ ಹಲವು ವರ್ಕ್‌ಶಾಪ್‌ಗಳನ್ನು ಮಾಡಿದ್ದರು. ಕರ್ನಾಟಕದ ಯಾವುದೇ ಭಾಗದಲ್ಲಿ ಸಿನಿಮಾ ಮಾಡಿದರೂ ಅದು ಕನ್ನಡವೇ. ಕನ್ನಡ ಉಚ್ಚಾರ, ಶೈಲಿಯಲ್ಲಿ ಬದಲಾವಣೆ ಇರಬಹುದು. ಹಾಗಾಗಿ ಕಲಿಯುವುದಕ್ಕೆ ಕಷ್ಟವೇನಿಲ್ಲ. ನನಗೆ ಮೊದಲಿನಿಂದಲೂ ಕರಾವಳಿ ಕನ್ನಡ ಎಂದರೆ ಇಷ್ಟ. ಬಹಳ ಗ್ರಾಂಥಿಕವಾದ, ಸ್ಪಷ್ಟವಾದ ಕನ್ನಡ ಅಲ್ಲಿಯದ್ದು. ಈ ಕಥೆಯ ಸ್ಕ್ರಿಪ್ಟ್ ಬಂದಾಗ ರಂಗಭೂಮಿಯ ವಿದು ಎನ್ನುವವರು ನನಗೆ ಹಾಗೂ ಚೈತ್ರಾ ಅವರಿಗೆ ವರ್ಕ್‌ಶಾಪ್ ಮಾಡಿದರು. ನಾನು ಅಲ್ಲಿನ ಜನರ ಜೀವನಶೈಲಿ, ನಡವಳಿಕೆಯನ್ನು ತಿಳಿದುಕೊಳ್ಳಲು ಸ್ಥಳೀಯ ಬಸ್‌ಗಳಲ್ಲಿ ಓಡಾಡಿದೆ. ಸುಮಾರು ಒಂದು ವರ್ಷ ನಾನು ಕರಾವಳಿಯಲ್ಲಿ ಕಳೆದೆ. ತಿಂಗಳ ಮೊದಲಾರ್ಧ ಧಾರಾವಾಹಿ ಮಾಡುತ್ತಾ, ದ್ವಿತೀಯಾರ್ಧದಲ್ಲಿ ಸಿನಿಮಾ ಮಾಡುತ್ತಿದ್ದೆ.

ಚೈತ್ರಾ ಅವರು ಈಗಾಗಲೇ ದೊಡ್ಡ ಸಿನಿಮಾಗಳಲ್ಲಿ ನಟಿಸಿದ್ದಾರೆ. ತಮಿಳು ಸಿನಿಮಾಗಳಲ್ಲೂ ನಟಿಸಿದ್ದಾರೆ. ತಂಡದ ಜೊತೆ ಬೆರೆಯುವ, ಕಲ್ಲನ್ನೂ ಮಾತನಾಡಿಸುವ ಸಾಮರ್ಥ್ಯವುಳ್ಳ ಹುಡುಗಿ ಅವರು.

• ಸಿನಿಮಾದ ಕಥಾವಸ್ತು ಮತ್ತು ಪಾತ್ರದ ಬಗ್ಗೆ...

ನಾನು ‘ಚೇತು’ ಎನ್ನುವ ಪಾತ್ರ ಮಾಡಿದ್ದೇನೆ. ಮಂಗಳೂರಿನಲ್ಲಿರುವ ಹುಲಿವೇಷದ ಗುಂಪಿನಲ್ಲಿ ಇರುವ ಓರ್ವ ಸರಳ ವ್ಯಕ್ತಿತ್ವದ ಹುಡುಗ. ತನ್ನದೊಂದು ಕುಟುಂಬ ಕಟ್ಟಿಕೊಳ್ಳಬೇಕು ಎಂಬ ಆಸೆ ಇಟ್ಟುಕೊಂಡು ಜೀವನ ನಡೆಸುವಾತ. ಹೆಚ್ಚಿನ ಕನಸುಗಳೇನು ಈತನಿಗಿಲ್ಲ. ಈ ಹುಡುಕಾಟದಲ್ಲಿ ಒಬ್ಬಳು ಸಿಗುತ್ತಾಳೆ. ಬಳಿಕ ಏನೇನಾಗುತ್ತದೆ ಎನ್ನುವುದೇ ಕಥೆ. ಮುಖ್ಯವಾಗಿ ಹುಲಿವೇಷ ಎನ್ನುವುದು ಕಥೆಯ ಜೊತೆಗೇ ಸಾಗುತ್ತದೆ. ಹುಲಿವೇಷ ಎನ್ನುವುದನ್ನು ಮೆರವಣಿಗೆ, ಕಾರ್ಯಕ್ರಮಕ್ಕೆ ಅಂದುಕೊಂಡಿದ್ದಾರೆ. ಆದರೆ ಹುಲಿವೇಷ ಹಾಕುವುದಕ್ಕೆ ಒಂದು ಹಿನ್ನೆಲೆ ಇದೆ. ಹರಕೆಯಾಗಿ ವೇಷ ಹಾಕುತ್ತಾರೆ. ಇದನ್ನು ಯಾವ ಸಿನಿಮಾಗಳಲ್ಲೂ ತೋರಿಸಿಲ್ಲ. ಸಿನಿಮಾದಲ್ಲಿ 90ರ ದಶಕದಿಂದ ಹಿಡಿದು ಮೂರು ದಶಕಗಳ ‘ಮಾರ್ನಮಿ’ ಎಂದರೆ ದಸರಾ ತೋರಿಸುತ್ತೇವೆ. ಈ ಕಾಲಘಟ್ಟದಲ್ಲಿ ಕಥೆ ನಡೆಯುತ್ತದೆ ಹಾಗೂ ನನ್ನ ಪಾತ್ರಕ್ಕೂ ಮೂರು ಶೇಡ್ಸ್ ಇವೆ.

• ಧಾರಾವಾಹಿ–ಸಿನಿಮಾ ನಡುವೆ ನಿಮ್ಮ ಆಯ್ಕೆ?

ಇಷ್ಟು ವರ್ಷ ನಾನೂ ಎರಡೂ ದೋಣಿಯಲ್ಲಿ ಕಾಲಿಟ್ಟುಕೊಂಡು ಬಂದೆ. ಮೂರು ಧಾರಾವಾಹಿಗಳನ್ನು ಮಾಡಿದ್ದೇನೆ. ಮೂರೂ ಒಳ್ಳೆಯ ರೇಟಿಂಗ್ಸ್ ತಂದುಕೊಟ್ಟಿವೆ. ಜನರನ್ನು ಕಿರುತೆರೆಯಲ್ಲಿ ರಂಜಿಸಿದ್ದೇನೆ. ಇದೀಗ ಹಿರಿಪರದೆಯಲ್ಲಿ ಹೆಜ್ಜೆಗಳನ್ನು ಮುಂದುವರಿಸುವ ಸಮಯ. ಪ್ರತಿಯೊಬ್ಬರ ಜೀವನದಲ್ಲೂ ಒಂದು ತಿರುವು ಇರುತ್ತದೆ. ನನಗೆ ಅದು ಕಾಣುತ್ತಿದೆ. ಸಿನಿಮಾದಲ್ಲೇ ಮುಂದುವರಿಯುವ ನಿರ್ಧಾರ ಮಾಡಿದ್ದೇನೆ. ಧಾರಾವಾಹಿಗಳ ಅವಕಾಶಗಳು ಬಂದಿವೆ. ಆದರೆ ಒಪ್ಪಿಕೊಂಡಿಲ್ಲ. ಎರಡು ಸಿನಿಮಾ ಕಥೆಗಳನ್ನು ಕೇಳಿದೆ. ಆದರೆ ಪಾತ್ರಕ್ಕೆ ನಾನು ಸೂಕ್ತ ಎಂದೆನಿಸದೇ ಇದ್ದ ಕಾರಣ ಒಪ್ಪಿಕೊಂಡಿಲ್ಲ. ❖

• ಸಿನಿಮಾ ಪದೇ ಪದೇ ಮುಂದೂಡಿಕೆಯಾಗಿದ್ದು ಪರಿಣಾಮ ಬೀರಲಿದೆಯೇ?

ಟ್ರೇಲರ್ ಬಿಡುಗಡೆ ಮಾಡಿದ್ದರೂ ನಮ್ಮ ಸಿನಿಮಾದ ಬಗ್ಗೆ ಆಗ ಹೆಚ್ಚಿನ ಜನರಿಗೆ ತಿಳಿದೇ ಇರಲಿಲ್ಲ. ಈ ಕಾರಣಕ್ಕಾಗಿಯೇ ಮುಂದೂಡಿದ್ದೆವು. ಒಳ್ಳೆಯ ಕಾಂಟೆಂಟ್ ಇರುವ ಸಿನಿಮಾವನ್ನು ಜನರಿಗೆ ತಲುಪಿಸುವುದು ಸದ್ಯದ ಸ್ಥಿತಿಯಲ್ಲಿ ಬಹುಮುಖ್ಯ. ಆಗ ಜನ ಖಂಡಿತವಾಗಿಯೂ ಬರುತ್ತಾರೆ. ಸಿನಿಮಾದ ಪರಿಚಯ ಮಾಡಿಸದೇ ಸಿನಿಮಾ ಸೋತರೆ, ಬಳಿಕ ಜನರಿಗೆ ಬೈಯುವುದೂ ಸರಿಯಲ್ಲ. ನಮ್ಮ ಸಿನಿಮಾದ ಕಥೆಗೆ ಗೆಲ್ಲುವ ಸಾಮರ್ಥ್ಯವಿದೆ. ಹೀಗಾಗಿ ಜನರಿಗೆ ಪರಿಚಯ ಮಾಡಿಸಿ ನಂತರ ಬರುತ್ತಿದ್ದೇವೆ.

ಅಯಾನ ಹೊಸ ಯಾನ!

• ಎಪಿಎಸ್

ನಟಿ ಅಯಾನ ‘ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ’ ಸಿನಿಮಾ ಮೂಲಕ ಚಂದನವನದ ಪಯಣ ಆರಂಭಿಸಿದವರು. ಬಳಿಕ ನಟ ಪೃಥ್ವಿ ಅಂಬಾರ್ ನಟನೆಯ ‘ದೂರದರ್ಶನ’ದಲ್ಲಿ ಹಳ್ಳಿ ಹುಡುಗಿಯಾಗಿ ಮಿಂಚಿ, ನಂತರದಲ್ಲಿ ಸತ್ಯಪ್ರಕಾಶ್ ನಿರ್ದೇಶನದ ‘ಎಕ್ಸ್ ಆ್ಯಂಡ್ ವೈ’ನಲ್ಲಿ ಬಣ್ಣಹಚ್ಚಿದ್ದರು. ಇದೀಗ ವಿಜಯ್ ನಾಗೇಂದ್ರ ನಿರ್ದೇಶನದ ಸಿನಿಮಾ ‘ಆಲ್ಫಾ’ದಲ್ಲಿ ಪೊಲೀಸ್ ಅಧಿಕಾರಿಯಾಗಿದ್ದಾರೆ. ಈ ಸಿನಿಮಾ ಇಂದು(ಫೆ.20) ತೆರೆಕಾಣುತ್ತಿದೆ.

ಸಿನಿಮಾ ಪಯಣದ ಕುರಿತು ಮಾತಿಗಿಳಿದ ಅಯಾನ, ‘ಭರತನಾಟ್ಯ, ರಂಗಭೂಮಿ ಹಿನ್ನೆಲೆಯಿಂದ ಬಂದ ನಾನು ಸಾವಕಾಶವಾಗಿ ಈ ಸಿನಿಮಾ ಲೋಕದಲ್ಲಿ ಹೆಜ್ಜೆ ಇಡುತ್ತಿದ್ದೇನೆ. ನನ್ನ ಮೊದಲ ಕಮರ್ಷಿಯಲ್ ಸಿನಿಮಾ ‘ದೂರದರ್ಶನ’. ನಾನು ಇಲ್ಲಿಯವರೆಗೂ ನಟಿಸಿದ ಸಿನಿಮಾಗಳಲ್ಲಿ ಸರಳ, ಮುಗ್ಧ ಪಾತ್ರಗಳಿದ್ದವು. ನನಗೆ ಬರುತ್ತಿದ್ದ ಕಥೆಗಳಲ್ಲೂ ಇದೇ ಮಾದರಿಯ ಪಾತ್ರಗಳಿದ್ದವು. ಆದರೆ ‘ಆಲ್ಫಾ’ದಲ್ಲಿ ಹೊಸ ಪ್ರಯೋಗ ಮಾಡಿದ್ದೇನೆ. ಇಲ್ಲಿ ನಾನು ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದೇನೆ. ‘ದೂರದರ್ಶನ’ವನ್ನು ನೋಡಿ ವಿಜಯ್ ಅವರು ನನಗೆ ಈ ಪಾತ್ರಕ್ಕೆ ಆಫರ್ ನೀಡಿದ್ದರು. ಸಿನಿಮಾದಲ್ಲಿ ಇಬ್ಬರು ನಾಯಕಿಯರಿದ್ದು, ಎರಡೂ ಪಾತ್ರಗಳಲ್ಲಿ ಆಯ್ಕೆ ನೀಡಿದ್ದರು. ಈಗಾಗಲೇ ನಾನು ರೊಮ್ಯಾಂಟಿಕ್ ಕಥೆಗಳಲ್ಲಿ ನಟಿಸಿರುವ ಕಾರಣ ‘ಪೊಲೀಸ್ ಅಧಿಕಾರಿ’ ಪಾತ್ರವನ್ನು ಸವಾಲಾಗಿ ಸ್ವೀಕರಿಸಿದೆ. ಇಡೀ ಸಿನಿಮಾದಲ್ಲಿ ನನ್ನ ಪಾತ್ರದ ಬರವಣಿಗೆ, ಅದನ್ನು ಪ್ರಸ್ತುತಪಡಿಸಿರುವ ರೀತಿ ಚೆನ್ನಾಗಿದೆ. ‘ಅನುರಾಧ’ ಎನ್ನುವುದು ನನ್ನ ಪಾತ್ರದ ಹೆಸರು. ಸಿನಿಮಾದಲ್ಲಿ ನಾಯಕ ಹಾಗೂ ಆತನ ತಂದೆಯ ನಡುವಿನ ಬಾಂಧವ್ಯದ ಕಥೆ ಮುಖ್ಯವಾಗಿದ್ದು, ಇದರಲ್ಲಿ ನಾಯಕನಿಗೆ ಬೆಂಬಲವಾಗಿ ನಿಲ್ಲುವ ಪಾತ್ರ ನನ್ನದು’ ಎಂದರು.

‘ಸಿನಿಮಾದಲ್ಲಿ ನನ್ನ ಪಾತ್ರ ಕೊನೆಯವರೆಗೂ ಸಾಗುತ್ತದೆ. ಆ್ಯಕ್ಷನ್ ಡ್ರಾಮಾ ಸಿನಿಮಾ ಇದಾಗಿದ್ದು, ಒಂದು ಆ್ಯಕ್ಷನ್ ಸ್ವೀಕೆನ್ಸ್ ಕೂಡಾ ಮಾಡಿದ್ದೇನೆ. ಇದು ಹೊಸ ಅನುಭವ. ಜೊತೆಗೆ ಮಹಂತೇಶ್ ಅವರ ಜೊತೆಗಿನ ನನ್ನ ನಟನೆಯ ದೃಶ್ಯಗಳಲ್ಲಿ ಹಾಸ್ಯ ಸನ್ನಿವೇಶಗಳೂ ಇವೆ. ಇದು ಚೆನ್ನಾಗಿ ಮೂಡಿಬಂದಿದೆ’ ಎನ್ನುತ್ತಾರೆ ಅಯಾನ.

ತೆಲುಗಿನಲ್ಲಿ ಅಯಾನ

‘ಸದ್ಯ ಕನ್ನಡದಲ್ಲಿ ಎರಡು ಕಥೆಗಳ ಮಾತುಕತೆ ನಡೆಯುತ್ತಿದೆ. ಒಂದು ತೆಲುಗು ಪ್ರಾಜೆಕ್ಟ್ ಪೂರ್ಣಗೊಂಡಿದೆ. ಈ ಮೂಲಕ ನಾನು ಟಾಲಿವುಡ್‌ನಲ್ಲಿ ಮೊದಲ ಹೆಜ್ಜೆ ಇಡುತ್ತಿದ್ದೇನೆ. ಇದರ ಪೋಸ್ಟ್ ಪ್ರೊಡಕ್ಷನ್ ಕೂಡಾ ಮುಗಿದಿದ್ದು, ಇದು ಇನ್ನೊಂದೆರಡು ತಿಂಗಳಲ್ಲಿ ಬಿಡುಗಡೆಯಾಗಬಹುದು. ಸಿನಿಮಾವನ್ನು ಖ್ಯಾತ ನಿರ್ಮಾಣ ಸಂಸ್ಥೆ ಪೀಪಲ್ ಮೀಡಿಯಾ ಫ್ಯಾಕ್ಟರಿ ನಿರ್ಮಾಣ ಮಾಡಿದೆ. ಉಳಿದ ಮಾಹಿತಿಗಳನ್ನು ನಿರ್ಮಾಣ ಸಂಸ್ಥೆಯೇ ಶೀಘ್ರದಲ್ಲಿ ಘೋಷಿಸಲಿದೆ’ ಎಂದರು ಅಯಾನ. ❖

ಎಂಟು ಸಿನಿಮಾಗಳು ತೆರೆಗೆ

ಸರಳ ಸುಬ್ಬರಾವ್
ಮಿಶಾ ನಾರಂಗ್ ಅಜೇಯ್ ರಾವ್

ಈ ಫೆಬ್ರುವರಿಯಲ್ಲಿ 28 ದಿನಗಳಷ್ಟೇ ಇದ್ದು ಕಳೆದ ಎರಡು ಶುಕ್ರವಾರಗಳಲ್ಲಿ ಹದಿನೆಂಟು ಸಿನಿಮಾಗಳು ರಿಲೀಸ್ ಆಗಿವೆ. ಇಂದು(ಫೆ.20) ಎಂಟು ಸಿನಿಮಾಗಳು ಇದಕ್ಕೆ ಸೇರ್ಪಡೆಯಾಗುತ್ತಿವೆ.

ಸರಳ ಸುಬ್ಬರಾವ್

70ರ ದಶಕದ ಕಾಲಘಟ್ಟದ ಕೌಟುಂಬಿಕ ಕಥಾಹಂದರ ಹೊಂದಿರುವ ಸಿನಿಮಾ ಇದಾಗಿದ್ದು, ತ್ರಿವೇಣಿ ಅವರ ಕಾದಂಬರಿ ಆಧರಿಸಿದೆ. ರಿಯಾನ್ ಕ್ರಿಯೇಷನ್ಸ್ ಲಾಂಛನದಲ್ಲಿ ಲೋಹಿತ್ ನಂಜುಂಡಯ್ಯ ನಿರ್ಮಿಸಿರುವ, ಮಂಜು ಸ್ವರಾಜ್ ನಿರ್ದೇಶನದ ಈ ಚಿತ್ರದಲ್ಲಿ ಅಜೇಯ್ ರಾವ್ ಹಾಗೂ ಮಿಶಾ ನಾರಂಗ್ ಜೋಡಿಯಾಗಿ ನಟಿಸಿದ್ದಾರೆ. ರಂಗಾಯಣ ರಘು, ಚಿತ್ಕಲಾ ಬಿರಾದಾರ್, ವಿಜಯ್ ಚೆಂಡೂರ್, ರಘು ರಾಮನಕೊಪ್ಪ ಮುಂತಾದವರು ತಾರಾಬಳಗದಲ್ಲಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನೀಡಿರುವ ಈ ಚಿತ್ರಕ್ಕೆ ಪ್ರದೀಪ್ ಪದ್ಮಕುಮಾರ್ ಛಾಯಾಚಿತ್ರಗ್ರಹಣ, ಬಸವರಾಜ ಅರಸ್ ಸಂಕಲನ, ಅಮರ್ ಕಲಾ ನಿರ್ದೇಶನ ಹಾಗೂ ಮದನ್-ಹರಿಣಿ ನೃತ್ಯ ನಿರ್ದೇಶನವಿದೆ.

ರಿಶಿತ್ ಶೆಟ್ಟಿ ನಿರ್ದೇಶನದ, ರಿತ್ವಿಕ್ ಮಠದ್ ಹಾಗೂ ಚೈತ್ರಾ ಜೆ.ಆಚಾರ್ ಮುಖ್ಯಭೂಮಿಕೆಯಲ್ಲಿರುವ **‘ಮಾರ್ನಮಿ’**, ದೇವಿಪ್ರಸಾದ್ ಶೆಟ್ಟಿ ನಿರ್ದೇಶನದ, ವಿಜಯ ರಾಘವೇಂದ್ರ ನಟಿಸಿರುವ **‘ಸೆಕೆಂಡ್ ಕೇಸ್ ಆಫ್ ಸೀತಾರಾಮ್’**, ದಿನೇಶ್ ಕುಮಾರ್ ನಿರ್ಮಾಣ ಮಾಡಿ ನಟಿಸಿ, ನಿರ್ದೇಶಿಸಿರುವ **‘ಸೂರಿ ಅಣ್ಣ’**, **‘ಫೆಬ್ರವರಿ 30’**, **‘ದೊಡ್ಡಣ್ಣ ಪುಟ್ಟಣ್ಣ’** ಹಾಗೂ **‘ಮಿಕ್ಸಿಂಗ್ ಪ್ರೀತಿ’** ಸಿನಿಮಾಗಳೂ ಇಂದು ಬಿಡುಗಡೆಯಾಗಿವೆ. ❖

‘ಆಲ್ಫಾ–ಮೆನ್ ಲವ್ ವೆಂಜೆಂನ್ಸ್’

ಗೋಪಿಕಾ ಸುರೇಶ್, ಹೇಮಂತ್ ಕುಮಾರ್

‘ಗೀತಾ’, ‘ಗುರುದೇವ ಹೊಯ್ಸಳ’ ಚಿತ್ರಗಳನ್ನು ನಿರ್ದೇಶಿಸಿರುವ ವಿಜಯ್ ನಾಗೇಂದ್ರ ಅವರ ಸಿನಿಮಾವಿದು. ಸಿನಿಮಾವನ್ನು ಎಲ್.ಎ.ಪ್ರೊಡಕ್ಷನ್ಸ್‌ನಡಿ ಆನಂದ್ ಕುಮಾರ್ ನಿರ್ಮಿಸಿದ್ದು, ನಾಯಕನಾಗಿ ಹೇಮಂತ್ ಕುಮಾರ್ ನಟಿಸಿದ್ದಾರೆ. ಇವರಿಗೆ ಅಯಾನ ಹಾಗೂ ಗೋಪಿಕಾ ಸುರೇಶ್ ಜೋಡಿಯಾಗಿದ್ದಾರೆ. ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಸಿನಿಮಾದಲ್ಲಿ ‘ಬಿಗ್‌ಬಾಸ್’ ಖ್ಯಾತಿಯ ಕಾರ್ತಿಕ್ ಮಹೇಶ್ ವಿಶೇಷ ಪಾತ್ರದಲ್ಲಿದ್ದಾರೆ. ಅವಿನಾಶ್, ಅಚ್ಯುತ್ ಕುಮಾರ್, ರಮೇಶ್ ಇಂದಿರಾ, ಬಾಲು ನಾಗೇಂದ್ರ, ಮಾನಸಿ ಸುಧೀರ್, ಗಿರಿರಾಜ್, ರಾಘು ಶಿವಮೊಗ್ಗ ತಾರಾಬಳಗದಲ್ಲಿದ್ದಾರೆ.



‘ಲಿಂಗಾಯತ, ಗಾಣಿಗ ಪ್ರತ್ಯೇಕ ಅಲ್ಲ’

2ಎ ಸಿಂಧುತ್ವ ಎತ್ತಿ ಹಿಡಿದು ಹೈಕೋರ್ಟ್‌ನ ಏಕ ಸದಸ್ಯ ಪೀಠದಿಂದ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಿಂಗಾಯತ ಮತ್ತು ಗಾಣಿಗ ಎಂಬುದು ಕಾನೂನಿನಲ್ಲಿ ಪರಸ್ಪರ ಪ್ರತ್ಯೇಕ ಗುರುತುಗಳಲ್ಲ’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

ಪೊಲೀಸ್ ಸಬ್-ಇನ್‌ಸ್ಪೆಕ್ಟರ್ ಹುದ್ದೆಯ ತಕರಾರಿಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತರು 2015ರಲ್ಲಿ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಸದ್ಯ ಮೈಸೂರು ವೃತ್ತದಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಟಿ.ನರಸೀಪುರ ತಾಲ್ಲೂಕಿನ ಅಳಗುಡು ಗ್ರಾಮದ ಟಿ.ಎನ್.ಜಗದೀಶ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ರಿಟ್ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಪ್ರಕರಣದ ಪ್ರತಿವಾದಿಯಾಗಿರುವ ಬಾಗಲಕೋಟೆ ತಾಲ್ಲೂಕಿನ ಮುಚಖಂಡಿ ಗ್ರಾಮದ ರಾಜಕುಮಾರ್ ವೈ. ಬೀಳಗಿ ಇತರೆ ಹಿಂದುಳಿದ ವರ್ಗ II-ಎ ಅಡಿಯಲ್ಲಿ ಗಾಣಿಗ ಸಮುದಾಯಕ್ಕೆ ಸೇರಿದವರು ಎಂಬ ತಮ್ಮ ಗುರುತನ್ನು ಸಾಬೀತು ಪಡಿಸಿದ್ದಾರೆ’ ಎಂದು ಉಲ್ಲೇಖಿಸಿದೆ.

ಲಿಂಗಾಯತ-ಗಾಣಿಗ ಪಂಗಡಕ್ಕೆ ಸೇರಿದ ರಾಜಕುಮಾರ್ ವೈ. ಬೀಳಗಿ ಅವರು ವರ್ಗ 2ಎ ಅಡಿಯಲ್ಲಿ ಪಡೆದ ಪ್ರಯೋಜನದ ನೇಮಕಾತಿ ಸಿಂಧುತ್ವವನ್ನು ಎತ್ತಿಹಿಡಿದಿರುವ ನ್ಯಾಯಪೀಠ, ‘ಲಿಂಗಾಯತ’ ಮತ್ತು ‘ಗಾಣಿಗ’ ಎಂಬುದು ಕಾನೂನಿನ ಅಡಿಯಲ್ಲಿ ಪರಸ್ಪರ ಪ್ರತ್ಯೇಕ ಗುರುತುಗಳಲ್ಲ ಎಂದು ವಿವರಿಸಿದೆ.

ಪ್ರಕರಣವೇನು?

ಟಿ.ಎನ್.ಜಗದೀಶ್ ಇತರೆ ಹಿಂದುಳಿದ ವರ್ಗಗಳ 2ಎ ವ್ಯಾಪ್ತಿಗೆ ಒಳಪಡುವ ವಿಶ್ವಕರ್ಮ ಸಮುದಾಯಕ್ಕೆ ಸೇರಿದವರಾಗಿದ್ದು 1998ರಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಆಗಿ ನೇಮಕಗೊಂಡು ಕಾರ್ಯ ನಿರ್ವಹಿಸುತ್ತಿದ್ದಾರೆ. ಟಿ.ಎನ್.ಜಗದೀಶ್ ಮತ್ತು ರಾಜಕುಮಾರ್ ವೈ. ಬೀಳಗಿ ಇಬ್ಬರೂ 2009ರಲ್ಲಿ ಕರೆಯಲಾಗಿದ್ದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗೆ (ಪಿಎಸ್‌ಐ) ಅರ್ಜಿ ಸಲ್ಲಿಸಿದ್ದರು. 2010–11ರಲ್ಲಿ ನೇಮಕಾತಿ ಪ್ರಕ್ರಿಯೆ ನಡೆದಿತ್ತು. ಈ ವೇಳೆ ರಾಜಕುಮಾರ್ ವೈ.ಬೀಳಗಿ ಇತರೆ ಹಿಂದುಳಿದ ವರ್ಗಗಳ 2ಎ ಅಡಿಯಲ್ಲಿ ಪ್ರಯೋಜನ ಪಡೆದು ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಿದ್ದರು. ಇದನ್ನು ಜಗದೀಶ್ ಆಕ್ಷೇಪಿಸಿದ್ದರು.

‘ಎಸ್.ಎಂ.ಕೃಷ್ಣ ಸಂಗೀತ ಪ್ರಶಸ್ತಿ’ಗೆ ಆಯ್ಕೆ

ಬೆಂಗಳೂರು: ಶ್ರೀ ರಾಮಸೇವಾ ಮಂಡಳಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ‘88ನೇ ಶ್ರೀ ರಾಮನವಮಿ ಸಂಗೀತೋತ್ಸವ’ದ ಪ್ರಯುಕ್ತ ನೀಡುವ ‘ಎಸ್.ಎಂ.ಕೃಷ್ಣ ಸ್ಮಾರಕ ರಾಷ್ಟ್ರೀಯ ಸಂಗೀತ ಪ್ರಶಸ್ತಿ’ಗೆ ಪಿಟೀಲು ವಾದಕರಾದ ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್ ಆಯ್ಕೆಯಾಗಿದ್ದಾರೆ.

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಕುಟುಂಬದ ಸದಸ್ಯರು ಟ್ರಸ್ಟ್‌ನಲ್ಲಿ ಈ ಪ್ರಶಸ್ತಿ ಸ್ಥಾಪಿಸಿದ್ದಾರೆ. ಪ್ರಶಸ್ತಿಯು ₹1 ಲಕ್ಷ ನಗದು ಒಳಗೊಂಡಿದೆ.

ನಾಗರಾಜ್ – ಮಂಜುನಾಥ್

ಏ.18ರಂದು ಸಂಜೆ 6 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಟ್ರಸ್ಟ್ ಮಾರ್ಚ್ 27ರಿಂದ ಏಪ್ರಿಲ್ 22ರವರೆಗೆ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ‘88ನೇ ಶ್ರೀ ರಾಮನವಮಿ ಸಂಗೀತೋತ್ಸವ’ ಹಮ್ಮಿಕೊಂಡಿದೆ. ಈ ಉತ್ಸವದ ಭಾಗವಾಗಿ ವಿವಿಧ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

Government of Karnataka
Karnataka Rural Road Development Agency, Bangalore
Office of the Executive Engineer,
Project Division, Chikmagalur
No:EE/PD/Ckm/AE/Tender//NGNRY/2025-26/05/17-02-2026

TENDER NOTIFICATION-CALL-2

On behalf of Governor of Karnataka, Executive Engineer PMGSY Project Division, Chikmagalur, invites Item Rate Tenders through kppp procurement portal for 6th Year Renewal Road works of Package No.KS-09-13(General) in Mudigere Constituency of Chikkamagaluru District under Namma Grama Namma Rasthe Yojane-III (KRRDA/2025-26/RD/WORK_INDENT245/Call-2) work by two cover system. Class-3 and above Contractors who have registered in PWD adopting the guidelines of the KW3 Bidding Documents are eligible in participation of tendering. Accessing the bid document on kppp procurement portal from 19-02-2026 from 16.00Hrs. Last date for bid submission is 07-03-2026 upto 16.30 Hrs Further details can be obtained from this office any working days between or by logging onto https://www.kppp.karnataka.gov.in

Sd/- Tendering Officer,
PIU-Project Division, Chikmagalur

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516,26562500, ಗ್ರಾಮ್ಸ್:SITO ಫ್ಯಾಕ್ಸ್:26565222
ಇ–ಮೇಲ್: sitodirector@gmail.com
No. SGITO/e-Tender/Drugs(02)/ME/Vascular(03)/2025-26 Date:.18-02-2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು–11 ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.

(1) MEDICAL EQUIPMENTSfor (1) Vascular Surgeries and (2) Foot & Ankle Surgeries
(2) Drugs, Surgicals, Disposables and Other Items

(1) ಟೆಂಡರ್ ದಾಖಲೆಗಳನ್ನು https://kppp.karnataka.gov.in ನಿಂದ ದಿನಾಂಕ 20–02–2026ರಿಂದ ಅಥವಾ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ದಿನಾಂಕ 07–03–2026ರ ಸಂಜೆ 4:00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. (2) ಟೆಂಡರನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರದ ಹಕ್ಕನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

ಸಹಿ/– ನಿರ್ದೇಶಕರು
ಟೆಂಡರ್ ಆಹ್ವಾನ ಪ್ರಾಧಿಕಾರ
ಡಿಐಪಿಆರ್/ಎಸ್‌ಐ/5744/2025–26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ದೂರವಾಣಿ ಸಂ: 08338/ 273859 ಇ–ಮೇಲ್: eepwdckd@gmail.com
ಕ್ರ.ಸಂ. ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2025–26/7415 ದಿನಾಂಕ: 18/02/2026

ಅವಧಿ ವಿಸ್ತರಣೆ–1/ತಿದ್ದುಪಡಿ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2025–26/6910 ದಿನಾಂಕ:09/02/2026 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ 1 ರಿಂದ 5, 8, 9, 11, 12, 14, 16 ರಿಂದ 29, 31 ರಿಂದ 41 ಹಾಗೂ 48 ರಿಂದ 50 ರಲ್ಲಿನ ಕಾಮಗಾರಿಗಳಿಗೆ ಹೆಚ್ಚಿನ ಬಿಡ್‌ಗಳನ್ನು ಆಕರ್ಷಿಸುವ ಸಲುವಾಗಿ ಈ ಕೆಳಗಿನಂತೆ ಅವಧಿ ವಿಸ್ತರಣೆ–1/ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1.ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 21–02–2026 (ಸಾಯಂಕಾಲ 5.00 ಗಂಟೆಯವರೆಗೆ), 2.ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 23–02–2026 (ಬೆಳಿಗ್ಗೆ 11.00 ಗಂಟೆಗೆ), 3.ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): “ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ”
4.ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1878/KSMCA/2025-26

(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:23/2025–26
ದಿನಾಂಕ:17.02.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಹಾಸನ ಉಪ ವಿಭಾಗ ವ್ಯಾಪ್ತಿಯ 2025–26ನೇ ಸಾಲಿನ 2515–00–101–0–29 ಯೋಜನೆಯ ಲೆಕ್ಕ ಶೀರ್ಷಿಕೆಯಡಿಯಲ್ಲಿ ಟೆಂಡರ್ ಕರೆಯಲಾದ ಇಂಡೆಂಟ್ ಸಂಖ್ಯೆಗಳಾದ INDENT NO: RDPR/2025-26/RD/WORK_INDENT24612 -Tender Amount-131.76 lakhs ಕಾಮಗಾರಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಕೆ.ಪಿ.ಪಿ.ಪಿ ಅಡಿ kw-4, ರ ರೀತ್ಯಾ ಅಂತರ್ಜಾಲದಲ್ಲಿ ದಿನಾಂಕ:17.02.2026 ರಿಂದ ದಿ:24.02.2026 ಸಂಜೆ 4.00 ಘಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:24.02.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ:23.02.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:25.02.2026 ರಂದು ಸಂಜೆ 4.05 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/1088/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
(ಸಾರಿಗೆ ಇಲಾಖೆ)
ಆಯುಕ್ತರ ಕಛೇರಿ, ಸಾರಿಗೆ ಮತ್ತು ರಸ್ತೆ ಸುರಕ್ಷತೆ,
1ನೇ ಮಹಡಿ, ‘ಎ’ ಬ್ಲಾಕ್, ಟಿ.ಟಿ.ಎಂ.ಸಿ. ಕಟ್ಟಡ, ಶಾಂತಿನಗರ, ಬೆಂಗಳೂರು–560027.
ದೂ: 080–22276433 ಮಿಂಚಂಚೆ: jcteeg-tran-ka@nic.in
TRANSPORT DEPARTMENT
ಸಂ.ಸಾಆ/ಪ ಮತ್ತು ಇ–ಆ/ವೈವ–02/2024–25 ದಿನಾಂಕ: 19–02–2026.

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

No.TD/2025-26/SE0118, dated:19-02-2026
ಸರ್ಕಾರದ ಆದೇಶದ ಮೇರೆಗೆ ಸಾರಿಗೆ ಇಲಾಖೆಯ ಆಯುಕ್ತರ ಕಛೇರಿ ಮತ್ತು ರಾಜ್ಯದ ಎಲ್ಲಾ ಅಧೀನ ಕಛೇರಿಗಳಲ್ಲಿ ತಂತ್ರಾಂಶಗಳ ಅನುಷ್ಠಾನ, ತರಬೇತಿ ಹಾಗೂ ಗಣಕೀಕರಣಕ್ಕೆ ನೆರವು ನೀಡಲು 69 ತಾಂತ್ರಿಕ ಸಹಾಯಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಏಜೆನ್ಸಿಯ ಮೂಲಕ ಪಡೆಯುವ ಸಲುವಾಗಿ ಆಸಕ್ತಿವುಳ್ಳ ಬಿಡ್ಡುದಾರರು / ಸೇವಾದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ.
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಬಿಡ್ಡುಗಳನ್ನು ದಿನಾಂಕ: 26–02–2026ರ ಸಂಜೆ 05–00 ಘಂಟೆಯೊಳಗೆ ಸಲ್ಲಿಸಬಹುದಾಗಿದ್ದು, ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವಿಳಾಸ https://kppp.karnataka.gov.in/ ಮುಖಾಂತರ ಪಡೆಯಬಹುದಾಗಿದೆ.

ಸಹಿ/–
ಅಪರ ಸಾರಿಗೆ ಆಯುಕ್ತರು,
(ಪರಿಸರ ಮತ್ತು ಇ–ಆಡಳಿತ), ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/5766/ಆಕಾರ್/2025–26

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979 &Endst. No.MCI-37(1)(Recog.-18)(UG)/2017-Med./109629,Dt: 06/05/2019
DIRECTOR: 8147796529 PRINCIPAL :8147796527
CAO:8147796526PA : 8147796539.
e-mail-ids:directorbmcrcballari@gmail.com, website : https://bmcrcballari.karnataka.gov.inprincipalbmcrcballari@gmail.com
No. BMCRC/SUP/TEND/SCB/03/2025-26/490 DATE:16.02.2026

ಇ–ಟೆಂಡರ್ ಅಧಿಸೂಚನೆ

ಬಿಎಂಸಿಆರ್‌ಸಿ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಸಿರಪ್ಸ್, ಕಿಮೋಥೆರಪಿ ಡಗ್ಸ್ ಮತ್ತು ಬ್ಲೆಡ್ ಬ್ಯಾಂಕ್ ಐಟಂಗಳನ್ನು ಒಂದು ವರ್ಷದ ಅವಧಿಗೆ ಧರಗುತ್ತಿಗೆ ಆಧಾರದ ಮೇಲೆ ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ–1999–2000 ರಂತೆ ದ್ವಿ–ಬಿಡ್ ಪದ್ದತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://kppp.karnataka.gov.in ಮೂಲಕ ಇ–ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಟೆಂಡರ್‌ದಾರರು ಮೇಲಿನ ಪೋರ್ಟಲ್‌ನಲ್ಲಿ ಟೆಂಡರನ್ನು ದಿನಾಂಕ: 02.03.2026 ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ ರೂ.53.35 ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್‌ಸೈಟ್ ಮತ್ತು www.bmcrcballari.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಡೀನ್ & ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/1024/ಕೆಎಸ್‌ಎಂಸಿಎ/2025–26

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ,
ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020
ಸಂಖ್ಯೆ: KSEDC/P440/2025-26 ದಿನಾಂಕ: 19.02.2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000ರನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಸಂಸ್ಥೆಯು “Short term E-Tender for engagement of Chartered Accountants/Firms for the Internal Audit work of KEONICS” ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು 15 ದಿನಗಳ ಅವಧಿಗೆ ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ವಿವರವನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ
1	KEONICS/ 2025-26/ SE0127	“Short term E-Tender for engagement of Chartered Accountants/Firms for the Internal Audit work of KEONICS”	05.03.2026

DIPR/CP/5756/SA/2025-26 ಸಹಿ/– ನಿರ್ದೇಶಕರು (ತಾಂತ್ರಿಕ)

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.2, ಹೂವಿನಹಡಗಲಿ, ವಿಜಯನಗರ ಜಿಲ್ಲೆ.
Ph. No. 08399-200001 email:eeslid2hdl@gmail.com

ಟೆಂಡರ್ ಪ್ರಕಟಣೆ
(ONLY THROUGH “e-Procurement” SYSTEM)

ಉಲ್ಲೇಖ:ಈ ಕಛೇರಿಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1755/2025–26ದಿನಾಂಕ: 18.02.2026
ಸಿಂಗಟಾಲೂರು ಏತ ನೀರಾವರಿಯೋಜನೆ ಹೂವಿನಹಡಗಲಿ ವಿಭಾಗ–2 ಕಛೇರಿಯಿಂದ “Repairs to Canals of Right Side of Singataluru Lift Irrigation Scheme for the Year 2025-26” ಕಾಮಗಾರಿಗೆ ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತ, ಅರ್ಹಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ದತಿಯಲ್ಲಿ (KNNL/2025-26/OW/WORK_INDENT4082) ಟೆಂಡರನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತವು ರೂ. 423.46 ಲಕ್ಷ (ಜಿ.ಎಸ್.ಟಿ ಹೊರತುಪಡಿಸಿ) ಆಗಿರುತ್ತದೆ ಹಾಗೂ ಈ ಕಾಮಗಾರಿಗೆಇ.ಎಂ.ಡಿ. ಮೊತ್ತವುರೂ. 6.35 ಲಕ್ಷಆಗಿರುತ್ತದೆ.
ಇನ್ನುಳಿದಂತೆ, ಸದರಿಟೆಂಡರಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವಅಧಿಕಾರಿಯವರಕಛೇರಿಯಿಂದಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ:19.02.2026ರನಂತರ “https://kppp.karnataka.gov.in”, ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿಕಾಮಗಾರಿಯ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲುಕೊನೆಯ ದಿನಾಂಕ: 02.03.2026ಎಂದು ಮತ್ತುಟೆಂಡರ್ ತಾಂತ್ರಿಕಬಿಡ್ಡನ್ನುತೆರೆಯುವ ದಿನಾಂಕ: 03.03.2026ಎಂದು ನಿಗದಿಪಡಿಸಲಾಗಿದೆ. ಅದರಂತೆ, ಸದರಿ ಟೆಂಡರ್‌ಗಳ ಕುರಿತು Pre-bid ಸಭೆಯನ್ನು ದಿನಾಂಕ: 24.02.2026 ರಂದುಕಾರ್ಯಪಾಲಕಅಭಿಯಂತರರು, ಸಿಂಗಟಾಲೂರು ಏತ ನೀರಾವರಿಯೋಜನೆ, ನಂ.2 ವಿಭಾಗ, ಹೂವಿನಹಡಗಲಿ ಕಛೇರಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು e-procurement Helpdesk Phone No’s:+91-80-46010000, +91-80-68948777 ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವಅಧಿಕಾರಿಯುಎಲ್ಲಾಅಥವಾಯಾವುದೇಟೆಂಡರ್‌ನ್ನುಕಾರಣ ನೀಡದೆತಿರಸ್ಕರಿಸುವಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿಯೋಜನೆ, ನಂ. 2 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಹೂವಿನಹಡಗಲಿ, ವಿಜಯನಗರಜಿಲ್ಲೆ.
ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/534

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ–581301
ದೂ: 08382–226406, 226471 ಫ್ಯಾಕ್ಸ್: 08382–226603
Email: dckarwar@gmail.com Website: http://uttarakannada.nic.in
No: DCUK/Census/Cr-01/2025-26 Date: 19-02-2026

ಟೆಂಡರ್ ಪ್ರಕಟಣೆ

ಜನಗಣತಿ 2027ಕ್ಕೆ ಸಂಬಂದಿಸಿದಂತೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ, ತಾಲೂಕ ಚಾರ್ಜ ಆಫೀಸರ್ ಹಾಗೂ ನಗರ ಚಾರ್ಜ ಆಫೀಸರ್‌ಗಳಿಗೆ 26 - Technical Assistant ಮತ್ತು 01- Multi Tasking Staff ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲು ಟೆಂಡರ್ ಪ್ರಕಟಣೆ.
Tender Document for procurement of Technical Assistant and Multi-Tasking Staff for Census of India 2027 in Uttara Kannada District
(1) Tender Reference No: DCUK/Census/Cr-06/2025-26 (2) Commencement of issue of Bid document through KPPP Portal of Government of Karnataka: 18-02-2026 16:00 hrs (3) Last date and time for uploading of tender in e-Procurement platform: 25-02-2026 17:00 hrs (4) Time and date of opening of tenders: Technical Bid: 26-02-2026 17:30 hrs (5) Time and date of opening of tenders: Commercial Bid: 27-02-2026 11:00 hrs.

Sd/-, District Census Officer
& Add Deputy Commissioner
Uttar Kannada, Karwar
DIPR/KWR/KSMCA/1120/25-26 Dt. 19.02.2026

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕೊಪ್ಪಳ. ದೂ:08539–220054.
ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2025–26/5268
ದಿ: 16/02/2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ರಾಯಚೂರು ಜಿಲ್ಲೆಯ ಹಾಗೂ ಕೊಪ್ಪಳ ಜಿಲ್ಲೆಯ 13 ಟೆಂಡರ ಕಾಮಗಾರಿಗಳನ್ನು ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ದ್ವಿ ಲಕೋಟೆ ಪದ್ದತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ. 200.00 ಹಾಗೂ ಗರಿಷ್ಠ ಅಂದಾಜು ಮೊತ್ತ ರೂ 970.00 ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: 23–02–2026 ರಿಂದ ದಿನಾಂಕ: 12–03–2026 ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ: 03–03–2026 ರಂದು ಬೆಳ್ಳಿಗ್ಗೆ 11.00 ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: 13–03–2026 ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: 16–03–2026 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು “ಕೆಪಿಪಿಪಿ” ವೆಬ್‌ಸೈಟ್ https://kppp.karnataka.gov.in/ ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ಡಿಐಪಿಆರ್/ಕೊಪ್ಪಳ/692/ಕೆಎಸ್‌ಎಂಸಿಎ/2025–26

ಕರ್ನಾಟಕ ಸರಕಾರ
ಜಿಲ್ಲಾ ಆರೋಗ್ಯ ಮತ್ತು ಕು.ಕ. ಸೊಸೈಟಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
ಉತ್ತರ–ಕನ್ನಡ, ಕಾರವಾರ–581301
No: NHM/NUHM/DrugsTENDER/571/25-26. Date: 18.02.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ವಿಷಯ: 2025–2026ನೇ ಸಾಲಿಗೆ 15ನೇ ಹಣಕಾಸು ಆಯೋಗದಡಿಯ ಸಿ.ಪಿ.ಹೆಚ್.ಸಿ–ಯು.ಹೆಚ್.ಸಿ. ಕಾರ್ಯಕ್ರಮದಡಿಯಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರಗಳಿಗೆ ಔಷಧಿಗಳನ್ನು ಇ–ಟೆಂಡರ್ ಮೂಲಕ ಖರೀದಿಸುವ ಕುರಿತು.
15ನೇ ಹಣಕಾಸು ಆಯೋಗದಡಿಯಲ್ಲಿ ಉತ್ತರ ಕನ್ನಡ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನದಲ್ಲಿ ಬರುವ ಸಿ.ಪಿ.ಹೆಚ್.ಸಿ–ಯು.ಹೆಚ್.ಸಿ. ಕಾರ್ಯಕ್ರಮಕ್ಕೆ ಔಷಧಿಗಳನ್ನು ಸರಬರಾಜು ಮಾಡುವ ಬಗ್ಗೆ ಇ–ಟೆಂಡರ್ ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಈ ಕುರಿತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಉತ್ತರ ಕನ್ನಡ, ಜಿಲ್ಲೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಉತ್ತರ ಕನ್ನಡ ಕಾರವಾರ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.
(1) ಟೆಂಡರ್ ಪ್ರಾರಂಭದ ದಿನಾಂಕ ಮತ್ತು ಸಮಯ: 19–02–2026 ಮಧ್ಯಾಹ್ನ 12.00 ಘಂಟೆಗೆ (2) ಆಕ್ಷೇಪಣೆಗಳಿಗೆ ಅಂತಿಮ ದಿನಾಂಕ: 25–02–2026 ರ ಸಂಜೆ 05–30 ಘಂಟೆಗೆ (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 06–03–2026 ರ ಸಂಜೆ 05–30 ಘಂಟೆಗೆ (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 09–03–2026 ರ ಬೆಳಿಗ್ಗೆ 11–00 ಘಂಟೆಗೆ (5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 11–03–2026 ರ ಬೆಳಿಗ್ಗೆ 11–00 ಘಂಟೆಗೆ (6) ಟೆಂಡರ್ ತೆರೆಯುವ ಸ್ಥಳ: ಜಿಲ್ಲಾ ಆ.ಕು.ಕ. ಅಧಿಕಾರಿಗಳ ಕಛೇರಿ ಉತ್ತರ ಕನ್ನಡ, ಕಾರವಾರ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು,
ಉತ್ತರಕನ್ನಡ, ಕಾರವಾರ.
DIPR/KWR/KSMCA/1112/25-26 dt. 19.02.2026

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗ:ಲೋಇ:ಪಿಬಿ–2,5:ವಿವಿಧ:2025–26/5170
ದಿನಾಂಕ : 18–02–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು 86.58 ಲಕ್ಷ ಮೊತ್ತದಲ್ಲಿ ಒಟ್ಟು 03 ಕಾಮಗಾರಿಗೆ (ಕನಿಷ್ಠ ಮೊತ್ತ ರೂ: 1.58 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ: 80.00 ಲಕ್ಷ) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ–1 ಹಾಗೂ 3, ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http:// www. kppp. Karnataka. gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No: Part-1 24475-SC/Call-2
ಮೇಲಿನ ಕಾಮಗಾರಿಯ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : 24–02–2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 25–02–2026 ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ ದಿನಾಂಕ : 26–02–2026

Work Indent No: Part-2 29101/Call-2 32930-ST/Call-2
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : 04–03–2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 06–03–2026 ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : 07–03–2026. ಆರ್ಥಿಕ ಬಿಡ್ ತೆರೆಯುವ ದಿನಾಂಕ : 09–03–2026.

ಪರಿಶಿಷ್ಠ ಜಾತಿ ಮತ್ತು ಪಂಗಡ, ಕೆಟಗರಿ–1 ಹಾಗೂ ಕೆಟಗರಿ–2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ,
ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/663/2025–26

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಯಲಹಂಕ ವಿಭಾಗ,
ಬೆಂಗಳೂರು– 560092.
ನಂ.: ಬೆಂಉನಪಾ/ಕಾಅ/ಯಲಹಂಕ.ವಿ/ಕೆಪಿಪಿಪಿ/07/2025–26 ದಿನಾಂಕ : 19.02.2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ)
(ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರವರು, ಯಲಹಂಕ ವಿಭಾಗ, ಬೆಂಉನಪಾ ರವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಸೇವೆಗಳನ್ನು ಒದಗಿಸಲು ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಯಲ್ಲಿ ಅರ್ಹ ನೋಂದಾಯಿತ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಯಲಹಂಕದ ಸಂದೀಪ್ ಉನ್ನಿಕೃಷ್ಣನ್ ರಸ್ತೆಯಿಂದ ಕಾವೇರಿ ಲೇಔಟ್ ವರೆಗೆ 30 ಮೀಟರ್ ಅಗಲದ ಹೊಸ ಲಿಂಕ್ ರಸ್ತೆ (ಗ್ಯಾಸ್ ಪೈಪ್‌ಲೈನ್ ರಸ್ತೆ) ರಚಿಸುವುದು. ಅಂದಾಜು ಮೊತ್ತ : ರೂ. 300.00 ಲಕ್ಷಗಳು, ಇಎಂಡಿ : ರೂ. 4,50,000.00

ಟೆಂಡರ್‌ನ ಕಾರ್ಯಸೂಚಿ: (1) ಬಿಡ್ ಪೂರ್ವ ಸಭೆಯ ದಿನಾಂಕ: 23.02.2026 ರಂದು 15.00 ಗಂಟೆಗೆ (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 05.03.2026 ರಂದು 16.00 ಗಂಟೆಗೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 06.03.2026 ರಂದು 16:00 ಗಂಟೆಗಳ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರವರು, ಯಲಹಂಕ ವಿಭಾಗ, ಬೆಂಉನಪಾ

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಎಂಪಿ&ಸಿಎಸ್),
ಹಳೇ ಮದ್ರಾಸ್ ರಸ್ತೆ, ಕೆ.ಆರ್. ಪುರಂ, ಬೆಂಗಳೂರು – 560036.
ಸಂಖ್ಯೆ: ಬೆಂಪೂನಪಾ/ಪಿಆರ್/ಕಾಅ(ಎಂಪಿ&ಸಿಎಸ್)/10/2025–26 ದಿನಾಂಕ: 19–02–2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಎಂಪಿ&ಸಿಎಸ್), ಬೆಂಪೂನಪಾ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಳಿಗಾಗಿ ಬಿಬಿಎಂಪಿ, ಜಿಬಿಎ ಅಥವಾ ಬೆಂಪೂನಪಾ ನೋಂದಾಯಿತ ಅಥವಾ ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ಬಿಡಬ್ಲ್ಯೂಎಸ್‌ಎಸ್‌ಬಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ಬೆಂಗಳೂರು ಪೂರ್ವ ನಗರ ಪಾಲಿಕೆಯ ಮಹದೇವಪುರ ವಲಯ–1 ಕ್ಕೆ ಘನತ್ಯಾಜ್ಯ ನಿರೀಕ್ಷಕರು (ಮ್ಯಾನ್ ಪವರ್) ಸೇವೆಗಳನ್ನು ಒದಗಿಸುವುದು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 210.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 3,15,000/–
2	ಬೆಂಗಳೂರು ಪೂರ್ವ ನಗರ ಪಾಲಿಕೆಗೆ ನಾಗರೀಕ ಸಹಾಯಕ ಕೋಶ (ಸಿಎಸಿ) ಮತ್ತು ಟಪಲ್ ನಿರ್ವಹಣೆ ವ್ಯವಸ್ಥೆಯನ್ನು ಒದಗಿಸುವುದು (ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ – ಕ್ಯೂಸಿಬಿಎಸ್). ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 300.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 4,50,000/–
3	2026–27 ನೇ ಸಾಲಿಗೆ ಬೆಂಗಳೂರು ಪೂರ್ವ ನಗರ ಪಾಲಿಕೆಯ ನಿಯಂತ್ರಣ ಕೊಠಡಿಗೆ ತುರ್ತು ಪರಿಹಾರ ಕಾರ್ಯಪಡೆ ತಂಡವನ್ನು ಒದಗಿಸುವುದು (ವಲಯ–1, ಮಹದೇವಪುರ ಮತ್ತು ವಲಯ–2, ಕೆ.ಆರ್. ಪುರ). ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 131.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,96,500/–
4	ಬೆಂಗಳೂರು ಪೂರ್ವ ನಗರ ಪಾಲಿಕೆಯ ಕೆ.ಆರ್. ಪುರಂ ವಲಯ–02 ಕಛೇರಿಗೆ ಕಂಪ್ಯೂಟರ್ ಆಪರೇಟರ್‌ಗಳನ್ನು ಒದಗಿಸುವುದು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 130.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,95,000/–
5	ಬೆಂಗಳೂರು ಪೂರ್ವ ನಗರ ಪಾಲಿಕೆಯ ಮಹದೇವಪುರ ವಲಯ–01 ಕಛೇರಿಗೆ ಕಂಪ್ಯೂಟರ್ ಆಪರೇಟರ್‌ಗಳನ್ನು ಒದಗಿಸುವುದು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 206.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 3,09,000/–
6	ಹೊರಮಾವು ವಾರ್ಡ್ ಸಂಖ್ಯೆ. 87 ರಲ್ಲಿರುವ ಹೊರಮಾವು ಬಿಬಿಎಂಪಿ ಕಛೇರಿ ಕಟ್ಟಡ ಮತ್ತು ಕಛೇರಿ ಆವರಣದ ನಿರ್ವಹಣೆ ಹಾಗೂ ಸುಧಾರಣೆಗಳ ಕಾಮಗಾರಿ. (ಇತರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 49.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 98,000/–
7	ವಾರ್ಡ್ ಸಂಖ್ಯೆ. 93, ದೇವಸಂದ್ರ ಇಲ್ಲಿನ ಕೆ.ಆರ್. ಪುರ ಬಿಬಿಎಂಪಿ ಕಛೇರಿ ಕಟ್ಟಡ ನಿರ್ವಹಣೆ ಕಾಮಗಾರಿ. (ಎಸ್.ಟಿ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 20.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,000/–
8	ವಾರ್ಡ್ ಸಂಖ್ಯೆ. 93, ದೇವಸಂದ್ರ ಇಲ್ಲಿನ ಕೆ.ಆರ್. ಪುರ ಬಿಬಿಎಂಪಿ ಕಛೇರಿ ಕಟ್ಟಡದ ಆವರಣ ಸುಧಾರಣೆಗಳ ಕಾಮಗಾರಿ. (ಎಸ್.ಸಿ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,000/–
9	ವಾರ್ಡ್ ಸಂಖ್ಯೆ. 92, ಬಸವನಪುರ ಇಲ್ಲಿನ ಚಿಕ್ಕದೇವಸಂದ್ರದ ಸಮುದಾಯ ಭವನ ನಿರ್ವಹಣೆ ಕಾಮಗಾರಿ. (ಇತರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 11.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 27,500/–
10	ವಾರ್ಡ್ ಸಂಖ್ಯೆ. 99, ಬೈರತಿ ಇಲ್ಲಿನ ಸಾದರಮಂಗಲ ಕೊಳಗೇರಿ ಮಂಡಳಿ ಮತ್ತು ಬೈರತಿ ಗ್ರಾಮದಲ್ಲಿ ಅಸ್ತಿತ್ವದಲ್ಲಿರುವ ಸಮುದಾಯ ಭವನಗಳ ನಿರ್ವಹಣೆ ಕಾಮಗಾರಿ. (ಇತರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲ): 20.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000/–
11	ವಾರ್ಡ್ ಸಂಖ್ಯೆ. 87, ಹೊರಮಾವು ಇಲ್ಲಿನ ಜಯಂತಿನಗರ, ಹೊರಮಾವು ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದುರಸ್ತಿಗಳ ಕಾಮಗಾರಿ. (ಪ್ರವರ್ಗ-II(A)) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 7.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 17,500/–
12	ವಾರ್ಡ್ ಸಂಖ್ಯೆ. 91, ಕೆ.ಆರ್. ಪುರ ಇಲ್ಲಿನ ಕೋಟೆ ದೇವಸ್ಥಾನ ಹತ್ತಿರದ ಟೈಲರಿಂಗ್ ಕೇಂದ್ರ ಕಟ್ಟಡದ ದುರಸ್ತಿಗಳ ಕಾಮಗಾರಿ. (ಇತರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 2.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,000/–
13	ಹೊರಮಾವು ವಾರ್ಡ್ ಸಂಖ್ಯೆ. 87 ಇಲ್ಲಿನ ಹೊರಮಾವು ಅಗರ ಮತ್ತು ಹೊರಮಾವು ಗ್ರಾಮದಲ್ಲಿ ರುದ್ರ ಭೂಮಿ ಸುಧಾರಣೆಗಳ ಕಾಮಗಾರಿ. (ಪ್ರವರ್ಗ-II(A)) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50,000/–
14	ಕಲ್ಕರೆ ವಾರ್ಡ್ ಸಂಖ್ಯೆ. 88 ಇಲ್ಲಿನ ಕಲ್ಕರೆಯಲ್ಲಿರುವ ರುದ್ರ ಭೂಮಿಯ ಸುಧಾರಣೆಗಳ ಕಾಮಗಾರಿ. (ಇತರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 10.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,000/–
15	ವಾರ್ಡ್ ಸಂಖ್ಯೆ. 87, ಹೊರಮಾವು ಇಲ್ಲಿನ ಕೊತ್ತನೂರು ಗ್ರಾಮ ಮತ್ತು ಕೈಲಾಸನಹಳ್ಳಿರಲ್ಲಿರುವ ರುದ್ರ ಭೂಮಿಯ ಸುಧಾರಣೆಗಳ ಕಾಮಗಾರಿ. (ಎಸ್.ಸಿ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 42.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 42,000/–
16	ವಾರ್ಡ್ ಸಂಖ್ಯೆ. 93, ದೇವಸಂದ್ರ ಇಲ್ಲಿನ ಕೆ.ಆರ್. ಪುರ ಬಿಬಿಎಂಪಿ ಕಛೇರಿಯಲ್ಲಿ ಮಳೆ ನೀರು ಕೊಯ್ಲು ಒದಗಿಸುವ ಕಾಮಗಾರಿ. (ಇತರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 5.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 12,500/–
17	ಹೊರಮಾವು ವಾರ್ಡ್ ಸಂಖ್ಯೆ. 87 ರಲ್ಲಿನ ಹೊರಮಾವು ಬಿಬಿಎಂಪಿ ಕಛೇರಿಯಲ್ಲಿ ಮತ್ತು ಬಿಬಿಎಂಪಿ ಆಸ್ಪತ್ರೆಯಲ್ಲಿ ಮಳೆ ನೀರು ಕೊಯ್ಲು ಒದಗಿಸುವ ಕಾಮಗಾರಿ. (ಎಸ್.ಸಿ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 10.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 12,500/–
18	ರಾಮಮೂರ್ತಿನಗರ ವಾರ್ಡ್ ಸಂಖ್ಯೆ. 90 ರಲ್ಲಿನ ಹಳೇ ಮಂಜುನಾಥ ಲೇಔಟ್‌ನಲ್ಲಿರುವ ಬಿಬಿಎಂಪಿ ಆಸ್ಪತ್ರೆಯಲ್ಲಿ ಮಳೆ ನೀರು ಕೊಯ್ಲು ಒದಗಿಸುವ ಕಾಮಗಾರಿ. (ಇತರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 3.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 7,500/–
19	ಬೆಂಗಳೂರು ಪೂರ್ವ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳ ನಿಯೋಜನೆ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 1000.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 20,00,000/– (ರೂ. 16.00 ಲಕ್ಷ ಬಿ.ಜಿ ಮತ್ತು ರೂ. 4.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕು.)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 23–02–206 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯು ದಿನಾಂಕ: 26–02–2026 ರಂದು 15.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ (ಎಂಪಿ&ಸಿಎಸ್), ಕೆ.ಆರ್. ಪುರಂ, ಬೆಂಗಳೂರು – 560036 ಇಲ್ಲಿ ನಡೆಯುವುದು. 3) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 02–03–2026 ರಂದು 16.00 ಗಂಟೆಯೊಳಗೆ. 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 03–03–2026 ರಂದು 16.30 ಗಂಟೆಯ ನಂತರ ವೆಬ್‌ಸೈಟ್: https://kppp.karnataka.gov.in ನಲ್ಲಿ ಕಾರ್ಯಪಾಲಕ ಅಭಿಯಂತರರ ಕಛೇರಿ (ಎಂಪಿ&ಸಿಎಸ್) ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಎಂಪಿ&ಸಿಎಸ್), ಬೆಂಪೂನಪಾ.

ಚಿಟಿಕೆ ಸುದ್ದಿ

ತುಂಗಭದ್ರಾ: 8 ಗೇಟ್ ಅಳವಡಿಕೆ ಪೂರ್ಣ



ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಗೆ ಮತ್ತೆ ಮೂರು ಕ್ರೆಸ್ಟ್‌ಗೇಟ್‌ಗಳನ್ನು ಅಳವಡಿಸಲಾಗಿದೆ. ಈವರೆಗೆ ಒಟ್ಟು ಎಂಟು ಗೇಟ್‌ಗಳ ಅಳವಡಿಕೆ ಪೂರ್ಣಗೊಂಡಿದೆ.

ನಂ.1, 17, 28ರಲ್ಲಿ ಕ್ರೆಸ್ಟ್‌ಗೇಟ್ ಅಳವಡಿಸಲಾಗಿದೆ. ನಂ. 18, 19, 20, 32 ಮತ್ತು 33ರಲ್ಲಿ ಈಗಾಗಲೇ ಕ್ರೆಸ್ಟ್ ಗೇಟ್ ಅಳವಡಿಸಲಾಗಿದೆ. 18ರಲ್ಲಿ ಗೇಟ್ ಎತ್ತಿ, ಇಳಿಸುವ ಪ್ರಯೋಗವೂ ನಡೆದಿದೆ. ಈ ತಿಂಗಳೊಳಗೆ 13 ಗೇಟ್‌ಗಳನ್ನು ಅಳವಡಿಕೆ ಪೂರ್ಣಗೊಳಿಸುವ ನಿರೀಕ್ಷೆ ಇದೆ' ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸದ್ಯ ನಂ.4,11,24,26 ಮತ್ತು 27ರಲ್ಲಿ (ಒಟ್ಟು 5) ಕ್ರೆಸ್ಟ್‌ಗೇಟ್ ಅಳವಡಿಕೆ ಪ್ರಗತಿಯಲ್ಲಿದೆ. ನಾಲ್ಕು ಹಳೆ ಗೇಟ್‌ಗಳನ್ನು (ನಂ.5, 21,25,31) ಕತ್ತರಿಸಿ ತೆಗೆಯುವ ಕಾರ್ಯವೂ ನಡೆದಿದೆ ಎಂದು ಅವರು ತಿಳಿಸಿದ್ದಾರೆ.

ಪ್ರಕಾಶ ಬೆಳವಾಡಿಗೆ ಭೈರಪ್ಪ ಪ್ರಶಸ್ತಿ

ಮೈಸೂರು: ಇಲ್ಲಿನ ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನವು ನೀಡುವ 2026ನೇ ಸಾಲಿನ 'ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ'ಗೆ ರಂಗಕರ್ಮಿ, ಚಲನಚಿತ್ರ ನಟ ಪ್ರಕಾಶ್ ಬೆಳವಾಡಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಕಾಶ ಬೆಳವಾಡಿ

ಪ್ರಶಸ್ತಿಯು ₹ 1 ಲಕ್ಷ ಹಾಗೂ ಪ್ರಶಸ್ತಿಪತ್ರ ಒಳಗೊಂಡಿದೆ.

ಫೆ.21ರಂದು ಸಂಜೆ 5.30ಕ್ಕೆ ಬೆಂಗಳೂರಿನ ಬನಶಂಕರಿ 2ನೇ ಹಂತದ ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ ಸಭಾಂಗಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಧರ್ಮಸ್ಥಳ: ಮಾ 3ರಂದು ದೇವರ ದರ್ಶನ ವ್ಯತ್ಯಯ

ಉಜಿರೆ (ದಕ್ಷಿಣ ಕನ್ನಡ): ಮಾರ್ಚ್ 3ರಂದು ಮಧ್ಯಾಹ್ನ 3.19ರಿಂದ ಸಂಜೆ 6.48ರವರೆಗೆ ಚಂದ್ರಗ್ರಹಣ ಇರುವುದರಿಂದ ಅಂದು ಮಧ್ಯಾಹ್ನ 1.30ರವೆಗೆ ಮಾತ್ರ ಧರ್ಮಸ್ಥಳದಲ್ಲಿ ದೇವರ ದರ್ಶನಕ್ಕೆ ಅವಕಾಶವಿದೆ.

ಸಂಜೆ 7.30ರ ನಂತರ ಚಂದ್ರಗ್ರಹಣ ಪೂರ್ಣಗೊಂಡ ಬಳಿಕ ದೇವಸ್ಥಾನದ ಶುದ್ಧೀಕರಣ ಹಾಗೂ ಇತರ ಧಾರ್ಮಿಕ ವಿಧಿ-ವಿಧಾನ ನಡೆದ ಬಳಿಕ ದೇವರ ದರ್ಶನಕ್ಕೆ ಅವಕಾಶವಿದೆ. ಮಾಹಿತಿಗೆ ಮೊ: 9945725511 ಸಂಪರ್ಕಿಸಬಹುದು ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಜೂಜಾಟ: ಇಬ್ಬರು ಪೊಲೀಸರ ಅಮಾನತು

ಕಲಬುರಗಿ: ಜಿಲ್ಲೆಯ ಚಿತ್ತಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ದಿಗ್ಗಾಂವ್ ಗ್ರಾಮದಿಂದ ಬೆನಕನಹಳ್ಳಿ ಕಡೆಗೆ ಹೋಗುವ ರಸ್ತೆಯ ಪಕ್ಕದ ಸಾರ್ವಜನಿಕ ಸ್ಥಳದಲ್ಲಿ ಇಸ್ಪೀಟ್ ಜೂಜಾಟ ಆಡುವ ವೇಳೆ ಸಿಕ್ಕಿಬಿದ್ದಿದ್ದ ಪೊಲೀಸರಿಬ್ಬರನ್ನು ಕಲಬುರಗಿ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಇಲಾಖಾ ವಿಚಾರಣೆ ಬಾಕಿ ಇರಿಸಿ ಗುರುವಾರ ಅಮಾನತುಗೊಳಿಸಿದ್ದಾರೆ.

ಕಲಬುರಗಿ ನಗರದ ಎಂ.ಬಿ. ನಗರ ಪೊಲೀಸ್ ಠಾಣೆಯ ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ಗುರುನಾಥ ಹಾಗೂ ನಗರದ ಸಶಸ್ತ್ರ ಮೀಸಲು ಘಟಕದ ಕಾನ್‌ಸ್ಟೆಬಲ್ ಮಡಿವಾಳಪ್ಪ ಅಮಾನತುಗೊಂಡವರು.

ಇವರು ಫೆಬ್ರುವರಿ 17ರಂದು ಇಸ್ಪೀಟ್ ಜೂಜಾಟದ ವೇಳೆಗೆ ಚಿತ್ತಾಪುರ ಪೊಲೀಸರ ಕೈಗೆ ಸಿಕ್ಕಿ ಬಿದ್ದಿದ್ದರು. ಈ ಕುರಿತು ಜಿಲ್ಲಾ ಎಸ್ಪಿ ಅಡ್ಡೂರು ಶ್ರೀನಿವಾಸುಲು ಅವರ ವರದಿಯ ಅನ್ವಯ ಪೊಲೀಸ್ ಕಮಿಷನರ್ ಈ ಕ್ರಮ ಜರುಗಿಸಿದ್ದಾರೆ.

ಕಾಲುವೆಗೆ ಬಿದ್ದು ಚಿರತೆ ಸಾವು

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಗೋಗಿ (ಕೆ) ಗ್ರಾಮದ ಎಸ್‌ಬಿಸಿ ಮುಖ್ಯ ಕಾಲುವೆಯ ಭೋರುಕಾ ಪವರ್ ಪ್ಲಾಂಟ್ ಗೇಟ್ ಬಳಿ ನಾಲ್ಕು ವರ್ಷದ ಗಂಡು ಚಿರತೆಯ ಶವ ಗುರುವಾರ ಪತ್ತೆಯಾಗಿದೆ.

ವಿದ್ಯುತ್ ಉತ್ಪಾದನೆಯ ಭೋರುಕಾ ಕಂಪನಿ ಸಿಬ್ಬಂದಿ ಮಾಹಿತಿ ನೀಡಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಶವ ಹೊರತೆಗೆದರು.

'ಚಿರತೆ ಬುಧವಾರ ರಾತ್ರಿ ರಭಸವಾಗಿ ಹರಿಯುತ್ತಿದ್ದ ಕಾಲುವೆಯ ನೀರಿನಲ್ಲಿ ಬಿದ್ದಿದೆ. ಮೇಲೆ ಬರಲು ಆಗದೆ ಸುಮಾರು 1 ಕಿ.ಮೀ. ದೂರ ಕೊಚ್ಚಿಕೊಂಡು ಹೋಗಿದ್ದು, ನೀರಿನ ರಭಸಕ್ಕೆ ಉಸಿರುಗಟ್ಟಿ ಅಸುನೀಗಿದೆ' ಎಂದು ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯಾಧಿಕಾರಿ ಡಾ.ಅಣ್ಣಾರಾವ ಪಾಟೀಲ 'ಪಜಾವಾಣಿ'ಗೆ ತಿಳಿಸಿದರು.

ಸಾರಿಗೆ ನೌಕರರ ಮುಷ್ಕರ ಸದ್ಯ ಸ್ಥಗಿತ

ಸ್ಪಂದಿಸದೇ ಇದ್ದರೆ ಮಾರ್ಚ್ 2ರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪರಿಷ್ಕರಣೆ, ಹಿಂಬಾಕಿ ನೀಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಬೆಂಗಳೂರು ಚಲೊ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ರಾಜ್ಯ ಸರ್ಕಾರ ಮಾರ್ಚ್ 2ರ ಒಳಗೆ ಬೇಡಿಕೆಗಳನ್ನು ಈಡೇರಿಸದೇ ಇದ್ದರೆ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

38 ತಿಂಗಳ ಹಿಂಬಾಕಿ ನೀಡಿಲ್ಲ. 2024ರ ಜನವರಿಯಿಂದ ವೇತನ ಪರಿಷ್ಕರಣೆ ನಡೆಸಬೇಕಿತ್ತು. ಹಲವು ಬಾರಿ ಸರ್ಕಾರದೊಂದಿಗೆ ಮಾತುಕತೆ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಗುರುವಾರ ಬೆಂಗಳೂರು ಚಲೊ ಕಾರ್ಯಕ್ರಮವನ್ನು ಸ್ವಾತಂತ್ರ್ಯ ಉದ್ಯಾನದಲ್ಲಿ ಜಂಟಿ ಕ್ರಿಯಾ ಸಮಿತಿ ಹಮ್ಮಿಕೊಂಡಿತ್ತು.

ಸರ್ಕಾರದ ಸ್ಪಂದನೆ ನೋಡಿ ಮುಂದಿನ ಹೋರಾಟದ ಬಗ್ಗೆ ಗುರುವಾರ ಸಂಜೆ 4ಕ್ಕೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಮಿತಿ ಮುಖಂಡರು ಹೇಳಿದ್ದರು. ಈ ನಡುವೆ ಕೆಲವರು ಗುರುವಾರ ಸಂಜೆಯಿಂದಲೇ ಮುಷ್ಕರ ನಡೆಯಲಿದೆ ಎಂದು ಸುದ್ದಿ ಹಬ್ಬಿಸಿದ್ದರು. 'ಯಾವುದೇ ಮುಷ್ಕರ ಕೈಗೊಳ್ಳುವುದಿಲ್ಲ. ನಾಲ್ಕು ನಿಗಮಗಳಲ್ಲಿ 1.10 ಲಕ್ಷಕ್ಕೂ ಅಧಿಕ ನೌಕರರಿದ್ದು, ಅವರ ಭವಿಷ್ಯವನ್ನೂ ನೋಡಿಕೊಳ್ಳಬೇಕಾಗುತ್ತದೆ. ಉದ್ವೇಗದಲ್ಲಿ ನಿರ್ಧಾರ ಕೈಗೊಳ್ಳಲಾಗುವುದಿಲ್ಲ' ಎಂದು ಮುಖಂಡರು ಸ್ಪಷ್ಟಪಡಿಸಿದರು.

ಮಾತುಕತೆಗೆ ಬನ್ನಿ: 'ಸರ್ಕಾರವು 38 ತಿಂಗಳ ಹಿಂಬಾಕಿಯಲ್ಲಿ 26 ತಿಂಗಳ ಹಿಂಬಾಕಿಯನ್ನು ಬಿಡುಗಡೆ ಮಾಡುವುದಾಗಿ ಬುಧವಾರ ಘೋಷಿಸಿದೆ. ಅಲ್ಲದೇ ವೇತನ ಪರಿಷ್ಕರಣೆಯನ್ನು 2025ರ ಏಪ್ರಿಲ್ 1ಕ್ಕೆ ಅನ್ವಯವಾಗುವಂತೆ ಮಾಡಲು ಸಾರಿಗೆ ಕಾರ್ಮಿಕ ಮುಖಂಡರೊಂದಿಗೆ ಚರ್ಚೆ ನಡೆಸಲು ಸಾರಿಗೆ ಸಚಿವರು ಸೂಚನೆ ನೀಡಿದ್ದಾರೆ. ನಾವು ಒಂದು ಹೆಜ್ಜೆ ಮುಂದೆ ಬಂದಿದ್ದೇವೆ. ನೀವು ಕೂಡ ಒಂದು ಹೆಜ್ಜೆ ಮುಂದೆ ಬಂದರೆ ಸಮಸ್ಯೆ ಇತ್ಯರ್ಥವಾಗುತ್ತದೆ. ಈ ಬಗ್ಗೆ ಮಾತುಕತೆಗೆ ಬನ್ನಿ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ತಿಳಿಸಿದರು.

'ಸರ್ಕಾರದ ನಿರ್ಧಾರವನ್ನು ನಾವು ಒಪ್ಪುವುದಿಲ್ಲ. ಎಲ್ಲ 38 ತಿಂಗಳ ಹಿಂಬಾಕಿ ನೀಡಬೇಕು. 2025ರಿಂದ ವೇತನ ಪರಿಷ್ಕರಣೆ ಮಾಡಿದರೆ ಒಂದು ವರ್ಷ ನಷ್ಟವಾಗುತ್ತದೆ. 2024ರ ಜನವರಿಯಿಂದಲೇ ವೇತನ ಪರಿಷ್ಕರಿಸಬೇಕು' ಎಂದು ಪ್ರತಿಭಟನಕಾರರು ಉತ್ತರಿಸಿದರು.

ಕ್ರಿಯಾ ಸಮಿತಿಯ ಬಿ. ಜಯದೇವ ಅರಸ್, ವಿಜಯ ಭಾಸ್ಕರ ಡಿ.ಎ., ಎಚ್.ಎಸ್. ಮಂಜುನಾಥ್, ಸಿದ್ದನಗೌಡ ಪಾಟೀಲ, ಪ್ರಕಾಶ್, ಜ್ಯೋತಿ ಅನಂತಸುಬ್ಬರಾವ್, ಎಚ್.ಡಿ. ರೇವಪ್ಪ, ಮೋಹನ್‌ದಾಸ್, ವಿವಿಧ ಮುಖಂಡರು ಭಾಗವಹಿಸಿದ್ದರು.

ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಹೋರಾಟದ ಮುಂದಿನ ನಿರ್ಧಾರವನ್ನು ಪ್ರಕಟಿಸಿದ ಸಂದರ್ಭದಲ್ಲಿ ಮುಖಂಡರ ನಿಲುವನ್ನು ಸಾರಿಗೆ ನೌಕರರು ವಿರೋಧಿಸಿದರು–ಪ್ರಜಾವಾಣಿ ಚಿತ್ರ

ನೌಕರರ ವಿರೋಧ

ಪ್ರತಿಭಟನೆಯನ್ನು ಗುರುವಾರ ಒಂದೇ ದಿನಕ್ಕೆ ಮುಕ್ತಾಯಗೊಳಿಸಿರುವುದನ್ನು ಜಯದೇವ ಅರಸ್ ಘೋಷಣೆ ಮಾಡುತ್ತಿದ್ದಂತೆ ಕೆಲವು ನೌಕರರು ವಿರೋಧ ವ್ಯಕ್ತಪಡಿಸಿದರು.

'ಪ್ರತಿಭಟನೆ ಸ್ಥಗಿತಗೊಳಿಸಬಾರದು, ನ್ಯಾಯ ಸಿಗುವವರೆಗೆ ಧರಣಿ ಕುಳಿತುಕೊಳ್ಳಬೇಕು, ಮುಷ್ಕರ ನಡೆಸಬೇಕು' ಎಂದು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಸಲಹೆ ನೀಡಿದರು. 'ನೀವು ಪ್ರತಿಭಟನೆ ಸ್ಥಗಿತಗೊಳಿಸಲು ಎಷ್ಟು ತೆಗೆದುಕೊಂಡಿದ್ದೀರಿ' ಎಂದು ಕೆಲವರು ಪ್ರಶ್ನಿಸಿದರು.

ಕೆಲ ಹೊತ್ತು ಗೊಂದಲದ ಗೂಡಾಯಿತು. ವಿರೋಧ ವ್ಯಕ್ತಪಡಿಸಿ ಕೂಗಾಡುತ್ತಿದ್ದವರನ್ನು ನಿಯಂತ್ರಿಸಿ, ಕೆಲವರನ್ನು ಹೊರಗೆ ಕಳಿಸಿ ಪೊಲೀಸರು ಗೊಂದಲ ತಿಳಿಗೊಳಿಸಿದರು.

ಸುದ್ದಿ 2 ನಿಮಿಷ

ಕೊಡವ ಸಾಹಿತ್ಯ ಅಕಾಡೆಮಿ 15 ಮಂದಿಗೆ ಗೌರವ ಪ್ರಶಸ್ತಿ

ಮಡಿಕೇರಿ: ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯು 2026ನೇ ಸಾಲಿನ ಗೌರವ ಪ್ರಶಸ್ತಿಗೆ ವಿವಿಧ ಕ್ಷೇತ್ರದ 15 ಸಾಧಕರನ್ನು ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ.

ಫೆ. 28ರಂದು ಬೆಳಿಗ್ಗೆ 10 ಗಂಟೆಗೆ ಕೊಡಗಿನ ಗಡಿ ಭಾಗ ಕುಟ್ಟ ಗ್ರಾಮದ ಕೊಡವ ಸಮಾಜದಲ್ಲಿ ನಡೆಯುವ ಸಾಹಿತ್ಯ ಸಾಂಸ್ಕೃತಿಕ ವೈಭವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಜೊತೆಗೆ, 'ಕೊಡವ ಪುಸ್ತಕ ಪತ್ತಾಯ' (ಗ್ರಂಥ ಭಂಡಾರ)ವನ್ನು ಕುಟ್ಟ ಕೊಡವ ಸಮಾಜದಲ್ಲಿ ತೆರೆಯಲಾಗುತ್ತದೆ ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಚಿನ್ನಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಶಸ್ತಿಗೆ ಆಯ್ಕೆಯಾದವರು: ಮಲ್ಲೇಂಗಡ ದಾದ ಬೆಳ್ಯಪ್ಪ(ಸಮಾಜ ಸೇವೆ), ಚೆಪ್ಪುಡಿರ ತಿಲಕ್ ಸುಬ್ಬಯ್ಯ(ಸಮಾಜ-ಸಂಸ್ಕೃತಿ), ತೀತಮಾಡ ಅರ್ಜುನ್ ದೇವಯ್ಯ(ವ್ಯಕ್ತಿತ್ವ-ಸಮಾಜ ಕ್ಷೇತ್ರ), ಉದಿಯಂಡ ರೋಷನ್ ಸೋಮಣ್ಣ (ಸಾಹಿತ್ಯ-ಸಮಾಜ ಕ್ಷೇತ್ರ), ಚೆನಿಯಪಂಡ ಮನು ಮಂದಣ್ಣ (ಸಾಹಿತ್ಯ-ಸಂಸ್ಕೃತಿ), ಚೊಟ್ಟೆಯಂಡ ಅಪ್ಪಾಜಿ (ಸಂಸ್ಕೃತಿ), ಕಣೆಯರ ನಾಣಯ್ಯ (ಜಾನಪದ), ನಡಿಕೇರಿಯಂಡ ವಿಕ್ರಂ ಅಪ್ಪಯ್ಯ (ಕಲೆ-ಸಂಸ್ಕೃತಿ), ಚಮ್ಮಣಮಡ ವಾಣಿ ರಾಘವೇಂದ್ರ (ಸಾಹಿತ್ಯ), ಕುಡಿಯರ ಕೆ. ಚಿಣ್ಣಪ್ಪ (ಜಾನಪದ), ಸುಳ್ಳಿಮಡ ಗೌರಿ ನಂಜಪ್ಪ (ಜಾನಪದ), ಚೋಕಂಡ ಸಂಜು ಸುಬ್ಬಯ್ಯ (ಸಮಾಜ ಸೇವೆ), ಐಮಂಡ ರೂಪೇಶ್ ನಾಣಯ್ಯ (ಕಲಾ ಸೇವೆ), ಕಾಳೆಕುಟ್ಟಡ ಬೋಜಣ್ಣ (ಸಂಸ್ಕೃತಿ), ಕೊರಕುಟ್ಟಿರ ಸರ ಚಂಗಪ್ಪ (ಸಮಾಜಸೇವೆ).

130 ಕೆ.ಜಿ ಭಾರದ ಕಡಲಾಮೆ ರಕ್ಷಣೆ

ಕಾರವಾರ: ಇಲ್ಲಿನ ಕೋಡಿಬಾಗದ ಸಂತೋಷಿಮಾತಾ ದೇವಸ್ಥಾನದ ಪಕ್ಕದ ಕಾಳಿ ನದಿಯಲ್ಲಿ ಕಾಂಡ್ಲಾ ಸಸಿಗಳ ನಡುವೆ ಸಿಲುಕಿದ್ದ ಸುಮಾರು 130 ಕೆಜಿ ತೂಕದ ಹಸಿರು ಕಡಲಾಮೆಯನ್ನು (ಗ್ರೀನ್ ಸೀ ಟರ್ಟಲ್) ಗುರುವಾರ ರಕ್ಷಿಸಲಾಯಿತು.

ನದಿಯಲ್ಲಿ ನೀರಿನ ಹರಿವು ಕಡಿಮೆ ಇದ್ದ ಕಾರಣ ಕಾಂಡ್ಲಾ ಸಸಿಗಳ ನಡುವೆ ಸಿಲುಕಿ ಒದ್ದಾಡುತ್ತಿದ್ದ ಕಡಲಾಮೆಯನ್ನು ಮೀನುಗಾರರು ಗುರುತಿಸಿ, ಕಡಲಜೀವಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಕೇಂದ್ರಕ್ಕೆ ಮಾಹಿತಿ ನೀಡಿದರು. ಕೇಂದ್ರದ ತಜ್ಞರ ಜೊತೆ ಅರಣ್ಯ ಇಲಾಖೆಯ ಕೋಸ್ಟಲ್ ಮೆರೈನ್ ವಿಭಾಗದ ಸಿಬ್ಬಂದಿ ಸೇರಿ ಕಡಲಾಮೆಯನ್ನು ರಕ್ಷಿಸಿದರು.

'ಹಸಿರು ಕಡಲಾಮೆ ಪಶ್ಚಿಮ ಕರಾವಳಿಯ ಅಳಿವೆ ಪ್ರದೇಶದಲ್ಲಿ ಕಾಣಸಿಗುವುದು ವಿರಳ. ಸಮುದ್ರದ ಉಬ್ಬರ ಇದ್ದಾಗ ಅಳಿವೆಗೆ ಬಂದ ಆಮೆ ಇಳಿತದ ಬಳಿಕ ಸಮುದ್ರಕ್ಕೆ ಸಾಗಲಾಗದೆ ಕಾಂಡ್ಲಾ ಸಸಿಗಳ ನಡುವೆ ಸಿಲುಕಿರುವ ಸಾಧ್ಯತೆ ಇದೆ' ಎಂದು ಕಡಲಜೀವಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಮುಖ್ಯಸ್ಥ ಶಿವಕುಮಾರ ಹರಗಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕಡಲಾಮೆ ನಿತ್ರಾಣಗೊಂಡ ಕಾರಣ ಅದನ್ನು ಅರಣ್ಯ ಇಲಾಖೆ ಸುಪರ್ದಿಯಲ್ಲಿ ಇರಿಸಿದ್ದೇವೆ. ಕಡಲಾಮೆ ಬಗ್ಗೆ ನೈಪುಣ್ಯವುಳ್ಳ ತಜ್ಞರು ಕುಂದಾಪುರದಿಂದ ಚಿಕಿತ್ಸೆ ನೀಡಲು ಬರುತ್ತಾರೆ. ಚಿಕಿತ್ಸೆ ನೀಡಿದ ಬಳಿಕ ಅದನ್ನು ಸಮುದ್ರಕ್ಕೆ ಬಿಡಲಾಗುವುದು' ಎಂದು ಕೋಸ್ಟಲ್ ಮರೈನ್ ವಿಭಾಗದ ಆರ್‌ಎಫ್‌ಒ ಕಿರಣ್ ಮನವಾಚಾರಿ ತಿಳಿಸಿದರು.

'ಕೈ' ಸರ್ಕಾರ ಕಿತ್ತೊಗೆಯಲು ಬಿಜೆಪಿ ಸಂಕಲ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರ ಮತ್ತು ಹಗರಣಗಳಿಂದ ಕುಖ್ಯಾತಿ ಪಡೆದಿರುವ ಕಾಂಗ್ರೆಸ್ ಸರ್ಕಾರದ ಆಡಳಿತದಿಂದ ಜನ ಸಾಮಾನ್ಯರು ರೋಸಿ ಹೋಗಿದ್ದಾರೆ. ಆದ್ದರಿಂದ ಈ ಸರ್ಕಾರವನ್ನು ಕಿತ್ತೊಗೆಯಬೇಕು' ಎಂದು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಆ ಪಕ್ಷದ ನಾಯಕರು ಸಂಕಲ್ಪ ಮಾಡಿದರು.

ಸಭೆ ಉದ್ಘಾಟಿಸಿದ ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರು, 'ಇದು ಸಂಘಟನಾತ್ಮಕ ಸಭೆ ಯಲ್ಲ. ಕರ್ನಾಟಕದ ಇಂದಿನ ಸ್ಥಿತಿಯ ಆತ್ಮಾವಲೋಕನ ಸಭೆ. ಭ್ರಷ್ಟ ಸರ್ಕಾರವನ್ನು ತೊಲಗಿಸಿ ಅಧಿಕಾರ ಮರಳಿ ಪಡೆಯುವ ಸಂಕಲ್ಪದ ಸಭೆ' ಎಂದು ಹೇಳಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಎಲ್ಲ ನಾಯಕರೂ ಧ್ವನಿಗೂಡಿಸಿದರು.

ಕರ್ನಾಟಕ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ಮುಡಾ ಸೇರಿ ಹಲವು ಹಗರಣಗಳು ನಡೆದಿವೆ. ನೆರೆಯ ರಾಜ್ಯಗಳ ಚುನಾವಣೆಗೆ ಇಲ್ಲಿಂದ ಸರ್ಕಾರದ ಹಣವನ್ನು ಸಾಗಿಸಲಾಗಿದೆ. ಇದರ ವಿರುದ್ಧ ಪಕ್ಷದ ವತಿಯಿಂದ ಪಾದಯಾತ್ರೆ ಮತ್ತು ಹೋರಾಟ ನಡೆದಿದೆ. ರಾಜ್ಯದ ಜನರ ಹಿತಕ್ಕಿಂತ ಅಧಿಕಾರ ಹಿಡಿದ ದಿನದಿಂದಲೂ ಕಾಂಗ್ರೆಸ್‌ನಲ್ಲಿ ಒಳಜಗಳ ಆರಂಭವಾಗಿದೆ. ಈಗಲೂ ನಿಂತಿಲ್ಲ. ಇದು ಮತ ಹಾಕಿ ಗೆಲ್ಲಿಸಿರುವ ಜನರಿಗೆ ಮಾಡುತ್ತಿರುವ ಅವಮಾನ ಎಂದು ಹೇಳಿದರು.

'ಮುಂಬರುವ ಸ್ಥಳೀಯ ಸಂಸ್ಥೆಗಳ ಮತ್ತು ಜಿಬಿಎ ವ್ಯಾಪ್ತಿಯ ಪಾಲಿಕೆಗಳ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸುವ ಸಂಕಲ್ಪ ಮಾಡಬೇಕು. ಇದು ಪರೀಕ್ಷೆಯ ಕಾಲವಾಗಿದ್ದು, ಸಂಘಟನೆಯನ್ನು ತಳಮಟ್ಟದಿಂದ ಬಲಪಡಿಸಬೇಕು. ಕಾರ್ಯಕರ್ತರು ಮನೆ ಮನೆಗೆ ತೆರಳಿ ಕಾಂಗ್ರೆಸ್ಸಿನ ವೈಫಲ್ಯಗಳನ್ನು ತಿಳಿಸಬೇಕು' ಎಂದು ಶೇಖಾವತ್ ಸಲಹೆ ನೀಡಿದರು.

ಪಕ್ಷದ ಕಾರ್ಯಕರ್ತೆಯರಿಂದ 'ವಂದೇ ಮಾತರಂ' ಗಾಯನ

ಬಿಎಸ್‌ವೈ ಸಮರ್ಥ ನಾಯಕ

'ದೇಶದ ಮಟ್ಟದಲ್ಲಿ ಪಕ್ಷಕ್ಕೆ ಮೋದಿ ಸಮರ್ಥ ನಾಯಕತ್ವ ನೀಡುತ್ತಿದ್ದಾರೆ. ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪ ಸಮರ್ಥ ನಾಯಕತ್ವ ನೀಡಿದ್ದರು. ಯಡಿಯೂರಪ್ಪ ನಮಗೆ ಆದರ್ಶಪ್ರಾಯರು' ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದರು.

ಯಡಿಯೂರಪ್ಪನವರನ್ನು ಅಭಿನಂದಿಸಿ ಮಾತನಾಡಿದ ಅವರು, 'ಚುನಾವಣಾ ತಂತ್ರಗಾರಿಕೆಯಲ್ಲಿ ಅವರಿಗೆ ಸರಿಸಾಟಿ ಯಾರೂ ಇಲ್ಲ. ಆಡಳಿತದಲ್ಲೂ ದೂರದೃಷ್ಟಿ, ನಾಡಿನ ಅಭಿವೃದ್ಧಿಗೆ ಶ್ರಮಿಸಿದರು. ನಮ್ಮ ಪಕ್ಷವನ್ನು ಕರ್ನಾಟಕದಲ್ಲಿ ಉತ್ತುಂಗಕ್ಕೆ ಏರಿಸಿದವರು' ಎಂದು ಸ್ಮರಿಸಿದರು.

'ಸಿದ್ದರಾಮಯ್ಯ ಸರ್ವಾಧಿಕಾರಿ'

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, 'ಕಳೆದ ಎರಡೂ ಮುಕ್ಕಾಲು ವರ್ಷದಲ್ಲಿ ಸಿದ್ದರಾಮಯ್ಯ ಅವರು ಸರ್ವಾಧಿಕಾರಿಯಂತೆ ಆಡಳಿತ ನಡೆಸಿದ್ದಾರೆ. ಭ್ರಷ್ಟಾಚಾರ ಮಿತಿ ಮೀರಿದ್ದು, ಅವರ ವಿರುದ್ಧ ಕಾಂಗ್ರೆಸ್ ಶಾಸಕರೇ ದಂಗೆ ಎದ್ದಿದ್ದಾರೆ' ಎಂದರು.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ. ಮೈಸೂರು ಮಾದಕ ದ್ರವ್ಯಗಳ ಉತ್ಪಾದನಾ ಕೇಂದ್ರವಾಗಿ ಪರಿಣಮಿಸಿದೆ. ಯಲ್ಲಾಪುರದ ದಲಿತ ಮಹಿಳೆ ಹತ್ಯೆ, ಕೊಪ್ಪಳದಲ್ಲಿ ದಲಿತ ವ್ಯಕ್ತಿಯ ಹತ್ಯೆ ಆದರೂ ಪರಿಹಾರ ನೀಡಿಲ್ಲ ಕೇವಲ ಮುಸ್ಲಿಂ ಓಲೈಕೆಯೊಂದೇ ಸರ್ಕಾರದ ಆದ್ಯತೆ ಆಗಿದೆ ಎಂದು ಕಿಡಿಕಾರಿದರು.

2028ರ ಚುನಾವಣೆಗೆ ಬಹಳ ದೂರ ಇಲ್ಲ. ಕರ್ನಾಟಕದಲ್ಲಿ ಬಿಜೆಪಿ ಗತವೈಭವ ಮರುಕಳಿಸಲು ನಾವು ಹಗಲು- ರಾತ್ರಿ ಶ್ರಮ ಹಾಕಬೇಕು. ಮುಂಬರುವುದು ಚುನಾವಣೆ ದಿನಗಳು.ಸರಣಿ ಚುನಾವಣೆ ಗೆಲ್ಲಲು ಕಾರ್ಯಕರ್ತರು ಸಜ್ಜಾಗಬೇಕಾಗಿದೆ ಎಂದು ವಿಜಯೇಂದ್ರ ಹೇಳಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಸಂಸದರಾದ ಜಗದೀಶ ಶೆಟ್ಟರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಭಾಗವಹಿಸಿದ್ದರು. ಕಾರ್ಯಕಾರಿಣಿಯಲ್ಲಿ 1,500 ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕಾರಿಣಿಯ ನಿರ್ಣಯಗಳು

- ಬ್ರ್ಯಾಂಡ್ ಬೆಂಗಳೂರನ್ನು ಕಸದ ಗುಂಡಿ ಬೆಂಗಳೂರನ್ನಾಗಿ ಮಾಡಲಾಗಿದೆ. ರಿಯಲ್ ಎಸ್ಟೇಟ್ ಮಾಫಿಯಾದವರಿಗೆ ನಗರವನ್ನು ಚಿನ್ನದ ತಟ್ಟೆಯಲ್ಲಿ ಬಳುವಳಿಯಾಗಿ ನೀಡಿದೆ. ರಸ್ತೆ, ಕಸ, ಸಂಚಾರ ಮತ್ತು ಭ್ರಷ್ಟಾಚಾರ ಸಮಸ್ಯೆಗಳ ಪರಿಹಾರಕ್ಕೆ ಕಾಲಬದ್ಧ ಯೋಜನೆ ರೂಪಿಸಬೇಕು.
- ಎಸ್‌ಸಿ ಎಸ್‌ಪಿ– ಟಿಎಸ್‌ಪಿಯ ₹42,000 ಕೋಟಿಯನ್ನು ಗ್ಯಾರಂಟಿ ಮತ್ತು ಅನ್ಯ ಉದ್ದೇಶಗಳಿಗೆ ಬಳಸಿದ್ದಾರೆ. ಆ ಹಣವನ್ನು ವಾಪಸ್ ಪಡೆದು ಎಸ್‌ಸಿ–ಎಸ್‌ಟಿ ಸಮುದಾಯದ ಕಲ್ಯಾಣಕ್ಕೆ ಬಳಸಬೇಕು. ರಾಜ್ಯದಲ್ಲಿ 2.85 ಲಕ್ಷ ಹುದ್ದೆಗಳು ಭರ್ತಿಯಾಗದೇ ಉಳಿದಿವೆ. ಇದರಲ್ಲಿ ಪರಿಶಿಷ್ಟರಿಗೆ ಸಿಗಬೇಕಾಗಿರುವ 1,42,500 ಹುದ್ದೆಗಳನ್ನು ಆದಷ್ಟು ಬೇಗ ಭರ್ತಿ ಮಾಡಬೇಕು.
- ಸಿದ್ದರಾಮಯ್ಯ ನೇತೃತ್ವದ ನಿಷ್ಕ್ರಿಯ, ನಿಷ್ಪ್ರಯೋಜಕ, ಭ್ರಷ್ಟಸರ್ಕಾರ ಒಂದು ಸಾವಿರ ವರ್ಷ ಪೂರೈಸಿದೆ. ಆದರೆ ಇವರ ಸಾಧನೆ ಜಾಹೀರಾತಿಗೆ ಸೀಮಿತವಾಗಿದೆ. ರಾಜ್ಯದ ಜನತೆ ಇದನ್ನು ನಿರ್ಲಕ್ಷಿಸಿದ್ದಾರೆ. ಇದು ಕುಸಿದಿರುವ ಜನಪ್ರಿಯತೆಗೆ ಸಾಕ್ಷಿ.

'ಮೈತ್ರಿ ಬಗ್ಗೆ ಬಹಿರಂಗ ಚರ್ಚೆ ಬೇಡ'

'ಮುಂಬರುವ ಚುನಾವಣೆಗಳಲ್ಲಿ ಜೆಡಿಎಸ್ ಜತೆಗಿನ ಮೈತ್ರಿ ಕುರಿತು ಯಾರೂ ಬಹಿರಂಗ ಹೇಳಿಕೆಗಳನ್ನು ನೀಡುವುದು ಬೇಡ' ಎಂದು ಪಕ್ಷದ ಪ್ರಮುಖರ ಸಮಿತಿ ಸಭೆ ತೀರ್ಮಾನ ತೆಗೆದುಕೊಂಡಿದೆ.

ಕಾರ್ಯಕಾರಿಣಿ ಸಭೆಯ ಬಳಿಕ ಪ್ರಮುಖರ ಸಮಿತಿ ಸಭೆ ನಡೆಯಿತು. ಆದಷ್ಟು ಬೇಗ ಎರಡು ಪಕ್ಷಗಳ ಸಮನ್ವಯ ಸಮಿತಿ ಸಭೆ ಕರೆದು ಗೊಂದಲವನ್ನು ನಿವಾರಿಸಲು ನಿರ್ಧರಿಸಲಾಯಿತು ಎಂದು ಮೂಲಗಳು ಹೇಳಿವೆ.

ಸಭೆಯಲ್ಲಿ ಬಿ.ವೈ. ವಿಜಯೇಂದ್ರ, ಬಿ.ಎಸ್. ಯಡಿಯೂರಪ್ಪ. ಪ್ರಲ್ಹಾದ ಜೋಶಿ, ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ಡಿ.ವಿ.ಸದಾನಂದಗೌಡ, ಗೋವಿಂದ ಕಾರಜೋಳ, ಬಿ.ಶ್ರೀರಾಮುಲು, ಸಿ.ಎನ್. ಅಶ್ವತ್ಥನಾರಾಯಣ ಭಾಗವಹಿಸಿದ್ದರು.

ಕರ್ನಾಟಕ ಸೇರಿ 22 ರಾಜ್ಯಗಳಲ್ಲಿ ಏಪ್ರಿಲ್‌ನಿಂದ ಎಸ್‌ಐಆರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸೇರಿದಂತೆ 22 ರಾಜ್ಯಗಳಲ್ಲಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)ಏಪ್ರಿಲ್‌ನಿಂದ ಆರಂಭಗೊಳ್ಳುವ ನಿರೀಕ್ಷೆಯಿದೆ ಎಂದು ಕೇಂದ್ರ ಚುನಾವಣಾ ಆಯೋಗವು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ತಿಳಿಸಿದ್ದಾರೆ.

ಎಸ್‌ಐಆರ್‌ಗೆ ಸಂಬಂಧಿಸಿದಂತೆ ಪೂರ್ವ ಸಿದ್ಧತೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು ಎಂದು ಚುನಾವಣಾ ಇಲಾಖೆಯ ಕಾರ್ಯದರ್ಶಿ ಪವನ್ ದಿವಾಣ್ ಅವರು ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ದೇಶದಾದ್ಯಂತ ಎಸ್‌ಐಆರ್ ನಡೆಸಲಾಗುವುದು ಎಂದು ಕೇಂದ್ರ ಚುನಾವಣಾ ಆಯೋಗವು ಕಳೆದ ವರ್ಷ ಜೂನ್ 24ರಂದು ಘೋಷಿಸಿತ್ತು. 2025ರ ಜೂನ್‌ನಲ್ಲಿ ಬಿಹಾರದಲ್ಲಿ ಈ ಪ್ರಕ್ರಿಯೆ ನಡೆದಿರುವ ಕಾರಣ, ದೇಶದ ಉಳಿದ ರಾಜ್ಯಗಳಲ್ಲಿ ಪೂರ್ವ ಸಿದ್ಧತೆ ಚಟುವಟಿಕೆಗಳನ್ನು ಆರಂಭಿಸಬೇಕು ರಾಜ್ಯ ಚುನಾವಣಾ ಆಯೋಗದ ಸಿಇಒಗಳಿಗೆ ಸೂಚನೆ ನೀಡಲಾಗಿದೆ.

ಸಿಟಿ–ಎಂಆರ್‌ಐ ಸ್ಕ್ಯಾನ್ 2 ದಿನದಲ್ಲಿ ಆರಂಭ: ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಆಸ್ಪತ್ರೆಗಳಲ್ಲಿ ಸಿಟಿ–ಎಂಆರ್‌ಐ ಸ್ಕ್ಯಾನ್ ಸೇವೆ ಸ್ಥಗಿತಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಎಚ್‌ಎಂ) ಸ್ಪಷ್ಟನೆ ನೀಡಿದ್ದು, 'ಎರಡು ಮೂರು ದಿನಗಳಲ್ಲಿ ಎಲ್ಲ ಜಿಲ್ಲೆಗಳಲ್ಲಿ ಸಿಟಿ–ಎಂಆರ್‌ಐ ಸ್ಕ್ಯಾನ್ ಘಟಕಗಳು ಸಂಪೂರ್ಣ ಕಾರ್ಯನಿರ್ವಹಿಸಲಿವೆ' ಎಂದು ತಿಳಿಸಿದೆ.

ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) 13 ಜಿಲ್ಲಾ ಆಸ್ಪತ್ರೆಗಳಲ್ಲಿ ಸಿಟಿ ಸ್ಕ್ಯಾನ್ ಸೇವೆಗಳನ್ನು, 5 ಜಿಲ್ಲಾ ಆಸ್ಪತ್ರೆಗಳಲ್ಲಿ ಎಂಆರ್‌ಐ ಸ್ಕ್ಯಾನ್ ಸೇವೆಗಳನ್ನು ಒದಗಿಸಲು ಎಂ/ಎಸ್ ಕೃಷ್ಣ ಡಯಾಗ್ನಾಸ್ಟಿಕ್ಸ್ ಲಿಮಿಟೆಡ್ 2017ರಲ್ಲಿ ರಾಜ್ಯ ಸರ್ಕಾರದ ಜತೆಗೆ ಒಪ್ಪಂದ ಮಾಡಿಕೊಂಡಿತ್ತು. ಈ ಸಂಸ್ಥೆಯು ಸೇವೆಗಳನ್ನು ಹಠಾತ್ತನೆ ನಿಲ್ಲಿಸಿದೆ. ಜಿಲ್ಲಾ ಆಸ್ಪತ್ರೆಗಳಲ್ಲಿ ಸಿಟಿ ಮತ್ತು ಎಂಆರ್‌ಐ ಸೇವೆಗಳು ನಿರಂತರವಾಗಿ ಲಭ್ಯವಾಗುವಂತೆ ನೋಡಿಕೊಳ್ಳಲು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ಅಡಿ ಪಟ್ಟಿ ಮಾಡಲಾದ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಪರ್ಯಾಯ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಎನ್‌ಎಚ್‌ಎಂ ವ್ಯವಸ್ಥಾಪಕ ನಿರ್ದೇಶಕ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಸ್ಪಷ್ಟಪಡಿಸಿದ್ದಾರೆ.

'ಜಿಲ್ಲಾ ಆಸ್ಪತ್ರೆಗಳಿಗೆ ಹತ್ತಿರದಲ್ಲಿರುವ ಆಸ್ಪತ್ರೆಗಳಲ್ಲಿ ಸಿಟಿ–ಎಂಆರ್‌ಐ ಸ್ಕ್ಯಾನ್ ಸೇವೆ ಒದಗಿಸಲಾಗುತ್ತಿದೆ. 2019ರಿಂದ ₹143 ಕೋಟಿ ಬಾಕಿ ಹಣವನ್ನು ಪಾವತಿಸದಿರುವ ಬಗ್ಗೆ ಸಂಸ್ಥೆ ದೂರಿದೆ. ಇಷ್ಟು ಮೊತ್ತ ನೀಡಬೇಕು ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಪಾವತಿಸಿಲ್ಲ' ಎಂದು ತಿಳಿಸಿದ್ದಾರೆ.

'ರಾಜ್ಯದಾದ್ಯಂತ ಸಿಟಿ–ಎಂಆರ್‌ಐ ಸೇವೆಗಳನ್ನು ಒದಗಿಸಲು ರಾಜ್ಯ ಸರ್ಕಾರ ಅಗತ್ಯ ಹಣವನ್ನು ಹೊಂದಿದೆ. ಈಗಾಗಲೇ ಕೆಲವು ಸ್ಥಳಗಳಲ್ಲಿ ಪರ್ಯಾಯ ಸಂಸ್ಥೆಗಳಲ್ಲಿ ಸಿಟಿ ಮತ್ತು ಎಂಆರ್‌ಐ ಸ್ಕ್ಯಾನಿಂಗ್ ಸೇವೆಗಳು ಪುನರಾರಂಭಗೊಂಡಿವೆ' ಎಂದು ಹೇಳಿದ್ದಾರೆ.

ಎಂಜಿನಿಯರ್ ಅಮಾನತಿಗೆ ಎಲ್ ಆ್ಯಂಡ್ ಟಿಗೆ ಸೂಚನೆ

ವರದಿ ಪರಿಣಾಮ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕುಡಿಯುವ ನೀರಿನ ಸಮಸ್ಯೆಗಳಿಗೆ ತುರ್ತು ಸ್ಪಂದನೆಯ ಮೊಬೈಲ್ ಸಂಖ್ಯೆಗೆ 'ಸ್ವಿಚ್ಡ್ ಆಫ್' ಕಾಲರ್ ಟ್ಯೂನ್ ಇಟ್ಟುಕೊಂಡ 'ತುರ್ತು ಪರಿಹಾರ ತಂಡ'ದ ಎಂಜಿನಿಯರ್ ಅನಿಲ್ ಅವರನ್ನು ಅಮಾನತುಗೊಳಿಸಲು ಕೆಯುಐಡಿಎಫ್‌ಸಿ, ಎಲ್ ಆ್ಯಂಡ್ ಟಿ ಕಂಪನಿ ಪ್ರಧಾನ ವ್ಯವಸ್ಥಾಪಕರಿಗೆ ಸೂಚಿಸಿದೆ.

ನಗರದ 37, 45, 44 ವಾರ್ಡ್‌ಗಳಿಗೆ ನೆಟ್‌ವರ್ಕ್ ಎಂಜಿನಿಯರ್ ಆಗಿದ್ದ ಅನಿಲ್ ಎಂಬುವವರು ತಮ್ಮ ಮೊಬೈಲ್ ಸಂಖ್ಯೆಗೆ 'ಸ್ವಿಚ್ಡ್ ಆಫ್' ಎಂಬ ಕಾಲರ್ ಟ್ಯೂನ್ ಸೆಟ್ ಮಾಡಿಕೊಂಡಿದ್ದು, ಸಾರ್ವಜನಿಕರು ಸಮಸ್ಯೆ ಎದುರಿಸುತ್ತಿದ್ದರು. ಈ ಕುರಿತು 'ಪ್ರಜಾವಾಣಿ'ಯ ಗುರುವಾರದ ಸಂಚಿಕೆಯಲ್ಲಿ 'ತುರ್ತು ಸ್ಪಂದನೆ ಮೊಬೈಲ್ ಸಂಖ್ಯೆಗೆ 'ಸ್ವಿಚ್ಡ್ ಆಫ್' ಟ್ಯೂನ್ ಇಟ್ಟ ಎಂಜಿನಿಯರ್' ಶೀರ್ಷಿಕೆ ಅಡಿ ವರದಿ ಪ್ರಕಟಿಸಲಾಗಿತ್ತು.

ವರದಿಯನ್ನು ಆಧರಿಸಿ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ (ಕೆಯುಐಡಿಎಫ್‌ಸಿ) ಕುಸ್ಸೆಂಪ್ ಯೋಜನಾ ಅನುಷ್ಠಾನ ಘಟಕದ ಸೂಪರಿಂಟೆಂಡೆಂಟ್ ಎಂಜಿನಿಯರ್ ಆರ್.ಪಿ. ಜಾಧವ್ ಅವರು ಅಮಾನತಿಗೆ ಸೂಚಿಸಿದ್ದಾರೆ.

'ವರದಿ ಆಧರಿಸಿ ಅನಿಲ್ ಅವರನ್ನು ವಿಚಾರಿಸಿದಾಗ ತಮ್ಮ ಮೊಬೈಲ್ ಸಂಖ್ಯೆಗೆ ಸ್ವಿಚ್ಡ್ ಆಫ್ ಟ್ಯೂನ್ ಸೆಟ್ ಮಾಡಿಕೊಂಡಿದ್ದು ನಿಜವೆಂದು ತಿಳಿಯಿತು. ಅವರಿಗೆ ಕೊಟ್ಟ ಕೆಲಸದಲ್ಲಿ ಬೇಜವಾಬ್ದಾರಿತನ ತೋರಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಕೂಡಲೇ ಅವರನ್ನು ಅಮಾನತುಗೊಳಿಸಿ ಇಂದೇ ವರದಿ ಸಲ್ಲಿಸಲು ಸೂಚಿಸಲಾಗಿದೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಮೈಸೂರು ಅರಣ್ಯ ಭವನಕ್ಕೆ ಮುತ್ತಿಗೆ ಹಾಕಲು ಯತ್ನ

ಸಫಾರಿ ಮರು ಆರಂಭಕ್ಕೆ ರೈತರ ವಿರೋಧ

ಪ್ರಜಾವಾಣಿ ವಾರ್ತೆ

ಮೈಸೂರು/ಚಾಮರಾಜನಗರ: ನಾಗರಹೊಳೆ ಮತ್ತು ಬಂಡೀಪುರ ಹುಲಿ ಸಂರಕ್ಷಿತ ಅರಣ್ಯದೊಳಗೆ ಸಫಾರಿಯನ್ನು ಮರು ಆರಂಭಿಸಲು ಸರ್ಕಾರ ನಿರ್ಧರಿಸಿರುವುದನ್ನು ಖಂಡಿಸಿ ಮೈಸೂರಿನ ಅರಣ್ಯ ಭವನ ಹಾಗೂ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಮೇಲುಕಾಮನಹಳ್ಳಿಯ ಸಫಾರಿ ಕೇಂದ್ರದ ಎದುರು ರೈತರು ಗುರುವಾರ ಪ್ರತಿಭಟನೆ ನಡೆಸಿದರು.

ಸಫಾರಿ ಕೇಂದ್ರದ ಎದುರು ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಮುಖಂಡ ಹೊನ್ನೂರು ಪ್ರಕಾಶ್, 'ಸಫಾರಿ ಸ್ಥಗಿತಗೊಂಡ ಬಳಿಕ ಜಿಲ್ಲೆಯಲ್ಲಿ ಮಾನವ–ಪ್ರಾಣಿ ಸಂಘರ್ಷ ಕಡಿಮೆಯಾಗಿದೆ. ಸಫಾರಿಯಿಂದ ಬರುವ ಆದಾಯವೇ ಸರ್ಕಾರಕ್ಕೆ ಮುಖ್ಯವಾಗಿದ್ದರೆ ರೈತರೆಲ್ಲರೂ ಭಿಕ್ಷೆ ಬೇಡಿ ಹಣ ನೀಡುತ್ತೇವೆ. ಸಫಾರಿ ಮಾತ್ರ ಆರಂಭಿಸಬಾರದು' ಎಂದು ಒತ್ತಾಯಿಸಿದರು.

'ಪ್ರವಾಸೋದ್ಯಮದ ಬಗ್ಗೆ ಕಾಳಜಿ ಇದ್ದರೆ ಕಾಡಂಚಿನಲ್ಲಿ ಕೃಷಿ ಪ್ರವಾಸೋದ್ಯಮಕ್ಕೆ ಒತ್ತು ನೀಡಲಿ. ಪರಿಸರ ಸ್ನೇಹಿ ಹೋಮ್‌ಸ್ಟೇ, ಕಟ್ಟಡಗಳ ನಿರ್ಮಾಣಕ್ಕೆ ರೈತರಿಗೆ ಅನುಮತಿ ನೀಡಲಿ. ರೆಸಾರ್ಟ್ ಹಾಗೂ ಹೋಮ್‌ಸ್ಟೇಗಳ ಮಾಲೀಕರ ಲಾಬಿಗೆ ಮಣಿದು ಸಫಾರಿ ಮರು ಆರಂಭಿಸಿದರೆ ರಾಜ್ಯದಾದ್ಯಂತ ಹೋರಾಟ ತೀವ್ರಗೊಳ್ಳಲಿದೆ' ಎಂದು ಎಚ್ಚರಿಸಿದರು.

'ಸಫಾರಿಗೆ ವಿರೋಧ ವ್ಯಕ್ತಪಡಿಸಿದ್ದಕ್ಕೆ ರೆಸಾರ್ಟ್ ಹಾಗೂ ಹೋಮ್‌ಸ್ಟೇ ಮಾಲೀಕರು ಬೆದರಿಕೆ ಹಾಕಿದ್ದು, ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ' ಎಂದು ತಿಳಿಸಿದರು.

ಮುತ್ತಿಗೆಗೆ ಯತ್ನ: ಮೈಸೂರಿನ ಅರಣ್ಯ ಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಮುಖಂಡರು, 'ಬೇಡ ಬೇಡ ಸಫಾರಿ ಬೇಡ', 'ಬೇಕೆ ಬೇಕು ನ್ಯಾಯ ಬೇಕು', 'ಸಫಾರಿ ಆರಂಭಿಸಿರುವ ಸರ್ಕಾರಕ್ಕೆ ಧಿಕ್ಕಾರ' ಘೋಷಣೆ ಕೂಗಿದರು.

'ಸರ್ಕಾರವು ತನ್ನ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ಅರಣ್ಯ ಸಚಿವರು ಮೈಸೂರಿಗೆ ಪ್ರವೇಶಿಸಲು ಬಿಡುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸುತ್ತೇವೆ' ಎಂದು ಎಚ್ಚರಿಕೆ ನೀಡಿದರು.

ಸಫಾರಿ ಮರು ಆರಂಭಿಸುವ ರಾಜ್ಯ ಸರ್ಕಾರದ ನಿರ್ಧಾರ ಖಂಡಿಸಿ ಗುಂಡ್ಲುಪೇಟೆ ತಾಲ್ಲೂಕಿನ ಮೇಲುಕಾಮನಹಳ್ಳಿ ಸಫಾರಿ ಕೇಂದ್ರದ ಎದುರು ಗುರುವಾರ ರೈತರು ಪ್ರತಿಭಟನೆ ನಡೆಸಿದರು

ಸಫಾರಿ ಆರಂಭಕ್ಕೆ ಒತ್ತಾಯ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ರೆಸಾರ್ಟ್, ಹೋಮ್‌ಸ್ಟೇ ಸಿಬ್ಬಂದಿ, ವ್ಯಾಪಾರಿಗಳು ಹಾಗೂ ಸ್ಥಳೀಯರು 'ಸಫಾರಿ ಮರು ಆರಂಭವಾಗಬೇಕು' ಎಂದು ಒತ್ತಾಯಿಸಿ ಘೋಷಣೆ ಕೂಗಿದರು.

'ಸಫಾರಿ ನಂಬಿಕೊಂಡು ಐದು ಸಾವಿರಕ್ಕೂ ಹೆಚ್ಚು ಕುಟುಂಬಗಳು ಬದುಕುತ್ತಿದ್ದು, ಅವರೆಲ್ಲ ಬೀದಿಗೆ ಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಬಾರದು' ಎಂದು ಒತ್ತಾಯಿಸಿದರು.ಈ ಸಂದರ್ಭ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು. ಮಧ್ಯೆ ಪ್ರವೇಶಿಸಿದ ಪೊಲೀಸರು ಸ್ಥಳೀಯರು ಹಾಗೂ ರೈತರನ್ನು ವಶಕ್ಕೆ ತೆಗೆದುಕೊಂಡು ಬಳಿಕ ಬಿಡುಗಡೆ ಮಾಡಿದರು.

ಶುದ್ಧ ನೀರು ಪೂರೈಕೆ ಏರುಪೇರು

ಒಂದನೇ ಪುಟದಿಂದ...

ಆದರೆ, ಕೆಲವು ಜಿಲ್ಲೆಗಳಲ್ಲಿ ಖಾಸಗಿ ಏಜೆನ್ಸಿಗಳು ವಿದ್ಯುತ್ ಬಿಲ್ ಪಾವತಿ ಮಾಡದೆ ಬಾಕಿ ಉಳಿಸಿರುವ ಕಾರಣ ಈ ಹಸ್ತಾಂತರ ಪ್ರಕ್ರಿಯೆ ನಡೆದಿಲ್ಲ' ಎಂದು ಇಲಾಖೆಯ ಕಾರ್ಯಪಾಲಕ ಎಂಜಿನಿಯರೊಬ್ಬರು ತಿಳಿಸಿದರು.

'ವಿವಿಧ ಕಡೆ ಅಂದಾಜು ತಲಾ ₹12 ಲಕ್ಷ ವೆಚ್ಚದಲ್ಲಿ ಶುದ್ಧ ನೀರಿನ ಘಟಕ ನಿರ್ಮಿಸಿ ಹಲವು ವರ್ಷಗಳೇ ಕಳೆದಿವೆ. ಈ ಘಟಕಗಳು ತಾಂತ್ರಿಕ ಸಮಸ್ಯೆ, ನಿರ್ವಹಣೆ ಕೊರತೆಯಿಂದ ಉಪಯೋಗಕ್ಕೆ ಬಾರದಂತಾಗಿವೆ. ಕೆಲವು ಗ್ರಾಮಗಳಲ್ಲಿ ಶುದ್ಧ ನೀರಿನ ಘಟಕ ಅಳವಡಿಸಿದ ದಿನದಿಂದ ತೆರೆದೇ ಇಲ್ಲ. ಇನ್ನೂ ಕೆಲವೆಡೆ ವಿದ್ಯುತ್ ಬಾಕಿ ಉಳಿಸಿಕೊಂಡ ಕಾರಣ ವಿದ್ಯುತ್ ಸಂಪರ್ಕವನ್ನು ಎಸ್ಕಾಂ ಅಧಿಕಾರಿಗಳು ಕಡಿತಗೊಳಿಸಿದ್ದಾರೆ' ಎಂದು ಅವರು ತಿಳಿಸಿದರು.

'ಶುದ್ಧ ಕುಡಿಯುವ ನೀರಿನ ಘಟಕದ ಯಂತ್ರಗಳಲ್ಲಿ ಮೆಂಬರೇನ್ ಅತಿ ಮುಖ್ಯ ಭಾಗ. ನೀರನ್ನು ಭೌತಿಕವಾಗಿ ಸೋಸುವ ಮೆಂಬರೇನ್‌ಗೆ ಕನಿಷ್ಠ ₹23 ಸಾವಿರದಿಂದ ಗರಿಷ್ಠ ₹30 ಸಾವಿರ ಬೆಲೆಯಿದೆ. ಒಂದೂವರೆ ವರ್ಷದವರೆಗೂ ಇದು ಕಾರ್ಯನಿರ್ವಹಿಸುತ್ತದೆ. ಒಂದು ಘಟಕಕ್ಕೆ ಎರಡು ಮೆಂಬರೇನ್ ಅವಶ್ಯ. ಇಲಾಖೆ ನೀಡಿರುವ ₹50 ಸಾವಿರ ಅನುದಾನದಲ್ಲಿ ಈ ಮೆಂಬರೇನ್‌ಗಳನ್ನು ಬದಲಾಯಿಸಲಷ್ಟೆ ಸಾಧ್ಯ. ಸರ್ಕಾರ ಹಂಚಿಕೆ ಮಾಡಿರುವ ಈ ಹಣದಲ್ಲಿ ಪೂರ್ಣ ಪ್ರಮಾಣದ ದುರಸ್ತಿ ಅಸಾಧ್ಯ' ಎಂದೂ ಅವರು ತಿಳಿಸಿದರು.

'ನಿರ್ವಹಣೆಗೆ ಹೆಚ್ಚು ಅನುದಾನ ಬೇಕು'

'ನಿರ್ವಹಣೆಗೆ ಅಗತ್ಯವಾದಷ್ಟು ಅನುದಾನವನ್ನು ಇಲಾಖೆ ಒದಗಿಸದೇ ಇರುವುದರಿಂದ ಘಟಕಗಳಿದ್ದರೂ ಜನರಿಗೆ ಉಪಯೋಗ ಇಲ್ಲದಂತಾಗಿದೆ. ಇಲಾಖೆ ಅನುದಾನ ನೀಡದಿದ್ದರೆ ಕರ ವಸೂಲಿ ಹಣದಿಂದ ನಿರ್ವಹಣೆ ಮಾಡಬೇಕಾಗುತ್ತದೆ. ಒಂದು ಘಟಕದ ಸಂಪೂರ್ಣ ದುರಸ್ತಿಗೆ ಕನಿಷ್ಠ ₹3.50 ಲಕ್ಷ ವೆಚ್ಚ ತಗುಲಲಿದೆ. ರಾಜ್ಯದಲ್ಲಿರುವ ಬಹುತೇಕ ಘಟಕಗಳು ಸಂಪೂರ್ಣ ದುರಸ್ತಿಯಲ್ಲಿವೆ. ಇಲಾಖೆ ಹೆಚ್ಚಿನ ಅನುದಾನ ನೀಡಿದರೆ ಮಾತ್ರ ಘಟಕಗಳು ನಿರ್ವಹಿಸುವಂತೆ ಮಾಡಲು ಸಾಧ್ಯ' ಎಂದು ಇಲಾಖೆಯ ಎಂಜಿನಿಯರ್ ಮಾಹಿತಿ ನೀಡಿದರು.

ಯಾವ ಜಿಲ್ಲೆಯಲ್ಲಿ ಎಷ್ಟು ಘಟಕಗಳ ದುರಸ್ತಿಗೆ ತಲಾ ₹50 ಸಾವಿರ

ಬಾಗಲಕೋಟೆ	110	ದಾವಣಗೆರೆ	29	ರಾಯಚೂರು	91
ಬಳ್ಳಾರಿ	45	ಧಾರವಾಡ	116	ರಾಮನಗರ	98
ಬೆಳಗಾವಿ	169	ಗದಗ	124	ಶಿವಮೊಗ್ಗ	7
ಬೆಂ. ಗ್ರಾಮೀಣ	12	ಹಾಸನ	18	ತುಮಕೂರು	123
ಬೆಂ. ನಗರ	79	ಹಾವೇರಿ	112	ಉಡುಪಿ	22
ಬೀದರ್	69	ಕಲಬುರಗಿ	358	ಉತ್ತರಕನ್ನಡ	65
ಚಾಮರಾಜನಗರ	12	ಕೊಡಗು	7	ವಿಜಯನಗರ	20
ಚಿಕ್ಕಬಳ್ಳಾಪುರ	74	ಕೋಲಾರ	19	ವಿಜಯಪುರ	243
ಚಿಕ್ಕಮಗಳೂರು	25	ಕೊಪ್ಪಳ	280	ಯಾದಗಿರಿ	247
ಚಿತ್ರದುರ್ಗ	92	ಮಂಡ್ಯ	47		
ದಕ್ಷಿಣ ಕನ್ನಡ	94	ಮೈಸೂರು	93	ಒಟ್ಟು	2,900

ಬ್ಯಾಂಕ್ ಖಾತೆ ಸ್ಥಗಿತ: ಹೈಕೋರ್ಟ್ ಎಚ್ಚರಿಕೆ

ಪ್ರಯಾಗರಾಜ್ (ಪಿಟಿಐ): 'ಸೈಬರ್ ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವಾಗ ತನಿಖಾ ಸಂಸ್ಥೆಗಳು ಮತ್ತು ಬ್ಯಾಂಕ್‌ಗಳು ಅಧಿಕಾರವನ್ನು ವಿವೇಚನೆಯಿಂದ ಬಳಸಬೇಕು' ಎಂದು ಅಲಹಾಬಾದ್ ಹೈಕೋರ್ಟ್, ಪ್ರಕರಣವೊಂದರ ವಿಚಾರಣೆ ವೇಳೆ ಅಭಿಪ್ರಾಯಪಟ್ಟಿದೆ.

'ಖಾತೆಗಳನ್ನು ಸ್ಥಗಿತಗೊಳಿಸುತ್ತಿರುವ ಬಗ್ಗೆ ಬ್ಯಾಂಕ್‌ಗಳು ಖಾತೆದಾರರಿಗೆ ಸಮರ್ಪಕ ಮಾಹಿತಿ ನೀಡುತ್ತಿಲ್ಲ ಎನ್ನುವುದು ಪೀಠದ ಗಮನಕ್ಕೆ ಬಂದಿದೆ. ಬ್ಯಾಂಕ್ ಖಾತೆ ಸ್ಥಗಿತಗೊಳಿಸುವ ವಿಚಾರದಲ್ಲಿ ದುರಾಡಳಿತಕ್ಕೆ ಅಥವಾ ತಾರತಮ್ಯಕ್ಕೆ ಅವಕಾಶ ಇಲ್ಲ. ಖಾತೆದಾರರು ಕಟ್ಟುಪಟ್ಟು ಸಂಪಾದಿಸಿದ ಹಣ ಮತ್ತು ಅವರ ವಿಶ್ವಾಸ ಮುಖ್ಯ' ಎಂದು ನ್ಯಾಯಮೂರ್ತಿ ಅತುಲ್ ಶ್ರೀಧರನ್ ಮತ್ತು ಸಿದ್ಧಾರ್ಥ್ ನಂದನ್ ಅವರ ವಿಭಾಗೀಯ ನ್ಯಾಯಪೀಠ ಹೇಳಿತು.

ತಾರಕೇಶ್ವರ ತಿವಾರಿ ಎಂಬ ವ್ಯಕ್ತಿ ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆಯನ್ನು ನ್ಯಾಯಪೀಠ ನಡೆಸಿತು.

ನೈಸ್ ಯೋಜನೆ ರದ್ದು: ಆದೇಶಕ್ಕೆ ತಡೆ

ಖಾಸಗಿ ಭೂಮಾಲೀಕರು ಮತ್ತು ಇತರರಿಗೆ ನೋಟಿಸ್ ಜಾರಿ ಮಾಡಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕರ್ನಾಟಕ ಹೈಕೋರ್ಟ್ ಜನವರಿ 9ರಂದು ನೀಡಿದ್ದ ಆದೇಶ
- ಯೋಜನೆ ಮರು ಪರಿಶೀಲಿಸುವಂತೆ ಸೂಚಿಸಿದ್ದ ಹೈಕೋರ್ಟ್
- ವಿಚಾರಣೆ ಏಪ್ರಿಲ್ 9ಕ್ಕೆ ಮುಂದೂಡಿಕೆ

ನವದೆಹಲಿ: ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆಯನ್ನು ಮರು ಪರಿಶೀಲಿಸುವಂತೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ.

'ಬಿಎಂಐಸಿ ಯೋಜನೆಗಾಗಿ ವಶಪಡಿಸಿಕೊಂಡ ನಮ್ಮ ಜಮೀನಿಗೆ ಪರಿಹಾರ ವಿತರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಮಾರಪ್ಪ ಗಾರ್ಡನ್ ನಿವಾಸಿ ಚಂದ್ರಿಕಾ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಜನವರಿ 9ರಂದು ವಜಾಗೊಳಿಸಿದ್ದ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಈ ಕುರಿತು ಆದೇಶಿಸಿತ್ತು.

'ಪ್ರಸ್ತಾವಿತ ಎಕ್ಸ್‌ಪ್ರೆಸ್–ವೇನಲ್ಲಿನ ಒಟ್ಟು 111 ಕಿ.ಮೀ ಗಳಲ್ಲಿ ಕಳೆದ 25 ವರ್ಷಗಳಲ್ಲಿ ಕೇವಲ ಒಂದು ಕಿ.ಮೀ ಮಾತ್ರ ನಿರ್ಮಿಸಲಾಗಿದೆ ಮತ್ತು 1995ರಲ್ಲಿ ನಗರದ ದಟ್ಟಣೆಯನ್ನು ಕಡಿಮೆ ಮಾಡಲು ಯೋಜಿಸಲಾದ ಐದು ಪಟ್ಟಣಗಳಲ್ಲಿ ಈತನಕ ಯಾವುದೇ ಪ್ರಗತಿ ಕಂಡಿಲ್ಲ' ಎಂದು ನ್ಯಾಯಪೀಠ ತೀರ್ಪಿನಲ್ಲಿ ಹೇಳಿತ್ತು.

'ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಮಾರ್ಗವನ್ನು ಭವಿಷ್ಯದಲ್ಲಿಯೂ ನಿರ್ಮಿಸುವ ಯಾವುದೇ ಸೂಚನೆ ಕಾಣಿಸುತ್ತಿಲ್ಲ. ಆದ್ದರಿಂದ, ಯೋಜನೆಯನ್ನು ಮರು ಪರಿಶೀಲಿಸಬೇಕು ಮತ್ತು ಆ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿತ್ತು.

ಯೋಜನೆ ಅನುಷ್ಠಾನಗೊಳಿಸುತ್ತಿರುವ ನೈಸ್ ಲಿಮಿಟೆಡ್ ಮತ್ತು ಇನ್ನೊಬ್ಬರ ಪರವಾಗಿ ಹಿರಿಯ ವಕೀಲರಾದ ಕಪಿಲ್ ಸಿಬಲ್, ಮುಕುಲ್ ರೋಹಟಗಿ ಮತ್ತು ಎ.ಎನ್. ಎಸ್ ನಾಡಕರ್ಣಿ ಅವರ ವಾದ ಆಲಿಸಿದ ನಂತರ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ. ವಿನೋದ್ ಚಂದ್ರನ್ ಅವರ ಪೀಠವು, ಹೈಕೋರ್ಟ್ ತೀರ್ಪಿನ 77 ಮತ್ತು 78ನೇ ಪ್ಯಾರಾಗ್ರಾಫ್‌ಗಳಿಗೆ ತಡೆ ನೀಡಿತು.

ಖಾಸಗಿ ಭೂ ಮಾಲೀಕರು ಮತ್ತು ಇತರರಿಗೆ ಪೀಠವು ನೋಟಿಸ್ ಜಾರಿ ಮಾಡಿತು. ಹೈಕೋರ್ಟ್ ತೀರ್ಪಿನ ವಿರುದ್ಧದ ಅರ್ಜಿ ಪರಿಶೀಲಿಸಲು ಒಪ್ಪಿಕೊಂಡಿತು. ಪ್ರಕರಣದ ವಿಚಾರಣೆಯನ್ನು ಏಪ್ರಿಲ್ 9ಕ್ಕೆ ಮುಂದೂಡಿತು.



'1995ರ ಯೋಜನಾ ತಾಂತ್ರಿಕ ವರದಿ (ಪಿಟಿಆರ್) ಗಮನಿಸಿದಾಗ, ಒಂದು ಸುಂದರ ಮತ್ತು ಭವಿಷ್ಯದ ಪರಿಕಲ್ಪನೆಯನ್ನು ನಾಗರಿಕರು ಮತ್ತು ಪರಿಸರದ ಹೆಸರಿನಲ್ಲಿ ಮಾಡಿದ ವೆಚ್ಚದಲ್ಲಿ ಕೊಲ್ಲಲಾಗಿದೆ. ಹಾಗಾಗಿ, ಹಳೆಯ ಯೋಜನೆಯನ್ನು ಕೈಬಿಟ್ಟು ಹೊಸ ಯೋಜನೆ ಆರಂಭಕ್ಕೆಕ್ರಮತೆಗೆದು ಕೊಳ್ಳುವುದು ಸೂಕ್ತ' ಎಂದು ಹೈಕೋರ್ಟ್ ನ್ಯಾಯಪೀಠ ಅಭಿಪ್ರಾಯಪಟ್ಟಿತ್ತು.

'ನಗರದ ಜನಸಂಖ್ಯೆಯನ್ನು 70 ಲಕ್ಷಕ್ಕೆ ಇಳಿಸಲು ಮತ್ತು ಬೆಂಗಳೂರು–ಮೈಸೂರು ನಡುವೆ ಐದು ಪಟ್ಟಣಗಳನ್ನು ರಚಿಸುವ ಮೂಲಕ ನಗರದ ದಟ್ಟಣೆಯನ್ನು ಕಡಿಮೆ ಮಾಡಲು 1995ರಲ್ಲಿ ಪಿಟಿಆರ್ ಸಿದ್ಧಪಡಿಸಲಾಗಿತ್ತು, 2011ರ ವೇಳೆಗೆ ನಗರದ ಜನಸಂಖ್ಯೆ 85 ಲಕ್ಷವನ್ನು ದಾಟುತ್ತದೆ ಎಂದೂ ನಿರೀಕ್ಷಿಸಲಾಗಿತ್ತು. ಆದರೆ, ಬಿಎಂಐಸಿ ಯೋಜನೆಯಡಿ ಕಳೆದ 30 ವರ್ಷಗಳಿಂದ ಕೇವಲ 47 ಕಿ.ಮೀ ಪೆರಿಫೆರಲ್ ರಸ್ತೆಗಳನ್ನು ನಿರ್ಮಿಸಲಾಗಿದೆ' ಎಂದು ಹೇಳಿತ್ತು.

'ಉತ್ತಮ ನಾಗರಿಕ ಸೌಲಭ್ಯಗಳ ಜೊತೆಗೆ ವ್ಯಾಪಾರ ಮತ್ತು ವೃತ್ತಿಪರರಿಗೆ ಉತ್ತಮ ಅವಕಾಶಗಳನ್ನು ಒದಗಿಸಿ ಮಹಾನಗರದ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಬಿಎಂಐಸಿ ನಿರ್ಮಾಣ ಯೋಜನೆ ಕೈಗೆತ್ತಿಕೊಳ್ಳಲಾಗಿತ್ತು. ಆದರೆ, ಈ ಉದ್ದೇಶವು ಕನಸಾಗಿಯೇ ಉಳಿದಿದೆ. ಕಳೆದ 25 ವರ್ಷಗಳಲ್ಲಿ ಟೋಲ್ ಪ್ಲಾಜಾ ಮತ್ತು ಪೆರಿಫೆರಲ್ ರಸ್ತೆಗಳನ್ನು ಹೊರತುಪಡಿಸಿ ಕೇವಲ ಒಂದು ಕಿ.ಮೀ ಎಕ್ಸ್‌ಪ್ರೆಸ್ ಮಾರ್ಗವನ್ನು ನಿರ್ಮಿಸಲಾಗಿದೆ' ಎಂದು ನ್ಯಾಯಪೀಠ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು.

ಬನ್ನೇರುಘಟ್ಟ ಇಎಸ್‌ಝಡ್ ಮಾರ್ಚ್ 16ರಂದು ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಪರಿಸರ ಸೂಕ್ಷ್ಮ ಪ್ರದೇಶವನ್ನು (ಇಎಸ್‌ಝಡ್) ರಾಜ್ಯ ಸರ್ಕಾರ ಕಡಿಮೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಾರ್ಚ್ 16ರಂದು ವಿಚಾರಣೆ ನಡೆಸಲಿದೆ.

ಪರಿಸರಕ್ಕೆ ಸಂಬಂಧಿಸಿದ ಸುಮಾರು 20 ಮೇಲ್ಮನವಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ, 'ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನು ಮಾರ್ಚ್ 16ರಂದು ಮಧ್ಯಾಹ್ನ ವಿಚಾರಣೆ ನಡೆಸಿ ಇತ್ಯರ್ಥ ಮಾಡಲಾಗುವುದು' ಎಂದು ತಿಳಿಸಿತು.

ಬನ್ನೇರುಘಟ್ಟ ಇಎಸ್‌ಝಡ್ ವ್ಯಾಪ್ತಿಯನ್ನು 268 ಚದರ ಕಿ.ಮೀ.ನಿಂದ 168 ಚದರ ಕಿ.ಮೀ.ಗೆ ಇಳಿಸಿರುವ ಕರ್ನಾಟಕ ಸರ್ಕಾರದ ಕ್ರಮ ಪ್ರಶ್ನಿಸಿ ಬೆಂಗಳೂರಿನ ನಿವಾಸಿ ಬೆಳ್ಳಿಯಪ್ಪ ಮತ್ತಿತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಕೇಂದ್ರ ಉನ್ನತಾಧಿಕಾರ ಸಮಿತಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.

ಸಮಿತಿಯು ಸುಪ್ರೀಂ ಕೋರ್ಟ್‌ಗೆ ಜನವರಿ 7ರಂದು 524 ಪುಟಗಳ ವರದಿ ಸಲ್ಲಿಸಿತ್ತು. ಯಾವುದೇ ವೈಜ್ಞಾನಿಕ, ಪರಿಸರ ಅಥವಾ ಭೂದೃಶ್ಯ ಮಟ್ಟದ ಅಧ್ಯಯನ ಹಾಗೂ ಮೌಲ್ಯಮಾಪನ ನಡೆಸದೆಯೇ ಪರಿಸರ ಸೂಕ್ಷ್ಮ ಪ್ರದೇಶವನ್ನು ನಿರಂತರವಾಗಿ ಕಡಿತ ಮಾಡಲಾಗಿದೆ ಎಂದೂ ಸಮಿತಿ ವರದಿಯಲ್ಲಿ ಉಲ್ಲೇಖಿಸಿತ್ತು. ಸರ್ಕಾರದ ಕ್ರಮವನ್ನು ಸಿಇಸಿ ಕಟುವಾಗಿ ಟೀಕಿಸಿತ್ತು. ಈ ಕ್ರಮವು ಉದ್ಯಾನದ ಪರಿಸರ ವಿಜ್ಞಾನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂದು ಅಭಿಪ್ರಾಯಪಟ್ಟಿತ್ತು.

ಪ್ರಿಯಾಂಕಾ ಗಾಂಧಿ ವಾದ್ರಾ ಜೊತೆ ಡಿ.ಕೆ. ಶಿವಕುಮಾರ್ ಅವರು ಕಾಮಾಕ್ಯ ದೇವಾಲಯಕ್ಕೆ ಭೇಟಿ ನೀಡಿದರು. ನಾಗಾ ಸಾಧುವೊಬ್ಬರು ಪ್ರಿಯಾಂಕಾ ಅವರನ್ನು ಆಶೀರ್ವದಿಸಿದರು

'ಸೋಲುವ ಭಯದಲ್ಲಿ ಹಿಮಂತ ಆಧಾರರಹಿತ ಹೇಳಿಕೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೋಲುವ ಭಯದಲ್ಲಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು ಕಾಂಗ್ರೆಸ್ ವಿರುದ್ಧ ಆಧಾರರಹಿತ ಹೇಳಿಕೆ ನೀಡುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು.

ಚುನಾವಣೆ ಪ್ರಚಾರಕ್ಕೆ ಅಸ್ಸಾಂಗೆ ತೆರಳಿರುವ ಅವರು ಗುವಾಹಟಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದರು.

'ಕಾಂಗ್ರೆಸ್ ವಿರುದ್ಧ ಪಾಕಿಸ್ತಾನ ವಿಚಾರವಾಗಿ ಹಿಮಂತ ಬಿಸ್ವ ಶರ್ಮ ಆರೋಪ ಮಾಡುತ್ತಿದ್ದಾರಲ್ಲವೇ' ಎಂದು ಕೇಳಿದಾಗ, 'ಅವರು ದುರ್ಬಲರಾಗಿದ್ದಾರೆ. ಹೀಗಾಗಿ ಇಂತಹ ಹೇಳಿಕೆ ನೀಡುತ್ತಿದ್ದಾರೆ. ಅವರಿಗೆ ತಮ್ಮ ಕೆಲಸಗಳ ಬಗ್ಗೆ ಆತ್ಮವಿಶ್ವಾಸ ಇಲ್ಲ. ತಮ್ಮ ಬದ್ಧತೆಯ ಬಗ್ಗೆಯೇ ವಿಶ್ವಾಸ ಇಟ್ಟುಕೊಂಡಿಲ್ಲ. ಈ ಬಾರಿ ಚುನಾವಣೆಯಲ್ಲಿ ಅವರ ಪಕ್ಷ ಸೋಲಲಿದೆ. ಆದ್ದರಿಂದ ಹೀಗೆ ಮಾತನಾಡುತ್ತಿದ್ದಾರೆ' ಎಂದು ಹೇಳಿದರು.

'ನಾನು ಮೊದಲು ಕಾಮಾಕ್ಯ ದೇವಾಲಯಕ್ಕೆ ಹೋಗಿ ಈ ರಾಜ್ಯದಲ್ಲಿ ಬದಲಾವಣೆ ತರುವಂತೆ ತಾಯಿ ಬಳಿ ಪ್ರಾರ್ಥಿಸಿದ್ದೇನೆ' ಎಂದು ತಿಳಿಸಿದರು.

ಕಾಮಾಕ್ಯ ದೇವಾಲಯಕ್ಕೆ ಎಐಸಿಸಿ ಪ್ರಧಾನ ಕಾರ್ಯದರ್ಶಿ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಜೊತೆ ತೆರಳಿ ಡಿ.ಕೆ. ಶಿವಕುಮಾರ್ ಪೂಜೆ ಸಲ್ಲಿಸಿದರು.

ಗುವಾಹಟಿಯಲ್ಲಿ ನಡೆದ ಪ್ರದೇಶ ಕಾಂಗ್ರೆಸ್ ಪದಾಧಿಕಾರಿಗಳು ಹಾಗೂ ಬ್ಲಾಕ್ ಅಧ್ಯಕ್ಷರ ಸಮಾವೇಶದಲ್ಲಿ ಪ್ರಿಯಾಂಕಾ ಗಾಂಧಿ ವಾದ್ರಾ, ಡಿ.ಕೆ. ಶಿವಕುಮಾರ್, ಅಸ್ಸಾಂ ಪಿಸಿಸಿ ಅಧ್ಯಕ್ಷ ಗೌರವ್ ಗೊಗೊಯಿ, ಛತ್ತೀಸಗಢ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಮತ್ತಿತರರು ಇದ್ದರು.

ಪೌರತ್ವ ತಿದ್ದುಪಡಿ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ದಾಖಲಾದ 200 ಅರ್ಜಿಗಳು

ಮೇ 5ರಿಂದ ವಿಚಾರಣೆ ನಡೆಸಲಿರುವ 'ಸುಪ್ರೀಂ'

ನವದೆಹಲಿ (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆ-2019 (ಸಿಎಎ) ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಸೇರಿದಂತೆ 200 ಅರ್ಜಿಗಳ ಅಂತಿಮ ವಿಚಾರಣೆಯನ್ನು ಮೇ 5ರಿಂದ ಆರಂಭಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.



2014ರ ಡಿಸೆಂಬರ್ 31ಕ್ಕೂ ಮುಂಚೆ ಪಾಕಿಸ್ತಾನ, ಬಾಂಗ್ಲಾದೇಶ, ಅಫ್ಗಾನಿಸ್ತಾನದಿಂದ ಭಾರತಕ್ಕೆ ಬಂದಿರುವ ಹಿಂದೂ, ಸಿಖ್, ಬೌದ್ಧರು, ಕ್ರೈಸ್ತರು, ಜೈನ ಹಾಗೂ ಪಾರ್ಸಿ ಸಮುದಾಯಗಳಿಗೆ ಸಿಎಎ ತಿದ್ದುಪಡಿ ಕಾಯ್ದೆ ಅಡಿಯಲ್ಲಿ ಭಾರತದ ಪೌರತ್ವ ನೀಡಲು ಅವಕಾಶ ಕಲ್ಪಿಸಲಾಗಿದೆ.

2019–2020ರಿಂದ ಬಾಕಿ ಉಳಿದಿರುವ ಅರ್ಜಿಗಳ ಅಂತಿಮ ವಿಚಾರಣೆಯನ್ನು ಮೇ 5ರಿಂದ ಆರಂಭಿಸಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಎಂ.ಪಂಚೋಲಿ ಪೀಠವು ತಿಳಿಸಿದೆ.

ಐಯುಎಂಎಲ್ ಅರ್ಜಿದಾರರ ಅರ್ಜಿ ವಿಚಾರಣೆಯನ್ನು ಒಂದೂವರೆ ದಿನ ನಡೆಸುವುದಾಗಿ ತಿಳಿಸಿದ ನ್ಯಾಯಪೀಠ, ಈ ವಿಚಾರದ ಕುರಿತು ಕೇಂದ್ರಕ್ಕೆ ವಾದ ಮಂಡಿಸಲು ಒಂದು ದಿನ ಕಾಲಾವಕಾಶ ನೀಡುವುದಾಗಿ ತಿಳಿಸಿದೆ. ಎರಡು ಕಡೆಗಳ ಅರ್ಜಿಯನ್ನು ಪೀಠವು ಮೇ 12ರ ಒಳಗಾಗಿ ಪೂರ್ಣಗೊಳಿಸಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿಗಳು ತಿಳಿಸಿದರು.

ಹೆಚ್ಚುವರಿ ದಾಖಲೆಗಳನ್ನು ನಾಲ್ಕು ವಾರಗಳ ಒಳಗಾಗಿ ಸಲ್ಲಿಸಬೇಕು ಎಂದು ಅರ್ಜಿದಾರರಿಗೆ ನ್ಯಾಯಾಲಯವು ಸೂಚಿಸಿದೆ.

ಇಡೀ ದೇಶಕ್ಕೆ ಅನ್ವಯಿಸುವ ಅರ್ಜಿಯನ್ನು ಮೊದಲು ಆಲಿಸುವುದಾಗಿ ತಿಳಿಸಿದ ನ್ಯಾಯಪೀಠ, ಇದಾದ ಬಳಿಕ ಅಸ್ಸಾಂ ಹಾಗೂ ತ್ರಿಪುರಾಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸುವುದಾಗಿ ತಿಳಿಸಿತು.

ಅಸ್ಸಾಂನ ಸಮಸ್ಯೆ ದೇಶದ ಉಳಿದ ಭಾಗಗಳಿಗೆ ಹೋಲಿಸಿದರೆ, ಭಿನ್ನವಾಗಿದೆ. ಪೌರತ್ವ ಪಡೆಯಲು ಇಲ್ಲಿ 1971ರ ಮಾರ್ಚ್ 24 ಕಟ್–ಆಫ್ ದಿನಾಂಕ ನಿಗದಿಪಡಿಸಲಾಗಿತ್ತು, ಸಿಎಎನ ಅಡಿಯಲ್ಲಿ 2014ರ ಮಾರ್ಚ್ 31ರವರೆಗೆ ಕಟ್–ಆಫ್ ದಿನಾಂಕ ವಿಸ್ತರಿಸಲಾಗಿದೆ.

ಸಿಎಎ ಪೌರತ್ವ ನಿಯಮಗಳಿಗೆ ತಡೆ ನೀಡುವಂತೆ ಕೋರಿ ಸಲ್ಲಿಕೆಯಾಗಿದ್ದ ಮಧ್ಯಂತರ ಅರ್ಜಿಗಳಿಗೆ ಪ್ರತಿಕ್ರಿಯಿಸುವಂತೆ ಪೀಠವು 2024ರ ಮಾರ್ಚ್ 19ರಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು. ಆ ಸಂದರ್ಭದಲ್ಲಿ ಈ ಅರ್ಜಿಯನ್ನು ಕೊನೆಯದಾಗಿ ವಿಚಾರಣೆ ನಡೆಸಲಾಗಿತ್ತು. ಆದಾಗ್ಯೂ, ಅರ್ಜಿಗಳನ್ನು ಪ್ರತಿನಿಧಿಸುವ ಹಿರಿಯ ವಕೀಲರ ಅರ್ಜಿಯ ಕೋರಿಕೆಯಂತೆ, ಸಿಎಎಗೆ ಪರಿಣಾಮ ಬೀರುವ ನಿಯಮಗಳ ಮೇಲಿನ ಕಾರ್ಯಾಚರಣೆಯನ್ನು ತಡೆಹಿಡಿಯಲು ನ್ಯಾಯಪೀಠ ನಿರಾಕರಿಸಿತು.

ರಾಷ್ಟ್ರಪತಿಯವರು 2019ರ ಡಿಸೆಂಬರ್ 12ರಂದು ಸಿಎಎ ತಿದ್ದುಪಡಿ ಕಾಯ್ದೆಗೆ ಒಪ್ಪಿಗೆ ನೀಡಿದ ನಂತರ ಕಾಯ್ದೆಯಾಗಿ ಮಾರ್ಪಟ್ಟಿದೆ.

ಸಿಎಎ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ 200 ಅರ್ಜಿಗಳು ಸಲ್ಲಿಕೆಯಾಗಿವೆ.

ಇದರಲ್ಲಿ ಐಯುಎಂಎಲ್ ಮಾತ್ರವಲ್ಲದೇ, ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಆರ್‌ಜೆಡಿ ನಾಯಕ ಮನೋಜ್ ಜಾ, ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾ ಹಾಗೂ ಎಐಎಂಐಎಂ ಸಂಸದ ಅಸಾದುದ್ದೀನ್ ಒವೈಸಿ ಅರ್ಜಿ ಸಲ್ಲಿಸಿದ ಪ್ರಮುಖರಾಗಿದ್ದಾರೆ.

ನೆಟ್‌ಫ್ಲಿಕ್ಸ್ ಸಂಸ್ಥೆಯ ವಿರುದ್ಧದ ಅರ್ಜಿ ವಿಲೇವಾರಿ

'ನೀರಜ್ ಪಾಂಡೆ ಅವರ ನಿರ್ಮಾಣದ, ನಟ ಮನೋಜ್ ಬಾಜಪೇಯ್ ನಟನೆಯ 'ಘೂಸಖೋರ್ ಪಂಡಿತ್' ಸಿನಿಮಾದ ಹೆಸರನ್ನು ಬದಲಾಯಿಸಿ, ಪ್ರಚಾರ ಸಾಮಗ್ರಿಗಳನ್ನು ಹಿಂದಕ್ಕೆ ಪಡೆಯಲು ಒಪ್ಪಿಗೆ ನೀಡಿದ ಕಾರಣ, ನೆಟ್‌ಫ್ಲಿಕ್ಸ್ ಸಂಸ್ಥೆಯ ವಿರುದ್ಧ ದಾಖಲಾಗಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಗುರುವಾರ ವಿಲೇವಾರಿ ಮಾಡಿದೆ.

'ಹೆಸರು ಬದಲಾಯಿಸುವ ಕುರಿತು ನೀರಜ್ ಪಾಂಡೆ ಪ್ರಮಾಣಪತ್ರ ಸಲ್ಲಿಸಿದ ಕಾರಣ, ಈ ವಿವಾದಕ್ಕೆ ಎಲ್ಲಾ ರೀತಿಯಿಂದಲೂ ಅಂತ್ಯ ಸಿಗುವ ನಿರೀಕ್ಷೆಯಿದೆ. ಹೀಗಾಗಿ ಅರ್ಜಿಯನ್ನು ವಿಲೇವಾರಿ ಮಾಡಲಾಗುವುದು' ಎಂದು ನ್ಯಾಯಮೂರ್ತಿ ಬಿ.ವಿ.ನಾಗರತ್ನ ಹಾಗೂ ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ಪೀಠವು ತಿಳಿಸಿದೆ.

'ಸಿನಿಮಾಕ್ಕೆ ಹೊಸ ಹೆಸರು ಇನ್ನಷ್ಟೇ ಅಂತಿಮವಾಗಬೇಕಿದೆ. ಹಿಂದಿನ ಹೆಸರಿಗೆ ಹೋಲುವಂತಿರುವುದಿಲ್ಲ. 'ಘೂಸಖೋರ್ ಪಂಡಿತ್' ಶೀರ್ಷಿಕೆಯನ್ನು ಗೌರವಪೂರ್ವಕವಾಗಿ ಹಿಂದಕ್ಕೆ ಪಡೆದಿದ್ದೇನೆ. ಯಾವುದೇ ರೀತಿಯಿಂದಲೂ ಅದನ್ನು ಬಳಸುವುದಿಲ್ಲ' ಎಂದು ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ನೀರಜ್ ಪಾಂಡೆ ತಿಳಿಸಿದ್ದರು.

ನೆಟ್‌ಫ್ಲಿಕ್ಸ್‌ನಲ್ಲಿ ಸಿನಿಮಾ ಬಿಡುಗಡೆ ತಡೆಹಿಡಿಯುವಂತೆ ಭಾರತೀಯ ಬ್ರಾಹ್ಮಣ ಸಮಾಜದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಅತುಲ್ ಮಿಶ್ರಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

'ಮುಖ್ಯ ಅರ್ಚಕರ ವಿರುದ್ಧ ಸಣ್ಣ ಸಾಕ್ಷ್ಯವೂ ಇಲ್ಲ'

ಕೊಲ್ಲಂ, (ಕೇರಳ) (ಪಿಟಿಐ): ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನದ ಚಿನ್ನ ಕಳವಿಗೆ ಸಂಬಂಧಿಸಿದ ಎರಡು ಪ್ರಕರಣಗಳಲ್ಲಿ ಮುಖ್ಯ ಅರ್ಚಕ ಕಂಡರಾರು ರಾಜೀವರು ಅವರ ವಿರುದ್ಧ ಸಣ್ಣ ಸಾಕ್ಷ್ಯವೂ ಇಲ್ಲ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ.

ದೇವಸ್ಥಾನದ 'ಶ್ರೀಕೋವಿಲ್'ನ ಬಾಗಿಲ ಚೌಕಟ್ಟಿನ ಚಿನ್ನದ ತೂಕ ಕಡಿಮೆಯಾಗಿರುವ ಪ್ರಕರಣದಲ್ಲಿ 16ನೇ ಆರೋಪಿಯಾಗಿದ್ದ ಕಂಡರಾರು ರಾಜೀವ ಅವರನ್ನು ಬಂಧಿಸಿ, ತಿರುವನಂತಪುರದ ವಿಶೇಷ ಉಪ ಕಾರಾಗೃಹದಲ್ಲಿರಿಸಲಾಗಿತ್ತು. ಕೊಲ್ಲಂ ವಿಜಿಲೆನ್ಸ್ ಕೋರ್ಟ್‌ನಿಂದ ಅನುಮತಿ ಪಡೆದುಕೊಂಡ ಎಸ್‌ಐಟಿ ತಂಡವು ಎರಡನೆಯ ಪ್ರಕರಣವಾದ ದೇವಸ್ಥಾನದ ದ್ವಾರಪಾಲಕ ಮೂರ್ತಿಗಳ ತಾಮ್ರದ ಕವಚಕ್ಕೆ ಲೇಪಿಸಿದ್ದ ಚಿನ್ನ ಕಳವು ಪ್ರಕರಣದಲ್ಲಿ 13ನೇ ಆರೋಪಿಯಾಗಿ ಕಂಡರಾರು ಅವರನ್ನು ಇದೇ ವರ್ಷ ಜನವರಿ 15ರಂದು ಬಂಧಿಸಿತ್ತು.

ಎರಡೂ ಪ್ರಕರಣಗಳ ವಿಚಾರಣೆ ನಡೆಸಿದ ಕೊಲ್ಲಂ ವಿಜಿಲೆನ್ಸ್ ನ್ಯಾಯಾಲಯದ ನ್ಯಾಯಾಧೀಶ ಮೋಹಿತ್ ಸಿ.ಎಸ್ ಅವರು ಮುಖ್ಯ ಅರ್ಚಕರಿಗೆ ಜಾಮೀನು ಮಂಜೂರು ಮಾಡಿದರು. ಚಿನ್ನ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಮಾರ್ಚ್ 31ರಂದು ಅಂತಿಮ ವರದಿ ಸಲ್ಲಿಸಲಾಗುವುದು ಎಂದು ವಿಶೇಷ ತನಿಖಾ ತಂಡವು ಕೇರಳ ಹೈಕೋರ್ಟ್‌ಗೆ ತಿಳಿಸಿದೆ.

ಉಚಿತ ಕೊಡುಗೆ: 'ಸುಪ್ರೀಂ' ಚಾಟಿ

ಒಂದನೇ ಪುಟದಿಂದ...

ಗ್ರಾಹಕರ ಆರ್ಥಿಕ ಸ್ಥಿತಿ ಲೆಕ್ಕಿಸದೆಯೇ ಎಲ್ಲರಿಗೂ ಉಚಿತ ವಿದ್ಯುತ್ ನೀಡಲು ಮುಂದಾಗಿರುವ ತಮಿಳುನಾಡು ಸರ್ಕಾರದ ಪ್ರಸ್ತಾವದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಪೀಠ, 'ನಾವು ನಿರ್ದಿಷ್ಟವಾಗಿ ತಮಿಳುನಾಡಿನ ಬಗ್ಗೆ ಮಾತನಾಡುತ್ತಿಲ್ಲ. ಇಡೀ ದೇಶದ ಬಗ್ಗೆ ಮಾತನಾಡುತ್ತಿದ್ದೇವೆ. ನಾವು ಯಾವ ರೀತಿಯ ಸಂಸ್ಕೃತಿಯನ್ನು ಬೆಳೆಸುತ್ತಿದ್ದೇವೆ' ಎಂದು ಕೇಳಿತು.

'ಉಚಿತ ಕೊಡುಗೆಗಳನ್ನು ವಿವೇಚನೆಯಿಲ್ಲದೆ ನೀಡುತ್ತಿರುವುದರಿಂದ ದೇಶದ ಮೇಲೆ ಆರ್ಥಿಕ ಒತ್ತಡ ಉಂಟಾಗುತ್ತಿದೆ. ಹೆಚ್ಚುತ್ತಿರುವ ವಿತ್ತೀಯ ಕೊರತೆಯ ನಡುವೆಯೂ ರಾಜ್ಯಗಳು ದೊಡ್ಡ ಮಟ್ಟದಲ್ಲಿ ಉಚಿತ ಕೊಡುಗೆಗಳನ್ನು ಘೋಷಿಸುತ್ತಿವೆ' ಎಂದು ಸಿಜೆಐ ಹೇಳಿದರು.

ನೇರ ನಗದು ವರ್ಗಾವಣೆ ನೀತಿಯ ಬಗ್ಗೆಯೂ ಅವರು ಕಳವಳ ವ್ಯಕ್ತಪಡಿಸಿದರು. 'ಜನರು ಘನತೆ, ಸ್ವಾಭಿಮಾನದಿಂದ ಬದುಕಲು ಸರ್ಕಾರಗಳು ಉದ್ಯೋಗದ ಮಾರ್ಗಗಳನ್ನು ಸೃಷ್ಟಿಸಬೇಕು. ನೀವು ಉಚಿತ ಆಹಾರ, ಅನಿಲ ಹಾಗೂ ವಿದ್ಯುತ್ ನೀಡುತ್ತೀರಿ. ಜತೆಗೆ, ನೇರವಾಗಿ ಖಾತೆಗೆ ನಗದು ವರ್ಗಾವಣೆ ಮಾಡುತ್ತೀರಿ. ಹಾಗಾದರೆ, ಜನರು ಏಕೆ ಕೆಲಸ ಮಾಡಬೇಕು. ಎಲ್ಲವೂ ಸಿಗುತ್ತದೆ ಎಂಬುದು ಗೊತ್ತಾದಾಗ ಅವರು ಏಕೆ ಕೆಲಸ ಕಲಿಯುತ್ತಾರೆ. ಇದು ನಾವು ಮಾಡುತ್ತಿರುವ ರಾಷ್ಟ್ರ ನಿರ್ಮಾಣವೇ' ಎಂದರು.

ಮೂಲಭೂತ ಅವಶ್ಯಕತೆಗಳನ್ನು ಪಡೆಯಲು ಸಾಧ್ಯವಾಗದವರನ್ನು ಬೆಂಬಲಿಸುವ ಕರ್ತವ್ಯ ರಾಜ್ಯಕ್ಕಿದೆ ಎಂಬುದನ್ನು ಅವರು ಒಪ್ಪಿಕೊಂಡರು. ಆದಾಗ್ಯೂ, 'ಫಲಾನುಭವಿಗಳನ್ನು ಸರಿಯಾಗಿ ಗುರುತಿಸಿ ಉಚಿತ ಕೊಡುಗೆಗಳನ್ನು ನೀಡಲಾಗುತ್ತಿದೆಯೇ' ಎಂದು ಪ್ರಶ್ನಿಸಿದರು. 'ಉಚಿತ ಯೋಜನೆಗಳ ಲಾಭವನ್ನು ಮೊದಲು ಪಡೆಯುವವರೇ ಅನುಕೂಲಸ್ಥರು. ಇಂತಹ ವಿಷಯಗಳ ಬಗ್ಗೆ ಗಮನ ಹರಿಸಬೇಕಲ್ಲವೇ' ಎಂದು ಅವರು ಹೇಳಿದರು.

ಗೋಡ್ಸೆ ಫ್ಯಾಕ್ಟರಿ: ಬಿಜೆಪಿ ವಿರುದ್ಧ ವಾಗ್ದಾಳಿ

ನವದೆಹಲಿ (ಪಿಟಿಐ): ಕರ್ಣಿ ಸೇನಾದ ವ್ಯಕ್ತಿಯೊಬ್ಬರು ರಾಹುಲ್ ಗಾಂಧಿಗೆ ಜೀವ ಬೆದರಿಕೆ ಹಾಕುತ್ತಿರುವ ವಿಡಿಯೊವನ್ನು ಕಾಂಗ್ರೆಸ್ ಬುಧವಾರ ಬಿಡುಗಡೆಗೊಳಿಸಿದ್ದು, ಬಿಜೆಪಿ–ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದೆ.'ಆರ್‌ಎಸ್‌ಎಸ್–ಬಿಜೆಪಿ ರಾಜಕೀಯ ವ್ಯವಸ್ಥೆಯನ್ನು 'ಗೋಡ್ಸೆ ಫ್ಯಾಕ್ಟರಿ' ಎಂದಿರುವ ಕಾಂಗ್ರೆಸ್,'ರಾಜಕೀಯ ಎದುರಾಳಿಗಳ ವಿರುದ್ಧದ ಹಿಂಸೆಯನ್ನು (ಗಾಂಧಿ ಕುಟುಂಬದ ವಿರುದ್ಧ) ಕಾನೂನುಬದ್ಧಗೊಳಿಸುವ ಉದ್ದೇಶಪೂರ್ವಕ ಅಭಿಯಾನವನ್ನು ಬಿಜೆಪಿ ನಡೆಸುತ್ತಿದೆ' ಎಂದು ಆರೋಪಿಸಿದೆ.

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್
An ISO-9001:2015 & 14001:2015 Company
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.
ದೂರವಾಣಿ: 080–22164879, 22164886, ಜಾಲತಾಣ: www.mysoresandal.org ಇ–ಮೇಲ್: ksdl.dgmmtls@gmail.com
ದಿನಾಂಕ: 19.02.2026

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಜಾಲತಾಣ (https://kppp.karnataka.gov.in)ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2025-26/IND0994	ಗುವಾಕ್‌ವುಡ್ ಆಯಿಲ್ (Guaiacwood oil) ಖರೀದಿ	7800 ಕೆಜಿ	18-02-2026	23-03-2026
2	KSDL/2025-26/IND0995	ಸ್ಯಾಂಡಲ್ ಮೈಸೂರ್ ಕೋರ್ (Sandal Mysore Core) (SMC) ಖರೀದಿ	17300 ಕೆಜಿ	18-02-2026	23-03-2026
3	KSDL/2025-26/IND0996	ಡೈ ಈಥೈಲ್ ಥಾಲೇಟ್ (Diethyl Phthalate) (DEP) ಖರೀದಿ	273000 ಕೆಜಿ	18-02-2026	23-03-2026
4	KSDL/2025-26/IND0997	ಸೂಪರ್ ಸಾಂಟೋಲ್ (Super Santol) ಖರೀದಿ	50900 ಕೆಜಿ	18-02-2026	23-03-2026
5	KSDL/2025-26/IND0998	ಪಚೋಲಿ ಆಯಿಲ್ (Patchouli oil) ಖರೀದಿ	17600 ಕೆಜಿ	18-02-2026	23-03-2026
6	KSDL/2025-26/IND0999	ಅಮೈರಿಸ್ ಆಯಿಲ್ (Amyris oil) ಖರೀದಿ	13200 ಕೆಜಿ	18-02-2026	23-03-2026

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.
ಸಹಿ/–
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–85/2105/2025–26 ದಿನಾಂಕ: 19.02.2026

ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿ ಹೆಸರು : ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಸ್ತಾವಿತ ಚಿಂತಾಮಣಿ 1ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ, ಫ್ಲೆಕ್ಸಿಬಲ್ ಪೇವ್‌ಮೆಂಟ್ ರಸ್ತೆ, ಆರ್‌ಸಿಸಿ ರಸ್ತೆ ಬದಿ ಚರಂಡಿ, ಆರ್‌ಸಿಸಿ ಪವರ್ ಡಕ್ಟ್, ಆರ್‌ಸಿಸಿ ಚೇಂಬರ್‌ಗಳು, ಆರ್‌ಸಿಸಿ ಸ್ಟಾರ್ಮ್ ವಾಟರ್ ಡ್ರೈನ್‌ಗಳು, ಆರ್‌ಸಿಸಿ ಅಡ್ಡ ಚರಂಡಿಗಳು, ನೀರು ಸರಬರಾಜು ಕಾರ್ಯಗಳಿಗಾಗಿ ಎಚ್‌ಡಿಪಿಇ ಕೊಳವೆ ಮಾರ್ಗಗಳನ್ನು ಹಾಕುವುದು ಇತ್ಯಾದಿಗಳು ಸೇರಿದಂತೆ ಕೈಗಾರಿಕಾ ಬಡಾವಣೆ ರಚಿಸುವ ಕಾಮಗಾರಿ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 24.03.2026 ಸಂಜೆ 4.00 ಗಂಟೆಯವರೆಗೆ
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/5760/Zen/2025-26

ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. ಮತ್ತು ಕೇಂದ್ರ
ಸೆಂಟ್ ಜಾನ್ಸ್ ರಸ್ತೆ, ಬೆಂಗಳೂರು - 560 042. ದೂರವಾಣಿ : 080-25365053.
ಇ-ಮೇಲ್ : kvmegbangalore@gmail.com, ವೆಬ್‌ಸೈಟ್ : megcentre.kvs.ac.in

ವಾಕ್ – ಇನ್ – ಇಂಟರ್ವ್ಯೂ

ಬೆಂಗಳೂರಿನ ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. & ಸೆಂಟರ್‌ಗೆ ಪೂರ್ಣ ಅರೆಕಾಲಿಕ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ಆಯ್ಕೆ ಪಟ್ಟಿಯನ್ನು 2026-27 (ಪ್ಯಾನಲ್) ಸಿದ್ಧಪಡಿಸಲು, ಅಭ್ಯರ್ಥಿಗಳ (18 ರಿಂದ 65 ವಯೋಮಾನದವರು) ಸಂದರ್ಶನವನ್ನು ನಡೆಸಲಾಗುವುದು. ಎಲ್ಲಾ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. ಮತ್ತು ಕೇಂದ್ರದಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಮತ್ತು ಪ್ರಮಾಣಪತ್ರಗಳ ಮೂಲ ಮತ್ತು ಫೋಟೊಕಾಪಿಗಳು ಮತ್ತು ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರದೊಂದಿಗೆ ಹಾಜರಾಗಬೇಕು.

ಸಂದರ್ಶನ ದಿನಾಂಕ	ಹುದ್ದೆ
05.03.2026	ಪಿಜಿಟಿ – ಇಂಗ್ಲಿಷ್, ಹಿಂದಿ, ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಕಂಪ್ಯೂಟರ್ ಸೈನ್ಸ್, ಅಕೌಂಟೆನ್ಸಿ, ಅರ್ಥಶಾಸ್ತ್ರ, ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ.
	ಯೋಗ ಶಿಕ್ಷಕರು, ನೃತ್ಯ ತರಬೇತುದಾರರು, ಕ್ರೀಡಾ ತರಬೇತುದಾರರು, ಕಲೆ ಮತ್ತು ಕರಕುಶಲ ಶಿಕ್ಷಕರು, ಕಂಪ್ಯೂಟರ್ ಬೋಧಕರು, ವೈದ್ಯರು , ನರ್ಸ್, ಸಂಗೀತ ಪ್ರಶಿಕ್ಷಕರು, ವಿಶೇಷ ಶಿಕ್ಷಕರು ಮತ್ತು ಸಲಹೆಗಾರರು, ಎಐ / ಎ.ಟಿ.ಎಲ್. ಶಿಕ್ಷಕರು.
06.03.2026	ಟಿಜಿಟಿ – ಇಂಗ್ಲಿಷ್, ಹಿಂದಿ, ಸಂಸ್ಕೃತ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ.
06.03.2026	ಪಿಆರ್‌ಟಿ – ಪ್ರಾಥಮಿಕ ಶಿಕ್ಷಕರು, ಬಾಲವಾಟಿಕ ಶಿಕ್ಷಕರು ಮತ್ತು ಕನ್ನಡ ಶಿಕ್ಷಕರು

ಗಮನಿಸಿ : ವಿದ್ಯಾರ್ಹತೆ ಮತ್ತು ಇತರೆ ವಿವರಗಳಿಗಾಗಿ ದಯವಿಟ್ಟು
ನಮ್ಮ ವೆಬ್‌ಸೈಟ್ : www.megcentre.kvs.ac.in. ಗೆ ಭೇಟಿ ನೀಡಿ
ಸಹಿ/- ಪ್ರಾಂಶುಪಾಲರು,
ಪಿ.ಎಂ.ಶ್ರೀ ಕೆವಿ ಎಂ.ಇ.ಜಿ. ಮತ್ತು ಕೇಂದ್ರ, ಬೆಂಗಳೂರು

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರ ಕಛೇರಿ, 4ನೇ ಮಹಡಿ, ಕರ್ನಾಟಕ ಗೃಹ ಮಂಡಳಿ,
ಕಾವೇರಿ ಭವನ, ಬೆಂಗಳೂರು–560 009.
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/2025–26 ದಿನಾಂಕ: 19–02–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವಸತಿಯಿಂದ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಪಂಜನಹಳ್ಳಿ 3ನೇ ಹಂತದ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಹಂಚಿಕೆ ನಂತರ ಖಾಲಿ ಉಳಿದಿರುವ ಹಾಗೂ ಬಿಡಿ (Stray) ನಿವೇಶನಗಳನ್ನು ವಿಲೇವಾರಿ ಮಾಡಲು ಆನ್‌ಲೈನ್ ಮುಖಾಂತರ ಸಾರ್ವಜನಿಕರಿಂದ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯೊಂದಿಗೆ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ಹಣವನ್ನು ಪಾವತಿ ಮಾಡಿ ದಿನಾಂಕ: 23.02.2026 ರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 23.03.2026 ಆಗಿರುತ್ತದೆ.

ಸ್ಥಳ ಮತ್ತು ಜಿಲ್ಲೆ	ವರ್ಗ	ಹಂಚಿಕೆಗೆ ಲಭ್ಯವಿರು ಸ್ವತ್ತುಗಳು	ನೊಂದಣಿ ಶುಲ್ಕ (ರೂ.ಗಳಲ್ಲಿ)	ಆರಂಭಿಕ ಠೇವಣಿ (ರೂ.ಗಳಲ್ಲಿ)	ಮಂಡಳಿ ದರ (ಪ್ರತಿ ಚದರಡಿಗೆ)
ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು ಪಂಜನಹಳ್ಳಿ 3ನೇ ಹಂತ ಬಡಾವಣೆ	EWS	19	300/-	5,000/-	390/-
	LIG	68	500/-	10,000/-	780/-
	MIG	98	1000/-	40,000/-	
	HIG	35	1,500/-	50,000/-	

ಅರ್ಜಿ ನೊಂದಣಿ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಿ ಅರ್ಜಿ ಸಲ್ಲಿಸಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ https://www.karnataka.gov.in ಸಂಪರ್ಕಿಸುವುದು.
ಹೆಚ್ಚಿನ ಮಾಹಿತಿಗಾಗಿ ಚಾಮರಾಜನಗರ ಜಿಲ್ಲಾ ಯೋಜನಾ ಕಛೇರಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಮೊಬೈಲ್ ಸಂಖ್ಯೆ: 9448425643 ಹಾಗೂ ಕೇಂದ್ರ ಕಛೇರಿಯ ಕಂದಾಯ ಅಧಿಕಾರಿಗಳು, ದೂರವಾಣಿ ಸಂಖ್ಯೆ: 080-22273511 ext 306/307/308/309 ಸಂಪರ್ಕಿಸುವುದು.
ಸಹಿ/–, ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/RO5759/AAPL/2025-26

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ,
ಕೆ.ಜಿ.ರಸ್ತೆ, ಬೆಂಗಳೂರು – 560009.
ಸಂಖ್ಯೆ: ಕಗೃಮಂ/ಕಾ/ಹಂಚಿಕೆ–10/ಬೇ.ಸ.ಪ್ರ/2025–26 ದಿನಾಂಕ: 19–02–2026

ಬೇಡಿಕೆ ಸಮೀಕ್ಷೆ ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕು, ಕೊತ್ತತ್ತಿ–1 ಹೋಬಳಿ, ಎಲೆಚಾಕನಹಳ್ಳಿ ಗ್ರಾಮದ ಸರ್ವೆ ನಂ 62,63/1,63/2,63/3ಎ,64/1,64/2,64/3,64/4ಸಿ,64/ 5,64/7,64/8,69/1,69/2,69/3,69/5 ನಂಬರ್ ಜಮೀನಿನಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಯಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಸದರಿ ಯೋಜನೆಯಲ್ಲಿ ವಿವಿಧ ವರ್ಗದ ಮನೆಗಳನ್ನು ಹೊಂದಲು ಬಯಸುವ ಸಾರ್ವಜನಿಕರಿಂದ ಬೇಡಿಕೆ ಸಮೀಕ್ಷೆಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು ಪಾವತಿಸಿ ದಿನಾಂಕ:23–02–2026 ರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 23–03–2026 ಆಗಿರುತ್ತದೆ.

ಕ್ರ. ಸಂ	ಬಡಾವಣೆಯ ಹೆಸರು ಮತ್ತು ಸ್ಥಳ	ವರ್ಗ	ಅಂದಾಜು ಒಟ್ಟು ಮನೆಗಳು	ನೋಂದಣಿ ಶುಲ್ಕ (ರೂ)	ಆರಂಭಿಕ ಠೇವಣಿ (ರೂ)	ಮನೆಯ ತಾತ್ಕಾಲಿಕ ಬೆಲೆ (ಪ್ರತಿ ಚ.ಅ ಗೆ)
1	ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕು, ಕೊತ್ತತ್ತಿ–1 ಹೋಬಳಿ, ಎಲೆಚಾಕನಹಳ್ಳಿ ಗ್ರಾಮ	LIG	20	500/-	50,000/-	76,11,302/-
		MIG	20	1,000/-	75,000/-	87,81,577/-
		HIG	10	1,500/-	1,00,000/-	1,25,82,203/-

ಅರ್ಜಿ ನೊಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಿ ಅರ್ಜಿ ಸಲ್ಲಿಸಲು ಹಾಗೂ ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.
ಹೆಚ್ಚಿನ ವಿವರಗಳಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಮಂಡ್ಯ ಇವರ ದೂರವಾಣಿ ಸಂಖ್ಯೆ:08232–220478 ಅಥವಾ ಸಹಾಯಕ ಕಂದಾಯ ಅಧಿಕಾರಿಗಳು, ಮಂಡ್ಯ ರವರ ಮೊ.6362218708 ಹಾಗೂ ಕಂದಾಯ ಅಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009, ದೂರವಾಣಿ ಸಂಖ್ಯೆ:080–22273511 extn 308/309 ರಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.
ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/5761/Zen/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ರಾಜಕೀಯದಲ್ಲಿ ವೈರ ಕಟ್ಟಿಕೊಳ್ಳಲಾರದವನು ಸ್ನೇಹಿತರನ್ನೂ ಪಡೆದಿರಲಾರ.

ಯು.ಆರ್. ಅನಂತಮೂರ್ತಿ

ಸಂಪಾದಕೀಯ

ಅಣೆಕಟ್ಟುಗಳ ಸುರಕ್ಷತೆಗೆ ಆದ್ಯತೆ ಕೇಂದ್ರ–ರಾಜ್ಯಗಳ ಸಮನ್ವಯ ಅಗತ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಣೆಕಟ್ಟುಗಳ ಸುರಕ್ಷತೆಯ ಬಗ್ಗೆ ಈಚೆಗೆ ದನಿ ಎತ್ತಿದ್ದಾರೆ. ಅವರು ವ್ಯಕ್ತಪಡಿಸಿರುವ ಕಳವಳಗಳು ಅಣೆಕಟ್ಟುಗಳಲ್ಲಿ ಬಳಕೆಯಾಗಿರುವ ಎಂಜಿನಿಯರಿಂಗ್ ತಂತ್ರಜ್ಞಾನಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಅದು ರಾಷ್ಟ್ರದ ಭದ್ರತೆ, ಒಕ್ಕೂಟ ವ್ಯವಸ್ಥೆಯಲ್ಲಿನ ಹೊಣೆಗಾರಿಕೆ, ಸಾರ್ವಜನಿಕ ವಿಶ್ವಾಸಕ್ಕೆ ಸಂಬಂಧಿಸಿದ್ದೂ ಹೌದು ಎಂಬುದಾಗಿ ಅವರು ಹೇಳಿದ್ದಾರೆ. ಬೆಂಗಳೂರಿನಲ್ಲಿ ನಡೆದ ಅಣೆಕಟ್ಟುಗಳ ಸುರಕ್ಷತೆಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಸಮಾವೇಶದಲ್ಲಿ (ಐಸಿಡಿಎಸ್), ಹಳತಾಗುತ್ತಿರುವ ಅಣೆಕಟ್ಟುಗಳನ್ನು ಭಾರತದ ಮೂಲಸೌಕರ್ಯ ವಲಯದ ಅಪಾಯಗಳ ಕುರಿತ ಚರ್ಚೆಯ ಕೇಂದ್ರಭಾಗಕ್ಕೆ ಅವರು ತಂದಿರಿಸಿದ್ದಾರೆ. ಅಣೆಕಟ್ಟುಗಳ ಸಂಖ್ಯೆಯು ಈ ಕಳವಳಕ್ಕೆ ಕಾರಣವನ್ನು ಹೇಳುತ್ತಿದೆ. ವಿಶ್ವಸಂಸ್ಥೆಯ ವರದಿಯೊಂದರ ಪ್ರಕಾರ, ಭಾರತದಲ್ಲಿ 6,600ಕ್ಕೂ ಹೆಚ್ಚು ಅಣೆಕಟ್ಟುಗಳಿವೆ. ಅಂದರೆ ವಿಶ್ವದಲ್ಲಿ ಅತಿಹೆಚ್ಚಿನ ಸಂಖ್ಯೆಯ ಅಣೆಕಟ್ಟುಗಳನ್ನು ಹೊಂದಿರುವ ದೇಶಗಳ ಪಟ್ಟಿಯಲ್ಲಿ ಭಾರತ ಮೂರನೆಯ ಸ್ಥಾನ ಪಡೆದಿದೆ. ಈ ಪೈಕಿ ಸರಿಸುಮಾರು 1,100 ಅಣೆಕಟ್ಟುಗಳು ಐವತ್ತು ವರ್ಷಗಳಿಗಿಂತ ಹೆಚ್ಚು ಹಳೆಯವು. 220ಕ್ಕಿಂತ ಹೆಚ್ಚು ಅಣೆಕಟ್ಟುಗಳು ಶತಮಾನ ಕಂಡಿವೆ. 2050ರ ಸುಮಾರಿಗೆ ಭಾರತದ ಅಣೆಕಟ್ಟುಗಳ ಪೈಕಿ ಶೇ 80ಕ್ಕಿಂತ ಹೆಚ್ಚಿನವು, ಅವುಗಳ ನಿರೀಕ್ಷಿತ ಆಯುಸ್ಸನ್ನು ಕಳೆದಿರುತ್ತವೆ. ಕರ್ನಾಟಕದಲ್ಲಿಯೇ 231 ಅಣೆಕಟ್ಟುಗಳಿವೆ. ಈ ಪೈಕಿ ಸುಮಾರು ಶೇ 70ರಷ್ಟು ಅಣೆಕಟ್ಟುಗಳು 25 ವರ್ಷಗಳಿಗಿಂತ ಹಳೆಯವು. 40ಕ್ಕಿಂತ ಹೆಚ್ಚು 50 ವರ್ಷಗಳನ್ನು ಕಳೆದಿವೆ. ವಾಣಿ ವಿಲಾಸ ಸಾಗರ (119 ವರ್ಷಗಳು), ಕೃಷ್ಣರಾಜ ಸಾಗರ (95 ವರ್ಷಗಳು) ಮತ್ತು ತುಂಗಭದ್ರಾ ಅಣೆಕಟ್ಟು (73 ವರ್ಷಗಳು) ರಾಜ್ಯದ ಎಂಜಿನಿಯರಿಂಗ್ ಸಾಮರ್ಥ್ಯವನ್ನು ಸಾರುತ್ತಿವೆ, ಈಗ ಎದುರಾಗಬಹುದಾದ ಸಮಸ್ಯೆಗಳನ್ನೂ ಹೇಳುತ್ತಿವೆ.



ವಯಸ್ಸಾಗಿರುವ ಅಣೆಕಟ್ಟುಗಳ ಸುರಕ್ಷತೆಯನ್ನು ಖಾತರಿ ಪಡಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರಸ್ಪರ ಸಹಕಾರ ತತ್ತ್ವದಲ್ಲಿ ಒಟ್ಟಾಗಿ ಕಾರ್ಯ ನಿರ್ವಹಿಸುವುದು ಅಗತ್ಯ

ಅಣೆಕಟ್ಟುಗಳು ಒಂದಕ್ಕೊಂದು ಸಂಬಂಧ ಇರುವ ನಾಲ್ಕು ಅಪಾಯಗಳನ್ನು ಎದುರಿಸುತ್ತಿವೆ. ಮೊದಲನೆಯದು, ರಾಚನಿಕ ಅಪಾಯ, ಗೇಟುಗಳು ಹಾಗೂ ಇತರ ರಚನೆಗಳು ಹಳೆಯದಾಗಿರುವ ಕಾರಣದಿಂದಾಗಿ ಎದುರಾಗುವ ಅಪಾಯ. ಇವುಗಳಲ್ಲಿ ಹಲವು ರಚನೆಗಳು 50 ವರ್ಷ ಬಾಳಿಕೆ ಬರುವಂತೆ ರೂಪುಗೊಂಡವು. 2024ರಲ್ಲಿ ತುಂಗಭದ್ರಾ ಅಣೆಕಟ್ಟಿನ ಸರಪಳಿಯ ಕೊಂಡಿ ತುಂಡಾಗಿ ಒಂದು ಕ್ರೆಸ್ಟ್ ಗೇಟ್ ಕೊಚ್ಚಿಹೋದಾಗ ಈ ಅಪಾಯವು ಬಹಳ ಸ್ಪಷ್ಟವಾಗಿ ಗೋಚರವಾಗಿದೆ. ಎರಡನೆಯ ಅಪಾಯ: ಹೂಳು ತುಂಬಿರುವ ಪರಿಣಾಮವಾಗಿ ಹಲವಾರು ಹಳೆಯ ಅಣೆಕಟ್ಟುಗಳಲ್ಲಿನ ನೀರಿನ ಸಂಗ್ರಹ ಸಾಮರ್ಥ್ಯವು ಗಣನೀಯವಾಗಿ ಕಡಿಮೆ ಆಗಿರುವುದು. ಇದರಿಂದಾಗಿ ಪ್ರವಾಹ ಹಾಗೂ ಅನಾವೃಷ್ಟಿಯನ್ನು ನಿರ್ವಹಿಸುವಲ್ಲಿ ಈ ಅಣೆಕಟ್ಟುಗಳ ಸಾಮರ್ಥ್ಯ ತಗ್ಗಿದೆ. ಮೂರನೆಯ ಅಪಾಯ, ಹವಾಮಾನದ ವೈಪರೀತ್ಯಕ್ಕೆ ಸಂಬಂಧಿಸಿದೆ. ಈ ಅಣೆಕಟ್ಟುಗಳನ್ನು ಯಾವ ಪ್ರಮಾಣದ ಮಳೆಯ ಲೆಕ್ಕಾಚಾರದೊಂದಿಗೆ ಹಿಂದೆ ನಿರ್ಮಿಸಲಾಗಿತ್ತೋ ಆ ಪ್ರಮಾಣವನ್ನು ಈಗಿನ ಅತಿವೃಷ್ಟಿಯು ಮತ್ತೆ ಮತ್ತೆ ಮೀರುತ್ತಿದೆ. ನಾಲ್ಕನೆಯ ಅಪಾಯವು ಈಗಿನ ಕಾಲದ ಸೈಬರ್ ಭದ್ರತೆಗೆ ಸಂಬಂಧಿಸಿದೆ. ಡಿಜಿಟಲ್ ವ್ಯವಸ್ಥೆಯ ಮೂಲಕ ನಿಯಂತ್ರಿಸುವ ಉಪಕರಣಗಳನ್ನು, ಸ್ವಯಂಚಾಲಿತ ಗೇಟುಗಳನ್ನು ಅಣೆಕಟ್ಟುಗಳಿಗೆ ಅಳವಡಿಸಿದಂತೆಲ್ಲ ಅವು ತಾಂತ್ರಿಕವಾಗಿ ನಡೆಸಬಹುದಾದ ವಿಧ್ವಂಸಕ ಕೃತ್ಯಗಳಿಗೂ ಗುರಿಯಾಗುವ ಸಾಧ್ಯತೆ ಇರುತ್ತದೆ. ಸಹಕಾರಿ ಒಕ್ಕೂಟ ವ್ಯವಸ್ಥೆಗೆ ಸಿದ್ದರಾಮಯ್ಯ ಅವರು ಒತ್ತು ನೀಡಿದ್ದುದು ಎದ್ದುಕಾಣುವಂತೆ ಇದೆ. ಅವರು ನದಿ ಪಾತ್ರಗಳ ರಕ್ಷಣೆಗೆ ಎಲ್ಲ ರಾಜ್ಯಗಳೂ ಒಟ್ಟಾಗಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಕರೆ ನೀಡಿದ್ದಾರೆ. ಮನುಷ್ಯ ಖುದ್ದಾಗಿ ಭೇಟಿ ನೀಡಿ ಸುರಕ್ಷತೆಯ ಬಗ್ಗೆ ಆಗಾಗ ತಪಾಸಣೆ ನಡೆಸುವ ಬದಲು, ಡಿಜಿಟಲ್ ವ್ಯವಸ್ಥೆಯ ಮೂಲಕ ಸುರಕ್ಷತೆಯ ಮೇಲೆ ನಿರಂತರವಾಗಿ ನಿಗಾ ಇರಿಸುವ ಕೆಲಸ ಆಗಬೇಕು ಎಂದು ಹೇಳಿದ್ದಾರೆ.

ವ್ಯವಸ್ಥಿತ ನಿಗಾ, ಕಾಲಕಾಲಕ್ಕೆ ಅಣೆಕಟ್ಟುಗಳ ಆಧುನೀಕರಣ, ಹವಾಮಾನದ ವೈಪರೀತ್ಯಗಳಿಗೆ ಒಗ್ಗಿಕೊಳ್ಳುವಂತಹ ಬಗೆಯಲ್ಲಿ ಮರುವಿನ್ಯಾಸ, ಅಣೆಕಟ್ಟೆಯ ಕೆಳಗಿನ ಪ್ರದೇಶಗಳಲ್ಲಿ ವಾಸ ಮಾಡುವ ಸಮುದಾಯಗಳ ಸುರಕ್ಷತೆಯ ದೃಷ್ಟಿಯಿಂದ ವಿಶ್ವಾಸಾರ್ಹವಾದ ತುರ್ತು ಸುರಕ್ಷತಾ ಕ್ರಮಗಳು ಯಾವುದೇ ರಾಜಿ ಇಲ್ಲದೆ ಆಗಬೇಕಾದ ಕೆಲಸಗಳು. ರಾಷ್ಟ್ರದಾದ್ಯಂತ ಅಣೆಕಟ್ಟುಗಳ ತಪಾಸಣೆ ಮೂಲಕ ಈ ಕೆಲಸವು ಶುರು ಆಗಬೇಕು. ದುರಂತ ಸಂಭವಿಸುವವರೆಗೆ ಕಾಯುತ್ತ ಕೂರಬಾರದು. ಈ ಕೆಲಸ ಆಗಬೇಕು ಎಂದಾದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪಾಲುದಾರ ಆಗಿ ಮುಂದಡಿ ಇರಿಸಬೇಕು. ಸಹಕಾರ ಒಕ್ಕೂಟ ವ್ಯವಸ್ಥೆಯ ಆಶಯದಿಂದ ಕೆಲಸ ಮಾಡಬೇಕು. ಅಣೆಕಟ್ಟುಗಳು ಆಧುನಿಕ ಭಾರತದ ಮಂದಿರಗಳು ಎಂದು ಒಂದು ಕಾಲದಲ್ಲಿ ಹೇಳಲಾಗಿತ್ತು. ಅವುಗಳಿಗೆ ವಯಸ್ಸಾದಂತೆಲ್ಲ, ಅವುಗಳ ನಿರ್ವಹಣೆಗೆ ಗಮನ ನೀಡುವುದು ಜನರ ಮತ್ತು ಜೀವನೋಪಾಯದ ಸುರಕ್ಷತೆಯ ದೃಷ್ಟಿಯಿಂದ ಮಹತ್ವದ್ದಾಗುತ್ತದೆ.

ಚಾವಡಿ

ವಿ.ವಿ. ಮತ್ತು ಚೀನೀನಾಯಿ

ದೆಹಲಿಯ ಕೃತಕ ಬುದ್ಧಿಮತ್ತೆ ಸಮಾವೇಶದಲ್ಲಿ ಭಾರತದ ವಿಶ್ವವಿದ್ಯಾಲಯವೊಂದು ಮಾಡಿರುವ ಅಂತರರಾಷ್ಟ್ರೀಯ ಮುಜುಗರ ನಿರೀಕ್ಷಿತವಾಗಿದೆ. ಯಾಕೆಂದರೆ, ಧರ್ಮದ ಹೆಸರಿನ ಭಾವಾವೇಶವನ್ನೇ ಸಂಸ್ಕೃತಿ ರಕ್ಷಣೆಯೆಂದೂ, ದ್ವೇಷವನ್ನೇ ದೇಶಭಕ್ತಿಯೆಂದೂ ನಂಬಿಸುವ ಎಲ್ಲ ಚಿಂತನೆಗಳು, ಅಂತಿಮವಾಗಿ ಟೊಳ್ಳುವ್ಯಕ್ತಿತ್ವ ಮತ್ತು ಜ್ಞಾನವಿರೋಧಿ ಸಮಾಜವನ್ನೇ ಸೃಷ್ಟಿಸುತ್ತವೆ.

ರಹಮತ್ ತರೀಕೆರೆ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಡಿ.ಕೆ. ಶಿವಕುಮಾರ್ ಅವರೇ, ನೀವು ಹಾಸ್ಯದ ವಸ್ತುವಾಗಿದ್ದೀರಿ! ಕಳೆದ ಮೂರು ವರ್ಷಗಳಲ್ಲಿ ಉಸ್ತುವಾರಿ ಸಚಿವರಾಗಿ ನೀವು ಬೆಂಗಳೂರಿಗೆ ನಿಜವಾಗಿಯೂ ಏನು ಮಾಡಿರುವಿರಿ? ದುರಹಂಕಾರ ಸಾಕು. ದೂಷಣೆ ನಿಲ್ಲಿಸಿ. ನೈಜ ಪರಿಹಾರಗಳೊಂದಿಗೆ ಹೊರಬನ್ನಿ!

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಮಂಗಳವಾರ, 20-2-2001

• ಮಸೀದಿ ಧ್ವಂಸಕ್ಕೆ ಕಲ್ಯಾಣ್ ಸರ್ಕಾರ ಹೊಣೆ: ರಾವ್

ನವದೆಹಲಿ, ಫೆ. 19– ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಧ್ವಂಸಕ್ಕೆ ಅಂದು ಉತ್ತರ ಪ್ರದೇಶದಲ್ಲಿ ಅಧಿಕಾರದಲ್ಲಿದ್ದ ಕಲ್ಯಾಣ್ ಸಿಂಗ್ ನೇತೃತ್ವದ ಬಿಜೆಪಿ ಸರ್ಕಾರವೇ ಸಂಪೂರ್ಣ ಹೊಣೆ ಎಂದು ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಇಂದು ಆಪಾದಿಸಿದರು.

ಮಸೀದಿ ಧ್ವಂಸ ಪ್ರಕರಣದ ತನಿಖೆ ನಡೆಸುತ್ತಿರುವ ಲಿಬರ್‌ಹಾನ್ ಆಯೋಗದ ಮುಂದೆ ಅವರು ಇಂದು ಸಾಕ್ಷಿ ನೀಡಿದರು. ಮಸೀದಿಯನ್ನು ರಕ್ಷಿಸುವುದಾಗಿ ಕಲ್ಯಾಣ್ ಸಿಂಗ್ ಸರ್ಕಾರ ತಮಗೆ ಹಲವು ವೇದಿಕೆಗಳಲ್ಲಿ 'ಸ್ಪಷ್ಟ ಮತ್ತು ನಿಖರ ಭರವಸೆ' ನೀಡಿತ್ತು ಎಂದು ಅವರು ಹೇಳಿದರು.

• ಬೆಂಬಲ ಬೆಲೆ ಖರೀದಿ ಕೈಬಿಡಲು ಕೇಂದ್ರ ಪರಿಶೀಲನೆ

ಬೆಂಗಳೂರು, ಫೆ. 19– ಬೆಂಬಲ ಬೆಲೆ ನೀಡಿ ಧಾನ್ಯಗಳನ್ನು ಖರೀದಿ ಮಾಡುವುದರಿಂದ ಸಹಾಯಧನದ ರೂಪದಲ್ಲಿ ಬೊಕ್ಕಸದ ಮೇಲೆ ತೀವ್ರ ಹೊರೆ ಬೀಳುತ್ತಿರುವುದರಿಂದ ಮುಂದಿನ ವರ್ಷದಿಂದ ಬೆಂಬಲ ಬೆಲೆ ಖರೀದಿಯನ್ನೇ ಕೇಂದ್ರ ಸರ್ಕಾರ ಕೈಬಿಡಲು ಚಿಂತಿಸುತ್ತಿದೆ.

75 ವರ್ಷಗಳ ಹಿಂದೆ

ಮಂಗಳವಾರ, 20-2-1951

• ಖುರ್ಷಿದ್ ಲಾಲ್‌ರ ಅಂತ್ಯಕ್ರಿಯೆ

ನವದೆಹಲಿ, ಫೆ. 18– ಭಾರತ ಸರ್ಕಾರದ ಸಂಪರ್ಕ ಖಾತೆಯ ಉಪ ಸಚಿವರಾದ ಶ್ರೀ ಖುರ್ಷಿದ್ ಲಾಲ್ ರವರು ಇಂದು ಬೆಳಿಗ್ಗೆ 10 ಗಂಟೆ 20 ನಿಮಿಷಕ್ಕೆ ದೆಹಲಿಯ ವಿಲಿಂಗ್‌ಡನ್ ಆಸ್ಪತ್ರೆಯಲ್ಲಿ ಹೃದಯಸ್ಥಂಭನದಿಂದ ಮೃತರಾದರು. ಎರಡು ಮೈಲಿ ಉದ್ದದ ಮೆರವಣಿಗೆಯು ಜಮುನಾ ಘಾಟ್ ಸೇರಿದ ನಂತರ ಸಂಜೆ ಐದೂ ಕಾಲು ಗಂಟೆಗೆ ಶವಸಂಸ್ಕಾರ ನಡೆಸಲಾಯಿತು. ಮಹಾಪ್ರಧಾನಿ ನೆಹರೂ ಮತ್ತು ಇತರ ಮಂತ್ರಿಗಳೂ, ಪಾರ್ಲಿಮೆಂಟ್ ಸಭಾಧ್ಯಕ್ಷರು ಹಾಗೂ ಸದಸ್ಯರು ಸಂಸ್ಕಾರ ಕಾರ್ಯದಲ್ಲಿ ಭಾಗವಹಿಸಿದ್ದರು.

ಕಹಿ ಮುನ್ನೆಲೆಗೆ, 'ಆಟ' ನೇಪಥ್ಯಕ್ಕೆ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಭಾರತ ಹಾಗೂ ಪಾಕಿಸ್ತಾನದ ಕ್ರಿಕೆಟ್ ಪಂದ್ಯಗಳು ಆಟದ ರೋಚಕತೆಯ ಉತ್ತುಂಗಕ್ಕೆ ನಿದರ್ಶನದಂತಿದ್ದ ದಿನಗಳು ಈಗಿಲ್ಲ. ರಾಜಕೀಯ ಸ್ಪರ್ಶದಿಂದ ಒಂದು ಕ್ರೀಡೆ ಹೇಗೆ ಬಸವಳಿಯಬಹುದು ಎನ್ನುವುದಕ್ಕೆ ಪಾಕಿಸ್ತಾನ ತಂಡದ ಇತ್ತೀಚಿನ ಪ್ರದರ್ಶನವೇ ಉದಾಹರಣೆ. ಪಾಕಿಸ್ತಾನ ಕ್ರಿಕೆಟ್ ತಂಡದ ತ್ರಿಶಂಕುಸ್ಥಿತಿ, ಆಟವನ್ನು ರಾಜಕೀಯದ ಭಾಗವಾಗಿ ನೋಡುವವರಿಗೆ ಪಾಠದಂತಿದೆ.

ಆಟದ ಅಂಗಳದಲ್ಲಿ ರಾಜಕೀಯ ನುಸುಳಿದರೆ ಏನಾಗುತ್ತದೆ ಎನ್ನುವುದಕ್ಕೆ ಪಾಕಿಸ್ತಾನದ ಈ ಹೊತ್ತಿನ ಕ್ರಿಕೆಟ್ ನಿದರ್ಶನದಂತಿದೆ. ಹಿಂದೆಲ್ಲಾ, ಭಾರತ ಮತ್ತು ಪಾಕಿಸ್ತಾನದ ನಡುವಿನ ಕ್ರಿಕೆಟ್ ಪಂದ್ಯಗಳಿಗೆ ಉಭಯ ದೇಶಗಳ ನಡುವಣ ವೈಮನಸ್ಸಿನ ಆಯಾಮದ ಜೊತೆಗೆ, ಎರಡು ಪ್ರಬಲ ತಂಡಗಳ ತುರುಸಿನ ಸ್ಪರ್ಧೆಯ ಕಾರಣದಿಂದಾಗಿಯೂ ಮಹತ್ವ ಇರುತ್ತಿತ್ತು. ಈಗ, ವೈಮನಸ್ಸಷ್ಟೇ ಉಳಿದುಕೊಂಡಿದೆ. ಆಟದ ರೋಚಕತೆ ನೇಪಥ್ಯಕ್ಕೆ ಸರಿದಿದೆ.

ಹಿಂದಿನ ಉದಾಹರಣೆಗಳನ್ನು ನೆನಪಿಸಿಕೊಳ್ಳಿ. 1985ರಲ್ಲಿ ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ 'ವರ್ಲ್ಡ್ ಚಾಂಪಿಯನ್‌ಷಿಪ್' ಫೈನಲ್ ನೋಡಲು 50 ಸಾವಿರ ಜನ ಸೇರಿದ್ದರು. ಆ ಪಂದ್ಯದಲ್ಲಿ ಭಾರತ ಮತ್ತು ಪಾಕಿಸ್ತಾನ ಮುಖಾಮುಖಿಯಾಗಿದ್ದವು. ಶ್ರೀಕಾಂತ್ ಮತ್ತು ರವಿಶಾಸ್ತ್ರಿ ಅವರ ಅರ್ಧಶತಕಗಳು ಭಾರತ ಜಯಗಳಿಸಲು ಕಾರಣವಾಗಿದ್ದವು. ರವಿಶಾಸ್ತ್ರಿ ಅವತ್ತು ತಮಗೆ ಪ್ರಶಸ್ತಿಯಾಗಿ ಸಿಕ್ಕ ಔಡಿ ಕಾರಿನೊಂದಿಗೆ ಸಹ ಆಟಗಾರರ ಜೊತೆ ಸಂಭ್ರಮಿಸಿದ್ದು ಇವತ್ತಿಗೂ ಅವಿಸ್ಮರಣೀಯ ಚಿತ್ರವಾಗಿದೆ. 1983ರ ವಿಶ್ವಕಪ್ ಗೆದ್ದ ಎರಡು ವರ್ಷಗಳ ನಂತರ ಸಾಧಿಸಿದ್ದ ಈ ಜಯವು ಭಾರತದ ಕ್ರಿಕೆಟ್‌ಪ್ರಿಯರನ್ನು ಪುಳಕಿತಗೊಳಿಸಿತ್ತು.

1986ರಲ್ಲಿ ಶಾರ್ಜಾದಲ್ಲಿ ನಡೆದ ಆಸ್ಟ್ರೇಲಿಯಾ–ಏಷ್ಯಾ ಕಪ್ ಟೂರ್ನಿಯ ಭಾರತದ ಎದುರಿನ ಫೈನಲ್‌ನಲ್ಲಿ ಪಾಕಿಸ್ತಾನದ ಗೆಲುವಿಗೆ ಕೊನೆಯ ಎಸೆತದಲ್ಲಿ ನಾಲ್ಕು ರನ್ ಬೇಕಿತ್ತು. ಚೇತನ್ ಶರ್ಮಾ ಅವರ ಕೊನೆಯ ಎಸೆತವನ್ನು ಸಿಕ್ಸರ್‌ಗೆತ್ತಿದ್ದ ಮಿಯಾಂದಾದ್ ತಮ್ಮ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದ್ದರು. ಇಂದಿಗೂ ಆ ಪಂದ್ಯ ಕ್ರಿಕೆಟ್‌ಪ್ರಿಯರ ನೆನಪಿನ ಆಲ್ಬಮ್‌ನಲ್ಲಿ ಅಚ್ಚಳಿಯದೆ ಉಳಿದಿದೆ.

ಆಗಲೂ ಆಟಗಾರರ ನಡುವೆ ಕ್ರೀಡಾಂಗಣದಲ್ಲಿ ಸೆಣಸಾಟ ತಾರಕಕ್ಕೇರುತ್ತಿತ್ತು. ಆದರೆ, ಹೊರಗೆ ಸ್ನೇಹವಿರುತ್ತಿತ್ತು. ಇಂದಿಗೂ ಸುನಿಲ್ ಗಾವಸ್ಕರ್ ಮತ್ತು ಇಮ್ರಾನ್ ಖಾನ್ ಗೆಳೆಯರೇ ಆಗಿದ್ದಾರೆ. ಅಂತಹ ಗೆಳೆತನ ಈಗಿನ ಆಟಗಾರರ ನಡುವೆ ನಿರೀಕ್ಷಿಸುವುದು ಅಸಾಧ್ಯ. ಆಗ, ರಾಜಕೀಯ ಹಸ್ತಕ್ಷೇಪ ನೇರವಾಗಿರಲಿಲ್ಲ. ರಾಜತಾಂತ್ರಿಕ ಬಿಕ್ಕಟ್ಟಿನ ಬಿಸಿ ಇಷ್ಟೊಂದು ಇರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಪಾಕ್ ತಂಡವು ಭಾರತದ ಜೊತೆ ಆಡುವುದನ್ನು ಕುರಿತು ಅಲ್ಲಿಯ ಪ್ರಧಾನಮಂತ್ರಿ ನಿರ್ಧರಿಸುತ್ತಾರೆ. ಅದರಿಂದಾಗಿ 'ಆಟ' ಮಾಯವಾಗಿದೆ. ರಾಜಕೀಯ ಮೇಲಾಟಗಳೇ ಹೆಚ್ಚಾಗಿವೆ. ಈಚೆಗೆ ಕೊಲಂಬೊದಲ್ಲಿ ನಡೆದ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಉಭಯ ತಂಡಗಳ ಪಂದ್ಯವೇ ಈ ಮಾತಿಗೆ ಸಾಕ್ಷಿ. ಕ್ರಿಕೆಟ್ ಲೋಕದ ಕಡು ಎದುರಾಳಿಗಳಾಗಿರುವ ಭಾರತ–ಪಾಕಿಸ್ತಾನ ನಡುವಣ ಪೈಪೋಟಿ ಮೊದಲಿನ ತೀವ್ರತೆಯನ್ನು ಕಳೆದುಕೊಂಡಿದ್ದು, ಮಾರುಕಟ್ಟೆಯು ಪೈಪೋಟಿಯ ಕೃತಕ ವಾತಾವರಣವನ್ನುಸೃಷ್ಟಿಸಿಹಣಮಾಡಿಕೊಳ್ಳುತ್ತಿದೆಯೆ ಎಂಬ ಪ್ರಶ್ನೆಗಳನ್ನು ಆ ಪಂದ್ಯವು ಹುಟ್ಟುಹಾಕಿದೆ. ಈ ಹಿನ್ನೆಲೆಯಲ್ಲಿಯೇ, 'ಭಾರತ ಮತ್ತು ಪಾಕಿಸ್ತಾನದ ಹಣಾಹಣಿ ಕ್ರೀಡೆಯಾಗಿ ಅಷ್ಟೇ ಉಳಿದಿಲ್ಲ. ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಅಸ್ತ್ರವಾಗಿ ಮಾತ್ರ ಬಳಕೆಯಾಗುತ್ತಿದೆ. ಪ್ರಚೋದಕನಾರಿ ಹೇಳಿಕೆಗಳು ಮತ್ತು ಯುದ್ಧ ಸಿದ್ಧತೆಯ ಭಾವಭಂಗಿಗಳಿಂದ ಕ್ರಿಕೆಟ್ ಸ್ಫೂರ್ತಿ ಮಸುಕಾಗುತ್ತಿದೆ. ಇನ್ನು ಮುಂದೆ ಈ ಆಟವನ್ನು ಆನಂದಿಸಲಾಗದು ಎಂದು ನನಗನಿಸುತ್ತದೆ' ಎನ್ನುವ ಕ್ರಿಕೆಟ್ ವೀಕ್ಷಕ ವಿವರಣೆಗಾರ ಹರ್ಷ ಭೋಗ್ಲೆ ಅವರ ಮಾತನ್ನು ಗಮನಿಸಬೇಕು.

ರಾಜಕೀಯ ಕೆಸರೆರಚಾಟ ಮುನ್ನೆಲೆಗೆ ಬಂದಿದೆ. ಆಟಗಾರರು ಹಸ್ತಲಾಘವ ಮಾಡದಿರುವ, ಒಬ್ಬರನ್ನೊಬ್ಬರು ಟೀಕಿಸುವ ಮತ್ತಿತರ ವಿವಾದಗಳೇ ಸುದ್ದಿಯಾಗುತ್ತಿರುವುದು ಕ್ರೀಡಾಸ್ಫೂರ್ತಿಯ ಅಣಕದಂತಿದೆ. ಈ ಸಲ ಪಾಕ್ ಸರ್ಕಾರವು ಬಾಂಗ್ಲಾದೇಶವನ್ನು ಬೆಂಬಲಿಸುವ ನೆಪದಲ್ಲಿ ತಮ್ಮ ತಂಡ ವಿಶ್ವಕಪ್ ಟೂರ್ನಿಯಲ್ಲಿ ಆಡುವುದಿಲ್ಲ ಎಂದಿತು. ನಂತರ ಭಾರತ ಎದುರಿನ ಪಂದ್ಯದಲ್ಲಿ ಆಡುವುದಿಲ್ಲ, ಉಳಿದಿದ್ದರಲ್ಲಿ ಕಣಕ್ಕಿಳಿಯಲಿದೆ ಎಂದಿತು. ಮತ್ತೆ ಕೆಲವು ಬೇಡಿಕೆಗಳನ್ನು ಮುಂದಿಟ್ಟಿತು. ಆ ಎಲ್ಲ ಬೇಡಿಕೆಗಳನ್ನೂ ಐಸಿಸಿ ತಿರಸ್ಕರಿಸಿತು. ಆದರೆ, ಪಾಕ್ ಮತ್ತು ಭಾರತ ಪಂದ್ಯ ನಡೆಯುವಂತೆ ಐಸಿಸಿ ನೋಡಿಕೊಂಡಿತು. ಈ ಪಂದ್ಯಕ್ಕೆ ಆತಿಥ್ಯ ಒದಗಿಸಿದ ಶ್ರೀಲಂಕಾವೂ ಐಸಿಸಿಗೆ ಜೊತೆ ನೀಡಿತು. ಇದೆಲ್ಲದರ ಫಲವಾಗಿ ಪಂದ್ಯ ನಡೆಯಿತು. ಕೋಟ್ಯಂತರ ಜನರೂ ಪಂದ್ಯ ವೀಕ್ಷಿಸಿದರು. ಆದರೆ ನಿರೀಕ್ಷೆಗಿಂತಲೂ ಸುಲಭವಾಗಿ ಭಾರತದ ಬೌಲರ್‌ಗಳು ಪಂದ್ಯ ಗೆಲ್ಲಿಸಿಕೊಟ್ಟರು. ಗುಂಪು ಹಂತದ ಕೊನೆಯ ಪಂದ್ಯದಲ್ಲಿ ನಮೀಬಿಯಾ ವಿರುದ್ಧ ಗೆದ್ದ ಪಾಕ್ ಅಂತೂ ಇಂತೂ ಸೂಪರ್ ಎಂಟಕ್ಕೆ ಪ್ರವೇಶಿಸಿತು.

ಆಟದೊಳಗಿನ ಪೈಪೋಟಿ ಹೆಚ್ಚಾಗಿದ್ದ ಸಂದರ್ಭದಲ್ಲಿ ಉಭಯ ತಂಡಗಳ ಗುಣಮಟ್ಟವೂ ಬೆಳೆಯಿತು. ಆಟಗಾರರೂ ಬೆಳೆದರು. ಪಾಕಿಸ್ತಾನದ ನೆಲದಲ್ಲಿಯೇ 'ಯೇ ಥೋ ಬಚ್ಚಾ ಹೈ ರೇ' ಎಂದು ತಮ್ಮನ್ನು ಹೀಯಾಳಿಸಿದವರಿಗೆ 16 ವರ್ಷದ ಸಚಿನ್ ನೀಡಿದ್ದ ತಿರುಗೇಟು ಹಲವರಿಗೆ ಪ್ರೇರಣೆಯಾಯಿತು. ಸಚಿನ್ ದಿಗ್ಗಜರಾಗಿ ಬೆಳೆದರು. ಪಾಕಿಸ್ತಾನದಲ್ಲಿಯೂ ಅವರಿಗೆ ಅಭಿಮಾನಿಗಳ ದೊಡ್ಡ ಬಳಗ ಸೃಷ್ಟಿಯಾಯಿತು. 1996ರ ವಿಶ್ವಕಪ್ ಟೂರ್ನಿಯಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಮೀರ್ ಸೊಹೇಲ್ ತೋರಿದ್ದ ದರ್ಪಕ್ಕೆ ವೇಗಿ ವೆಂಕಟೇಶ್ ಪ್ರಸಾದ್ ಅವರು ವಿಕೆಟ್ ಎಗರಿಸಿ ಕೊಟ್ಟಿದ್ದ ಪ್ರತ್ಯುತ್ತರ, 2007ರ ಟಿ20 ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಮಹೇಂದ್ರಸಿಂಗ್ ಧೋನಿ ಬಳಗವು ಪಾಕಿಸ್ತಾನವನ್ನು ಸೋಲಿಸಿದ್ದ ಪರಿ, 2022ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಚುಟುಕು ವಿಶ್ವಕಪ್ ಪಂದ್ಯದಲ್ಲಿ ಹ್ಯಾರಿಸ್ ರವೂಫ್ ಎಸೆತಗಳಲ್ಲಿ ಎರಡು ಸಿಕ್ಸರ್ ಹೊಡೆದಿದ್ದ ವಿರಾಟ್ ಕೊಹ್ಲಿಯ ಆಟವನ್ನು ಮರೆಯಲು ಸಾಧ್ಯವೇ?

ಆಟದಲ್ಲಿ ಸೋಲು ಗೆಲುವು ಸಾಮಾನ್ಯ. ಆದರೆ ಅವುಗಳನ್ನು ಸಾಧಿಸುವ ರೀತಿ ಮುಖ್ಯ. ಸಾಮಾಜಿಕ ಜಾಲತಾಣಗಳಲ್ಲಿ ಪಾಕಿಸ್ತಾನದ ಯುವ ಕ್ರಿಕೆಟ್‌ಪ್ರೇಮಿಗಳು ಹೇಳುತ್ತಿರುವುದೂ ಇದನ್ನೇ. ಯಾವುದೇ ಪ್ರತಿರೋಧ, ಯೋಜನಾಬದ್ಧ ಆಟವೇ ಇಲ್ಲದೆ ಪಾಕ್ ಮಂಡಿಯೂರಿತು ಎಂಬ ಬೇಸರ ಅವರ ಮಾತುಗಳಲ್ಲಿದೆ. ತರಬೇತಿ, ಹಣ ಮತ್ತಿತರ ಸೌಲಭ್ಯಗಳಿಲ್ಲದೆ ಆಟಗಾರರೇ ಪರದಾಡುವುದನ್ನು ಪಾಕಿಸ್ತಾನದ ಮಾಜಿ ಕ್ರಿಕೆಟಿಗರು ಹಲವು ಬಾರಿ ಒಪ್ಪಿಕೊಂಡಿದ್ದಾರೆ. ಪಾಕ್ ದೇಶಕ್ಕೆ ಇತಿಹಾಸದಲ್ಲಿ ವಿಶ್ವಕಪ್ ಜಯಿಸಿಕೊಟ್ಟ ಏಕೈಕ ನಾಯಕ ಇಮ್ರಾನ್ ಖಾನ್ ಅವರು ಇವತ್ತು ಜೈಲಿನಲ್ಲಿದ್ದಾರೆ. ಆ ದೇಶದ ಪ್ರಧಾನಿಯೂ ಆಗಿದ್ದ ಅವರು ಈಗ ಜೈಲಿನಲ್ಲಿ ಚಿಕಿತ್ಸೆಗಾಗಿ ಅಂಗಲಾಚುವ ಪರಿಸ್ಥಿತಿ ಇದೆ.

ಪಾಕಿಸ್ತಾನದಲ್ಲಿ ಈ ಅಧೋಗತಿ ಕ್ರಿಕೆಟ್‌ಗೆ ಮಾತ್ರ ಒದಗಿಲ್ಲ, ಹಾಕಿಗೂ ಬಂದಿದೆ. ಒಂದು ಕಾಲದಲ್ಲಿ ಒಲಿಂಪಿಕ್ ಪದಕ ವಿಜೇತ ತಂಡವಾಗಿದ್ದ ಪಾಕ್ ಹಾಕಿ ತಂಡವು ಈಗ ಎಲ್ಲಿಯೂ ಇಲ್ಲದಂತಾಗಿದೆ. ಇತ್ತೀಚೆಗೆ ಆಸ್ಟ್ರೇಲಿಯಾದಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯಲ್ಲಿ ಆಡಲು ತೆರಳಿದ್ದ ಪಾಕ್ ತಂಡವು ವಸತಿ, ಊಟಕ್ಕಾಗಿ ಪರದಾಡಿತ್ತು. 'ರಾತ್ರಿಯನ್ನು ಬೀದಿ ಬದಿಯಲ್ಲಿ ಕಳೆದಿದ್ದೇವೆ. ನಮಗೆ ಕೊಟ್ಟಿದ್ದ ಕೋಣೆಯಿಂದ ಪಂದ್ಯಕ್ಕೆ ಹೊರಡುವ ಮುನ್ನ ನಾವು ತಿಂದುಂಡ ಪಾತ್ರೆ ಪಡಗಗಳನ್ನು ತೊಳೆದಿಡಬೇಕಿತ್ತು. ನಮ್ಮ ಆಹಾರ ನಾವೇ ಹೊಂದಿಸಿಕೊಳ್ಳಬೇಕಾಗಿತ್ತು' ಎಂದು ಪಾಕ್ ತಂಡದ ನಾಯಕ ಶಕೀಲ್ ಅಹ್ಮದ್ ಬಟ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಟ್ಟ ರಾಜಕೀಯದ ಕಪಿಮುಷ್ಟಿಯಲ್ಲಿ ಪಾಕ್ ಕ್ರೀಡಾಕ್ಷೇತ್ರ ಸಿಲುಕಿರುವುದಕ್ಕೆ ಕನ್ನಡಿ ಇದು.

ಇಂತಹುದೇ ಸನ್ನಿವೇಶದಿಂದ ಪಾತಾಳಕ್ಕೆ ಹೋಗಿದ್ದ ಜಿಂಬಾಬ್ವೆ ತಂಡವು ಮತ್ತೆ ಪುಟಿದೆದ್ದು, ಮುಖ್ಯವಾಹಿನಿಗೆ ಬರುವತ್ತ ಮಹತ್ವದ ಹೆಜ್ಜೆ ಇರಿಸಿದೆ. ಆಸ್ಟ್ರೇಲಿಯಾದಂತಹ ಬಲಾಢ್ಯ ತಂಡವನ್ನು ಸೋಲಿಸಿ ಸೂಪರ್ 8ರ ಘಟ್ಟಕ್ಕೆ ಪ್ರವೇಶಿಸಿದೆ. ಭಯೋತ್ಪಾದನೆಯ ಕರಿನೆರಳಿನಲ್ಲಿ ನಲುಗಿದ್ದ ಅಫ್ಗಾನಿಸ್ತಾನದ ಕ್ರಿಕೆಟ್ ತಂಡವೂ ಇವತ್ತು ಘಟಾನುಘಟಿ ದೇಶಗಳಿಗೆ ದಿಟ್ಟ ಉತ್ತರ ನೀಡುವ ಮಟ್ಟಕ್ಕೆ ಬೆಳೆದಿದೆ.

ಇನ್ನೊಂದು ಕಡೆ ನೇಪಾಳ, ಕೆನಡಾ, ಅಮೆರಿಕ, ಇಟಲಿ, ನಮೀಬಿಯಾ ಮತ್ತು ನೆದರ್ಲೆಂಡ್ಸ್‌ನಂತಹ ದೇಶಗಳು ತಮ್ಮ ಸೀಮಿತ ಅನುಭವ ಮತ್ತು ಅವಕಾಶಗಳ ಚೌಕಟ್ಟಿನಲ್ಲಿ ಅಮೋಘವಾದ ಬೆಳವಣಿಗೆ ಸಾಧಿಸಿವೆ. ಈ ಎಲ್ಲ ತಂಡಗಳಲ್ಲಿಯೂ ಭಾರತೀಯ ಆಟಗಾರರಿರುವುದು ವಿಶೇಷ. ಅದರಲ್ಲೂ ಅಮೆರಿಕ ತಂಡದಲ್ಲಿ ಭಾರತದವರೇ ಆದ ಸೌರಭ್ ನೇತ್ರಾವಳ್ಕರ್, ನಾಸ್ತುಷ್ ಕೆಂಜಿಗೆ (ಕನ್ನಡಿಗ), ಮೊನಾಂಕ್ ಪಟೇಲ್, ಮಿಲಿಂದ್ ಕುಮಾರ್ ಅವರಿದ್ದಾರೆ. ಅದೇ ತಂಡದಲ್ಲಿ ಪಾಕ್ ಆಟಗಾರ ಮೊಹಮ್ಮದ್ ಮೊಹಸೀನ್ ಕೂಡ ಇದ್ದರು. ನೆದರ್ಲೆಂಡ್ಸ್ ತಂಡದಲ್ಲಿ ಇರುವ ಆರ್ಯನ್ ದತ್ ಕೂಡ ಭಾರತದವರೇ.

ನೇಪಾಳ ತಂಡವು ಕ್ರಿಕೆಟ್ ಜನಕ ಇಂಗ್ಲೆಂಡ್ ತಂಡದ ಎದುರು ಬರೀ 4 ರನ್‌ಗಳಿಂದ ಸೋತಿತ್ತು. ಕಳೆದೊಂದು ದಶಕದಿಂದ ಒಂದೊಂದೇ ಮೆಟ್ಟಿಲು ಹತ್ತಿ ಬಂದಿರುವ ತಂಡ ಅದು. ಇನ್ನು ಅತಿಯಾದ ರಾಜಕೀಯ ಹಸ್ತಕ್ಷೇಪ, ಆಂತರಿಕ ಸಂಘರ್ಷಗಳಿಂದಾಗಿ ಪಾತಾಳ ಕಂಡಿದ್ದ ವೆಸ್ಟ್ ಇಂಡೀಸ್ ತಂಡ ಈ ಬಾರಿ ಒಂದಿಷ್ಟು ಚೇತರಿಸಿಕೊಂಡಿದೆ. 2016ರಲ್ಲಿ ವಿಂಡೀಸ್ ವಿಶ್ವಕಪ್ ಗೆದ್ದಾಗ ನಾಯಕರಾಗಿದ್ದ ಡ್ಯಾರೆನ್ ಸಮಿ ಈಗ ಮುಖ್ಯ ಕೋಚ್ ಆಗಿದ್ದಾರೆ. ಆಟಗಾರರಲ್ಲಿ ಶಿಸ್ತು, ಸಂಯಮ ಮತ್ತು ವೃತ್ತಿಪರತೆ ಮೂಡಿಸುವಲ್ಲಿ ಒಂದಿಷ್ಟು ಯಶಸ್ಸು ಸಾಧಿಸಿದ್ದಾರೆ. ಇದೆಲ್ಲವೂ ಪಾಕಿಸ್ತಾನ ಮತ್ತು ಬಾಂಗ್ಲಾದಂತಹ ರಾಷ್ಟ್ರಗಳಿಗೆ ಪಾಠವಾಗಬೇಕು. ಆಟದಂಗಳದಲ್ಲಿ ರಾಜಕೀಯದಾಟಕ್ಕೆ ಮಿತಿಮೀರಿ ಆಸ್ಪದ ನೀಡುವ ಎಲ್ಲ ದೇಶಗಳೂ ಎಚ್ಚೆತ್ತುಕೊಳ್ಳಲು ಇದು ಸಕಾಲ. ವೀರೋಚಿತ ಹೋರಾಟದ ಮೂಲಕವೇ ಮನಸ್ಸುಗಳನ್ನು ಗೆಲ್ಲಬೇಕು. ಕ್ರಿಕೆಟ್ ಜಯಿಸಬೇಕು.

ವಾಚಕರ ವಾಣಿ

ಸತ್ಯ ಆನೆಯ ಮೇಲೆ, ಸುಳ್ಳು ವಿಮಾನದಲ್ಲಿ

ದೆಹಲಿಯಲ್ಲಿ ನಡೆಯುತ್ತಿರುವ 'ಎ.ಐ. ಇಂಪ್ಯಾಕ್ಟ್ ಶೃಂಗಸಭೆ'ಯಲ್ಲಿ ಚೀನಾನಿರ್ಮಿತ 'ರೋಬೊಶ್ವಾನ'ವನ್ನು ನಮ್ಮ ತಂತ್ರಜ್ಞಾನವೆಂದು ಹೇಳಿಕೊಳ್ಳುವ ಧೈರ್ಯ ಗಲ್ಗೋಟಿಯಾಸ್ ವಿಶ್ವವಿದ್ಯಾನಿಲಯಕ್ಕೆ ಹೇಗೆ ಬಂತು? ಸತ್ಯ ಆನೆಯ ಮೇಲೆ ಗಂಭೀರವಾಗಿ ಸಾಗುತ್ತಿರುವ ಹೊತ್ತಿನಲ್ಲಿ ಇಂತಹ ಸುಳ್ಳುಗಳು ವಿಮಾನವೇಗದಲ್ಲಿ ಪ್ರಚಾರ ಪಡೆಯುತ್ತಿರುವುದು ತಂತ್ರಜ್ಞಾನದ ದುರುಪಯೋಗಕ್ಕೆ ಸ್ಪಷ್ಟ ಹಾಗೂ ಹೊಸ ಉದಾಹರಣೆಯಾಗಿದೆ. ಸತ್ಯಕ್ಕಾಗಿ ರಾಜ್ಯವನ್ನೇ ತ್ಯಾಗ ಮಾಡಿದ ರಾಜಾ ಹರಿಶ್ಚಂದ್ರನ ಭರತಭೂಮಿಯಲ್ಲಿ, ಅಧಿಕಾರಕ್ಕಾಗಿ ನಿತ್ಯ ಸುಳ್ಳುಗಳ ಹಬ್ಬ ಆಚರಿಸುತ್ತಿರುವ ನಮ್ಮ ರಾಜಕಾರಣದ ನಡೆಗಳು ಸುಧಾರಣೆಯಾಗಬೇಕು. ರಾಜಕಾರಣದ ನಡವಳಿಕೆಗಳು ಜನಸಾಮಾನ್ಯರಿಗೆ ಆದರ್ಶ ಆಗಿರಬೇಕೆ ಹೊರತು, ಅವರನ್ನು ದಿಕ್ಕುತಪ್ಪಿಸುವಂತೆ ಇರಬಾರದು.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ತುರ್ತು ಸಂಪರ್ಕ: ಬೇಜವಾಬ್ದಾರಿ ಸಲ್ಲದು

ತುರ್ತು ಪರಿಹಾರ ತಂಡದ ಎಂಜಿನಿಯರ್ ಒಬ್ಬರು ತಮ್ಮ ಮೊಬೈಲ್ ಸಂಖ್ಯೆಗೆ 'ಸ್ವಿಚ್ಡ್ ಆಫ್' ಕಾಲರ್ ಟ್ಯೂನ್ ಅಳವಡಿಸಿ ಕೊಂಡಿರುವ ಸುದ್ದಿ (ಪ್ರ.ವಾ., ಫೆ. 19) ಕಳವಳ ಹುಟ್ಟಿಸುವಂತಹದ್ದು. ಸಂಕಷ್ಟದ ಹೊತ್ತಿನಲ್ಲಿ ಜನರಿಗೆ ತಕ್ಷಣ ಸಹಾಯ ದೊರಕಬೇಕಾದರೆ ತುರ್ತು ಸಂಪರ್ಕ ವ್ಯವಸ್ಥೆ ಸದಾ ಸಜ್ಜಾಗಿರಬೇಕು. ಅಪಘಾತ, ಆರೋಗ್ಯ ತುರ್ತು ಪರಿಸ್ಥಿತಿ ಅಥವಾ ಇನ್ನಿತರೆ ಅನಿವಾರ್ಯ ಸಂದರ್ಭಗಳಲ್ಲಿ ಜನರು ಮೊದಲು ನೆನಪಿಸಿಕೊಳ್ಳುವುದು ತುರ್ತು ಸಂಖ್ಯೆಗಳನ್ನೇ. ಇಂತಹ ಅತ್ಯವಶ್ಯ ಸೇವೆಗಳನ್ನು ಒದಗಿಸಬೇಕಾದವರು ಬೇಜವಾಬ್ದಾರಿಯಿಂದ ನಡೆದುಕೊಳ್ಳಬಾರದು. ಅಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ತುರ್ತು ಸಂಖ್ಯೆಗಳು ಯಾವಾಗಲೂ ಲಭ್ಯವಾಗುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಸಿಬ್ಬಂದಿಗೆ ಅವರ ಹೊಣೆಗಾರಿಕೆಯ ಅರಿವು ಮೂಡಿಸಿ, ನಿರ್ಲಕ್ಷ್ಯ ತೋರಿದವರ ಮೇಲೆ ಕಠಿಣ ಕ್ರಮ ಜರುಗಿಸಬೇಕು.

ಹನುಮಂತ ಆರ್.ಸಿ., ಹುನಗುಂದ

ದ್ವೇ(ದೋ)ಷ!

ದ್ವೇಷಭಾಷಣ ತಡೆಗೆ
ಮಸೂದೆ.
ಆದರೆ,
ದೇಶೋವಿಶಾಲವಾದ
ದೋಷ ಭಾಷಣ
ಮತ್ತು ಬರಹಕ್ಕೆ
ಅಡೆತಡೆ ಎಲ್ಲಿದೆ?
ದೋಷಕ್ಕಿರಲಿ ದ್ವೇಷ!

ಸಿ.ಪಿ.ಕೆ., ಮೈಸೂರು

ಸ್ಮಾರ್ಟ್ ಕಾರ್ಡ್: ವಿವೇಚನಾರಹಿತ ನಡೆ!

'ಶಕ್ತಿ' ಯೋಜನೆ ಫಲಾನುಭವಿಗಳಿಗೆ ಸ್ಮಾರ್ಟ್ ಕೊಡುವ ಸರ್ಕಾರದ ನಿರ್ಧಾರದ ಸಾಧಕ ಬಾಧಕಗಳ ವಿಶ್ಲೇಷಣೆಯ ಸಂಪಾದಕೀಯ (ಫೆ. 19) ಸಮಯೋಚಿತ. ಸರ್ಕಾರದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣ ಇಲ್ಲದಿದ್ದರೂ, ಇಂತಹ ಹಣ ಹೊಡೆಯುವ ಕಾರ್ಯಗಳಿಗೆ ಯಾವ ಕೊರತೆಯೂ ಇಲ್ಲ ಎನ್ನುವುದನ್ನು ಸ್ಮಾರ್ಟ್ ಕಾರ್ಡ್‌ನಂತಹ ಯೋಜನೆಗಳು ಸಾಬೀತು ಪಡಿಸುವಂತಿವೆ. ನಾಗರಿಕರ ತೆರಿಗೆ ಹಣವನ್ನು ಪೋಲು ಮಾಡುವ ಈ ಯೋಜನೆಯನ್ನು ಸರ್ಕಾರ ಕೈ ಬಿಡಲಿ. ಶಕ್ತಿ ಯೋಜನೆಯ ಫಲಾನುಭವಿಗಳಿಗೆ ಅನಗತ್ಯ ಗೊಂದಲ ಉಂಟುಮಾಡದಿರಲಿ. ಈಗಾಗಲೇ ಹಲವು ಕಾರ್ಡ್‌ಗಳ ಗೊಂದಲವನ್ನು ಜನಸಾಮಾನ್ಯರು ಅನುಭವಿಸುತ್ತಿದ್ದಾರೆ. ಆ ಸಾಲಿಗೆ ಇನ್ನೊಂದು ಕಾರ್ಡ್ ಸೇರದಿರಲಿ.

ಮುಳ್ಳೂರು ಪ್ರಕಾಶ್, ಮೈಸೂರು

ಕ್ರಿಕೆಟ್‌ಗಿದು ಆತ್ಮಾವಲೋಕನದ ಸಮಯ

ಭಾರತದ ಕ್ರಿಕೆಟ್ ತಂಡವು ಪಾಕಿಸ್ತಾನ ತಂಡದ ವಿರುದ್ಧ ಪಂದ್ಯ ಗೆದ್ದಾಗಲೆಲ್ಲ ನಾವು, ರಣಾಂಗಣದಲ್ಲಿ ಆ ದೇಶವನ್ನೇ ಸೋಲಿಸಿ ಹಿಮ್ಮೆಟ್ಟಿಸಿ ನಿರ್ನಾಮಗೊಳಿಸಿದವರಂತೆ ಸಂಭ್ರಮಿಸುತ್ತೇವೆ. ಕ್ರಿಕೆಟ್ ಆಟವನ್ನು ಅತಿಯಾಗಿ ಮೋಹಿಸುವ ಮೂಲಕ ಇತರ ಆಟೋಟಗಳನ್ನೂ ದೇಸೀ ಕ್ರೀಡೆಗಳನ್ನೂ ಪರೋಕ್ಷವಾಗಿ ಕಡೆಗಣಿಸುತ್ತೇವೆ. ಈ ಮೋಹವನ್ನು ತಾರಕ ಮಟ್ಟಕ್ಕೆ ಕೊಂಡೊಯ್ದಿದ್ದೇವೆ. ಇತರ ಆಟಗಳನ್ನು ಕಡೆಗಣಿಸಿದ್ದೇವೆ. ಆರೋಗ್ಯಕ್ಕೆ ಹಿತಕರವಲ್ಲದ ತಿನಿಸು–ಪಾನೀಯಗಳ ಜಾಹಿರಾತುಗಳಿಂದಲೂ ಕೋಟ್ಯಂತರ ಜನರ ದುಡಿಮೆಯ ಹಣ ಬಾಚಿದ ಕ್ರೀಡಾಳುವಿಗೆ ದೇಶದ ಅತ್ಯುನ್ನತ ಪ್ರಶಸ್ತಿ ನೀಡುತ್ತೇವೆ. ಕ್ರಿಕೆಟ್ ವ್ಯಾಮೋಹಿಗಳು, ಅದರಲ್ಲೂ ಯುವಸಮೂಹ, ಜೊತೆಗೆ, ದೇಶವನ್ನು ಆಳುವವರು, ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಪ್ರಜಾಸತ್ತಾತ್ಮಕ ಸಂವಾದ ದಿಕ್ಕುತಪ್ಪದಿರಲಿ

'ಮನರೇಗಾ' ಯೋಜನೆ ಗ್ರಾಮೀಣ ಉದ್ಯೋಗ ಭದ್ರತೆಯ ದೃಷ್ಟಿಯಿಂದ ಮಹತ್ವದ್ದಾಗಿದೆ. ಅದರ ಹೆಸರು, ವಿನ್ಯಾಸ ಅಥವಾ ಜಾರಿಗೆ ಸಂಬಂಧಿಸಿದ ಚರ್ಚೆಗಳು ನಡೆಯಬಹುದು; ಅವು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿನ ಸಹಜ ಪ್ರಕ್ರಿಯೆಗಳೇ. ಆದರೆ ಆ ಚರ್ಚೆಗಳನ್ನು ವಿಚಾರಪೂರ್ಣವಾಗಿ, ದತ್ತಾಂಶಾಧಾರಿತವಾಗಿ ಮತ್ತು ಜನಹಿತದ ದೃಷ್ಟಿಯಿಂದ ನಡೆಸಬೇಕು. ಹೆಸರಿನ ಮೇಲೆ ನಡೆಯುವ ರಾಜಕೀಯಕ್ಕಿಂತ, ಯೋಜನೆಯ ಪರಿಣಾಮಕಾರಿತ್ವ, ಪಾರದರ್ಶಕತೆ ಮತ್ತು ಗ್ರಾಮೀಣ ಜೀವನಮಟ್ಟದ ಮೇಲಿನ ಪರಿಣಾಮಗಳ ಬಗ್ಗೆ ಗಂಭೀರ ಚಿಂತನೆ ಅಗತ್ಯ.

ಇಂದಿನ ಸಾರ್ವಜನಿಕ ಸಂವಾದದಲ್ಲಿ ನಾವು ಕಾಣುತ್ತಿರುವುದು ಭಾವನಾತ್ಮಕ ಪ್ರತಿಕ್ರಿಯೆಗಳ ಹೆಚ್ಚಳ. ಸಮಸ್ಯೆಗಳ ಪರಿಹಾರಕ್ಕೆ ಶಾಂತ ಮನಸ್ಸು, ಸ್ಪಷ್ಟ ಚಿಂತನೆ ಮತ್ತು ಪರಸ್ಪರ ಗೌರವ ಅವಶ್ಯಕ. ಗಾಂಧೀಜಿ ನಮಗೆ ಕಲಿಸಿದ್ದೂ ಇದೇ — ವಿರೋಧಿಯನ್ನೂ ಮಾನವೀಯ ದೃಷ್ಟಿಯಿಂದ ನೋಡುವುದು ಮತ್ತು ಭಿನ್ನಾಭಿಪ್ರಾಯದಲ್ಲಿಯೂ ನೈತಿಕ ಮಟ್ಟವನ್ನು ಕಾಪಾಡಿಕೊಳ್ಳುವುದು.

ರಾಜಕೀಯ ಸ್ಪರ್ಧೆ ಅನಿವಾರ್ಯ. ಆದರೆ ರಾಷ್ಟ್ರೀಯ ಸಂಕೇತಗಳ ಬಳಕೆ ಮತ್ತು ಸಾಮಾಜಿಕ ಕಲ್ಯಾಣ ಯೋಜನೆಗಳ ಚರ್ಚೆಗಳಲ್ಲಿ ನಾವು ಸಮತೋಲನ, ಪ್ರೌಢತೆ ಮತ್ತು ಮೌಲ್ಯಾಧಾರಿತ ನಿಲುವು ತಾಳಬೇಕು. ಆಗ ಮಾತ್ರ ನಮ್ಮ ಪ್ರಜಾಸತ್ತಾತ್ಮಕ ಸಂವಾದ ಆರೋಗ್ಯಕರ ದಿಕ್ಕಿನಲ್ಲಿ ಸಾಗುತ್ತದೆ.

ಎಂ. ರವೀಂದ್ರ, ಬೆಂಗಳೂರು

ಚುರುಮುರಿ

ಬಾಲ ಇಲ್ಲದ ನಾಯಿ!

• ಬಿ.ಎನ್. ಮಲ್ಲೇಶ್

ಹರಟೆಕಟ್ಟೆಯಲ್ಲಿ ಎಲ್ಲರನ್ನೂ ಹೆದರಿಸುವ ಹಾಗೆ, ತಮಾಷೆಗೆ 'ಬೌ ಬೌ' ಎಂದ ಗುಡ್ಡೆ. ಪಟ್ ಅಂತ ಅವನಷ್ಟೇ ವೇಗವಾಗಿ 'ಹಚಾ, ಹಚಾ' ಎಂದಳು ಮಂಜಮ್ಮ. ಮಂಜಮ್ಮನ ತ್ವರಿತ ಪ್ರತಿಕ್ರಿಯೆಗೆ ಎಲ್ಲರಿಗೂ ಜೋರಾಗಿ ನಗು ಬಂತು.

'ಲೇ ಗುಡ್ಡೆ, ಯಾಕಲೆ ಬೊಗಳಿದ್ದು?' ಕೇಳಿದ ತೆಪರೇಸಿ.

'ಇದು ಬೌ ಬೌ ನ್ಯೂಸ್... ಬೊಗಳಿದ್ದು ರೋಬೊ ನಾಯಿ' ಎಂದ ಗುಡ್ಡೆ.

'ರೋಬೊ ನಾಯಿನಾ? ಅಂದ್ರೆ?' ಕೊಟ್ರನಿಗೆ ಕುತೂಹಲ.

'ಮೊನ್ನೆ ಡೆಲ್ಲೀಲಿ ಕೃತಕ ಬುದ್ಧಿಮತ್ತೆ ಸಮ್ಮೇಳನದಲ್ಲಿ ನಮ್ಮ ವಿಜ್ಞಾನಿಗಳು ಒಂದು ರೋಬೊ ನಾಯಿ ಪ್ರದರ್ಶನ ಮಾಡಿ ಇದನ್ನು ನಾವೇ ಕಂಡು ಹಿಡಿದದ್ದು ಅಂತ ಕೊಚ್ಕಂಡ್ರಂತೆ. ಆಮೇಲೆ ಗೊತ್ತಾಗಿದ್ದೇನಂದ್ರೆ, ಅದು ಚೀನಾ ಮೇಡ್ ರೋಬೊ ನಾಯಿ!'

'ಹೌದಾ? ಥೋತ್ತೇರಿ... ನಮ್ಮೋರಿಗೆ ಒಂದು ನಕಲಿ ನಾಯಿ ಸೃಷ್ಟಿ ಮಾಡೋಕೂ ಬರ್ಲಿಲ್ಲಂತಾ?' ಮಂಜಮ್ಮಗೆ ಸಿಟ್ಟು ಬಂತು.

'ಹೋಗ್ಲಿ, ಆ ನಾಯಿ ನಮ್ ತರ... ಐ ಮೀನ್ ನಮ್ ನಾಯಿಗಳ ತರ ಬೊಗಳುತ್ತಂತಾ? ಬಾಲ ಅಲ್ಲಾಡ್ಸುತ್ತಂತಾ?' ತೆಪರೇಸಿ ಕೇಳಿದ.

'ಅದಕ್ಕೆ ಬಾಲಾನೆ ಇಲ್ಲಂತೆ...' ಎಂದ ಗುಡ್ಡೆ.

'ಬಾಲ ಇಲ್ಲದ ಮೇಲೆ ಅದು ನಾಯೀನೆ ಅಲ್ಲ, ಅದಕ್ಕೆ ನಿಯತ್ತೂ ಇರಲ್ಲ ಬಿಡು...'

'ಅಲ್ಲ, ಹಚಾ ಅಂದ್ರೆ ರೋಬೊ ನಾಯಿಗೆ ಅರ್ಥ ಆಗುತ್ತಂತಾ?' ಕೊಟ್ರೇಶಿ ಕೊಕ್ಕೆ.

'ಏನೋಪ್ಪ ಗೊತ್ತಿಲ್ಲ...'

'ಅದು ರಾಜಕೀಯನೂ ಮಾಡುತ್ತಂತಾ?'

'ನೋ ಐಡಿಯಾ... ಒರಿಜಿನಲ್ ನಾಯಿ ಆಗಿದ್ರೆ ಮಾಡ್ತಿತ್ತೇನಪ...'

'ಲೇ ದುಬ್ಬೀರ, ನೀನ್ಯಾಕೋ ಏನೂ ಮಾತಾಡ್ತಿಲ್ಲ?' ಮಂಜಮ್ಮ ಕೇಳಿದಳು.

'ಯಾಕೋ ಅರ್ಥ ತೆಲಿನೋವು...'

'ತೆಲಿ ಎಷ್ಟಿರತ್ತೈತಿ ಅಷ್ಟೇ ನೋವು ಬರ್ತತಿ... ಅದಿರ್ಲಿ, ಏನು ಯೋಚಿಸ್ತಿದ್ದೆ?'

'ಏನಿಲ್ಲ, ಬಾಲ ಇಲ್ಲದ ಈ ನಾಯಿ ಹೈಕಮಾಂಡ್‌ನ ಅಲ್ಲಾಡಿಸಬೋದಾ ಅಂತ ಯೋಚಿಸ್ತಿದ್ದೆ...'

'ಅಬಾಬಬ... ನಿಂಗೂ ಅರ್ಧ ತೆಲಿ ಐತಿ ಬಿಡಲೆ...' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಆಗುಂಬೆ ನರಕವಾಗಿಸುವ ಸುರಂಗ ಯೋಜನೆ

ಯುನೆಸ್ಕೊ ಮನ್ನಣೆ ಪಡೆದಿರುವ ಆಗುಂಬೆಯನ್ನು ಜನಪ್ರತಿನಿಧಿಗಳು ಬೊಂಬೆ ಎಂದು ಭಾವಿಸಿರುವಂತಿದೆ. ಮಳೆಕಾಡುಗಳ ಸ್ವರೂಪ ಬದಲಿಸುವುದು ಅಪಾಯಕರ.

• ಪ್ರಸಾದ ಶೆಣೈ ಆರ್.ಕೆ.

ಸಿಂಹಬಾಲದ ಸಿಂಗಳಿಕವೊಂದು ನಾವು ಬೈಕ್ ನಿಲ್ಲಿಸಿದ ಜಾಗಕ್ಕೆ ಬಂತು. ನಮ್ಮ ಬ್ಯಾಗ್ ನೋಡುತ್ತ ಹತ್ತಿರ ಬಂದ ಅದರ ಕಣ್ಣುಗಳಲ್ಲಿ ನಾವು ನೀಡಬಹುದಾದ ಆಹಾರದ ಬಗ್ಗೆ ನಿರೀಕ್ಷೆಯಿತ್ತು. ಹೀಗೆ ಆಹಾರದ ನಿರೀಕ್ಷೆಯಲ್ಲಿ ಸಿಂಗಳೀಕಗಳು ಪ್ರವಾಸಿಗರನ್ನು ಎಡತಾಕುವುದು ಆಗುಂಬೆಯಲ್ಲಿನ ಸಹಜ ದೃಶ್ಯವಾಗಿದೆ. ಆ ಸಿಂಗಳೀಕದ ಕಣ್ಣುಗಳಲ್ಲಿನ ನಿರೀಕ್ಷೆಯನ್ನು ನೋಡಿದಾಗ ಸಂಕಟವಾಯಿತು. ಅಲ್ಲಿಗೆ ಬರುವ ಪ್ರವಾಸಿಗರು ಸಂಸ್ಕರಿತ ತಿಂಡಿಗಳನ್ನು ಕೊಟ್ಟು ಅವುಗಳ ಸಹಜ ಆಹಾರ ಸಂಸ್ಕೃತಿಯನ್ನೇ ನಾಶ ಮಾಡಿದ್ದಾರೆ. ಅಸಹಜ ರುಚಿಯ ವ್ಯಸನದಿಂದ ಸಿಂಗಳೀಕಗಳು ರಸ್ತೆಗೆ ಬರುವಂತೆ ಮಾಡಿದ್ದಾರೆ.

ಪ್ರವಾಸಿಗರು ಕೊಡುವ ಚಿಪ್ಸ್, ಕೋಲಾ, ಮೊದಲಾದ ಅಪಾಯಕಾರಿ ತಿನಿಸು ಪಾನೀಯಗಳ ರುಚಿಗೆ ಸಿಂಗಳೀಕಗಳು ಮಾರುಹೋಗಿವೆ. ಕಾಡುಪ್ರಾಣಿಗಳಿಗೆ ಆಹಾರ ಕೊಟ್ಟು ಒಳ್ಳೆಯ ಕೆಲಸ ಮಾಡಿದೆವು ಎನ್ನುವ ಭಾವ ಪ್ರವಾಸಿಗರದು. ಕಾಡುಪ್ರಾಣಿಗಳ ಸಹಜ ಆಹಾರಪದ್ಧತಿಯನ್ನು ಬದಲಾಯಿಸಿ, ಅವುಗಳ ದೇಹಕ್ಕೆ ಮಾರಕವಾಗಿರುವ ತಿನಿಸುಗಳನ್ನು ಕೊಟ್ಟು, ಅವುಗಳ ಜೈವಿಕಕ್ರಿಯೆಯನ್ನೇ ನಾಶ ಮಾಡುತ್ತಿದ್ದೇವೆ ಎನ್ನುವ ವಿವೇಕ ಹೆಚ್ಚಿನ ಜನರಿಗಿಲ್ಲ.

ಸಿಂಗಳೀಕಳಿಗೆ ಆಹಾರ ಕೊಡುವುದು ಅಪರಾಧ ಎಂದು ಅರಣ್ಯ ಇಲಾಖೆ ಒಂದಷ್ಟು ದಿನ ಅಭಿಯಾನ ನಡೆಸಿತು. ಆದರೆ ಇಚ್ಛಾಶಕ್ತಿಯ ಕೊರತೆಯಿಂದ ಆ ಅಭಿಯಾನ ಫಲಪ್ರದವಾಗಲಿಲ್ಲ. ಕೃತಕ ಆಹಾರ ಪೊಟ್ಟಣಗಳನ್ನು ಮಂಗ, ಸಿಂಗಳೀಕಗಳಿಗೆ ಕೊಡುವ ಪ್ರವಾಸಿಗರು ಜಾಸ್ತಿಯೇ ಆದರು.

ಮನುಷ್ಯ ಕೆಲವೊಂದು ಸೂಕ್ಷ್ಮಗಳನ್ನು ಅರ್ಥ ಮಾಡಿಕೊಳ್ಳದೆ ಪರಿಸರವನ್ನೂ, ಜೀವಜಗತ್ತಿನ ಸುಂದರ ಭವಿಷ್ಯವನ್ನು ಹೇಗೆಲ್ಲಾ ಹಾಳುಮಾಡುತ್ತಿದ್ದಾನೆ ಎಂದು ಯೋಚಿಸಿದರೆ ಭಯ ಆಗುತ್ತದೆ. ಆಗುಂಬೆಯ ಸಿಂಗಳೀಕಗಳಂತಹ ಅತ್ಯಪರೂಪದ ಜೀವಿಗಳು ಮನುಷ್ಯಲೋಕದತ್ತ ಯಾಕೆ ಬರುತ್ತಿವೆ ಎನ್ನುವ ಪ್ರಶ್ನೆಗೆ, ಆಗುಂಬೆಯ ಕಾಡುಗಳು ಒಳಗೊಳಗೆ ತೆಳುವಾಗುತ್ತಿವೆ ಎನ್ನುವುದೇ ಉತ್ತರ. ದಕ್ಷಿಣದ ಚಿರಾಪುಂಜಿ ಎನ್ನುವ ಖ್ಯಾತಿಯನ್ನು ಆಗುಂಬೆ ಹೊಂದಿದ್ದರೂ, ಆಗುಂಬೆಯ ಮಡಿಲಿನಲ್ಲೇ ಕಾಳಿಂಗ ಸರ್ಪದ ಸಂರಕ್ಷಣೆಯ, ಪರಿಸರ ಸಂರಕ್ಷಣೆಯ, ಪ್ರವಾಸೋದ್ಯಮದ ಹೆಸರಿನಲ್ಲಿ ನಡೆಯುತ್ತಿರುವ ಹಲವು ಅವ್ಯಾಹತ ಚಟುವಟಿಕೆಗಳು ಈ ಕಾನನಜೀವಿಗಳ ಬದುಕನ್ನೇ ಕಸಿದುಕೊಳ್ಳುತ್ತಿವೆ. ಅವುಗಳ ಆವಾಸಸ್ಥಾನ ದಿನೇ ದಿನೇ ಕುಗ್ಗುತ್ತಿದೆ. ಬೇರೆ ದಾರಿಯೇ ಕಾಣದೇ ರಸ್ತೆಗೆ ಬಂದು ಆಹಾರ ಹುಡುಕುವ ಸ್ಥಿತಿ ಕಾಡುಜೀವಿಗಳಿಗೆ ಬಂದಿದೆ.

ಆಗುಂಬೆ ಪರಿಸರ ಒಳಗೊಳಗೇ ಬದಲಾಗುತ್ತಿರುವಾಗ 'ಆಗುಂಬೆಗೆ ಸುರಂಗ ಮಾರ್ಗ' ಬೇಕು ಎನ್ನುವ ಅಸೂಕ್ಷ್ಮ ಬೇಡಿಕೆಯೊಂದನ್ನು ಅಲ್ಲಿನ ಜನಪ್ರತಿನಿಧಿಗಳು ಸೃಷ್ಟಿಸಿದ್ದಾರೆ. ದ್ವಿಪಥ ಸುರಂಗಮಾರ್ಗ, ದ್ವಿಪಥ ಹೆದ್ದಾರಿ ನಿರ್ಮಿಸಲು ಇದೀಗ ಕೇಂದ್ರ ಸರ್ಕಾರ ಡಿಪಿಆರ್ ಹೊರಡಿಸಲು ಮುಂದಾಗಿದೆ. ಇದು, ಆಗುಂಬೆಯ ಮಳೆಕಾಡು ಭವಿಷ್ಯದಲ್ಲಿ ಸ್ಮಶಾನವಾಗುವ ಕೆಟ್ಟ ಕನಸಿನ ಸೂಚನೆಯಂತಿದೆ.

ಆಗುಂಬೆ ಮಳೆಕಾಡು ಅಂತಿಂಥ ಕಾಡಲ್ಲ. ಯುನೆಸ್ಕೊ ಘೋಷಿಸಿದ ವಿಶ್ವ ಪಾರಂಪರಿಕ ಪಟ್ಟಿಯಲ್ಲಿರುವ ಅತ್ಯಂತ ಸೂಕ್ಷ್ಮವಾದ ಕಾಡಿದು. ಇಲ್ಲಿನ ದಟ್ಟ ಕಾಡುಗಳು ಅರಬ್ಬಿ ಸಮುದ್ರದಿಂದ ಬೀಸುವ ನೈರುತ್ಯ ಮಾರುತಗಳನ್ನು ತಡೆದು ಸಮೃದ್ಧ ಮಳೆ ಸುರಿಸುತ್ತವೆ. ಕರಾವಳಿಗೂ, ಮಲೆನಾಡಿಗೂ ಉಸಿರು ನೀಡುವ ಇಲ್ಲಿನ ಅಪೂರ್ವ ಮಳೆಕಾಡುಗಳಿಂದಲೇ ಕರಾವಳಿಯ ನದಿ ತೊರೆಗಳು ಜೀವಂತವಾಗಿವೆ. ಇಲ್ಲಿ ಎಷ್ಟೋ ಅನಾಮಧೇಯ ನೀರಧಾರೆಗಳಿವೆ, ಅದ್ಭುತ ಜಲಪಾತಗಳಿವೆ. ಮಣ್ಣನ್ನು ರಕ್ಷಿಸಿ ಫಲವತ್ತತೆ ಹೆಚ್ಚಿಸುವ ಹುಲ್ಲು, ಬೇರು ಬಿಳಲುಗಳ ವಿಶಾಲ ಜಾಲವಿದೆ. ಅಪರೂಪದ ಕಾಳಿಂಗ ಸರ್ಪ, ಪಕ್ಷಿ, ಸಸ್ಯಪ್ರಭೇದ, ಕೀಟ ಪ್ರಭೇದಗಳ ತವರುಮನೆ ಆಗುಂಬೆ. ಇಲ್ಲಿನ ಗುಂಡುಕಲ್ಲುಗಳು ಆಳದಲ್ಲಿ ನೀರಿನ ಒರತೆಯನ್ನು, ಬೇರು ಬಿಳಲುಗಳ ಜಾಲವನ್ನು ಹಿಡಿದಿಟ್ಟುಕೊಂಡು ಇಡೀ ಮಳೆಕಾಡಿಗೆ ಕೋಟೆಯಂತೆ ರಕ್ಷಣೆ ನೀಡುತ್ತಿವೆ. ಇಂತಹ ಜೀವಜಗತ್ತು ಸುರಂಗ ಮಾರ್ಗ ಯೋಜನೆ ಜಾರಿ ಆದರೆ ಬಸವಳಿದು, ಬರಡಾಗಿ ಹೋದೀತು.

ಈಗಾಗಲೇ ಪ್ರತೀ ವರ್ಷದ ಮಳೆಗೆ ಇಲ್ಲಿ ಸಣ್ಣ ಪುಟ್ಟ ಭೂಕುಸಿತಗಳು ಸಂಭವಿಸುತ್ತಿವೆ. ಇಲ್ಲಿನ ಮಣ್ಣಿಗೆ, ಭೂಮಿಗೆ ಪುಟ್ಟ ಗಾಯವಾದರೂ ಕಾಡುಗಳ ನರ ನಾಡಿಗೆ ದೊಡ್ಡ ಹೊಡೆತ ಅದು. ಹೀಗಿರುವಾಗ ಸುರಂಗ ಮಾರ್ಗದಿಂದ ಆಗುಂಬೆ ಅಭಿವೃದ್ಧಿಯತ್ತ ಅಲ್ಲ, ಇನ್ನಷ್ಟು ವಿನಾಶದತ್ತ ಸಾಗಲಿದೆ.

ಸುರಂಗ ನಿರ್ಮಾಣದಂತಹ ಚಟುವಟಿಕೆಗಳು ಮಾನವ ಮತ್ತು ಪ್ರಾಣಿ ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತವೆ. ಪಶ್ಚಿಮ ಘಟ್ಟವಿರುವ ರೈಲು ಮಾರ್ಗಗಳಲ್ಲಿ ಹೆಚ್ಚಿನ ಭೂಕುಸಿತ, ದುರಂತಗಳಾಗುತ್ತಿರುವ ಕುರಿತು, ಅಲ್ಲಿನ ಮೇಲ್ಮೈಗೆ ಹಾನಿ ಆಗದಂತೆ ಎಚ್ಚರವಹಿಸುವ ಕುರಿತು ಭೂಕುಸಿತ ಅಧ್ಯಯನ ಸಮಿತಿ ರಾಜ್ಯ ಸರ್ಕಾರದ ಗಮನಸೆಳೆದಿದ್ದರೂ, ಪಶ್ಚಿಮ ಘಟ್ಟಕ್ಕೆ ಹಾನಿಮಾಡುವ ಯೋಜನೆಗಳ ಜಾರಿಗೆ ಸರ್ಕಾರಗಳೇ ಮುಂದಾಗುತ್ತಿರುವುದು ಆಘಾತಕಾರಿ.

ಆಗುಂಬೆಯ ಕಾಡುಗಳು ನಮಗೆ ಜಾಗತಿಕ ಹೆಮ್ಮೆಯಾಗಿ, ಸಾವಿರಾರು ಜನರ ಧಾರ್ಮಿಕ ಭಾವನೆಗಳ ನಂಬಿಕೆಯಾಗಿ, ನಾಳೆಗಳಿಗೆ ಭರವಸೆಯಾಗಿ ನಿಂತಿವೆ. ಇಲ್ಲಿನ ಸಮೃದ್ಧ ಮರಗಳು ಇನ್ನೇನು ಚೈತ್ರ ಮಾಸಕ್ಕೆ ಹೊಸ ಎಲೆಗಳನ್ನು ತೊಟ್ಟುಕೊಂಡು ಚಿಗುರೊಡೆಯುತ್ತಿರುವಾಗಲೇ ಸುರಂಗ ಮಾರ್ಗದ ಯೋಜನೆಯ ಸಿದ್ಧತೆ ನಡೆದಿದೆ. ಚಿಗುರು ಎಲೆಗಳಂತೆ ಹೊಸ ತಲೆಮಾರು ಕೂಡ ಹುಟ್ಟುತ್ತಿದೆ. ಇಂತಹ ಚಿಗುರುಗಳನ್ನೇ ಪರಿಸರದ ಸಖ್ಯದಿಂದ ದೂರ ಮಾಡುವ ಈ ಯೋಜನೆ ಯಾಕೆ ಬೇಕು?

ಹಸುರಿನ ಗಿರಿಗಳ ಸಾಲೇ... ನಿನ್ನಯ ಕೊರಳಿನ ಮಾಲೆ... ಇಷ್ಟು ವರ್ಷ ಹಾಡಿದ, ಈಗಲೂ ಹಾಡುತ್ತಿರುವ ಕುವೆಂಪು ವಿರಚಿತ ನಾಡಗೀತೆಯ ಸಾಲುಗಳನ್ನು ಸಾರ್ಥಕ ಮಾಡಿಕೊಳ್ಳಬೇಕೆಂದರೆ, ಹಸಿರಿನ ಗಿರಿಗಳ ಸಾಲುಗಲ್ಲಿರುವ ಆಗುಂಬೆಯನ್ನು ಉಳಿಸಲೇಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳಲ್ಲಿ ನೆಲಸಿರುವ ಕೊರಗ ಸಮುದಾಯದ ವಂಶಾವಳಿಗೆ ಸಂಬಂಧಿಸಿದಂತೆ ಇತ್ತೀಚೆಗೆ ನಡೆದಿರುವ ಅಧ್ಯಯನವು ಈ ಬುಡಕಟ್ಟು ಜನರ ಮೂಲದ ಬಗ್ಗೆ ಹೊಸ ನೋಟ ಬೀರಿದೆ. ಕೊರಗರ ವಂಶಜರು ಮೂಲ ದ್ರಾವಿಡ ಸಂಸ್ಕೃತಿಯ ಪ್ರತಿನಿಧಿಗಳು ಎಂದು ಅಧ್ಯಯನ ಪ್ರತಿಪಾದಿಸಿದೆ. ಅಧ್ಯಯನ ವರದಿಯು ಯುರೋಪಿಯನ್ ಜರ್ನಲ್ ಆಫ್ ಹ್ಯೂಮನ್ ಜೆನೆಟಿಕ್ಸ್‌ನಲ್ಲಿ ಪ್ರಕಟವಾಗಿದೆ

ಕೊರಗರ ವಂಶಜರು ಮೂಲದ್ರಾವಿಡರು

ಮಂಗಳೂರು ವಿ.ವಿ, ಯೆನೆಪೋಯ ಡೀಮ್ಡ್ ವಿ.ವಿಯಿಂದ ವಂಶಾವಳಿ ಅಧ್ಯಯನ

• ಸಂಧ್ಯಾ ಹೆಗಡೆ

ಶತಮಾನಗಳಿಂದ ಬವಣೆ ಬೇಗುದಿಗಳಲ್ಲಿ ಬೆಂದು, 'ಅಸ್ಪೃಶ್ಯತೆ'ಯ ಕೂಪದಲ್ಲಿ ನಲುಗಿ, ಅಸಹಾಯಕತೆಯನ್ನೇ ಹೊದ್ದುಕೊಂಡಿರುವ ಆದಿ ಬುಡಕಟ್ಟು ಸಮುದಾಯವೆಂದರೆ, ಅದು ಕೊರಗ ಸಮುದಾಯ. ದಕ್ಷಿಣ ಕನ್ನಡ, ಉಡುಪಿ, ನೆರೆಯ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಗಳಲ್ಲಿ ಕೊರಗ ಕುಟುಂಬಗಳು ನೆಲಸಿವೆ. ಉತ್ತರ ಕನ್ನಡ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲೂ ಚದುರಿದಂತೆ ಕೆಲವು ಕುಟುಂಬಗಳು ಇವೆ.

ತಲೆಮಾರುಗಳಿಂದ ಜೀವಂತವಾಗಿದ್ದ ಸಾಮಾಜಿಕ ಅನಿಷ್ಟಗಳಾದ ಅಜಲು (ಮೇಲ್ಜಾತಿಯವರ ಉಗುರು ಮತ್ತು ಕೂದಲು ಅನ್ನಕ್ಕೆ ಬೆರೆಸಿ ತಿನ್ನುವುದು, ಕಂಬಳ ಗದ್ದೆಯಲ್ಲಿ ಕೊರಗರನ್ನು ಓಡಿಸಿ, ಕೆರೆಯಲ್ಲಿ ಶತ್ರುಗಳು ಗಾಜಿನ ಚೂರು, ಮುಳ್ಳು ಮತ್ತಿತರ ಅಪಾಯದ ವಸ್ತು ಹಾಕಿದ್ದಾರೆಯೇ ಎಂದು ಪರೀಕ್ಷಿಸುವುದು... ಇಂತಹ ಹೀನ ಆಚರಣೆಗಳು) ಮತ್ತು ಅಸ್ಪೃಶ್ಯತೆಯಿಂದಾಗಿ ಸಮಾಜದಿಂದ ಪ್ರತ್ಯೇಕಿಸಲ್ಪಟ್ಟಿರುವ ಕೊರಗರು, ಅತ್ತ ಅಭಿವೃದ್ಧಿಯ ಪಥಕ್ಕೆ ತೆರೆದುಕೊಳ್ಳಲೂ ಆಗದೆ, ಇತ್ತ ಸಮುದಾಯದ ಆಚರಣೆಗಳಿಂದ ಕಳಚಿಕೊಳ್ಳಲೂ ಆಗದೆ ತ್ರಿಶಂಕು ಸ್ಥಿತಿಯಲ್ಲಿದ್ದಾರೆ.

ಕೊರಗರು ಇಂದಿಗೂ ಈ ಎಲ್ಲ ತಲ್ಲಣ, ನೋವುಗಳನ್ನು ಅನುಭವಿಸುತ್ತಿದ್ದಾರೆ. ಇವರ ವಂಶಾವಳಿಯ (ಜಿನೋಮಿಕ್) ಅಧ್ಯಯನವು, ಸಮುದಾಯವನ್ನು ಕತ್ತಲೆಯಿಂದ ಬೆಳಕಿನೆಡೆಗೆ ಒಯ್ಯುವ ಆಶಾಭಾವ ಮೂಡಿಸಿದೆ.

ಮಂಗಳೂರು ವಿಶ್ವವಿದ್ಯಾಲಯದ ಪ್ರಾಣಿ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಎಂ.ಎಸ್. ಮುಸ್ತಾಕ್, ಮುಖ್ಯ ಸಂಶೋಧಕ ಜೈಸನ್ ಜೀವನ್ ಸಿಕ್ವೇರಾ ಹಾಗೂ ಯೆನೆಪೋಯ ಡೀಮ್ಡ್ ವಿಶ್ವವಿದ್ಯಾಲಯದ ಪ್ರೊ.ರಣಜಿತ್ ದಾಸ್ ಜಂಟಿಯಾಗಿ ನಡೆಸಿದ ಜಿನೋಮಿಕ್ ಅಧ್ಯಯನವು, ಕೊರಗರ ಪೂರ್ವಜರು ಪ್ರಾಚೀನ 'ಪ್ರೊಟೊ ದ್ರಾವಿಡ' ಸಂಸ್ಕೃತಿಯ ಪ್ರತಿನಿಧಿಗಳು ಎಂದು ಹೇಳಿದೆ.

ಪ್ರೊ. ಮುಸ್ತಾಕ್

ಈವರೆಗಿನ ಸಂಶೋಧನೆ ಪ್ರಕಾರ, ಭಾರತೀಯರಿಗೆ ಮೂರು ಪೂರ್ವಜ ಮೂಲಗಳಿವೆ ಎಂದು ನಂಬಲಾಗಿತ್ತು (ಆಸ್ಟ್ರೊ ಏಷಿಯಾಟಿಕ್ ಮತ್ತು ಟಿಬೆಟೊ ಬರ್ಮನ್ ಸೇರಿಸಿದರೆ ಐದು). ಅವುಗಳೆಂದರೆ ಅಂಡಮಾನ್ ದ್ವೀಪದಲ್ಲಿ ಬೇಟೆಯಾಡುವ ಜನಾಂಗಗಳಿಗೆ ಸೇರಿದ ಪ್ರಾಚೀನ ದಕ್ಷಿಣ ಭಾರತೀಯರು, ಸಿಂಧೂ ನಾಗರಿಕತೆಯ ಅಂಚಿನ ಜನರು ಹಾಗೂ ಇರಾನ್ ಪರ್ವತ ಪ್ರದೇಶದ ಪ್ರಾಚೀನ ಕೃಷಿಕರು. ಆದರೆ, ಈ ಸಂಶೋಧಕರ ಅಧ್ಯಯನವು ಇವುಗಳ ಜೊತೆಗೆ ಭಾರತೀಯರಿಗೆ ನಾಲ್ಕನೆಯ ವಂಶವೃಕ್ಷವೊಂದಿದೆ, ಅದು 'ಪ್ರೊಟೊ ದ್ರಾವಿಡಿಯನ್' (ಮೂಲ ದ್ರಾವಿಡ ಸಂಸ್ಕೃತಿಗೆ ಸಂಬಂಧಿಸಿದ) ಎಂದು ಅಭಿಪ್ರಾಯಪಟ್ಟಿದೆ.

ರಣಜಿತ್ ದಾಸ್

ಅಧ್ಯಯನದ ಕಲ್ಪನೆ ಮೊಳೆತಿದ್ದು ಹೇಗೆ?: ದಕ್ಷಿಣ ಕನ್ನಡ ಜಿಲ್ಲೆಯ ಕಾಡಂಚಿನಲ್ಲಿ ಬದುಕು ಕಟ್ಟಿಕೊಂಡಿರುವ ಕೊರಗರ 'ಕೊರಗ' ಮಾತೃಭಾಷೆಯಲ್ಲಿರುವ ಪದಗಳ ಉಚ್ಚಾರಣೆ, ಗುಣವಿಶೇಷಗಳು ಅಧ್ಯಯನಕ್ಕೆ ಮೂಲ ಪ್ರೇರಣೆ.

ಮುಖ್ಯ ಸಂಶೋಧಕ ಜೈಸನ್ ಸಿಕ್ವೇರಾ ಹೇಳುವಂತೆ, 'ದ್ರಾವಿಡ ಕುಟುಂಬಕ್ಕೆ ಸೇರಿದವೆಂದು ಸಾಬೀತಾಗಿರುವ ಪೂರ್ವ ಭಾರತದ ಒರಾಂವ್ (ಕುರುಖ್) ಭಾಷೆ, ಬಲೂಚಿಸ್ತಾನ, ಅಫ್ಗಾನಿಸ್ತಾನದ ದಕ್ಷಿಣ ಪ್ರಾಂತ್ಯದ ದ್ರಾವಿಡ ಜನಾಂಗದ 'ಬ್ರಾಹುಯಿ' ಭಾಷೆ ಹಾಗೂ ನಮ್ಮ ನೆಲದ ಕೊರಗರ ಭಾಷೆಗಳ ನಡುವೆ ಸಾಮ್ಯತೆ ಇರುವ ಕಾರಣ ಇವುಗಳ ತೌಲನಿಕ ಅಧ್ಯಯನ, ಭಾಷೆಗಳ ವೈಶಿಷ್ಟ್ಯ ಗುರುತಿಸುವುದು ಅಧ್ಯಯನದ ಪ್ರಮುಖ ಅಂಶವಾಗಿತ್ತು. ಈ ಭಾಷಾತ್ಮಕ ನಂಟು ಮೂಡಿಸಿದ ಕುತೂಹಲವು, ಆನುವಂಶಿಕ ಮೂಲದಲ್ಲೂ ಪ್ರತಿಫಲಿಸಬಹುದೆಂದು ದ್ವಿತೀಯ ಅಧ್ಯಯನವನ್ನು ವಂಶವಾಹಿ ಮೇಲೆ ನಡೆಸಿದಾಗ, ಅಚ್ಚರಿಯ ಫಲಿತಾಂಶ ದೊರೆತಿದೆ'.

ಜೈಸನ್ ಸಿಕ್ವೇರಾ

ಆನುವಂಶೀಯತೆ ಮತ್ತು ಭಾಷೆ ನಡುವಿನ ಹೋಲಿಕೆ ಕಂಡುಕೊಳ್ಳುವ ಉದ್ದೇಶದಿಂದ ಸಂಶೋಧನಾ ತಂಡವು ಡೆನ್ಮಾರ್ಕ್‌ನ ಭಾಷಾ ವಿಜ್ಞಾನಿ ಪ್ರೊ.ಜಾರ್ಜ್ ವ್ಯಾನ್ ಡ್ರಿಮ್ ಅವರ ನೆರವು ಪಡೆದಿದ್ದು, ಈ ವೇಳೆ ದೊರೆತ ಸುಳಿವುಗಳು, ಮಾಹಿತಿ ಬೆಂಬಲಿತ ವಿಶ್ಲೇಷಣೆಗಳು ಹೆಚ್ಚಿನ ಸಂಶೋಧನೆಗೆ ಇಂಬು ನೀಡಿದವು.

ಕೊರಗರ ಬಗ್ಗೆ ಅನೇಕರು ಅಧ್ಯಯನ ಮಾಡಿದ್ದಾರೆ. 2003ರಲ್ಲಿ ನಡೆದ ಅಧ್ಯಯನದಲ್ಲಿ ಕೊರಗರು ಸೇರಿದಂತೆ ಎಲ್ಲ ಬುಡುಕಟ್ಟು ಸಮುದಾಯಗಳು ಒಂದೇ ವಂಶಾವಳಿಗೆ ಸೇರಿರಬಹುದೆಂದು ವಿಶ್ಲೇಷಿಸಲಾಗಿತ್ತು. ವಿದೇಶಿ ಅಧ್ಯಯನಕಾರರಿಂದ ನಡೆದ ಈ ಅಧ್ಯಯನವು ಅಪರಿಪೂರ್ಣ ಎಂಬುದು ಇಂದಿನ ಸಂಶೋಧಕರ ವಾದ.

ಮೊದಲ ಅಧ್ಯಯನದ ಸಾರವೇನು?: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಭಾಷಿಕರ ನಡುವೆ ಇರುವ ಇವರು 'ಕೊರಗ' ಮಾತೃಭಾಷೆಯ ದೇಸಿತನ ಉಳಿಸಿಕೊಂಡವರು. ಸಂಶೋಧನೆ ಈ ವಿಷಯವನ್ನೇ ಕೇಂದ್ರೀಕರಿಸಿತ್ತು.

'ಕೊರಗ, ಬ್ರಾಹುಯಿ ಹಾಗೂ ಒರಾಂವ್ (ಕುರುಖ್) ಭಾಷೆ ನಡುವೆ ಪ್ರಾಚೀನ ಬಂಧ ಇರುವುದು ಕಂಡುಬಂತು. ಇದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದಾಗ, ಮೂರು ಜನಾಂಗಗಳು ಸುಮಾರು 4,400 ವರ್ಷಗಳ ಹಿಂದೆ ಒಂದೇ ಪೂರ್ವಜರನ್ನು ಹೊಂದಿರುವ ಸಾಧ್ಯತೆಯನ್ನು ತೆರೆದಿಟ್ಟಿದೆ. ಹರಪ್ಪ ನಾಗರಿಕತೆಗೆ ಸಮೀಪದ ಕಾಲವಿದು. ನಂತರದ ಸಾಮಾಜಿಕ, ಭೌಗೋಳಿಕ, ಸಾಂಸ್ಕೃತಿಕ ಪಲ್ಲಟಗಳ ನಡುವೆ, ಈ ಸಮುದಾಯಗಳು ಹರಡಿ ಹಂಚಿಹೋಗಿರಬಹುದು' ಎನ್ನುತ್ತಾರೆ ಜೈಸನ್ ಸಿಕ್ವೇರಾ.

ಎರಡನೇ ಅಧ್ಯಯನದಲ್ಲಿ ಸಂಶೋಧಕರು ಮಾನವನಲ್ಲಿರುವ ಸಂಪೂರ್ಣ ನ್ಯೂಕ್ಲಿಯರ್ ಡಿಎನ್‌ಎ ಸಂಯೋಜನೆಯನ್ನು ವಿಶ್ಲೇಷಿಸಿದ್ದಾರೆ. ಈ ಸಂಶೋಧನೆಯ ಮುಖ್ಯ ಉದ್ದೇಶ ಕೊರಗರ ಮೂಲದ ನಿಖರ ಸ್ವರೂಪವನ್ನು ಪತ್ತೆ ಹಚ್ಚುವುದಾಗಿತ್ತು.

ಇರಾನ್ ವಂಶಜರ ನಂಟು: ಪ್ರತಿ ಮನುಷ್ಯನಲ್ಲೂ ಅವನ ಪೂರ್ವಜರ ಅಂಶ ಅಡಗಿರುತ್ತದೆ. ಪ್ರಾದೇಶಿಕವಾಗಿ ಈ ಅಂಶವು ವಿಭಿನ್ನವಾಗಿರುತ್ತದೆ. ಬಹುತೇಕ ಭಾರತೀಯ ಬುಡಕಟ್ಟು ಸಮುದಾಯಗಳಲ್ಲಿ ಇದು 'M' ಪ್ರಭೇದಕ್ಕೆ (ಹ್ಯಾಪ್ಲೊಗ್ರೂಪ್-ಒಂದೇ ಪೂರ್ವಜರನ್ನು ಹೊಂದಿರುವ ಆನುವಂಶಿಕ ಜನಾಂಗಗಳ ಗುಂಪು) ಸೇರಿರುತ್ತದೆ. ಆದರೆ, ಪಶ್ಚಿಮ ಪ್ರದೇಶಗಳಲ್ಲಿ N, R, U ಹೀಗೆ ಬೇರೆ ಪ್ರಭೇದಗಳು ಕಂಡು ಬರುತ್ತವೆ. ವಿಶೇಷವೇನೆಂದರೆ, ಕೊರಗರಲ್ಲಿ U1 ಮಾದರಿ ಪ್ರಮಾಣ ಅಧಿಕವಾಗಿರುವುದು ಕಂಡುಬಂದಿದೆ. ಭಾರತದಲ್ಲಿ U1 ಹ್ಯಾಪ್ಲೊಗ್ರೂಪ್ ಅತ್ಯಂತ ವಿರಳವಾಗಿವೆ ಎಂದು ವಿಶ್ಲೇಷಿಸಿರುವ ಸಂಶೋಧಕರು, ಇರಾನ್‌ನಲ್ಲಿ ಸುಮಾರು 4,000 ವರ್ಷಗಳ ಹಿಂದಿನ ನಾಗರಿಕತೆಯಲ್ಲಿ ಇದೇ ಹ್ಯಾಪ್ಲೊಗ್ರೂಪ್ ಇರುವುದನ್ನು ವೈಜ್ಞಾನಿಕ ಅಧ್ಯಯನಗಳ ಮೂಲಕ ಪತ್ತೆ ಮಾಡಿದ್ದಾರೆ.

ಅಸ್ಥಿಪಂಜರಗಳಿಂದ ಡಿಎನ್‌ಎ ಸಂಗ್ರಹಿಸಿ ಈ ಅಧ್ಯಯನ ಮಾಡಬೇಕಾಗುತ್ತದೆ. ಇರಾನ್‌ನ ಪೂರ್ವಜ ವಂಶಜರ ಹ್ಯಾಪ್ಲೊಗ್ರೂಪ್ (ಇಂದಿನ ಇರಾನಿ ಪ್ರಜೆಗಳಲ್ಲಿ ಇದನ್ನು ಕಾಣಲು ಸಾಧ್ಯವಿಲ್ಲ. ಯಾಕೆಂದರೆ ಇಂದು ಅಲ್ಲಿ ಬೇರೆಯೇ ಜನಾಂಗದ ವಂಶಸ್ಥರು ಇದ್ದಾರೆ) ಮತ್ತು ಇಂದಿನ ಕೊರಗರ ಹ್ಯಾಪ್ಲೊಗ್ರೂಪ್ ಒಂದೇ ಆಗಿವೆ. ಕಾಲಚಕ್ರದಲ್ಲಿ ಈ ಪೂರ್ವಜ ತಲೆಮಾರಿನ ಕೊಂಡಿ ಕಳಚಿ, ಒಂದೊಂದು ಗುಂಪು ಒಂದೊಂದು ಪ್ರದೇಶಕ್ಕೆ ಸಂಚರಿಸಿರುವ ಸಾಧ್ಯತೆ ಇದೆ ಎಂದು ಅಂದಾಜಿಸಿದ್ದಾರೆ.

ಕೊರಗರ ಆನುವಂಶೀಯತೆಯಲ್ಲಿ ಕಂಡುಬಂದ ಇರಾನ್‌ನ ನವಶಿಲಾಯುಗದ ಕುಲದ ವಂಶವಾಹಿಯು ಭಾರತೀಯ ಇತರ ಜನಾಂಗಗಳಲ್ಲಿ ಕಂಡು ಬರುವುದಕ್ಕಿಂತ ಪೂರ್ಣ ವಿಭಿನ್ನವಾಗಿದ್ದು, ಅದು ಪ್ರಾಚೀನ ಮೂಲದಿಂದ ಬಂದಿದ್ದಾಗಿದೆ. ಅಂದರೆ, ಕೊರಗರು ಭಾರತದ ಜನಾಂಗೀಯ ಇತಿಹಾಸದ ಹಳೆಯ ಕೊಂಡಿ ಎಂಬುದನ್ನು ಈ ಸಂಶೋಧನೆ ತೆರೆದಿಟ್ಟಿದೆ. ಅಲ್ಲದೆ, ಕೊರಗರ ಅಸ್ತಿತ್ವವಿಲ್ಲದೆ, ಭಾರತೀಯ ಆನುವಂಶೀಯತೆಯ ಪರಿಕಲ್ಪನೆ ಅಪೂರ್ಣವಾಗುತ್ತದೆ. ಹೀಗಾಗಿ, ಕೊರಗರು ಪ್ರಾಚೀನ ಪ್ರೊಟೊ ದ್ರಾವಿಡ ಪೂರ್ವಜರ ಇಂದಿನ ಪ್ರತಿನಿಧಿಗಳು ಎಂದು ಅಧ್ಯಯನವು ಬಲವಾಗಿ ಪ್ರತಿಪಾದಿಸಿದೆ.

'ಇರಾನ್‌ನ ನವಶಿಲಾಯುಗದ ಕಾಲದ ಪೂರ್ವಜರು ಹಾಗೂ ಕೊರಗರ ಪೂರ್ವಜರು ಒಂದೇ ವಂಶಸ್ಥರಾಗಿರುವ, ಅವರೂ ಬೇಟೆಗಾರ ಕಸುಬಿನವರೇ ಆಗಿರುವ ಸಾಧ್ಯತೆಗಳು ಬಲವಾಗಿವೆ. ಕಾಲಕ್ರಮೇಣ ಆ ವಂಶವು ಕವಲಾಗಿ ಒಡೆದು, ಕೆಲವರು ಕೃಷಿಯೆಡೆಗೆ ವಾಲಿರಬಹುದು, ಕೆಲವರು ಮೂಲ ಕಸುಬನ್ನೇ ನೆಚ್ಚಿಕೊಂಡಿರಬಹುದು. ಇದಕ್ಕೆ ಸಾಕ್ಷಿಯೆಂಬಂತೆ ಕೊರಗರಲ್ಲಿ ಬಹುತೇಕರಿಗೆ ಇಂದಿಗೂ ಕಿರು ಅರಣ್ಯ ಉತ್ಪನ್ನ ಸಂಗ್ರಹ, ಬುಟ್ಟಿ ಹೆಣಿಗೆಯೇ ಜೀವನೋಪಾಯವಾಗಿದೆ' ಎಂದು ವಿವರಿಸುತ್ತಾರೆ ಜೈಸನ್ ಸಿಕ್ವೇರಾ.

ಈ ಸಂಶೋಧನೆಯು ಭಾರತದ ಪುರಾತನ ಜನಾಂಗೀಯ ಇತಿಹಾಸದ ಮೇಲೆ ಹೊಸ ನೋಟ ಬೀರಿದೆ. ಕೊರಗರು ಹಾಗೂ ಇರಾನ್‌ನ ಸುಮಾರು 10 ಸಾವಿರ ವರ್ಷಗಳ ಹಿಂದಿನ ಸಮುದಾಯದ ಜನರೊಂದಿಗೆ ಆನುವಂಶಿಕ ಸಂಬಂಧ ಇರುವುದರಿಂದ 'ಎಲಾಮೋ- ದ್ರಾವಿಡ ಸಿದ್ಧಾಂತಕ್ಕೆ' ಬೆಂಬಲ ಸಿಕ್ಕಂತಾಗಿದೆ. ಈ ಸಿದ್ಧಾಂತದ ಪ್ರಕಾರ ಇರಾನ್‌ನ ಎಲಾಮೈಟ್ ಭಾಷೆ ಮತ್ತು ಭಾರತದ ದ್ರಾವಿಡ ಭಾಷೆಗಳು ಒಂದೇ ಮೂಲದಿಂದ ಬಂದಿವೆ. ಕೊರಗರು ಸಮಾಜದ ಅಂಚಿನಲ್ಲಿರುವವರಲ್ಲ, ಬದಲಾಗಿ ಭಾರತದ ಮೂಲ ಕಥೆಯ ಮುಖ್ಯ ಪಾತ್ರಧಾರಿಗಳು ಎಂಬುದು ಅವರು ಮಂಡಿಸುವ ವಾದ.

ಬುಟ್ಟಿ ಹೆಣೆಯಲು ಬಿಳಲು ಸ್ವಚ್ಛ ಮಾಡುತ್ತಿದ್ದ ಕೊರಗ ಮಹಿಳೆಯರು ಪ್ರಜಾವಾಣಿ ಚಿತ್ರ :ಫಕ್ರುದ್ದೀನ್ ಎಚ್.

ಮನೋವೈಜ್ಞಾನಿಕ ಅಧ್ಯಯನ ಅಗತ್ಯ

'ನೈಜ ದುರ್ಬಲ ಬುಡಕಟ್ಟು ಸಮುದಾಯಕ್ಕೆ ಸೇರಿರುವ ಕೊರಗರು ಸಂಖ್ಯೆಯಲ್ಲಿ ಕ್ಷೀಣವಾದ ಸಮುದಾಯ. 40 ವರ್ಷಗಳ ಸಂಘಟಿತ ಶ್ರಮದಿಂದ ಕೆಲವರು ಶಿಕ್ಷಣ ಪಡೆದವರು ಇದ್ದರೂ, ಔದ್ಯೋಗಿಕ ಭದ್ರತೆ ಇಲ್ಲದೆ ಆತಂಕದಲ್ಲಿ ಪರಿತಪಿಸುವಂತಾಗಿದೆ. ಕಾಲದ ಸಮಸ್ಯೆಗಳಿಗೆ ಉತ್ತರ ಹುಡುಕುತ್ತ ಹೋರಾಟದಲ್ಲೇ ಜೀವನ ನಡೆಸುತ್ತಿದ್ದಾರೆ. ಈ ಕಾರಣಕ್ಕೆ ಕೊರಗ ಸಮುದಾಯಕ್ಕೆ ನೇರ ನೇಮಕಾತಿಯೊಂದಿಗೆ ಉದ್ಯೋಗ ಭದ್ರತೆ ಒದಗಿಸಬೇಕು, ಕೊರಗರ ಬಗ್ಗೆ ಸಾಮಾಜಿಕ, ಮನೋವೈಜ್ಞಾನಿಕ, ಜೈವಿಕ ಅಧ್ಯಯನಗಳು ಸ್ಥಳೀಯ ಸರ್ಕಾರಿ ವಿಶ್ವವಿದ್ಯಾಲಯಗಳಿಂದ ನಡೆಯಬೇಕು' ಎನ್ನುತ್ತಾರೆ ಮಂಗಳೂರು ವಿವಿಯ ಪ್ರಾಧ್ಯಾಪಕಿ ಸಬಿತಾ ಕೊರಗ.

ಸಬಿತಾ

ರಾಷ್ಟ್ರೀಯ

ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ 7ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ದೇಶದಲ್ಲಿ ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ 7ಕ್ಕೆ ಇಳಿಕೆಯಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆಯು 11 ಹಾಗೂ ಡಿಸೆಂಬರ್‌ನಲ್ಲಿ 8 ಇತ್ತು. ಇದೀಗ ಅದು 7ಕ್ಕೆ ಇಳಿದಿದೆ. ಇವುಗಳನ್ನು 'ಹೆಚ್ಚು ಬಾಧಿತ, ಕಳವಳಕಾರಿ ಹಾಗೂ ಇತರ ಎಡಪಂಥೀಯ ಉಗ್ರವಾದದಿಂದ ತೊಂದರೆಗೀಡಾಗಿರುವ ಜಿಲ್ಲೆ'ಗಳೆಂದು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಛತ್ತೀಸಗಢದ ಬಿಜಾಪುರ, ನಾರಾಯಣಪುರ, ಸುಕ್ಮಾ, ಕಾಂಕೇರ್ ಹಾಗೂ ದಂತೇವಾಡ, ಜಾರ್ಖಂಡ್‌ನ ಪಶ್ಚಿಮ ಸಿಂಗಭೂಮ್ ಮತ್ತು ಒಡಿಶಾದ ಕಂಧಮಾಲ್ ಜಿಲ್ಲೆಗಳನ್ನು ಸದ್ಯ ನಕ್ಸಲ್ ಪೀಡಿತ ಜಿಲ್ಲೆಗಳೆಂದು ಗುರುತಿಸಲಾಗಿದೆ. ಕಾಂಕೇರ್ ಹಾಗೂ ಪಶ್ಚಿಮ ಸಿಂಗಭೂಮ್ ಜಿಲ್ಲೆಗಳು ಆತಂಕಕಾರಿ ವಾತಾವರಣ ಇರುವ ಪ್ರದೇಶಗಳೆನಿಸಿದ್ದು, ಇಲ್ಲಿ ನಕ್ಸಲ್ ಚಟುವಟಿಕೆ ಕ್ಷೀಣಿಸುತ್ತಿದೆ. ಆದರೆ, ನಕ್ಸಲ್ ವಿರೋಧಿ ಕಾರ್ಯಾಚರಣೆಯ ಅಗತ್ಯವಿದೆ ಎಂದು ತಿಳಿಸಿದ್ದಾರೆ.

ದಂತೇವಾಡ ಹಾಗೂ ಕಂಧಮಾಲ್ ಇತರ ಎಡಪಂಥೀಯ ಉಗ್ರವಾದದಿಂದ ತೊಂದರೆಗೀಡಾಗಿರುವ ಜಿಲ್ಲೆಗಳ ವಿಭಾಗದಲ್ಲಿವೆ ಎಂದೂ ಅವರು ಹೇಳಿದ್ದಾರೆ.

'ನಕ್ಸಲಿಸಂ ಕೊನೆ ಉಸಿರು ಎಳೆಯುತ್ತಿದೆ'

ಗುವಾಹಟಿ (ಪಿಟಿಐ): 'ದೇಶವು ನಕ್ಸಲ್‌ಮುಕ್ತವಾಗುವ ದಿನ ದೂರವಿಲ್ಲ. ಭಾರತದಲ್ಲಿ ನಕ್ಸಲಿಸಂ ಕೊನೆಯುಸಿರೆಳೆಯುತ್ತಿದೆ' ಎಂದು ಸಿಆರ್‌ಪಿಎಫ್‌ನ ಮಹಾ ನಿರ್ದೇಶಕ ಜಿ.ಪಿ. ಸಿಂಗ್ ಹೇಳಿದ್ದಾರೆ.

ಗುರುವಾರ ಇಲ್ಲಿ ಸಿಆರ್‌ಪಿಎಫ್ ಡಿಜಿ ಪರೇಡ್ ಉದ್ದೇಶಿಸಿ ಮಾತನಾಡಿದ ಅವರು, 'ಮಾರ್ಚ್ 31ರ ಒಳಗಾಗಿ ಭಾರತವನ್ನು ನಕ್ಸಲ್ ಮುಕ್ತ ದೇಶವನ್ನಾಗಿ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದು, ಆ ನಿಟ್ಟಿನಲ್ಲಿ ಪೂರ್ಣ ಪ್ರಗತಿ ಕಂಡಿದ್ದೇವೆ' ಎಂದು ಅವರು ಹೇಳಿದರು.

'ಸಿಆರ್‌ಪಿಎಫ್ ಸಿಬ್ಬಂದಿ ಮಣಿಪುರದಲ್ಲಿ ಶ್ಲಾಘನೀಯ ಕೆಲಸ ಮಾಡಿದ್ದಾರೆ' ಎಂದು ಸಿಂಗ್ ಮೆಚ್ಚುಗೆ ವ್ಯಕ್ತಪಡಿಸಿದರು.

ಡಿಎಂಕೆ - ಡಿಎಂಡಿಕೆ ಮೈತ್ರಿ

ಡಿಎಂಡಿಕೆ ಪ್ರಧಾನ ಕಾರ್ಯದರ್ಶಿ ಪ್ರೇಮಲತಾ ವಿಜಯಕಾಂತ ಅವರನ್ನು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ತಮ್ಮ ಡಿಎಂಕೆ ನೇತೃತ್ವದ 'ಜಾತ್ಯತೀತ ಪ್ರಗತಿಪರ ಒಕ್ಕೂಟ' ಮೈತ್ರಿಕೂಟಕ್ಕೆ ಸ್ವಾಗತಿಸಿದರು – ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ ವಿಧಾನಸಭೆ ಚುನಾವಣೆಗೆ ಕೆಲವೇ ದಿನಗಳು ಬಾಕಿ ಇರುವಂತೆಯೇ ಡಿಎಂಡಿಕೆ ಪಕ್ಷವು, ಡಿಎಂಕೆ ನೇತೃತ್ವದ 'ಜಾತ್ಯತೀತ ಪ್ರಗತಿಪರ ಒಕ್ಕೂಟ' ಮೈತ್ರಿ-ಕೂಟವನ್ನು ಗುರುವಾರ ಸೇರಿಕೊಂಡಿತು.

ಡಿಎಂಡಿಕೆ ಪ್ರಧಾನ ಕಾರ್ಯದರ್ಶಿ ಪ್ರೇಮಲತಾ ವಿಜಯಕಾಂತ, ಖಜಾಂಚಿ ಎಲ್‌.ಕೆ. ಸುಧೀಶ್ ಹಾಗೂ ಪಕ್ಷದ ಹಿರಿಯ ನಾಯಕರು ಡಿಎಂಕೆ ಪ್ರಧಾನ ಕಚೇರಿಗೆ ಬಂದರು. ಅಲ್ಲಿ ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಅವರ ಉಪಸ್ಥಿತಿಯಲ್ಲಿ ಮೈತ್ರಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಂಚಿಕೊಂಡಿರುವ ಸ್ಟಾಲಿನ್, 'ದಿವಂಗತ ನಟ, ರಾಜಕಾರಣಿ ವಿಜಯಕಾಂತ ಅವರು ಸ್ಥಾಪಿಸಿದ ಡಿಎಂಡಿಕೆ ಪಕ್ಷವು ನಮ್ಮ ಮೈತ್ರಿಕೂಟವನ್ನು ಸೇರಿರುವುದು ನನಗೆ ಬಹಳ ಸಂತೋಷ ತಂದಿದೆ. ಪಕ್ಷವನ್ನು ಮುನ್ನಡೆಸುತ್ತಿರುವ ಸಹೋದರಿ ಪ್ರೇಮಲತಾ ಅವರನ್ನು ನಾನು ಸ್ವಾಗತಿಸುತ್ತೇನೆ. ಈ ಮೈತ್ರಿಯೂ ರಾಜ್ಯದ ಪ್ರಗತಿಗೆ ನೆರವಾಗಲಿ' ಎಂದು ಹೇಳಿದ್ದಾರೆ.

> **ವಿಜಯಕಾಂತ ಅವರ ಆಶೀರ್ವಾದದೊಂದಿಗೆ ಡಿಎಂಕೆ ಮೈತ್ರಿಕೂಟವನ್ನು ಸೇರಿಕೊಂಡಿದ್ದೇವೆ. ಸೀಟು ಹಂಚಿಕೆ ಸಮಿತಿಯನ್ನು ಶೀಘ್ರವೇ ಸ್ಥಾಪಿಸಲಾಗುವುದು**
> **ಪ್ರೇಮಲತಾ ವಿಜಯಕಾಂತ,** ಡಿಎಂಡಿಕೆ ಪ್ರಧಾನಕಾರ್ಯದರ್ಶಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹತ್ತು ವರ್ಷದ ಹಿಂದೆ ಪಡೆದಿದ್ದ ಸಾಲ ಹಿಂದಿರುಗಿಸಿಲ್ಲ, ನೀಡಿದ್ದ ಚೆಕ್ ಬೌನ್ಸ್ ಆಗಿದೆ ಎನ್ನುವ ಕಾರಣಕ್ಕೆ ತಿಹಾರ್ ಜೈಲು ಸೇರಿದ್ದ ಹಿಂದಿ ನಟ ರಾಜ್‌ಪಾಲ್ ಯಾದವ್ ಅವರು ಜಾಮೀನಿನ ಮೇಲೆ ಹೊರಬಂದಿದ್ದಾರೆ. ಈ ಕಾರಣಕ್ಕಾಗಿ, ಸಾಮಾಜಿಕ ಜಾಲತಾಣಗಳಲ್ಲಿ ಅವರ ವಿಡಿಯೊ ಹರಿದಾಡುತ್ತಿದೆ. ಅದರಲ್ಲಿ ಅವರು ನಟ ಸಲ್ಮಾನ್ ಖಾನ್ ಅವರನ್ನು ತನ್ನ ಹಿರಿಯ ಅಣ್ಣ ಎಂದು ಕರೆದಿದ್ದಾರೆ; ಚಲನಚಿತ್ರರಂಗದಲ್ಲಿ ಇರುವವರ ಪೈಕಿ ಇತರರಿಗೆ ಸಹಾಯ ಮಾಡುವಂಥವರು ಕೆಲವರು ಮಾತ್ರ ಎಂದು ಹೇಳಿದ್ದಾರೆ; ಈ ಮೂಲಕ ಸಲ್ಮಾನ್ ಖಾನ್ ಅವರು ನೀಡಿದ ನೆರವಿಗೆ ರಾಜ್‌ಪಾಲ್ ಯಾದವ್ ಅವರು ಕೃತಜ್ಞತೆ ಸಲ್ಲಿಸಿದ್ದಾರೆ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.'

ವಿಡಿಯೊದ ಕೀಫ್ರೇಮ್‌ಗಳನ್ನು ಇನ್‌ವಿಡ್ ಸಾಧನದ ಮೂಲಕ ಪ್ರತ್ಯೇಕಿಸಿ, ಅವುಗಳಲ್ಲಿ ಒಂದು ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ವಿಶ್ಲೇಷಿಸಿದಾಗ, ಹಲವರು ಇದೇ ವಿಡಿಯೊ ಅನ್ನು ಹಂಚಿಕೊಂಡಿರುವುದು ಕಂಡಿತು. ಜತೆಗೆ, 'ಮೂವೀಸ್ ಅಡ್ಡಾ' ಎನ್ನುವ ಯೂಟ್ಯೂಬ್ ಚಾನೆಲ್‌ಗೆ ಸಂಪರ್ಕ ಕಲ್ಪಿಸಿತು. ಅದರಲ್ಲಿ ಅಪ್‌ಲೋಡ್ ಆಗಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿರುವ ವಿಡಿಯೊವನ್ನೇ ಹೋಲುತ್ತಿತ್ತು. ಚಾನೆಲ್‌ನಲ್ಲಿ ಉಲ್ಲೇಖವಾಗಿರುವ ವಿವರಗಳನ್ನು ಪರಿಶೀಲಿಸಿದಾಗ, ವಿಡಿಯೊ ಅಪ್‌ಲೋಡ್ ಆಗಿರುವುದು 2018ರ ಏಪ್ರಿಲ್‌ನಲ್ಲಿ ಎಂದು ತಿಳಿಯಿತು. ಕೃಷ್ಣಮೃಗ ಬೇಟೆ ಪ್ರಕರಣದಲ್ಲಿ ಜೈಲು ಸೇರಿದ್ದ ಸಲ್ಮಾನ್ ಖಾನ್ ಅವರು ಜಾಮೀನು ಪಡೆದ ಹೊರಬಂದ ಸಂದರ್ಭದಲ್ಲಿ ರಾಜ್‌ಪಾಲ್ ಯಾದವ್ ಅವರು ಖುಷಿಯಿಂದ ಪ್ರತಿಕ್ರಿಯಿಸಿದ್ದ ವಿಡಿಯೊ ಅದು. ರಾಜ್‌ಪಾಲ್ ಯಾದವ್ ಅವರು ಸಾಲದ ಸಂಬಂಧ ₹1.5 ಕೋಟಿ ಜಮೆ ಮಾಡಿದ್ದಾರೆ. ಜತೆಗೆ, ₹1 ಲಕ್ಷವನ್ನು ಭದ್ರತಾ ಠೇವಣಿಯಾಗಿ ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ದೆಹಲಿ ಹೈಕೋರ್ಟ್ ಅವರಿಗೆ ಜಾಮೀನು ಮಂಜೂರು ಮಾಡಿದೆ ಎಂದು ಮಾಧ್ಯಮ ವರದಿಗಳು ಉಲ್ಲೇಖಿಸಿರುವುದು ಕಂಡಿತು. ಆರು ವರ್ಷಗಳ ಹಳೆಯ ವಿಡಿಯೊವನ್ನು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಜನಾರ್ದನ ಸೇವೆ

ನುಡಿ ಬೆಳಗು

ರೇಣುಕಾ ನಿಡಗುಂದಿ

ಸ್ವಾಮಿ ವಿವೇಕಾನಂದರು ಒಮ್ಮೆ ಒಂದು ಕಥೆಯನ್ನು ಹೇಳಿದರು: 'ಒಬ್ಬ ಸನ್ಯಾಸಿಯು ತನ್ನ ಜೀವನವನ್ನು ಧ್ಯಾನದಲ್ಲಿ ಕಳೆಯುತ್ತಿದ್ದನು. ಒಂದು ದಿನ, ಒಂದು ಗ್ರಾಮದಲ್ಲಿ ಪ್ರವಾಹ ಬಂದಾಗ, ಆತನು ತನ್ನ ಧ್ಯಾನವನ್ನು ಬಿಟ್ಟು, ಗ್ರಾಮಸ್ಥರಿಗೆ ಸಹಾಯ ಮಾಡಲು ಓಡಿಹೋಗುತ್ತಾನೆ. ಶಿಷ್ಯರು ಆಶ್ಚರ್ಯಗೊಂಡು, 'ಸನ್ಯಾಸಿಯ ಕರ್ತವ್ಯ ಧ್ಯಾನವಲ್ಲವೇ?' ಧ್ಯಾನ ಬಿಟ್ಟು ಓಡಿದ್ದೇಕೆ?' ಎಂದು ಕೇಳುತ್ತಾರೆ. ಆಗ ಸನ್ಯಾಸಿಯು ಉತ್ತರಿಸಿದನು, 'ದೇವರ ಸೇವೆಯು ಕೇವಲ ಧ್ಯಾನದಿಂದಲ್ಲ, ಜನರ ಸೇವೆಯಿಂದಲೂ ಸಾಧ್ಯ. ನಾನು ಜನರ ಸೇವೆ ಮಾಡುವ ಮೂಲಕ ದೇವರ ಸೇವೆಯನ್ನು ಮಾಡುತ್ತಿದ್ದೇನೆ' ಸ್ವಾಮಿಯವರು ಈ ಕಥೆಯನ್ನು ಹೇಳಿ, 'ನಿಮ್ಮ ಕೆಲಸವನ್ನು ದೇವರಿಗೆ ಸಮರ್ಪಿಸಿದರೆ, ಅದು ಭಕ್ತಿಯಾಗುತ್ತದೆ' ಎಂದರು.

ಗ್ರೇಟರ್ ನೊಯಿಡಾದಲ್ಲಿ ಒಂದು ಘಟನೆ ನಡೆಯಿತು. ಎಲುಬು ಸೀಳುವ ಕಡುಚಳಿಯಲ್ಲಿ ಇಬ್ಬನಿ ಮುಸುಕಿದ ಮಧ್ಯರಾತ್ರಿಯಲ್ಲಿ ಕಣ್ಣಿಗೆ ಏನೂ ಕಾಣಿಸದ ಹೊತ್ತಿನಲ್ಲಿ ಒಬ್ಬ ಯುವಕನು ತಡೆಗೋಡೆ ಬಿದ್ದು ಹೋದ ಒಂದು ಒಳಚರಂಡಿಯ ನಾಲೆಗೆ ತನ್ನ ಕಾರು ಸಹಿತ ಬಿದ್ದ. ಆತ ತನ್ನ ಕಾರಿನ ಚಾವಣಿಯ ಮೇಲೆ ನಿಂತು ಸುಮಾರು ಎರಡು ಗಂಟೆ ಸಹಾಯಕ್ಕಾಗಿ ಕೂಗುತ್ತಿದ್ದರೂ ಯಾರೊಬ್ಬರೂ ಮುಂದೆ ಬರುವುದಿಲ್ಲ. ಘಟನಾ ಸ್ಥಳಕ್ಕೆ ಪೊಲೀಸ್ ಪಡೆ ಬರುತ್ತದೆ, ಅಗ್ನಿಶಾಮಕ ದಳದವರು ಬರುತ್ತಾರೆ. ಎನ್‌ಡಿಆರ್‌ಎಫ್ (ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ) ಬರುತ್ತದೆ. ಆದರೆ ಅವರು ಬರುವ ಹೊತ್ತಿಗೆ ತಡವಾಗಿ ಹೋಗಿತ್ತು. ಬಂದರೂ ಕೊರೆವ ಚಳಿಯಲ್ಲಿ ಮಂಜುಗಡ್ಡೆಯಂತಹ ನೀರಿಗಿಳಿದು ಯುವಕನನ್ನು ರಕ್ಷಿಸಲು ಯಾರೂ ಮುಂದಾಗುವುದಿಲ್ಲ. ಆದರೆ ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಡೆಲಿವರಿ ಹುಡುಗ ತನ್ನ ಬಟ್ಟೆ ಕಳಚಿ ಸೊಂಟಕ್ಕೆ ಹಗ್ಗ ಬಿಗಿದುಕೊಂಡು ಕೊಳಚೆ ನೀರಿಗಿಳಿದು ಹುಡುಕುವ ಪ್ರಯತ್ನ ಮಾಡಿದರೂ ಪ್ರಯೋಜನವಾಗಲಿಲ್ಲ.

ಇಲ್ಲಿ ತನ್ನ ಪ್ರಾಣದ ಚಿಂತೆಯನ್ನೂ ತೊರೆದು ಕಡುಚಳಿಯಲ್ಲಿ ಕೊಳಚೆ ನೀರಿಗಿಳಿದ ಹುಡುಗನ ಮಾನವೀಯತೆಗೆ ಕೈಮುಗಿಯಬೇಕು. ಎಷ್ಟು ಜನ ಹೀಗೆ ಇನ್ನೊಬ್ಬರ ಜೀವ ಉಳಿಸಲು ಮುಂದೆ ಬರುತ್ತಾರೆ? ರಸ್ತೆ ಅಪಘಾತದಲ್ಲಂತೂ ಅಲ್ಲೇನು ಆಗಿದೆ ಎಂದು ಕುತೂಹಲಕ್ಕೆ ನಿಂತು ನೋಡಿ ಜಾಗ ಖಾಲಿ ಮಾಡುತ್ತಾರೆಯೇ ಹೊರತು ಆಸ್ಪತ್ರೆಗೆ ಸಾಗಿಸಲು ಧೈರ್ಯ ಮಾಡುವವರು ತೀರಾ ವಿರಳ.

ಈ ಕಥೆಯ ಮೂಲಕ ಸ್ವಾಮಿಯವರು ಕರ್ಮಯೋಗವನ್ನು ಕಲಿಸಿದರು. ದೈನಂದಿನ ಕೆಲಸವನ್ನು ನಿಸ್ವಾರ್ಥ ಭಾವದಿಂದ ಮಾಡಿದರೆ, ಅದು ದೇವರಿಗೆ ಸೇವೆಯಾಗುತ್ತದೆ. ❖

ಗುಂಡಣ್ಣ

ಪದಬಂಧ 6321

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಮದಿಸಿದ ಆನೆ (3)
4.ಒಳ್ಳೆಯ ಅಥವಾ ಕೆಟ್ಟ ನಾತ (3)
5.ಅಂಗಣಕ್ಕೇರಿದಾಗ ಕಾಣಿಸಿದ ಮಂಗಳಗ್ರಹ (4)
6.ಇದು ಮಾತಿಗೆ ನಿಲುಕದ್ದು (4)
7.ನಗರದಲ್ಲಿರುವ ಮನುಷ್ಯ (2)
9.ಕವಿಪುಂಗವರು ಹೊಕ್ಕಿರುವ ಗುಹೆ (2)
13.ಹೊಸಯುಗ ಈ ತರ ಬಂದಿದೆ (4)
14.ಅವಶ್ಯವಿಲ್ಲದ ಖರ್ಚು (4)
15.ಕಪಟವನ್ನು ಹೀಗೂ ಹೇಳಿ (3)
16.ಹಂತಕನೊಡನಿರುವ ಹಿರಿಯ ಪೂಜ್ಯ (3)

ಮೇಲಿಂದ ಕೆಳಕ್ಕೆ
1.ಜರಿಯಲ್ಲಿಟ್ಟ ರತ್ನ ಖಚಿತವಾದ ಒಡವೆ! (4)
2.ಅಳಿಯನನ್ನು ಮನೆಯಲ್ಲಿಯೇ ಇಟ್ಟುಕೊಳ್ಳುವುದು (5)
3.ರಾಜನ ಮನೆ (4)
5.ಒಳಮನಸ್ಸು ಇದು (4)
8.ದ್ರವದಿಂದ ತುಂಬಿರುವುದು (4)
10.ಈತ ವಿವೇಕಶಾಲಿ (5)
11.ಸಭೆಯ ಮುಖ್ಯಸ್ಥ (4)
12.ಸಮರ್ಪಕವಲ್ಲದ ಕಾರಣ (4)



6320ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುವಾದ 3.ರಾಯಭಾರಿ
5.ರಮಣಿ 6.ಸಮಯ
8.ನಗಾರಿ 9.ಣಿಕಿಂ
10.ವಂತಿಗೆ 11.ವಿವರ
12.ಕಳಸ 14.ಜಟಿಲ
16.ಸಮಾಧಾನ 17.ತೆರೆಮರೆ

ಮೇಲಿಂದ ಕೆಳಕ್ಕೆ:
1.ಅಗಸ 2.ದರ
3.ರಾಣಿ 4.ರಿಪೇರಿ
7.ಯಮಕಿಂಕರ 8.ನಯವಂಚಕ
11.ವಿರಸ 13.ಸಕ್ಕರೆ
14.ಜನ 15.ಲತೆ

ಸುಡೊಕು 6705

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		7		6			1	2
			5		2	3		
6		2		4		7		8
	7				9			
5		9			6		3	
	6		7					4
2		3	8		4	6		
		6		2				9
8	1		6		7	4		

6704 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

20 ಫೆಬ್ರುವರಿ 2026 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ತೃತೀಯ ಗಂ. 14-39 ನಕ್ಷತ್ರ: ಉತ್ತರಾಭಾದ್ರ ಗಂ. 20-08 ಯೋಗ: ಸಾಧ್ಯ ಗಂ. 18-23 ಕರಣ: ಗರ ಗಂ. 14-39 ಕುಂಭ ಮಾಸದ 08 ನೇ ದಿನ. ಮಳೆ ನಕ್ಷತ್ರ : ಶತಭಿಷ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00 , ಸೂರ್ಯೋದಯ : 06-55 ಸೂರ್ಯಾಸ್ತ : 06-34, ಮುಸ್ಲಿಂ ದಿನಾಂಕ : 2 ರಂಜಾನ್, ಅದೃಷ್ಟ ಸಂಖ್ಯೆ : 10, 2

ಮೇಷ: ನ್ಯಾಯಾಲಯದ ಮೆಟ್ಟಿಲೇರಿದ ಸಮಸ್ಯೆಗಳನ್ನು ರಾಜಿ ಒಪ್ಪಂದದ ಮೂಲಕ ಬಗೆಹರಿಸಿಕೊಳ್ಳಲು ಉತ್ತಮ ದಿನ. ಮುಂಜಾನೆ ಏಳುವಾಗಲೇ ದಿನಚರಿಯನ್ನು ನೆನೆದ ನೀವು ಉತ್ಸಾಹಿಗಳಾಗಿರುತ್ತೀರಿ.

ವೃಷಭ: ನೀರಿನ ಹತ್ತಿರದಲ್ಲಿ ಅಥವಾ ನೀರಿಗೆ ಸಂಬಂಧಿಸಿದ ಕೆಲಸ ನಡೆಸುವವರಿಗೆ ವೃತ್ತಿಯಲ್ಲಿ ಭೀತಿ ಎದುರಾಗಬಹುದು. ಹಣಕಾಸು ನಿರ್ವಹಣೆ ವಿಚಾರದಲ್ಲಿ ಸಣ್ಣ-ಪುಟ್ಟ ತಪ್ಪುಗಳನ್ನು ಮಾಡುವ ಲಕ್ಷಣಗಳಿವೆ.

ಮಿಥುನ: ಮಕ್ಕಳ ಜೊತೆ ಸಂತೋಷದಿಂದ ಸಮಯ ಕಳೆಯುವ ದಿಕ್ಕಿನಲ್ಲಿ ಕೆಲ ನಿರ್ಧಾರಗಳನ್ನು ಕೈಗೊಳ್ಳುವಿರಿ. ಕೆಲಸ ಮಾಡುವ ಮುನ್ನ ಸಂಪೂರ್ಣ ವಾಸ್ತವಾಂಶ ಅರಿತುಕೊಳ್ಳಿರಿ. ಮನೆಯಲ್ಲಿನ ಜವಾಬ್ದಾರಿಗಳು ಹೆಚ್ಚಲಿದೆ.

ಕರ್ಕಾಟಕ: ಮೇಲಧಿಕಾರಿಯಿಂದಲೋ, ಗುರು-ಹಿರಿಯರಿಂದಲೋ ಉತ್ತಮ ಪ್ರಶಂಸೆಯ ಮಾತುಗಳು ಕೇಳಿಬರಲಿವೆ. ಆಹಾರದ ಬಳಕೆಯಲ್ಲಿ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿಕೊಳ್ಳುವ ಪ್ರಯತ್ನಿಸಿ.

ಸಿಂಹ: ಸಮಾಜದಲ್ಲಿ ಸ್ಥಾನಮಾನ ಹೊಂದಿರುವ ಮಸಿ ಬಳಿಯುವ ಪ್ರಯತ್ನ ಸಂಬಂಧಿಕರಿಂದ ಅಥವಾ ಸ್ನೇಹಿತರಿಂದ ನೆರವೇರಲಿದೆ. ಮನೆಯವರ ಬೇಡಿಕೆಗಳನ್ನು ಸ್ವಲ್ಪಮಟ್ಟಿಗೆ ಪೂರೈಸುವಿರಿ.

ಕನ್ಯಾ: ಉನ್ನತ ಶಿಕ್ಷಣಕ್ಕಾಗಿ ದೂರದ ಅಥವಾ ವಿದೇಶ ಪ್ರಯಾಣದ ಕನಸು ಈಡೇರುವ ಬಗ್ಗೆ ಹಣ ವ್ಯಯಿಸಬೇಕಾಗುವುದು. ಕಾರ್ಮಿಕರ ಮೇಲಿನ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳುವುದರಿಂದ ಪ್ರಯೋಜನ ಪಡೆಯಲಿದ್ದೀರಿ.

ತುಲಾ: ಜೇನುಹುಳಗಳಂತಹ ಕೀಟಗಳಿಂದ ಅಥವಾ ಇತರೆ ಜಂತುಗಳ ಕಚ್ಚುವಿಕೆ ಸಂಭವಿಸಬಹುದು ಜಾಗ್ರತರಾಗಿರಿ. ಯಾವುದೇ ಪರಿಸ್ಥಿತಿಯಲ್ಲಿ ಮನಸ್ಸಿನ ಭಾವನೆಗಳಿಗೆ ಮಾನ್ಯತೆ ನೀಡುವುದು ಅಭ್ಯಾಸವಾಗಿರಲಿ.

ವೃಶ್ಚಿಕ: ಜಾಣ್ಮೆ ಮತ್ತು ಅವಿರತ ದುಡಿಮೆಯಿಂದ ಮಾಡುತ್ತಿರುವಂಥ ವ್ಯವಹಾರದಲ್ಲಿ ದುಪ್ಪಟ್ಟು ಲಾಭವಾಗಿರುವುದು ಗಮನಕ್ಕೆ ಬರಲಿದೆ. ಬ್ಯಾಂಕ್ ಅಧಿಕಾರಿಗಳಿಗೆ ಉದ್ಯೋಗದಲ್ಲಿ ಬದಲಾವಣೆಯಂಥ ಸಂಭವವಿರುವುದು.

ಧನು: ಬೆಳೆದ ವಸ್ತುಗಳ ಮಾರಾಟದಿಂದ ಆರ್ಥಿಕ ಅನುಕೂಲವಾಗಿ ಮೇಲಿದ್ದ ಸಾಲದ ಹೊರೆ ಕಡಿಮೆಯಾಗಲಿದೆ. ಸುಗಂಧ ದ್ರವ್ಯಗಳ ಉಪಯೋಗದಿಂದ ಅಲರ್ಜಿ ಸಂಭವಿಸಬಹುದು, ಎಚ್ಚರಿಕೆ ಇರಲಿ.

ಮಕರ: ವೃತ್ತಿಕ್ಷೇತ್ರದ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ಹಿಡಿತಕ್ಕೆ ತೆಗೆದುಕೊಂಡು ಉತ್ಸಾಹದಿಂದ ಕಾರ್ಯ ಪ್ರವೃತ್ತರಾಗುವಿರಿ. ಅಕ್ಕ ಅಥವಾ ತಂಗಿಯ ಆರೋಗ್ಯದ ಬಗ್ಗೆ ಖರ್ಚು ಮಾಡಬೇಕಾದ ಸಂದರ್ಭ ಬರುವುದು.

ಕುಂಭ: ವೃತ್ತಿರಂಗದಲ್ಲಿ ಸಾಮರ್ಥ್ಯ ಹೆಚ್ಚೇನು ಪ್ರಯೋಜಕಾರಿಯಾಗುವುದಿಲ್ಲ. ಮನುಷ್ಯ ಪ್ರಯತ್ನದ ಜತೆಯಲ್ಲಿ ದೇವಬಲವು ಅಗತ್ಯ ಎನ್ನುವ ಕಾರಣದಿಂದಾಗಿ ದೇವರ ಮೊರೆ ಹೋಗುವುದು ಉತ್ತಮ.

ಮೀನ: ಹಿರಿಯರೊಡನೆ ಮಾಡಿದ ಅನವಶ್ಯಕ ತರ್ಕ, ವಿವಾದಗಳಿಂದ ಅಧಿಕಪ್ರಸಂಗಿ ಎನ್ನುವ ಪಟ್ಟವನ್ನು ಹೊಂದುವಿರಿ. ಶ್ರೀ ಮಹಾವಿಷ್ಣುವನ್ನು ಸ್ತುತಿಸಿದಲ್ಲಿ ಮನೆಯಲ್ಲಿ ಆರೋಗ್ಯ, ಐಶ್ವರ್ಯಗಳ ವೃದ್ಧಿ.

ಬಂಡೀಪುರ, ನಾಗರಹೊಳೆಯಲ್ಲಿ ಮತ್ತೆ ಸಫಾರಿ ಶುರು ಮಾಡಿರುವುದು ಸರಿಯೇ?

● ಸರಿ ● ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹28500-28500
ಹಿರಿಯೂರು	₹13000-17000
ತಿಪಟೂರು	₹29000-30325
ತುಮಕೂರು	₹15100-20500
ತುರುವೇಕೆರೆ	₹29000-30000

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ಮಾನ್ ಎಸ್. ಚಿಕ್ಕಸಾಂಬಯ್ಯ B.Sc.BE.d

(ನಿ|| ಶಿಕ್ಷಣಾಧಿಕಾರಿಗಳು), ಚನ್ನಪಟ್ಟಣ.

20.04.1932 – 20.02.2025

ನಿಮ್ಮ ಆತ್ಮಕ್ಕೆ ಶಾಂತಿ ಸಿಗಲ ಮತ್ತು ಪ್ರತಿ ದಿನ ನಿಮ್ಮ ಮಾರ್ಗದರ್ಶನದಂತೆ ನಾವು ನಡಿಯುತ್ತಿದ್ದೇವೆ

ಇಂತಿ: ಶ್ರೀಮತಿ ಎಂ.ವಿ. ಸರೋಜಮ್ಮ ಮಕ್ಕಳು, ಮೊಮ್ಮಕಳು ಮತ್ತು ಕುಟುಂಬದವರು

10ನೇ ವರ್ಷದ ಪುಣ್ಯ ಸ್ಮರಣೆ

ಹೆಚ್. ಕೃಷ್ಣಪ್ಪ (HAL)

ಜನನ: 07/02/1937; ನಿಧನ: 20/02/2016

ನಿಮ್ಮ ಪ್ರೀತಿ ಮತ್ತು ಮಾರ್ಗದರ್ಶನ ನಮ್ಮೆಲ್ಲರ ಹೃದಯದಲ್ಲಿ ಶಾಶ್ವತ. ನಿಮ್ಮ ಆತ್ಮ ಭಗವಂತನ ಕೃಪೆಗೆ ಪಾತ್ರವಾಗಲಿ ಎಂದು ಪ್ರಾರ್ಥಿಸುತ್ತೇವೆ.

ಇಂತಿ ದುಃಖ ತಪ್ತರು

ಧರ್ಮಪತ್ನಿ ಶ್ರೀಮತಿ ಎಸ್. ಗುಂಡಮ್ಮ ಹಾಗೂ ಕುಟುಂಬವರ್ಗದವರು ಗಾಯತ್ರಿನಗರ, ಬೆಂಗಳೂರು.

‘ಭಾರತವು ಜಾಗತಿಕ ಎ.ಐ ಕ್ರಾಂತಿಯ ನಾಯಕ’

ಕೃತಕ ಬುದ್ಧಿಮತ್ತೆಯಲ್ಲಿ ಸುಯೋಗ, ನಾಳಿನ ನೀಲನಕ್ಷೆ ಕಾಣುತ್ತಿದ್ದೇವೆ: ಪ್ರಧಾನಿ ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವು ಎಲ್ಲರಿಗೂ ಸಿಗುವಂತೆ ಆಗಬೇಕು ಮತ್ತು ಅದನ್ನು ಸಬಲೀಕರಣದ ಸಾಧನವಾಗಿ ಬದಲಾಯಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಪ್ರತಿಪಾದಿಸಿದರು.

‘ಭಾರತ ಮಂಟಪ’ದಲ್ಲಿ ‘ಎ.ಐ ಇಂಪ್ಯಾಕ್ಟ್ ಶೃಂಗಸಭೆ’ಗೆ ಚಾಲನೆ ನೀಡಿದ ಅವರು, ‘ಈ ತಂತ್ರಜ್ಞಾನವನ್ನು ಪರಸ್ಪರ ಹಂಚಿಕೊಂಡಾಗ ಮತ್ತು ಅದರ ಕೋಡ್‌ಗಳು ಎಲ್ಲರಿಗೂ ಮುಕ್ತವಾಗಿರುವಾಗ ಅದು ನಿಜವಾಗಿಯೂ ಪ್ರಪಂಚದ ಒಳಿತಿಗಾಗಿ ಕೆಲಸ ಮಾಡಲಿದೆ ಎಂಬುದು ಭಾರತದ ಬಲವಾದ ನಂಬಿಕೆ’ ಎಂದು ಹೇಳಿದರು.

‘ಕೆಲವು ದೇಶಗಳು ಎ.ಐ ಅನ್ನು ಗೋಪ್ಯವಾಗಿ ಅಭಿವೃದ್ಧಿಪಡಿಸಬೇಕು ಎಂದು ಬಯಸುತ್ತವೆ. ಆದರೆ ಭಾರತದ ನಿಲುವು ಭಿನ್ನವಾಗಿದೆ. ಎ.ಐ ತಂತ್ರಜ್ಞಾನ ಎಲ್ಲರಿಗೂ ಮುಕ್ತವಾಗಬೇಕು ಎಂದು ನಂಬುತ್ತದೆ. ಹಾಗಾದಲ್ಲಿ ಮಾತ್ರ, ಲಕ್ಷಾಂತರ ಯುವ ಮನಸ್ಸುಗಳಿಗೆ ಈ ತಂತ್ರಜ್ಞಾನವನ್ನು ಇನ್ನಷ್ಟು ಸುಧಾರಿಸಲು ಸಾಧ್ಯವಾಗುತ್ತದೆ’ ಎಂದರು.

‘ಕೃತಕ ಬುದ್ಧಿಮತ್ತೆಯು ಮಾನವನ ಇತಿಹಾಸದ ಪರಿವರ್ತನೆಯ ಅಧ್ಯಾಯವಾಗಿದೆ. ಭಾರತವು ಈ ಕ್ರಾಂತಿಯ ಒಂದು ಭಾಗವಾಗಿ ಉಳಿದಿಲ್ಲ. ನಾಯಕನಾಗಿ ಮುನ್ನಡೆಸುತ್ತಿದೆಯಲ್ಲದೆ, ಅದಕ್ಕೆ ಒಂದು ಸ್ಪಷ್ಟ ರೂಪ ನೀಡುತ್ತಿದೆ’ ಎಂದು ತಿಳಿಸಿದರು.

‘ಎ.ಐ ನಮ್ಮಲ್ಲಿನ ವ್ಯವಸ್ಥೆಗಳನ್ನು ಸರಳ, ಹೆಚ್ಚು ಪರಿಣಾಮಕಾರಿ ಮತ್ತು ಪ್ರಭಾವಶಾಲಿಯಾಗಿಸುತ್ತದೆ. ಇದು ಸೃಜನ ಶೀಲತೆಯನ್ನು ಬಯಸುವ ಜನರಿಗೆ ವಿಪುಲ ಅವಕಾಶಗಳನ್ನು ಸೃಷ್ಟಿಸುತ್ತದೆ. ನಾವೀನ್ಯ, ಉದ್ಯಮಶೀಲತೆ ಮತ್ತು ಹೊಸ ಉದ್ಯಮಗಳ ಸ್ಥಾಪನೆಗೆ ಪ್ರಮುಖ ಅವಕಾಶವಾಗಿದೆ’ ಎಂದು ವಿಶ್ವದ ವಿವಿಧ ದೇಶಗಳ ನಾಯಕರು ಮತ್ತು ಪ್ರಮುಖ ಕಂಪನಿಗಳ ಸಿಇಒಗಳು ಭಾಗವಹಿಸಿದ ಸಮಾರಂಭದಲ್ಲಿ ಹೇಳಿದರು.

‘ಇಂದು ಜಗತ್ತಿನಲ್ಲಿ ಎರಡು ರೀತಿಯ ಜನರಿದ್ದಾರೆ- ಎ.ಐಗೆ ಭಯ ಪಡುವವರು ಮತ್ತು ಎ.ಐನಲ್ಲಿ ಅದೃಷ್ಟವನ್ನು ನೋಡುವವರು. ನಾವು ಭಯ ಪಡುವುದಿಲ್ಲ ಎಂದು ಹೆಮ್ಮೆ ಹಾಗೂ ಜವಾಬ್ದಾರಿಯಿಂದ ಹೇಳುತ್ತೇನೆ. ಭಾರತವು ಎ.ಐನಲ್ಲಿ ಸುಯೋಗ, ಭವಿಷ್ಯ, ಅವಕಾಶ ಮತ್ತು ನಾಳಿನ ನೀಲನಕ್ಷೆಯನ್ನು ನೋಡುತ್ತದೆ’ ಎಂದು ಪ್ರತಿಪಾದಿಸಿದರು.

‘ಭಾರತವು ಹೊಸ ತಂತ್ರಜ್ಞಾನವನ್ನು ಆವಿಷ್ಕರಿಸುತ್ತಿದೆಯಲ್ಲದೆ ಅದನ್ನು ತ್ವರಿತವಾಗಿ ಅಳವಡಿಸಿಕೊಳ್ಳುತ್ತಿದೆ. ಎ.ಐ ಭವಿಷ್ಯದಲ್ಲಿ ಏನು ಮಾಡಬಲ್ಲದು ಎಂಬುದು ನಿಜವಾದ ಪ್ರಶ್ನೆ ಅಲ್ಲ. ಪ್ರಸ್ತುತ ಎ.ಐ ಯೊಂದಿಗೆ ನಾವು ಏನು ಮಾಡಬಹುದು ಎಂಬುದು ನಮ್ಮ ಮುಂದಿರುವ ಪ್ರಶ್ನೆ’ ಎಂದರು.

‘ಎ.ಐ ಒಂದು ಪರಿವರ್ತಕ ಶಕ್ತಿಯಾಗಿದೆ. ಅದು ತನ್ನ ನೈಜ ಉದ್ದೇಶಗಳಿಂದ ದೂರ ಸರಿದರೆ, ವಿನಾಶಕ್ಕೆ ಕಾರಣವಾಗುತ್ತದೆ. ಅದನ್ನು ಸದುಪಯೋಗಪಡಿಸಿಕೊಂಡರೆ, ಜಗತ್ತಿನ ಒಳಿತಿಗೆ ಕಾರಣವಾಗುತ್ತದೆ’ ಸಲಹೆ ನೀಡಿದರು.

‘ಮಾನವನ ಇತಿಹಾಸದಲ್ಲಿ ಕಂಡುಬಂದ ಕೆಲವೊಂದು ಕ್ರಾಂತಿಕಾರಿ ಪರಿವರ್ತನೆಗಳು ಇಡೀ ಶತಮಾನವನ್ನೇ ರೂಪಿಸಿವೆ. ಇಂತಹ ಬದಲಾವಣೆಗಳು ನಾಗರಿಕತೆಯ ದಿಕ್ಕನ್ನು ನಿರ್ಧರಿಸುವುದ ಲ್ಲದೆ, ಅಭಿವೃದ್ಧಿಗೆ ವೇಗ ನೀಡುತ್ತದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಕೂಡ ಅಂತಹ ಒಂದು ದೊಡ್ಡ ಪರಿವರ್ತನೆಯಾಗಿದೆ’ ಎಂದು ಅಭಿಪ್ರಾಯಪಟ್ಟರು.

ಎ.ಐ ಇಂಪ್ಯಾಕ್ಟ್ ಶೃಂಗಸಭೆಯ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಪಾಲ್ಗೊಂಡರು –ಪಿಟಿಐ ಚಿತ್ರ

ಭಾಷಣ ಮಾಡದ ಬಿಲ್ ಗೇಟ್ಸ್

ಮೈಕ್ರೋಸಾಫ್ಟ್ ಸಹ-ಸಂಸ್ಥಾಪಕ ಬಿಲ್ ಗೇಟ್ಸ್ ಅವರಿಗೆ ಎ.ಐ ಶೃಂಗ ಸಭೆಯಲ್ಲಿ ಭಾಷಣ ಮಾಡುವ ಅವಕಾಶ ದೊರೆಯಲಿಲ್ಲ. ಗೇಟ್ಸ್ ಅವರು ಗುರುವಾರ ಬೆಳಿಗ್ಗೆ 11.50ಕ್ಕೆ ಶೃಂಗವನ್ನುದ್ದೇಶಿಸಿ ಭಾಷಣ ಮಾಡಬೇಕಿತ್ತು. ಭಾಷಣಕ್ಕಾಗಿ ಅವರಿಗೆ 12 ನಿಮಿಷ ನಿಗದಿಪಡಿಸಲಾಗಿತ್ತು.

‘ಬಿಲ್ ಗೇಟ್ಸ್ ಅವರು ಭಾಷಣ ಮಾಡುವುದಿಲ್ಲ. ಅವರ ಬದಲು ಅಂಕುರ್ ಓರಾ (ಫೌಂಡೇಶನ್‌ನ ಆಫ್ರಿಕಾ ಮತ್ತು ಭಾರತದ ಮುಖ್ಯಸ್ಥ) ಮಾತನಾಡುವರು’ ಎಂದು ಗೇಟ್ಸ್ ಫೌಂಡೇಶನ್ ಗುರುವಾರ ಬೆಳಿಗ್ಗೆ ತಿಳಿಸಿದೆ. ಈ ನಿರ್ಧಾರದ ಹಿಂದಿನ ಕಾರಣವನ್ನು ಸ್ಪಷ್ಟಪಡಿಸಿಲ್ಲ.

ಅಮೆರಿಕದ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್‌ಗೆ ಸಂಬಂಧಿಸಿದ ಫೈಲ್‌ಗಳಲ್ಲಿ ಗೇಟ್ಸ್ ಹೆಸರು ಕಾಣಿಸಿಕೊಂಡಿರುವುದರಿಂದ ಅವರು ವೇದಿಕೆಯಲ್ಲಿ ಕಾಣಿಸಿಕೊಳ್ಳುವುದಕ್ಕೆ ಸಂಘಟಕರು ಅಸಮಾಧಾನ ವ್ಯಕ್ತಪಡಿಸಿದ್ದರು. ಇದೇ ಕಾರಣದಿಂದ ಅವರ ಭಾಷಣ ರದ್ದುಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

> ನಾವು ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ಮುಕ್ತ ಅವಕಾಶ ನೀಡಬೇಕು. ಅದೇ ಸಮಯದಲ್ಲಿ ಅದರ ನಿಯಂತ್ರಣವನ್ನು ನಮ್ಮ ಕೈಯಲ್ಲಿ ಇಟ್ಟುಕೊಳ್ಳಬೇಕು
>
> **ನರೇಂದ್ರ ಮೋದಿ**, ಪ್ರಧಾನಿ

> ಎ.ಐ ಎಲ್ಲರಿಗೂ ಸೇರಿದ್ದಾಗಿದೆ. ಅದರ ಭವಿಷ್ಯವನ್ನು ಬೆರಳೆಣಿಕೆಯಷ್ಟು ದೇಶಗಳು ಅಥವಾ ಕೆಲವು ಮಂದಿ ಬಿಲಿಯನೇರ್‌ಗಳು ನಿರ್ಧರಿಸಬಾರದು
>
> **ಅಂಟೋನಿಯೊ ಗುಟೆರಸ್**, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ

ವಿವಿಧ ದೇಶಗಳ ನಾಯಕರು ಭಾಗಿ

ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್, ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡಾ ಸಿಲ್ವಾ, ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ದಿಸಾನಾಯಕೆ, ಭೂತಾನ್ ಪ್ರಧಾನಿ ಶೆರಿಂಗ್ ಟೊಬ್ಗೆ, ಮಾರಿಷಸ್ ಪ್ರಧಾನಿ ನವೀನ್‌ಚಂದ್ರ ರಾಮಗೂಲಮ್, ಕ್ರೊಯೇಷ್ಯಾ ಪ್ರಧಾನಿ ಆಂದ್ರೆ ಪ್ಲೆಂಕೋವಿಚ್, ಸರ್ಬಿಯಾ ಅಧ್ಯಕ್ಷ ಅಲೆಕ್ಸಾಂಡರ್ ವೊಚಿಚ್, ಸೀಷೆಲ್ಸ್ ಉಪಾಧ್ಯಕ್ಷ ಸೆಬಾಸ್ಟಿಯನ್ ಪಿಳ್ಳೈ, ಎಸ್ಟೋನಿಯಾ ಅಧ್ಯಕ್ಷ ಅಲಾರ್ ಕಾರಿಸ್, ಫಿನ್ಲೆಂಡ್ ಪ್ರಧಾನಿ ಪಿಟೆರಿ ಓರ್ಪೊ ಸೇರಿದಂತೆ ಹಲವು ನಾಯಕರು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡರು.

₹10 ಲಕ್ಷ ಕೋಟಿ ಹೂಡಿಕೆ

ರಿಲಯನ್ಸ್ ಅಧ್ಯಕ್ಷ ಮುಕೇಶ್ ಅಂಬಾನಿ ಘೋಷಣೆ

ನವದೆಹಲಿ (ಪಿಟಿಐ): ಏಳು ವರ್ಷಗಳಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಕ್ಷೇತ್ರದಲ್ಲಿ ಒಟ್ಟು ₹10 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದ್ದಾರೆ.

ಮೊಬೈಲ್ ಸೇವೆಗಳು ಹಾಗೂ ಇಂಟರ್ನೆಟ್ ಸಂಪರ್ಕವು ಎಲ್ಲರಿಗೂ ಕೈಗೆಟಕುವಂತೆ ಮಾಡುವಲ್ಲಿ ಹಾಗೂ ಅವು ದೇಶದೆಲ್ಲೆಡೆ ಲಭ್ಯವಾಗುವಂತೆ ಮಾಡುವಲ್ಲಿ ತಮ್ಮ ಕಂಪನಿಯು ಯಾವ ಪಾತ್ರ ವಹಿಸಿತ್ತೋ ಅದೇ ಬಗೆಯ ಪಾತ್ರವನ್ನು ಎ.ಐ ಕ್ಷೇತ್ರದಲ್ಲಿಯೂ ನಿರ್ವಹಿಸಲಾಗುವುದು ಎಂದು ಅಂಬಾನಿ ಅವರು ಘೋಷಿಸಿದ್ದಾರೆ.

‘ಇಂಡಿಯಾ ಎ.ಐ. ಇಂಪ್ಯಾಕ್ಟ್ ಶೃಂಗ’ದಲ್ಲಿ ಮಾತನಾಡಿದ ಅವರು, ಈ ಕ್ರಮದಿಂದಾಗಿ ದೇಶದ ಪ್ರತಿ ವ್ಯಕ್ತಿ, ಪ್ರತಿ ಉದ್ದಿಮೆ, ಪ್ರತಿಯೊಂದು ಸರ್ಕಾರಿ ಸೇವೆ ಎ.ಐ ಜೊತೆ ಸಂಪರ್ಕಕ್ಕೆ ಬರಲಿದೆ ಎಂದು ಹೇಳಿದ್ದಾರೆ.

‘ಜಿಯೊ ಕಂಪನಿಯು ಭಾರತವನ್ನು ಇಂಟರ್ನೆಟ್ ಯುಗದ ಜೊತೆ ಬೆಸೆಯಿತು. ಈಗ ಜಿಯೊ ಕಂಪನಿಯು ಭಾರತವನ್ನು ಬುದ್ಧಿಮತ್ತೆಯ ಯುಗದೊಂದಿಗೆ ಜೋಡಿಸಲಿದೆ. ಭಾರತವು ಬುದ್ಧಿಮತ್ತೆಗೆ ಸಂಬಂಧಿಸಿದ ಸೇವೆಗಳನ್ನು ಬಾಡಿಗೆ ಆಧಾರದಲ್ಲಿ ಪಡೆಯುತ್ತ ಕುಳಿತಿರಲಾಗದು. ಹೀಗಾಗಿ ನಾವು ಇಂಟರ್ನೆಟ್ ಡೇಟಾ ಬೆಲೆಯನ್ನು ಹೇಗೆ ಕಡಿಮೆ ಮಾಡಿದೆವೋ ಅದೇ ಬಗೆಯಲ್ಲಿ ಬುದ್ಧಿಮತ್ತೆಯ ವೆಚ್ಚವನ್ನೂ ಕಡಿಮೆ ಮಾಡಲಿದ್ದೇವೆ’ ಎಂದು ಅಂಬಾನಿ ಹೇಳಿದ್ದಾರೆ.

‘ಇದು ಊಹೆಗಳನ್ನು ಆಧರಿಸಿದ ಹೂಡಿಕೆ ಅಲ್ಲ... ಇದು ಶಿಸ್ತುಬದ್ಧವಾಗಿ, ದೇಶವನ್ನು ಕಟ್ಟಲು ಬಳಸುವ ಬಂಡವಾಳ. ಇದು ಮುಂದಿನ ಹಲವು ದಶಕಗಳವರೆಗೆ ಆರ್ಥಿಕ ಮೌಲ್ಯ ಸೃಷ್ಟಿಸಿಕೊಡುವ ಉದ್ದೇಶದ ಹೂಡಿಕೆ’ ಎಂದು ಅವರು ವಿವರಿಸಿದ್ದಾರೆ.

ಜಿಯೊ ಇಂಟೆಲಿಜೆನ್ಸ್ ಕಂಪನಿಯು ಭಾರತದಲ್ಲಿ ಭಾರತದ್ದೇ ಆದ ಎ.ಐ. ಮೂಲಸೌಕರ್ಯವನ್ನು ನಿರ್ಮಿಸಲಿದೆ, ಎ.ಐ ಸೌಲಭ್ಯವು ಕಿರಾಣಿ ಅಂಗಡಿಗಳಿಂದ ಕ್ಲಿನಿಕ್‌ಗಳವರೆಗೆ, ತರಗತಿಗಳಿಂದ ಕೃಷಿ ಜಮೀನಿನವರೆಗೆ ಲಭ್ಯವಾಗುವಂತೆ ಮಾಡಲಿದೆ ಎಂದು ಪ್ರಕಟಿಸಿದ್ದಾರೆ.

ಎ.ಐ ಎಂಬುದು ಇನ್ನೊಂದು ತಂತ್ರಜ್ಞಾನವಷ್ಟೇ ಅಲ್ಲ. ಇದೇ ಮೊದಲ ಬಾರಿಗೆ ಮನುಷ್ಯನು ಮನುಷ್ಯನಂತೆಯೇ ಕಲಿಯಬಲ್ಲ, ಮಾತನಾಡಬಲ್ಲ, ವಿಶ್ಲೇಷಣೆ ನಡೆಸಬಲ್ಲ, ತಾನಾಗಿಯೇ ಹೊಸದೊಂದನ್ನು ಸೃಷ್ಟಿಸಬಲ್ಲ ವ್ಯವಸ್ಥೆಗಳನ್ನು ಕಟ್ಟಿದ್ದಾನೆ ಎಂದು ಅವರು ಬಣ್ಣಿಸಿದ್ದಾರೆ.

‘ನಾವು ಇನ್ನೂ ಎ.ಐ ಯುಗದ ಆರಂಭದಲ್ಲಿ ಇದ್ದೇವೆ. ಎ.ಐ ವ್ಯವಸ್ಥೆಯಿಂದ ಸಿಗಬಹುದಾದ ಅತ್ಯುತ್ತಮ ಕೆಲಸಗಳನ್ನು ಇನ್ನಷ್ಟೇ ಕಾಣಬೇಕಿದೆ’ ಎಂದು ಹೇಳಿದ್ದಾರೆ.

ಹೂಡಿಕೆಗಳು ಈ ಮೂರು ಅಂಶಗಳ ಮೇಲೆ ಗಮನ ಕೇಂದ್ರೀಕರಿಸಲಿವೆ

- ಒಂದು ಗಿಗಾವಾಟ್‌ಗಿಂತ ಹೆಚ್ಚಿನ ಹಾಗೂ ಎ.ಐ ಉದ್ದೇಶಗಳ ಬಳಕೆಗೆ ಸಿದ್ಧವಾದ ದತ್ತಾಂಶ ಕೇಂದ್ರಗಳು
- ಗರಿಷ್ಠ 10 ಗಿಗಾವಾಟ್‌ಗಳವರೆಗೆ ಪರಿಸರ ಪೂರಕ ಮಿಗತೆ ಇಂಧನವನ್ನು ಬಳಕೆ ಮಾಡಿಕೊಳ್ಳುವುದು
- ಎ.ಐ. ಸೌಲಭ್ಯವನ್ನು ವೇಗವಾಗಿ ದೇಶದೆಲ್ಲೆಡೆಗೆ ಒದಗಿಸುವ ಉದ್ದೇಶದಿಂದ ದತ್ತಾಂಶವನ್ನು ಸ್ಥಳೀಯವಾಗಿ ಸಂಗ್ರಹಿಸಿ ಇಡುವ ವ್ಯವಸ್ಥೆಯನ್ನು ಜಿಯೊ ಕಂಪನಿಯ ಜಾಲದ ಜೊತೆ ಬೆಸೆಯುವುದು

ಮುಕೇಶ್ ಅಂಬಾನಿ

ಕೃತಕ ಬುದ್ಧಿಮತ್ತೆ: ರಾಜ್ಯ ಒಪ್ಪಂದ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಭಾರತ ಮಂಟಪ’ದಲ್ಲಿ ನಡೆಯುತ್ತಿರುವ ‘ಎ.ಐ ಇಂಪ್ಯಾಕ್ಟ್ ಶೃಂಗ ಸಭೆ’ಯಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ನವೋದ್ಯಮಗಳ ಸ್ಥಾಪಕರ ಜತೆಗೆ ಕರ್ನಾಟಕದ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಮಾತುಕತೆ ನಡೆಸಿದರು. ಕೃತಕ ಬುದ್ಧಿಮತ್ತೆ ಮತ್ತು ಡೀಪ್ ಟೆಕ್ನಾಲಜಿ ಕ್ಷೇತ್ರಗಳಲ್ಲಿ ಕರ್ನಾಟಕವು ಪ್ರಭಾವಶಾಲಿಯಾಗಿ ಬೆಳೆಯುತ್ತಿದೆ ಎಂದೂ ತಿಳಿಸಿದರು.

‘ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ದಾಪುಗಾಲು ಹಾಕುತ್ತಿರುವ ಕರ್ನಾಟಕವು ಮುಂಚೂಣಿ ಸ್ಥಾನ ಕಾಯ್ದುಕೊಂಡಿದೆ. ಹಾರ್ವೆ ಎಐ ಮತ್ತು ಆಂತ್ರೊಪಿಕ್‌ನಂತಹ ಬೃಹತ್ ಕಂಪನಿಗಳು ರಾಜ್ಯದಲ್ಲಿ ಈಗಾಗಲೇ ನೆಲೆಯೂರಿವೆ. ವಾಲ್ಟ್ ಡಿಸ್ನಿ ಕಂಪನಿಯು ಬೆಂಗಳೂರಿನಲ್ಲಿ ತನ್ನ ‘ಎಐ’ ಜಾಲ ವಿಸ್ತರಿಸುತ್ತಿದೆ. ‘ಎಐ’ ಪ್ರತಿಭೆಗಳಿಗೆ ಬೆಂಗಳೂರು ಜಾಗತಿಕವಾಗಿ ಅಗ್ರಸ್ಥಾನದಲ್ಲಿದೆ. ರಾಜ್ಯ ಸರ್ಕಾರವು ₹1 ಕೋಟಿವರೆಗಿನ ಅನುದಾನದ ಮೂಲಕ ನವೋದ್ಯಮಗಳನ್ನು ಪ್ರೋತ್ಸಾಹಿಸುತ್ತಿದೆ. ‘ಎಐ’ನ ಹೊಣೆಗಾರಿಕೆಯುತ ಬಳಕೆ ಖಚಿತಪಡಿಸಿಕೊಳ್ಳಲು, ಕರ್ನಾಟಕವು ಈ ಕ್ಷೇತ್ರದ ಜಾಗತಿಕ ಮುಖಂಡರು ಮತ್ತು ಸಂಶೋಧಕರ ಜೊತೆಗೆ ನಿಕಟ ಸಂಪರ್ಕದಲ್ಲಿ ಇದೆ’ ಎಂದು ಹೇಳಿದರು.

ಆಸ್ಪತ್ರೆ ಕಾರ್ಯನಿರ್ವಹಣೆಗೆ ಸುಧಾರಿತ ‘ಎಐ’ ಅನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲು ಎಚ್ ಕಂಪನಿ ಮತ್ತು ಬೆಂಗಳೂರಿನ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜ್ ಮತ್ತು ಸೇಂಟ್ ಜಾನ್ಸ್ ಸಂಶೋಧನಾ ಸಂಸ್ಥೆ ನಡುವಣ ಒಪ್ಪಂದಕ್ಕೆ ಸಹಿ ಹಾಕುವುದಕ್ಕೆ ಸಚಿವರು ಸಾಕ್ಷಿಯಾದರು. ಜತೆಗೆ, ಹಲವು ಕಂಪನಿಗಳ ಜತೆಗೆ ಒಪ್ಪಂದಕ್ಕೆ ಸಹಿ ಹಾಕಿದರು.

ಕರ್ನಾಟಕ ಮತ್ತು ಜಾಗತಿಕ ಉದ್ಯಮಗಳ ನಡುವೆ ತಂತ್ರಜ್ಞಾನ ಸಹಯೋಗ, ಹೂಡಿಕೆ ಪಾಲುದಾರಿಕೆ ಮತ್ತು ಆವಿಷ್ಕಾರ ಆಧಾರಿತ ಬೆಳವಣಿಗೆ ಬಲಪಡಿಸುವ ಕುರಿತ ಚರ್ಚೆಗಳಿಗೆ ವೇದಿಕೆ ಕಲ್ಪಿಸಲು ಅಮೆರಿಕ – ಭಾರತ ವಾಣಿಜ್ಯ ಮಂಡಳಿ ಆಯೋಜಿಸಿದ್ದ ದುಂಡುಮೇಜಿನ ಸಭೆಯಲ್ಲಿ ಪ್ರಿಯಾಂಕ್ ಭಾಗವಹಿಸಿದ್ದರು.

ಆಂತ್ರೊಪಿಕ್ ಸಹ ಸಂಸ್ಥಾಪಕ ಡಾರಿಯೊ ಆಮೊಡೆ ಜತೆಗೆ ಪ್ರಿಯಾಂಕ್ ಖರ್ಗೆ

ಎ.ಐ ಜಾತ್ರೆಯಲ್ಲಿ ‘ಜಿ.ಐ’ ಕಾಫಿಯ ಪರಿಮಳ

● ಕೆ.ಎಸ್.ಗಿರೀಶ

ಮಡಿಕೇರಿ: ನವದೆಹಲಿಯಲ್ಲಿ ನಡೆಯುತ್ತಿರುವ ‘ಎ.ಐ ಇಂಪ್ಯಾಕ್ಟ್ ಶೃಂಗ’ದಲ್ಲಿ ಭಾರತೀಯ ಕಾಫಿ ಮಂಡಳಿ ತೆರೆದಿರುವ ಮಳಿಗೆಯು ಗಣ್ಯರ ಗಮನ ಸೆಳೆದಿದೆ.

ಗೂಗಲ್ ಕಂಪನಿಯ ಸಿಇಒ ಸುಂದರ್ ಪಿಚೈ ಈ ಮಳಿಗೆಗೆ ಭೇಟಿ ನೀಡಿ ಕಾಫಿ ಸವಿದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಜಿ.ಐ ಟ್ಯಾಗ್ ಹೊಂದಿರುವ ಕಾಫಿಯನ್ನು ಪಿಚೈ ಅವರು ಕುತೂಹಲದಿಂದ ವೀಕ್ಷಿಸಿ ಕಾಫಿ ಸವಿಯುವ ವಿಡಿಯೊವನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಇದು ಕಾಫಿ ಬೆಳೆಗಾರರಲ್ಲಿ ಕೆಲವು ನಿರೀಕ್ಷೆಗಳನ್ನು ಮೂಡಿಸಿದೆ.

‘ಭಾರತೀಯ ಕಾಫಿಯು ಜಾಗತಿಕವಾಗಿ ಬ್ರ್ಯಾಂಡ್ ಆಗಲು ಇದು ಮೊದಲ ಹೆಜ್ಜೆ, ಈ ಅವಕಾಶವನ್ನು ಕಾಫಿ ಮಂಡಳಿ ಮಾತ್ರವಲ್ಲ, ಕೇಂದ್ರ ವಾಣಿಜ್ಯ ಸಚಿವಾಲಯ ಸಮರ್ಪಕವಾಗಿ ಬಳಸಿಕೊಳ್ಳಬೇಕು’ ಎಂಬ ಒತ್ತಾಯ ಕೇಳಿ ಬಂದಿದೆ.

ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ.ದಿನೇಶ್, ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿ, ‘ಸುಂದರ್ ಪಿಚೈ ಮಾತ್ರವಲ್ಲ, ಸಾಕಷ್ಟು ಜಾಗತಿಕ ಉದ್ಯಮಿಗಳು ಮಳಿಗೆಗೆ ಭೇಟಿ ನೀಡಿ ಪ್ರದರ್ಶನಕ್ಕಿಟ್ಟಿದ್ದ ಭಾರತೀಯ ಜಿಐ ಟ್ಯಾಗ್ ಕಾಫಿಯ ಕುರಿತು ಮಾಹಿತಿ ಪಡೆದರು. ಇದು ಭಾರತೀಯ ಕಾಫಿ ಜಾಗತಿಕ ಮಟ್ಟದಲ್ಲಿ ಬ್ರಾಂಡ್ ಆಗುವ ನಿಟ್ಟಿನಲ್ಲಿ ಸಹಕಾರಿ’ ಎಂದರು.

‘ಈ ಮಳಿಗೆಯಲ್ಲಿ ಕರ್ನಾಟಕದಿಂದ ಜಿ.ಐ ಟ್ಯಾಗ್ ಪಡೆದಿರುವಂತಹ ಚಿಕ್ಕಮಗಳೂರು, ಬಾಬಾಬುಡನ್, ಮಂಜರಾಬಾದ್, ಕೂರ್ಗ್ ಅರೆಬಿಕಾ ಹಾಗೂ ಮಾನ್ಸೂನ್ ಮಲಬಾರ್ ಕಾಫಿ ಸಹ ಇತ್ತು. ಇವುಗಳೂ ಜಾಗತಿಕ ನಾಯಕರ ಗಮನ ಸೆಳೆದವು’ ಎಂದು ಕಾಫಿ ಮಂಡಳಿ ಉಪನಿರ್ದೇಶಕ ಚಂದ್ರಶೇಖರ್ ಹೇಳಿದರು.

ಈ ಕುರಿತು ಪ್ರತಿಕ್ರಿಯಿಸಿದ ಕೂರ್ಗ್ ಪ್ಲಾಂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ನಂದಾ ಬೆಳ್ಳಿಯಪ್ಪ, ‘ಜಾಗತಿಕವಾಗಿ ಭಾರತೀಯ ಕಾಫಿಯನ್ನು ಹೆಚ್ಚು ಪ್ರಚಾರ ಮಾಡಲು ಇದೊಂದು ಸುವರ್ಣ ಅವಕಾಶ’ ಎಂದರು.

ಮುಖ್ಯಾಂಶಗಳು

- ಮಳಿಗೆಯಲ್ಲಿದೆ ತರಹೇವಾರಿ ಭಾರತೀಯ ಕಾಫಿ
- ಕರ್ನಾಟಕದಿಂದ ಜಿ.ಐ ಟ್ಯಾಗ್ ಪಡೆದ ಕಾಫಿಗೆ ಮೆಚ್ಚುಗೆ
- ಜಾಗತಿಕ ಬ್ರ್ಯಾಂಡ್ ಮಾಡಲು ಒತ್ತಾಯ

PROPERTY CORNER

ಕ್ಲಾಸಿಫೈಡ್ಸ್

INDEPENDENT LIVING IN A PRIME LOCATION

30×40, 4 BHK Premium Residence at Vijayanagar 4th Stage, Mysore

Thoughtfully designed for modern families seeking privacy, space, and long-term value.

Configuration:
Stilt + 2 Floors (2BHK Each Floor)
Total Built-Up: 32 Squares
Private Lift (4 - Passenger Capacity)

Key Highlights:
- Neo-Modern Elevation with Premium Finishes
- Teak Wood Main Door
- Engineered Wood Internal Doors
- UPVC Windows with Mosquito Mesh
- Jaquar/Equivalent Plumbing Fittings
- S.S/Aluminium Balcony Railings
- Vitrified Flooring & Granite Staircase
- Ample Water Storage with Sump & OHT

Book Your Site Visit Today
Call: +91 96069 07153

INVEST WHERE THE CITY IS GROWING

Premium Plotted Development Near Mysore Airport

Located on NH-766 Highway Approach, ensuring seamless connectivity to key city hubs.

MUDA & RERA APPROVED

- 500 m from Toll Plaza
- High-Growth Investment Corridor
- Ready-to-Build Residential Plots
- World-Class Infrastructure & Amenities
- Wide Roads | Green Environment Excellent Planned Layout

Available Sizes:
30 × 40 | 30 × 50 | 40 × 60

Avail Exclusive Inaugural Offer for Limited Plots

Enquire Now. Call:
96069 07153 / 63663 84517

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

General

ಸೈಟ್ ತೆಗೆದುಕೊಳ್ಳುವಂತವರು ಸೈಟ್ ಮಾರಾಟಗಾರರು ಮನೆ ತೆಗೆದುಕೊಳ್ಳುವಂತವರು ಮನೆ ಮಾರಾಟಗಾರರು ಒಡವರಿಗೆ ಮನೆ ಕಟ್ಟಿ ಕೊಡಲು ಸಹಾಯ ಮಾಡಲಾಗುವುದು ಮತ್ತು 10 ಲಕ್ಷ, 25 ಲಕ್ಷ, 50 ಲಕ್ಷ ಚೀಟಿ ಹಾಕುವಂತವರು ಸಂಪರ್ಕಿಸಿ. ಬೆಂಗಳೂರು 9036957018.

ಉದ್ಯೋಗಾವಕಾಶ

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಆದ್ಯತೆ. 19,000-25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964322833, 9742133993

JOB
To Place your Classified Ads Contact:
9886213331

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪ್ರವಾಸ

Travel

ಹೆಸರಾಂತ ಏಷ್ಯನ್ ಟ್ರಾವೆಲ್ ಏಜೆನ್ಸಿ ವತಿಯಿಂದ 23.03.2026 ಕಾಶಿ, ಅಯೋಧ್ಯ, ಬುದ್ಧಗಯಾ. 20.04.2026 ನೇಪಾಳ ಮುಕ್ತಿನಾಥ, ಪೋಖ್ರಾ 19.04.2026, 03.05.2026 ಚಾರ್‌ಧಾಮ್ ಪ್ರವಾಸ. 05.04.2026 ಕಾಶ್ಮೀರ್ ವೈಷ್ಣೋದೇವಿ ಕುಲುಮನಾಲಿ. 05.07.2026 ಅಮರನಾಥ್ ಹಿಮಲಿಂಗ ದರ್ಶನ್ ಸಂಪರ್ಕಿಸಿ. 8431888138 8317446683 9686708171

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,819
ಇಂದಿನ ಅಂತ್ಯ:	25,454
ದಿನದ ಕನಿಷ್ಠ:	25,388
↓	365

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹590
12 ಕ್ಕೆ	₹85
ಮೈಸೂರು: 100 ಕ್ಕೆ	₹592

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹209.50
ಆರ್‌ಎಸ್‌ಎಸ್-5	₹204
ಗುಡ್ ಲಾಟ್	₹192

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹385-769
ದ್ವಿತಳಿ (ಬಿ.ವಿ)	₹458-966

ಮುದ್ರೆಮನೆ ಕಾಫಿ

ಎಪಿ	₹23000
ಎಸಿ	₹12880
ಆರ್‌ಪಿ	₹18350
ಆರ್‌ಸಿ	₹10000

ಸೆನ್ಸೆಕ್ಸ್ 1,236 ಅಂಶ ಕುಸಿತ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಸೇರಿದಂತೆ ವಿವಿಧ ವಲಯಗಳಿಗೆ ಸೇರಿದ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಶೇ 1.5ರಷ್ಟು ಕುಸಿತ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,236 ಅಂಶ (ಶೇ 1.48ರಷ್ಟು) ಇಳಿಕೆಯಾಗಿ, 82,498ಕ್ಕೆ ವಹಿವಾಟು ಅಂತ್ಯಗೊಂಡಿವೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 365 ಅಂಶ (ಶೇ 1.41) ಕಡಿಮೆಯಾಗಿ, 25,454ಕ್ಕೆ ಕೊನೆಗೊಂಡಿದೆ. ಷೇರುಪೇಟೆ ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆ ದಾರರ ಸಂಪತ್ತು ಒಂದೇ ದಿನ ₹6.79 ಲಕ್ಷ ಕೋಟಿಯಷ್ಟು ಕರಗಿದೆ.

‘ಅಮೆರಿಕ ಮತ್ತು ಇರಾನ್ ನಡುವೆ ಹೆಚ್ಚುತ್ತಿರುವ ಬಿಕ್ಕಟ್ಟು ಜಾಗತಿಕವಾಗಿ ಹೂಡಿಕೆದಾರರ ಮೇಲೆ ಪರಿಣಾಮ ಬೀರಿದೆ. ಇದರಿಂದ ದೇಶದ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಸೂಚ್ಯಂಕಗಳು ಇಳಿಕೆ ಕಂಡಿವೆ’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕಚ್ಚಾ ತೈಲದ ದರ ಹೆಚ್ಚಳ, ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತ ಮಾಡುವುದರ ಸುತ್ತಲಿನ ಅನಿಶ್ಚಿತತೆ ಮತ್ತು ರೂಪಾಯಿ ಮೌಲ್ಯ ಇಳಿಕೆಯು ದೇಶದ ಷೇರುಪೇಟೆ ಸೂಚ್ಯಂಕಗಳ ಇಳಿಕೆಗೆ ಕಾರಣವಾದವು ಎಂದು ತಿಳಿಸಿದ್ದಾರೆ.

ಏಷ್ಯಾದ ವಿವಿಧ ಮಾರುಕಟ್ಟೆಗಳಲ್ಲಿ ಹೊಸ ವರ್ಷದ (ಲೂನಾರ್ ನ್ಯೂ ಇಯರ್) ಪ್ರಯುಕ್ತ ಬುಧವಾರ ರಜೆ ಇತ್ತು. ಇದರಿಂದ ವಿದೇಶಿ ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ವಹಿವಾಟಿನಲ್ಲಿ ಭಾಗವಹಿಸಿಲ್ಲ. ಇದು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾದವು ಎಂದು ಹೇಳಿದ್ದಾರೆ.

ಬೆಳ್ಳಿ ₹18 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,950 ಹೆಚ್ಚಳವಾಗಿ, ₹1,58,650ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹18 ಸಾವಿರ ಏರಿಕೆಯಾಗಿ, ₹2.64 ಲಕ್ಷಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಡಿಕೆ ಧಾರಣೆ

ಕುಮಟಾ		ಸಾಗರ			
ಚಾಲಿ	42669-51799	ಬಿಳಿಗೋಟು	20527-35399	ಗೊರಬಲು	19009-42069
ಚಿಪ್ಪು	16666-42919	ಚಾಲಿ	22129-45332	ರಾಶಿ	45069-56559
ಕೋಕ	12021-40919	ಕೋಕ	14199-35399	ಸರಕು	52859-97440
ಹೊಸಚಾಲಿ	30700-49699	ಕೆಂಪುಗೋಟು	17229-41469	**ಶಿರಸಿ**	
ಪುತ್ತೂರು		ರಾಶಿ	40599-56199	ಬೆಟ್ಟೆ	41699-53561
ಕೋಕ	20000-37000	ಸಿಪ್ಪೆಗೋಟು	10202-24600	ಬಿಳಿಗೋಟು	29199-41800
ಹೊಸತು	26000-48500	**ಶಿವಮೊಗ್ಗ**		ಚಾಲಿ	41099-49712
				ಕೆಂಪುಗೋಟು	26899-38899
		ಬೆಟ್ಟೆ	54519-66369	ರಾಶಿ	53099-56408

ಎಲ್‌ಐಸಿ ಎಂಎಫ್ ಟೆಕ್ನಾಲಜಿ ಫಂಡ್ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಅಂಗಸಂಸ್ಥೆ ಎಲ್‌ಐಸಿ ಮ್ಯೂಚುವಲ್ ಫಂಡ್, ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಹೂಡಿಕೆಗೆ ಅವಕಾಶ ಒದಗಿಸಲು ವಿಷಯಾಧಾರಿತ ಈಕ್ವಿಟಿ ಯೋಜನೆ ‘ಎಲ್‌ಐಸಿ ಎಂಎಫ್ ಟೆಕ್ನಾಲಜಿ ಫಂಡ್’ ಬಿಡುಗಡೆ ಮಾಡಿದೆ.

ಈ ಎನ್‌ಎಫ್‌ಒ (ನ್ಯೂ ಫಂಡ್ ಆಫರ್) ಫೆಬ್ರುವರಿ 20ರಿಂದ ಆರಂಭವಾಗಿ ಮಾರ್ಚ್ 6ರಂದು ಕೊನೆಗೊಳ್ಳಲಿದೆ. ಈ ಯೋಜನೆಯು ಮಾರ್ಚ್ 19ರಂದು ಮತ್ತೆ ಹೂಡಿಕೆಗೆ ಲಭ್ಯವಿರುತ್ತದೆ ಎಂದು ಎಲ್‌ಐಸಿ ಮ್ಯೂಚುವಲ್ ಫಂಡ್ ಪ್ರಕಟಣೆಯಲ್ಲಿ ತಿಳಿಸಿದೆ.

ಕೃತಕ ಬುದ್ಧಿಮತ್ತೆ ಕಂಪನಿಗಳು, ದತ್ತಾಂಶ ಕೇಂದ್ರಗಳ ನಿರ್ವಹಣಾ ಕಂಪನಿಗಳು, ಇ-ವಾಣಿಜ್ಯ ಕಂಪನಿಗಳು, ಸೆಮಿಕಂಡಕ್ಟರ್ ಕಂಪನಿಗಳು, ಇಂಟರ್ನೆಟ್ ಆಧಾರಿತ ಉದ್ದಿಮೆಗಳು , ಉದಯೋನ್ಮುಖ ತಂತ್ರಜ್ಞಾನ ಕಂಪನಿಗಳಲ್ಲಿ ಹಾಗೂ ತಂತ್ರಜ್ಞಾನ ಆಧಾರಿತ ವಲಯಗಳಲ್ಲಿ ಹೂಡಿಕೆ ಮಾಡುವ ಫಂಡ್ ಇದಾಗಿದೆ.

‘ಗಾಜಾ ಪರಿಹಾರ: 7 ಬಿಲಿಯನ್ ಡಾಲರ್ ನೆರವು’

ವಾಷಿಂಗ್ಟನ್ (ಎಪಿ): ಯುದ್ಧಪೀಡಿತ ಗಾಜಾದಲ್ಲಿನ ಪರಿಹಾರ ಕಾರ್ಯಾಚರಣೆಗಳಿಗಾಗಿ ಶಾಂತಿ ಮಂಡಳಿಯ ಒಂಬತ್ತು ಸದಸ್ಯ ರಾಷ್ಟ್ರಗಳು 7 ಬಿಲಿಯನ್ ಡಾಲರ್ (₹63 ಸಾವಿರ ಕೋಟಿ) ನೀಡಲು ಒಪ್ಪಿಕೊಂಡಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಹೇಳಿದ್ದಾರೆ.

ಗಾಜಾ ಪುನರ್ ನಿರ್ಮಾಣಕ್ಕಾಗಿ ರಚಿಸಿರುವ ಶಾಂತಿ ಮಂಡಳಿಯ ಉದ್ಘಾಟನಾ ಸಭೆಯಲ್ಲಿ ಟ್ರಂಪ್ ಅವರು ಈ ಘೋಷಣೆ ಮಾಡಿದ್ದಾರೆ.

‘ಕಜಕಸ್ತಾನ, ಅಜರ್‌ಬೈಜಾನ್, ಯುಎಇ, ಮೊರಾಕೊ, ಬಹರೇನ್, ಕತಾರ್, ಸೌದಿ ಅರೇಬಿಯಾ, ಉಜ್ಬೇಕಿಸ್ತಾನ ಹಾಗೂ ಕುವೈತ್ ರಾಷ್ಟ್ರಗಳು ಈ ಅನುದಾನ ನೀಡಲು ಒಪ್ಪಿಕೊಂಡಿವೆ. ಪ್ರತಿಯೊಂದು ಡಾಲರ್ ಕೂಡ ಸ್ಥಿರತೆ ಹಾಗೂ ಹೊಸ ಪ್ರಾಂತ್ಯದ ಸ್ಥಾಪನೆಯ ಭರವಸೆಯ ಮೇಲೆ ಮಾಡುತ್ತಿರುವ ಹೂಡಿಕೆಯಾಗಿದ್ದು, ದಾನಿಗಳಿಗೆ ಧನ್ಯವಾದ ತಿಳಿಸುತ್ತೇನೆ’ ಎಂದೂ ಟ್ರಂಪ್ ಹೇಳಿದ್ದಾರೆ.

ಅಮೆರಿಕ ಕೂಡ ಮಂಡಳಿಗೆ 10 ಬಿಲಿಯನ್ ಡಾಲರ್ (₹91 ಸಾವಿರ ಕೋಟಿ) ನೀಡುವ ಬದ್ಧತೆ ಘೋಷಿಸಿದೆ ಎಂದೂ ಟ್ರಂಪ್ ಹೇಳಿದ್ದಾರೆ. ಆದರೆ, ಯಾವ ಉದ್ದೇಶಕ್ಕೆ ಆ ಹಣವನ್ನು ಬಳಕೆ ಮಾಡಲಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟನೆ ನೀಡಿಲ್ಲ.

ಭಾರತಕ್ಕೆ ಸುಂಕ ಹೇರಲು ನೆಪ ಹುಡುಕುತ್ತಿರುವ ಟ್ರಂಪ್: ಆರೋಪ

ನ್ಯೂಯಾರ್ಕ್ (ಪಿಟಿಐ): ‘ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತದ ವಿರುದ್ಧ ‘ಪ್ರತೀಕಾರದ ಸುಂಕ’ ವಿಧಿಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೆಪಗಳನ್ನು ಹುಡುಕುತ್ತಿದ್ದಾರೆ’ ಎಂದು ಅಲ್ಲಿನ ಸಂಸದ ಬ್ರಾಡ್ ಶೆರ್ಮನ್ ಹೇಳಿದ್ದಾರೆ.

ಶೆರ್ಮನ್ ಅವರು ವಿದೇಶಾಂಗ ವ್ಯವಹಾರಗಳ ಸದನ ಸಮಿತಿ ಹಾಗೂ ಹಣಕಾಸು ಸಮಿತಿಯ ಸದಸ್ಯರೂ ಆಗಿದ್ದು, ‘ಟ್ರಂಪ್ ಅವರು ಭಾರತದ ವಿರುದ್ಧ ಅನುಸರಿಸುತ್ತಿರುವ ‘ಕೆಡುಕಿನ ಸುಂಕ ನೀತಿ’ಯನ್ನು ತಕ್ಷಣವೇ ವಾಪಸ್ ಪಡೆಯಬೇಕು ಎಂದು ಸಾಮಾಜಿಕ ಜಾಲತಾಣದಲ್ಲಿ ಒತ್ತಾಯಿಸಿದ್ದಾರೆ.

ಒಟ್ಟು ಬೇಡಿಕೆಯಲ್ಲಿ ಶೇ 90ರಷ್ಟು ಕಚ್ಚಾ ತೈಲವನ್ನು ಹಂಗೇರಿ, ರಷ್ಯಾದಿಂದ ಖರೀದಿಸುತ್ತಿದೆ. ಚೀನಾ ಕೂಡ ರಷ್ಯಾದ ಅತಿದೊಡ್ಡ ತೈಲ ಖರೀದಿದಾರ ದೇಶವಾಗಿದೆ. ಭಾರತ ರಷ್ಯಾದಿಂದ ಖರೀದಿಸುತ್ತಿರುವುದು ಶೇ 21ರಷ್ಟು ತೈಲ ಮಾತ್ರ. ಆದರೆ, ಹೆಚ್ಚಿನ ನಿರ್ಬಂಧವನ್ನು ಅಮೆರಿಕ ಭಾರತದ ಮೇಲೆ ಹೇರಿದೆ ಎಂದು ಹೇಳಿದ್ದಾರೆ.

ಭಾರತ ಮತ್ತು ಅಮೆರಿಕ ನಡುವೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಅಂತಿಮ ಚೌಕಟ್ಟು ರೂಪುಗೊಂಡ ಬೆನ್ನಲ್ಲೇ, ಟ್ರಂಪ್ ಅವರು ಭಾರತದ ಮೇಲೆ ಹೇರಿದ್ದ ಹೆಚ್ಚುವರಿ ಸುಂಕವನ್ನು ಶೇ 25ರಷ್ಟು ಕಡಿತ ಮಾಡಿದ್ದರು. ರಷ್ಯಾದಿಂದ ತೈಲ ಖರೀದಿಸಬಾರದು ಎಂದು ಒತ್ತಡ ಹೇರಿ, ದಂಡದ ರೂಪದಲ್ಲಿ ಈ ಸುಂಕವನ್ನು ಹೇರಲಾಗಿತ್ತು.

ಉಭಯ ದೇಶಗಳ ನಡುವಿನ ವ್ಯಾಪಾರ ಒಪ್ಪಂದ ಅಂತಿಮಗೊಂಡ ನಂತರ ಸುಂಕ ದರವು ಈಗಿನ ಶೇ 25ರಿಂದ ಶೇ 18ಕ್ಕೆ ತಗ್ಗಲಿದೆ.

ಬ್ರಿಟನ್‌ನ ಮಾಜಿ ರಾಜಕುಮಾರ ಆ್ಯಂಡ್ರ್ಯೂ ಬಂಧನ

ಆ್ಯಂಡ್ರ್ಯೂ

ಲಂಡನ್ (ಎಪಿ): ಸರ್ಕಾರದ ಹುದ್ದೆಯಲ್ಲಿದ್ದಾಗ ಅನುಚಿತವಾಗಿ ವರ್ತಿಸಿರುವ ಶಂಕೆಯ ಮೇರೆಗೆ ಬ್ರಿಟನ್‌ನ ಮಾಜಿ ರಾಜಕುಮಾರ ಆ್ಯಂಡ್ರ್ಯೂ ಮೌಂಟ್ ಬ್ಯಾಟನ್-ವಿಂಡ್ಸರ್ ಅವರನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್ ಜತೆಗೆ ಆ್ಯಂಡ್ರ್ಯೂಗೆ ಇದ್ದ ನಂಟಿನ ಕುರಿತು ಅಮೆರಿಕದ ನ್ಯಾಯಾಂಗ ಇಲಾಖೆ ಬಿಡುಗಡೆ ಮಾಡಿದ ಕೆಲವು ದಾಖಲೆಗಳು ಚರ್ಚೆಗೀಡಾಗಿರುವ ನಡುವೆಯೇ ಈ ಬೆಳವಣಿಗೆ ನಡೆದಿದೆ.

ಪ್ರಿನ್ಸ್ ಆ್ಯಂಡ್ರ್ಯೂ ಎಂದೇ ಪ್ರಖ್ಯಾತರಾಗಿದ್ದ ಮಾಜಿ ರಾಜಕುಮಾರನ ವಿರುದ್ಧ ಕಳೆದ ಕೆಲವು ವರ್ಷಗಳಿಂದ ಸರಣಿ ಆರೋಪಗಳು ಕೇಳಿಬಂದಿವೆ. ಈ ಪೈಕಿ ಎಪ್‌ಸ್ಟೈನ್ ಜತೆಗಿನ ನಂಟಿನ ವಿಚಾರ ತೀವ್ರ ವಿವಾದಕ್ಕೀಡಾಗಿದೆ. ಆದರೆ, ಆರೋಪಗಳನ್ನು ಆ್ಯಂಡ್ರ್ಯೂ ತಿರಸ್ಕರಿಸಿದ್ದಾರೆ.

ಇದೀಗ ಸರ್ಕಾರಿ ಹುದ್ದೆಯಲ್ಲಿದ್ದಾಗ ಅನುಚಿತ ವರ್ತನೆಯ ಆರೋಪದ ಜತೆಗೆ 2010ರಲ್ಲಿ ಸರ್ಕಾರದ ಕೆಲವು ಗೋಪ್ಯ ಮಾಹಿತಿಗಳನ್ನು ಎಪ್‌ಸ್ಟೈನ್ ಜತೆಗೆ ಆ್ಯಂಡ್ರ್ಯೂ ಹಂಚಿಕೊಂಡಿದ್ದಾರೆ ಎಂಬ ಆರೋಪವೂ ಕೇಳಿಬಂದಿದ್ದು, ಈ ಕಾರಣಕ್ಕಾಗಿ ಪೊಲೀಸರು ಅವರನ್ನು ಬಂಧಿಸಿದ್ದಾರೆ.

ಲಂಕಾ ವಿರುದ್ಧವೂ ಗೆದ್ದ ಜಿಂಬಾಬ್ವೆ

ಬ್ರಯಾನ್ ಬೆನೆಟ್, ಸಿಕಂದರ್ ಮಿಂಚು ಗೆಲುವಿನೊಡನೆ ಬಿ ಗುಂಪಿನಲ್ಲಿ ಅಗ್ರಸ್ಥಾನ

ಕೊಲಂಬೊ (ಎಎಫ್‌ಪಿ): ಹಾಲಿ ಟಿ20 ವಿಶ್ವಕಪ್‌ನ 'ಅಚ್ಚರಿಯ ಪ್ಯಾಕೇಜ್' ಎನಿಸಿರುವ ಜಿಂಬಾಬ್ವೆ ತಂಡ ಆರು ವಿಕೆಟ್‌ಗಳಿಂದ ಆತಿಥೇಯ ಶ್ರೀಲಂಕಾ ತಂಡಕ್ಕೂ ಆಘಾತ ನೀಡಿ, ಅಜೇಯ ಸಾಧನೆಯೊಡನೆ ಬಿ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ಆ ಮೂಲಕ ಆತ್ಮವಿಶ್ವಾಸದೊಡನೆ ಸೂಪರ್ ಎಂಟರ ಹಂತಕ್ಕೆ ಸಜ್ಜಾಯಿತು.

ರಣಸಿಂಘೆ ಪ್ರೇಮದಾಸ ಕ್ರೀಡಾಂಗಣದಲ್ಲಿ ಗೆಲುವಿಗೆ 179 ರನ್‌ಗಳ ಗುರಿಯನ್ನು ಎದುರಿಸಿದ ಜಿಂಬಾಬ್ವೆ ಮೂರು ಎಸೆತಗಳು ಇರುವಂತೆ 4 ವಿಕೆಟ್‌ಗೆ 182 ರನ್ ಹೊಡೆಯಿತು. ಬ್ರಯಾನ್ ಬೆನೆಟ್ (ಔಟಾಗದೇ 63, 48 ಎಸೆತ, 4x8) ಸಮಯೋಚಿತ ಅರ್ಧ ಶತಕ ಬಾರಿಸಿ ಇನಿಂಗ್ಸ್‌ಗೆ ಲಂಗರು ಹಾಕಿದರು. ನಾಯಕ ಸಿಕಂದರ್ ರಝಾ (45 ರನ್, 26 ಎಸೆತ) ಬೀಸಾಟವಾಡಿ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಜಿಂಬಾಬ್ವೆ ತಂಡವು ಹೋದ ವಾರ ಮಾಜಿ ಚಾಂಪಿಯನ್ ಆಸ್ಟ್ರೇಲಿಯಾಕ್ಕೆ ಆಘಾತ ನೀಡಿತ್ತು. ಒಮಾನ್ ವಿರುದ್ಧ ಗೆದ್ದ ಆಫ್ರಿಕಾದ ತಂಡವು ನಂತರ ಐರ್ಲೆಂಡ್ ವಿರುದ್ಧದ ಪಂದ್ಯ ಮಂಗಳವಾರ ಮಳೆಯಿಂದ ಕೊಚ್ಚಿಹೋದ ಕಾರಣ ಒಂದು ಪಾಯಿಂಟ್ ಪಡೆದಿತ್ತು.

ಒಂದು ಹಂತದಲ್ಲಿ ಜಿಂಬಾಬ್ವೆ 36 ಎಸೆತಗಳಲ್ಲಿ 65 ರನ್ (ಓವರಿಗೆ ಸರಾಸರಿ 11ರಂತೆ) ಗಳಿಸಬೇಕಾದ ಕಠಿಣ ಸನ್ನಿವೇಶ ಎದುರಿಸಿತ್ತು. ಈ ಹಂತದಲ್ಲಿ ಸಿಕಂದರ್ ಆಕ್ರಮಣಕಾರಿ ಆಟದೊಡನೆ ತಂಡದ ಚೇಸ್‌ಗೆ ಜೀವತುಂಬಿದರು. ಲೆಗ್ ಸ್ಪಿನ್ನರ್ ದುಶಾನ್ ಹೇಮಂತ ಅವರ ಒಂದೇ ಓವರಿನಲ್ಲಿ ಅವರು ಎರಡು ಸಿಕ್ಸರ್ ಸೇರಿದಂತೆ 20 ರನ್ ಬಾಚಿದ್ದು, ಪಂದ್ಯಕ್ಕೆ ತಿರುವು ನೀಡಿತು. ಇವರಿಬ್ಬರು ಮೂರನೇ ವಿಕೆಟ್‌ಗೆ 40 ಎಸೆತಗಳಲ್ಲಿ ವೇಗವಾಗಿ 69 ರನ್ ಸೇರಿಸಿದರು.

ಕೊನೆಯ ಓವರಿನಲ್ಲಿ ಎಂಟು ರನ್‌ಗಳ ಅಗತ್ಯವಿತ್ತು. ಟೋನಿ ಮುನ್ಯೊಂಗ ಅವರು ಮಹೀಶ ತೀಕ್ಷಣ ಅವರ ಬೌಲಿಂಗ್‌ನಲ್ಲಿ ಮಿಡ್ ವಿಕೆಟ್‌ಗೆ ಸಿಕ್ಸರ್ ಎತ್ತಿ ಒತ್ತಡ ನಿವಾರಿಸಿದರು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ಇನಿಂಗ್ಸ್‌ಗೆ ಪಥುಮ್ ನಿಸಾಂಕ ಅರ್ಧ ಶತಕದೊಡನೆ ಮತ್ತೊಮ್ಮೆ ಆಧಾರವಾದರು. ಸೋಮವಾರ ಆಸ್ಟ್ರೇಲಿಯಾ ವಿರುದ್ಧ (ಟೂರ್ನಿಯ ಮೊದಲ) ಶತಕ ಬಾರಿಸಿದ್ದ ನಿಸ್ಸಾಂಕ ಮತ್ತೊಮ್ಮೆ ಉಪಯುಕ್ತ ಆಟವಾಡಿ 47 ಎಸೆತಗಳಲ್ಲಿ 62 ರನ್ ಗಳಿಸಿದರು. ಇದು ಟಿ20 ವಿಶ್ವಕಪ್‌ಗಳಲ್ಲಿ ಅವರ ಏಳನೇ ಅರ್ಧ ಶತಕ. ವಿಶ್ವಕಪ್‌ನಲ್ಲಿ ಮಹೇಲ ಜಯವರ್ಧನ ಅವರ ಗರಿಷ್ಠ ಅರ್ಧಶತಕ-ಗಳ ದಾಖಲೆ ಸರಿಗಟ್ಟಿದರು.

ಎಎಫ್‌ಪಿ ಚಿತ್ರ

ಪ್ರತಿಭಾನ್ವಿತ ಬ್ಯಾಟರ್ ಪವನ್ ರತ್ನಾಯಕೆ ಕೊನೆಗಳಿಗೆಯಲ್ಲಿ ಮಿಂಚಿನ ಆಟವಾಡಿ 25 ಎಸೆತಗಳಲ್ಲಿ 44 ರನ್ ಸಿಡಿಸಿದರು. ಅದರಿಂದಾಗಿ ತಂಡವು 7 ವಿಕೆಟ್‌ಗೆ 178 ರನ್‌ಗಳ ಹೋರಾಟದ ಮೊತ್ತ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 7 ವಿಕೆಟ್‌ಗೆ 178 (ಪಥುಮ್ ನಿಸಾಂಕ 62, ಕುಸಲ್ ಪೆರೇರಾ 22, ಪವನ್ ರತ್ನಾಯಕೆ 44; ಬ್ಲೆಸಿಂಗ್ ಮುಝರಾಬಾನಿ 38ಕ್ಕೆ2, ಬ್ರಾಡ್ ಇವಾನ್ಸ್ 35ಕ್ಕೆ2); ಜಿಂಬಾಬ್ವೆ: 19.3 ಓವರುಗಳಲ್ಲಿ 4 ವಿಕೆಟ್‌ಗೆ 182 (ಬ್ರಯಾನ್ ಬೆನೆಟ್ ಔಟಾಗದೇ 63, ತಡಿವನಶೆ ಮರುಮಣಿ 34, ರಿಯಾನ್ ಬರ್ಲ್ 23, ಸಿಕಂದರ್ ರಝಾ 45; ದುಶನ್ ಹೇಮಂತ 36ಕ್ಕೆ2).
ಪಂದ್ಯದ ಆಟಗಾರ: ಸಿಕಂದರ್ ರಝಾ.

ಇಂದಿನ ಪಂದ್ಯ

ಆಸ್ಟ್ರೇಲಿಯಾ V/s ಒಮಾನ್
ತಾಣ: ಪಲ್ಲೆಕೆಲೆ, ಆರಂಭ: ರಾತ್ರಿ 7
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್

ಇಟಲಿಗೆ 42 ರನ್ ಸೋಲು • ಹೋಪ್ ಪಡೆ ಅಜೇಯ
ವಿಂಡೀಸ್‌ಗೆ ನಿರೀಕ್ಷಿತ ಜಯ

ಕೋಲ್ಕತ್ತ (ಪಿಟಿಐ): ನಾಯಕ ಶಾಯ್ ಹೋಪ್ ಅವರ ಸತತ ಎರಡನೇ ಅರ್ಧ ಶತಕ ಮತ್ತು ಬೌಲರ್‌ಗಳ ಶಿಸ್ತುಬದ್ಧ ದಾಳಿಯ ಪ್ರದರ್ಶನದಿಂದ ವೆಸ್ಟ್ ಇಂಡೀಸ್ ತಂಡ ಟಿ20 ವಿಶ್ವಕಪ್ ಪಂದ್ಯದಲ್ಲಿ ಗುರುವಾರ ಇಟಲಿ ತಂಡದ ಮೇಲೆ 42 ರನ್‌ಗಳ ಸುಲಭ ಗೆಲುವು ಸಾಧಿಸಿತು. ಮಾತ್ರವಲ್ಲ, ಲೀಗ್‌ನಲ್ಲಿ ಅಜೇಯವಾಯಿತು.

ಸಿ ಗುಂಪಿನ ಈ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಬ್ಯಾಟಿಂಗ್ ವಿಭಾಗದಲ್ಲಿ ಅಮೋಘ ಪ್ರದರ್ಶನ ನೀಡಲಿಲ್ಲ. ಆದರೆ ಕೆರೀಬಿಯನ್ನರ ವೇಗ ಮತ್ತು ಸ್ಪಿನ್ ದಾಳಿ ಯಶಸ್ಸು ಕಂಡಿತು. ಆಡಿದ ನಾಲ್ಕೂ ಪಂದ್ಯಗಳನ್ನು ಗೆದ್ದ ವೆಸ್ಟ್ ಇಂಡೀಸ್ ಸೂಪರ್ ಎಂಟರ ಹಂತಕ್ಕೆ ಆತ್ಮವಿಶ್ವಾಸದಿಂದ ತಯಾರಿ ನಡೆಸಿತು.

'ಪಂದ್ಯದ ಆಟಗಾರ'ನಾದ ಹೋಪ್ 46 ಎಸೆತಗಳಲ್ಲಿ 75 ರನ್ ಹೊಡೆದು ವೆಸ್ಟ್ ಇಂಡೀಸ್ ತಂಡ 20 ಓವರುಗಳಲ್ಲಿ 6 ವಿಕೆಟ್‌ಗೆ 165 ರನ್ ಗಳಿಸಲು ನೆರವಾದರು. ಉತ್ತರವಾಗಿ ಇಟಲಿ 18 ಓವರುಗಳಲ್ಲಿ 123 ರನ್‌ಗಳಿಗೆ ಹೋರಾಟ ಮುಗಿಸಿತು. ಮಧ್ಯಮ ವೇಗಿಗಳಾದ ಮ್ಯಾಥ್ಯೂ ಫೋರ್ಡ್ (19ಕ್ಕೆ3), ಶಮರ್ ಜೋಸೆಫ್ (30ಕ್ಕೆ4) ಮತ್ತು ಎಡಗೈ ಸ್ಪಿನ್ನರ್ ಗುಡಕೇಶ್ ಮೋತಿ (24ಕ್ಕೆ2) ಅವರು ಎದುರಾಳಿ ತಂಡದ ಪತನಕ್ಕೆ ಕಾರಣರಾದರು.

ಹೋಪ್ ಸರಾಗವಾಗಿ ಆಡಿ ಆರು ಬೌಂಡರಿ, ನಾಲ್ಕು ಸಿಕ್ಸರ್ ಬಾರಿಸಿದರು. ಇಟಲಿಯ ಅನುಭವಿ ಸ್ಪಿನ್ನರ್‌ಗಳಾದ ಬೆನ್ ಮನೆಂಟಿ (37ಕ್ಕೆ2) ಮತ್ತು ಕ್ರಿಶನ್ ಕಲುಗಮಗೆ (25ಕ್ಕೆ2) ಅವರು ವಿಂಡೀಸ್ ರನ್‌ವೇಗಕ್ಕೆ ಸ್ವಲ್ಪಮಟ್ಟಿಗೆ ಕಡಿವಾಣ ಹಾಕಿದರು.

ಚೆಂಡನ್ನು ಭರ್ಜರಿಯಾಗಿ ಹೊಡೆದಟ್ಟಿದ ವೆಸ್ಟ್ ಇಂಡೀಸ್ ನಾಯಕ ಶಾಯ್ ಹೋಪ್ ಪಿಟಿಐ ಚಿತ್ರ

ಇಟಲಿ ಒಂದು ಗೆಲುವಿನೊಡನೆ (ನೇಪಾಳ ವಿರುದ್ಧ) ತನ್ನ ಅಭಿಯಾನ ಮುಗಿಸಿತು.

ಸ್ಕೋರುಗಳು: ವೆಸ್ಟ್ ಇಂಡೀಸ್: 20 ಓವರುಗಳಲ್ಲಿ 6ಕ್ಕೆ 165 (ಶಾಯ್ ಹೋಪ್ 75, ರೋಸ್ಟನ್ ಚೇಸ್ 24, ಶೆರ್ಫೇನ್ ರುದರ್‌ಫೋರ್ಡ್ ಔಟಾಗದೇ 24; ಬೆನ್ ಮನೆಂಟಿ 27ಕ್ಕೆ2, ಕ್ರಿಶನ್ ಕಲುಗಮಗೆ 25ಕ್ಕೆ2); ಇಟಲಿ 18 ಓವರುಗಳಲ್ಲಿ 123 (ಜೆ.ಜೆ.ಸ್ಮಟ್ಸ್ 24, ಬೆನ್ ಮನೆಂಟಿ 26, ಮ್ಯಾಥ್ಯೂ ಫೋರ್ಡ್ 19ಕ್ಕೆ3, ಗುಡಕೇಶ ಮೋತಿ 24ಕ್ಕೆ2, ಶಮರ್ ಜೋಸೆಫ್ 30ಕ್ಕೆ4).
ಪಂದ್ಯದ ಆಟಗಾರ: ಶಾಯ್ ಹೋಪ್.

ಜದ್ರಾನ್ ಮಿಂಚು; ಅಫ್ಗನ್ ತಂಡಕ್ಕೆ ಜಯ

ಚೆನ್ನೈ(ಪಿಟಿಐ): ಆರಂಭ ಆಟಗಾರ ಇಬ್ರಾಹಿಂ ಜದ್ರಾನ್ ಕೇವಲ ಐದು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು. ಬಳಿಕ, ಸ್ಪಿನ್ನರ್ ಮೊಹಮ್ಮದ್ ನಬಿ (7ಕ್ಕೆ4) ಕೈಚಳಕ ಮೆರೆದರು. ಇವರಿಬ್ಬರ ಅಮೋಘ ಆಟದ ಬಲದಿಂದ ಅಫ್ಗಾನಿಸ್ತಾನ ತಂಡವು 82 ರನ್‌ಗಳಿಂದ ಕೆನಡಾ ತಂಡವನ್ನು ಮಣಿಸಿತು.

ಎಂ.ಎ. ಚಿದಂಬರಂ ಕ್ರೀಡಾಂಗಣ ದಲ್ಲಿ ಗುರುವಾರ ನಡೆದ ಟಿ20 ವಿಶ್ವಕಪ್ ಡಿ ಗುಂಪಿನ ಪಂದ್ಯದಲ್ಲಿ ಇಬ್ರಾಹಿಂ (ಔಟಾಗದೇ 95, 56ಎ, 4x7, 6x5) ಅವರ ಆಟದ ಬಲದಿಂದ ಅಫ್ಗಾನಿಸ್ತಾನ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 200 ರನ್ ಗಳಿಸಿತು. ಕಠಿಣ ಗುರಿ ಬೆನ್ನಟ್ಟಿದ ಕೆನಡಾ ತಂಡವು ನಬಿ ಹಾಗೂ ನಾಯಕ ರಶೀದ್ ಖಾನ್ (19ಕ್ಕೆ2) ಬೌಲಿಂಗ್ ಎದುರು 8 ವಿಕೆಟ್‌ಗೆ 118 ರನ್ ಗಳಿಸಿ ಓವರ್ ಪೂರೈಸಿತು.

ಮಧ್ಯಮ ಕ್ರಮಾಂಕದ ಆಟಗಾರರಾದ ಹರ್ಷ್ ಥಾಕರ್ (30; 24ಎ, 4x3, 6x1) ಹಾಗೂ ಸಾದ್ ಬಿನ್ ಜಫರ್ (28; 26ಎ, 4x3, 6x1) ಹೋರಾಟ ತೋರಿದ್ದು ಬಿಟ್ಟರೆ, ಉಳಿದ ಬ್ಯಾಟರ್‌ಗಳು ಅಫ್ಗನ್ ತಂಡದ ಸ್ಪಿನ್ ಬೌಲಿಂಗ್ ದಾಳಿ ಎದುರಿಸುವಲ್ಲಿ ವಿಫಲರಾದರು.

ಇಬ್ರಾಹಿಂ ಜದ್ರಾನ್ ಪಿಟಿಐ ಚಿತ್ರ

ಇದಕ್ಕೆ ಮೊದಲು, ಟಾಸ್ ಗೆದ್ದ ಕೆನಡಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಜೋಡಿ ರೆಹಮಾನುಲ್ಲಾ ಗುರ್ಬಾಜ್ (30; 20ಎ) ಮತ್ತು ಇಬ್ರಾಹಿಂ ಅವರು ಉತ್ತಮ ಆರಂಭ ನೀಡಿದರು.

ಆರನೇ ಓವರ್‌ನಲ್ಲಿ ಜಸ್ಕರಣ್ ದೀಪ್ ಅವರು ರೆಹಮಾನುಲ್ಲಾ ವಿಕೆಟ್ ಗಳಿಸಿ, ಜೊತೆಯಾಟ ಮುರಿದರು. ಅದೇ ಓವರ್‌ನಲ್ಲಿ ಗುಲ್ಬದೀನ್ ನೈಬ್ ಅವರ ವಿಕೆಟ್ ಕೂಡ ತಮ್ಮದಾಗಿಸಿಕೊಂಡರು. ಆದರೆ ಇನ್ನೊಂದೆಡೆ ಇಬ್ರಾಹಿಂ ಅವರು ಬೀಸಾಟ ಮುಂದುವರಿಸಿದರು. ಬೌಲರ್‌ಗಳನ್ನು ಆತ್ಮವಿಶ್ವಾಸದಿಂದ ಎದುರಿಸಿದರು. ಅವರಿಗೆ ಸೆದಿಕ್‌ವುಲ್ಲಾ ಅಟಲ್ (44; 32ಎ) ಬೆಂಬಲ ನೀಡಿದರು. ಇವರಿಬ್ಬರು ಮೂರನೇ ವಿಕೆಟ್ ಜೊತೆಯಾಟದಲ್ಲಿ 95 ರನ್ ಗಳಿಸಿದರು.

ಅಟಲ್ ಅವರ ವಿಕೆಟ್ ಕೂಡ ಗಳಿಸಿದ ಜಸ್ಕರಣ್ ಜತೆಯಾಟ ಮುರಿದರು. ಆದರೆ ಇಬ್ರಾಹಿಂ ಅವರು ಮಾತ್ರ ವೇಗವಾಗಿ ರನ್ ಗಳಿಸುತ್ತ ಮೊತ್ತವನ್ನು ಹೆಚ್ಚಿಸಿದರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 200 (ರೆಹಮಾನುಲ್ಲಾ ಗುರ್ಬಾಜ್ 30, ಇಬ್ರಾಹಿಂ ಜದ್ರಾನ್ ಔಟಾಗದೇ 95, ಸೆದಿಕ್‌ವುಲ್ಲಾ ಅಟಲ್ 44, ಜಸ್ಕರಣ್ ಸಿಂಗ್ 52ಕ್ಕೆ3). ಕೆನಡಾ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 118 (ಹರ್ಷ್ ಥಾಕರ್ 30, ಸಾದ್ ಬಿನ್ ಜಫರ್ 28; ಮೊಹಮ್ಮದ್ ನಬಿ 7ಕ್ಕೆ4, ರಶೀದ್ ಖಾನ್ 19ಕ್ಕೆ2).
ಪಂದ್ಯದ ಆಟಗಾರ: ಇಬ್ರಾಹಿಂ ಜದ್ರಾನ್.

ಕೋಲ್ಕತ್ತ ರೇಸ್

ವಿಕ್ಟೋರಿಯಾ ಕ್ರಾಸ್ ಗೆಲ್ಲುವ ನಿರೀಕ್ಷೆ

ಕ್ಯಾಲೋರಿಫಿಕ್ ಕಪ್ ಶುಕ್ರವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಿಕ್ಟೋರಿಯಾ ಕ್ರಾಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಪ್ಪರ್ ಸ್ಟ್ರೀಟ್ 2, ಲೈನ್‌ಅಪ್ ಆ್ಯಂಡ್ ಕಲೆಕ್ಟ್ 3, ಡ್ಯಾನ್ಸಿಂಗ್ ಕ್ವೀನ್ 5
2ನೇ ರೇಸ್: ನಾಟಿ ನ್ಯಾಶ್ 4, ಅರ್ಜೆಂಟೊ 1, ಫಿಫ್ಟಿ ಶೇಡ್ಸ್ 2
3ನೇ ರೇಸ್: ಸೋಯೆನ್‌ಬರ್ಗ್ 7, ಲೀವ್ ಇಟ್ ಲವ್ ಇಟ್ 3, ಗಾಡ್‌ಸೆಂಡ್ ಡಿವೈನ್ 6
4ನೇ ರೇಸ್: ಕಾಂಟೆಸ್ಸಿನ 1, ಥ್ರೀ ಲಿಟ್ಲ್ ವರ್ಡ್ಸ್ 2, ಎಲೂಸಿವ್ ರೇಂಜರ್ 5
5ನೇ ರೇಸ್: ವಿಕ್ಟೋರಿಯಾ ಕ್ರಾಸ್ 4, ಮೊರಾನೊ 3, ಸ್ಟಾರ್ ಕಾನ್ಸೆಪ್ಟ್ 7
6ನೇ ರೇಸ್: ಮೆಸರ್ಸ್ ಬ್ರ್ಯಾಂಡೊ 11, ಗ್ಲೋಬಲ್ ಫ್ಯಾಷನ್ 6, ಅಮೇಜ್ ಆ್ಯಂಡ್ ಇನ್‌ಸ್ಪೈರ್ 2

ಉತ್ತಮ ಬೆಟ್: ಸೋಯೆನ್‌ಬರ್ಗ್

ಜಾಕ್‌ಪಾಟ್‌ಗೆ	ಟ್ರಿಬಲ್
2,3,4,5,6	4,5,6

ಪಾಕಿಸ್ತಾನ: ಹಾಕಿ ಬಿಕ್ಕಟ್ಟು ಉಲ್ಬಣ

ಕರಾಚಿ (ಪಿಟಿಐ): ಪಾಕಿಸ್ತಾನದ ಹಾಕಿ ಕ್ರೀಡೆಯಲ್ಲಿ ತಲೆದೋರಿರುವ ಬಿಕ್ಕಟ್ಟು ತೀವ್ರಗೊಂಡಿದೆ. ಇತ್ತೀಚೆಗೆ ಐಎಚ್‌ಎಫ್ ಪ್ರೊ ಲೀಗ್ ಆಡಲು ಆಸ್ಟ್ರೇಲಿಯಾಕ್ಕೆ ಹೋಗಿದ್ದ ತಂಡದ ಆಟಗಾರರ ಹೋಟೆಲ್ ವಾಸ್ತವ್ಯಕ್ಕೆ ಸಕಾಲದಲ್ಲಿ ಹಣ ಪಾವತಿಯಾಗದೇ ಕೆಲವು ಗಂಟೆ ಬೀದಿಗೆ ಬೀಳುವಂತಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ಹಾಕಿ ಫೆಡರೇಷನ್ ಅಧ್ಯಕ್ಷ ತಾರಿಕ್ ಬುಗ್ತಿ ಗುರುವಾರ ರಾಜೀನಾಮೆ ನೀಡಿದ್ದಾರೆ.

ಇದೇ ವೇಳೆ, ಬುಗ್ತಿ ಅವರು ಫೆಡರೇಷನ್‌ನ ದುರಾಡಳಿತದ ವಿರುದ್ಧ ಧ್ವನಿಯೆತ್ತಿದ್ದ ಪಾಕ್ ಹಾಕಿ ತಂಡದ ನಾಯಕ ಅಮ್ಮದ್ ಶಕೀಲ್ ಬಟ್ ಅವರಿಗೆ ಎರಡು ವರ್ಷಗಳ ನಿಷೇಧ ವಿಧಿಸಿದ್ದಾರೆ.

ತಮ್ಮ ರಾಜೀನಾಮೆ ಪತ್ರವನ್ನು ಫೆಡರೇಷನ್‌ನ ಮಹಾಪೋಷಕರಾದ ಪ್ರಧಾನಿ ಶಹಬಾಜ್ ಶರೀಫ್ ಅವರಿಗೆ ಕಳುಹಿಸಿರುವುದಾಗಿ ಬುಗ್ತಿ ತಿಳಿಸಿದ್ದಾರೆ. 'ಆಸ್ಟ್ರೇಲಿಯಾದಲ್ಲಿ ನಡೆದ ಇಡೀ ಪ್ರಕರಣಕ್ಕೆ ಸಂಬಂಧಿಸಿ ನಿಷ್ಪಕ್ಷಪಾತ ತನಿಖೆಯನ್ನು ನಡೆಸುವಂತೆ ಪ್ರಧಾನಿ ಮತ್ತು ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಅವರಿಗೆ ಪತ್ರದಲ್ಲಿ ತಿಳಿಸಿದ್ದೇನೆ' ಎಂದು ಅವರು ತಿಳಿಸಿದ್ದಾರೆ.

ಗಾದಿ ತೊರೆಯುವ ಮೊದಲು, ಅಧ್ಯಕ್ಷ ಸ್ಥಾನದ ಅಧಿಕಾರ ಬಳಸಿ ತಂಡದ ನಾಯಕ ಅಮ್ಮದ್ ಶಕೀಲ್ ಬಟ್ ಅವರ ವಿರುದ್ಧ ಕ್ರಮ ಕೈಗೊಂಡಿದ್ದಾರೆ. 'ಪಾಕಿಸ್ತಾನದ ಹಾಕಿಗೆ ಮಸಿಬಳಿದ ಬಟ್ ಅವರಿಗೆ ದೇಶೀಯ ಮತ್ತು ಅಂತರ ರಾಷ್ಟ್ರೀಯ ಹಾಕಿ ಆಡದಂತೆ 2 ವರ್ಷಗಳ ನಿಷೇಧ ವಿಧಿಸಲಾಗಿದೆ' ಎಂದಿದ್ದಾರೆ.

'ಪ್ರೊ ಲೀಗ್ ಪಂದ್ಯಗಳಿಗೆ ಹೋಗುವ ಬದಲು ಆಟಗಾರರು ಅಡುಗೆಕೋಣೆ ಶುಚಿಗೊಳಿಸುವ ಜೊತೆಗೆ ಪಾತ್ರೆಗಳನ್ನೂ ತೊಳೆಯಬೇಕಾಗಿತ್ತು' ಎಂದು ಬಟ್ ಅವರು ಲಾಹೋರ್‌ನಲ್ಲಿ ಗುಡುಗಿದ್ದರು. ಆ ಪ್ರವಾಸದಲ್ಲಿ ತಂಡ ಆತಿಥೇಯ ಆಸ್ಟ್ರೇಲಿಯಾ ಮತ್ತು ಜರ್ಮನಿ ವಿರುದ್ಧ ಆಡಿದ ನಾಲ್ಕೂ ಪಂದ್ಯಗಳಲ್ಲಿ ಸೋತಿತ್ತು



Carens Clavis
For epic journeys

The new Carens Clavis is thoughtfully designed around your family. With high ground clearance, 3-row comfort, a bold design, next-gen Kia Connect**, and ADAS Level 2, it's built for safe, seamless and epic journeys with the ones who matter. Bring home India's most loved 3-row family car today.

Built Smart Styled for the family


Dual Pane Panoramic Sunroof

67.62 cm (26.62") Dual Panoramic Display Panel

ADAS Level 2# with 20 Autonomous Features

Ventilated Front Seats


Smart Pure Air Purifier with AQI Display


BOSE Premium Sound System with 8 Speakers

Robust 18 Hi – Safety Package (Standard across all variants)
• Front Dual Airbags • Front Seat Side Airbags • Side Curtain Airbags • ABS (Anti-lock Brake System) • BAS (Brake Assist System) • ESC (Electronic Stability Control) • VSM (Vehicle Stability Management) • HAC (Hill-start Assist Control) • ESS (Emergency Stop Signal) • DBC (Downhill Brake Control) • Highline Tyre Pressure Monitor • Rear Parking Sensors • Speed Sensing Auto Door Lock • Impact Sensing Auto Door Unlock • All Seats 3-Point Seat Belts with Reminder • ISOFIX • Rear Occupant Alert • All Wheel Disc Brakes

For more information, visit our dealership or contact: 1800 108 5000 | 093195 91407 | www.kia.com | Carens Clavis | kiacare@kiaindia.net | Look for "Kia India" @

Bangalore: **PPS Kia:** Mysore Road, Tel: 6309990010; **JSP Kia:** Bellandur, Tel: 9513918131; Hosur Road, Tel: 9986644472; Sarjapur, Tel: 8095553636; **VST Kia:** Palace Cross, Tel: 9606988123, Yeshwanthpur, Tel: 9606988124 **Naara Kia:** JP Nagar, Tel: 7406528200, Kanakpura Road, Tel: 907010099; **Epitome Kia:** Whitefield, Tel: 9606970216, Yelahanka, Tel: 7406343339, Varthur, Tel: 9844240044, Avalahalli, Tel: 7022317666; **Taapasi Kia:** Kalyan Nagar, Tel: 8095537777; Koramangala, Tel: 9071177333; **Advaith Kia:** Lalbagh, Tel: 9611006006, Magadi Road, Tel: 6364871023, Banashankari, Tel: 6364871022, Basaweshwar Nagar, Tel: 6364871024; Tumkur: **PPS Kia:** Tel: 6303622210; Kolar: **Epitome Kia:** Tel: 8951903224

*Terms & Conditions Apply. 3 years standard warranty and 2 years free extended warranty. ^Benefits shown are the combination of exchange, loyalty, scrappage and special benefits, which are applicable on select models of 2025 stock and variants, may vary from model to model and region to region. **Kia Connect comes with 3 years free subscription. Kia Connect features may vary depending on the variant, device compatibility, software and network availability in the both vehicle and Alexa device. Kia Connect skill is only available in India and can be interacted with in English and Hindi. #Advanced Driver Assistance System (ADAS) is not a substitute for human eye and driver vigilance. It is an assistance feature that enhances driving experience and safety. Effectiveness of ADAS may vary based on actual situation and all objects around vehicle may not be detected. The driver shall remain responsible for safe, vigilant, and attentive driving. The product & feature images shown here are for representation purpose only, may not be part of standard fitment and may vary. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications and other details of any model or to discontinue any model without prior notice. For more details visit your local Kia dealership. Kia India Pvt. Ltd. urges you to follow traffic rules, these are meant to keep you safe on roads.

ಫೈನಲ್‌ನಲ್ಲಿ ಕರ್ನಾಟಕ–ಕಾಶ್ಮೀರ ಮುಖಾಮುಖಿ

ಡ್ರಾ ಪಂದ್ಯದಲ್ಲಿ ಕರ್ನಾಟಕ: ಉತ್ತರಾಖಂಡದ ಸೋಲು ತಪ್ಪಿಸಿದ ಸಚಿನ್ ರಾವತ್, ಅಭಯ್ ನೇಗಿ

ಲಖನೌ (ಪಿಟಿಐ): ಹನ್ನೊಂದು ವರ್ಷಗಳ ನಂತರ ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು. ಹುಬ್ಬಳ್ಳಿಯಲ್ಲಿ ಇದೇ 24ರಿಂದ ನಡೆಯಲಿರುವ ಪಂದ್ಯದಲ್ಲಿ ದೇವದತ್ತ ಪಡಿಕ್ಕಲ್ ಬಳಗವು ಜಮ್ಮು–ಕಾಶ್ಮೀರ ತಂಡವನ್ನು ಎದುರಿಸಲಿದೆ.

ಕರ್ನಾಟಕವು ಎಂಟು ಬಾರಿ ಚಾಂಪಿಯನ್ ಮತ್ತು ಆರು ಸಲ ರನ್ನರ್ಸ್ ಅಪ್ ಆಗಿದೆ. ಜಮ್ಮು–ಕಾಶ್ಮೀರ ಇದೇ ಮೊದಲ ಸಲ ಫೈನಲ್ ಪ್ರವೇಶಿಸಿದೆ.

ಏಕನಾ ಕ್ರೀಡಾಂಗಣದಲ್ಲಿ ಗುರುವಾರ ಮುಕ್ತಾಯವಾದ ಉತ್ತರಾಖಂಡ ಎದುರಿನ ಸೆಮಿಫೈನಲ್ ಪಂದ್ಯವು ಡ್ರಾ ಆಯಿತು.

ನಾಲ್ಕನೇ ದಿನದಾಟದ ಅಂತ್ಯಕ್ಕೆ ಕರ್ನಾಟಕವು ಎರಡನೇ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗಳಿಗೆ 299 ರನ್ ಗಳಿಸಿತ್ತು. 24 ರನ್‌ಗಳ ಅಂತರದಲ್ಲಿ ಉಳಿದ ನಾಲ್ಕು ವಿಕೆಟ್‌ಗಳು ಪತನವಾದವು. ಕೆ.ಎಲ್. ರಾಹುಲ್ (ಔಟಾಗದೆ 86) ಅಜೇಯರಾಗುಳಿದರು. ಕರ್ನಾಟಕವು ಒಟ್ಟು 826 ರನ್‌ಗಳ ಮುನ್ನಡೆ ಸಾಧಿಸಿತು.

ಅದಕ್ಕುತ್ತರವಾಗಿ ಉತ್ತರಾಖಂಡ ತಂಡವು 62 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 260 ರನ್ ಗಳಿಸಿತು. ಒಂದು ಹಂತದಲ್ಲಿ ಉತ್ತರಾಖಂಡ ತಂಡವು ಶ್ರೇಯಸ್ ಗೋಪಾಲ್ (83ಕ್ಕೆ3) ಮತ್ತು ಪ್ರಸಿದ್ಧ ಕೃಷ್ಣ (17ಕ್ಕೆ2) ಅವರ ಬೌಲಿಂಗ್ ಮುಂದೆ 156 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿತ್ತು. ಈ ಹಂತದಲ್ಲಿ ಕರ್ನಾಟಕ ತಂಡಕ್ಕೆ ಜಯಸಾಧಿಸುವ ಭರವಸೆ ಮೂಡಿತ್ತು.

ಆದರೆ ಸಚಿನ್ ರಾವತ್ (ಅಜೇಯ 53) ಮತ್ತು ಅಭಯ ನೇಗಿ (ಅಜೇಯ 57) ಅವರು ಮುರಿಯದ ಏಳನೇ ವಿಕೆಟ್ ಜೊತೆಯಾಟದಲ್ಲಿ 104 (135ಎಸೆತ) ರನ್ ಸೇರಿಸಿದರು. ಇದರಿಂದಾಗಿ ಪಂದ್ಯ ಡ್ರಾ ಆಗಿ ಉತ್ತರಾಖಂಡದ ಸೋಲು ತಪ್ಪಿತು.

ಕರ್ನಾಟಕದ ಶ್ರೇಯಸ್ ಗೋಪಾಲ್ ಬೌಲಿಂಗ್ ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 194.4 ಓವರ್‌ಗಳಲ್ಲಿ 736. ಉತ್ತರಾಖಂಡ: 88.5 ಓವರ್‌ಗಳಲ್ಲಿ 233. ಎರಡನೇ ಇನಿಂಗ್ಸ್: ಕರ್ನಾಟಕ: 74.3 ಓವರ್‌ಗಳಲ್ಲಿ 323 (ಕೆ.ಎಲ್. ರಾಹುಲ್ ಔಟಾಗದೇ 86, ಮಯಂಕ್ ಮಿಶ್ರಾ 69ಕ್ಕೆ4, ಅಭಯ್ ನೇಗಿ 63ಕ್ಕೆ2) ಉತ್ತರಾಖಂಡ: 62 ಓವರ್‌ಗಳಲ್ಲಿ 6ಕ್ಕೆ260 (ಅವನೀಶ್ ಸುಧಾ 66, ಆದಿತ್ಯ ರಾವತ್ ಔಟಾಗದೇ 53, ಕುನಾಲ್ ಚಾಂಡೇಲಾ 20, ಅಭಯ್ ನೇಗಿ ಔಟಾಗದೇ 57, ಶ್ರೇಯಸ್ ಗೋಪಾಲ್ 83ಕ್ಕೆ3, ಪ್ರಸಿದ್ಧಕೃಷ್ಣ 17ಕ್ಕೆ2) **ಫಲಿತಾಂಶ:** ಡ್ರಾ. ಫೈನಲ್‌ಗೆ ಕರ್ನಾಟಕ.

ಹುಬ್ಬಳ್ಳಿ ಮೈದಾನದಲ್ಲಿ ಮೊದಲ ಫೈನಲ್

ಬೆಂಗಳೂರು: ಹುಬ್ಬಳ್ಳಿಯ ನೃಪತುಂಗ ಬೆಟ್ಟದ ಮಡಿಲಲ್ಲಿರುವ ಕೆಎಸ್‌ಸಿಎ ಕ್ರೀಡಾಂಗಣವು ಇದೇ ಮೊದಲ ಬಾರಿಗೆ ರಣಜಿ ಟ್ರೋಫಿ ಫೈನಲ್ ಪಂದ್ಯವನ್ನು ಆಯೋಜಿಸಲಿದೆ.

ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನವೀಕರಣ ಕಾರ್ಯ ನಡೆಯುತ್ತಿದೆ. ಆದ್ದರಿಂದ ಹುಬ್ಬಳ್ಳಿಯ ಕ್ರೀಡಾಂಗಣದಲ್ಲಿ ಆಯೋಜಿಸಲು ಕೆಎಸ್‌ಸಿಎ ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಪ್ರತಿನಿಧಿಗಳ ಸಭೆಯಲ್ಲಿ ನಿರ್ಧರಿಸಲಾಯಿತು.

'ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸರ್ಕಾರದ ಸಮಿತಿಯ ಶಿಫಾರಸ್ಸಿನಂತೆ ಮೂಲಸೌಲಭ್ಯ ಮತ್ತು ಸುರಕ್ಷತೆಯ ಕಾಮಗಾರಿಗಳು ನಡೆಯುತ್ತಿವೆ. ಕೆಲವು ಪ್ರವೇಶ ದ್ವಾರಗಳ ನವೀಕರಣ ಕಾರ್ಯವೂ ಭರದಿಂದ ಸಾಗುತ್ತಿದೆ' ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ.

ಕರ್ನಾಟಕ ತಂಡವು 2014–15ರ ನಂತರ ರಣಜಿ ಟ್ರೋಫಿ ಗೆದ್ದಿಲ್ಲ. ಇದೀಗ ತವರು ರಾಜ್ಯದಲ್ಲಿ ಫೈನಲ್ ಆಡುವ ಅವಕಾಶ ಲಭಿಸಿದೆ. ಗ್ರಾಮಾಂತರ ವಿಭಾಗದಲ್ಲಿ ಫೈನಲ್ ಆಯೋಜಿಸುತ್ತಿರುವುದು ಇದು ಮೊದಲೇನಲ್ಲ. 2010ರಲ್ಲಿ ಮೈಸೂರಿನಲ್ಲಿ ಕರ್ನಾಟಕ–ಮುಂಬೈ ನಡುವಣ ಫೈನಲ್ ನಡೆದಿತ್ತು.

2ನೇ ಟಿ20 ಪಂದ್ಯ: ವೋಲ್–ಮೂನಿ ಶತಕದ ಜತೆಯಾಟ

ಆಸ್ಟ್ರೇಲಿಯಾ ವನಿತೆಯರಿಗೆ ಜಯ

ಕೆನ್‌ಬೆರಾ (ಪಿಟಿಐ): ಜಾರ್ಜಿಯಾ ವೋಲ್ ಮತ್ತು ಬೆತ್ ಮೂನಿ ಅವರ ನಡುವಣ ಮೊದಲ ವಿಕೆಟ್‌ಗೆ ದಾಖಲೆ ಜೊತೆಯಾಟದ ನೆರವಿನಿಂದ ಆಸ್ಟ್ರೇಲಿಯಾ ತಂಡ ಗುರುವಾರ ನಡೆದ ಟಿ20 ಸರಣಿಯ ಎರಡನೇ ಪಂದ್ಯದಲ್ಲಿ ಭಾರತ ತಂಡದ ವಿರುದ್ಧ 19 ರನ್‌ಗಳ ಜಯ ಸಾಧಿಸಿತು. ಮೂರು ಪಂದ್ಯಗಳ ಸರಣಿಯನ್ನು ಆತಿಥೇಯರು 1–1ರಲ್ಲಿ ಸಮ ಮಾಡಿಕೊಂಡರು.

ಸರಣಿಯ ಅಂತಿಮ ಹಾಗೂ ನಿರ್ಣಾಯಕ ಪಂದ್ಯ ಶನಿವಾರ ಆಡಿಲೇಡ್ ಓವಲ್‌ನಲ್ಲಿ ನಡೆಯಲಿದೆ.

ವೋಲ್ ಕೇವಲ 57 ಎಸೆತಗಳಲ್ಲಿ ಒಂದು ಸಿಕ್ಸರ್, 11 ಬೌಂಡರಿಗಳಿದ್ದ 88 ರನ್ ಬಾರಿಸಿದರೆ, ಬೆತ್ ಮೂನಿ ಕೊಂಚ ಸಂಯಮದ ಆಟವಾಡಿ 39 ಎಸೆತಗಳಲ್ಲಿ 46 ರನ್ (4x4) ಗಳಿಸಿದರು. ಇವರಿಬ್ಬರೂ ಮೊದಲ ವಿಕೆಟ್‌ಗೆ 128 ರನ್ ಸೇರಿಸಿ ತಂಡಕ್ಕೆ ಭದ್ರ ಅಡಿಪಾಯ ಹಾಕಿಕೊಟ್ಟರು.

ಭಾರತ ಸಹ ಉತ್ತಮ ಆರಂಭ ಮಾಡಿದರೂ ನಂತರ ವಿಕೆಟ್‌ಗಳು ನಿಯಮಿತವಾಗಿ ಬಿದ್ದವು. ಅಂತಿಮವಾಗಿ 9 ವಿಕೆಟ್‌ಗೆ 144 ರನ್ ಗಳಿಸಲಷ್ಟೇ ಶಕ್ತವಾಯಿತು. ಶಫಾಲಿ ವರ್ಮಾ (29) ಮತ್ತು ಸ್ಮೃತಿ ಮಂದಾನ (31) ಮೊದಲ ವಿಕೆಟ್‌ಗೆ 6.4 ಓವರುಗಳಲ್ಲಿ 57 ರನ್ ಸೇರಿಸಿದ್ದರು.

ಆದರೆ ಮಧ್ಯಮ ಕ್ರಮಾಂಕದಲ್ಲಿ ನಾಯಕಿ ಹರ್ಮನ್‌ಪ್ರೀತ್ ಕೌರ್ (36, 30ಎಸೆತ, 4x5) ಬಿಟ್ಟರೆ ಉಳಿದವರು, ಆಸ್ಟ್ರೇಲಿಯಾದ ಸಾಂಘಿಕ ಬೌಲಿಂಗ್ ದಾಳಿಯನ್ನು ಎದುರಿಸುವಲ್ಲಿ ವಿಫಲರಾದರು. ಒಂದು ಹಂತದಲ್ಲಿ ಭಾರತ ಏಳು ರನ್‌ಗಳ ಅಂತರದಲ್ಲಿ ಆರು ವಿಕೆಟ್‌ಗಳನ್ನು ಕಳೆದುಕೊಂಡಿತು.

ಆಫ್ ಸ್ಪಿನ್ನರ್ ಆ್ಯಶ್ಲೆ ಗಾರ್ಡನರ್ 22 ರನ್ನಿಗೆ 3 ವಿಕೆಟ್ ಪಡೆದರೆ, ಕಿಮ್ ಗಾರ್ತ್, ಅನ್ನಾಬೆಲ್ ಸದರ್‌ಲ್ಯಾಂಡ್ ಮತ್ತು ಆಸ್ಟ್ರೇಲಿಯಾ ನಾಯಕಿ ಸೋಫಿ ಮಾಲಿನೆ ತಲಾ ಎರಡು ವಿಕೆಟ್‌ಗಳನ್ನು ಪಡೆದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ ಮಹಿಳಾ ತಂಡ: 20 ಓವರುಗಳಲ್ಲಿ 4 ವಿಕೆಟ್‌ಗೆ 163 (ಜಾರ್ಜಿಯಾ ವೋಲ್ 88, ಬೆತ್ ಮೂನಿ 46; ಅರುಂಧತಿ ರೆಡ್ಡಿ 30ಕ್ಕೆ2); ಭಾರತ ಮಹಿಳಾ ತಂಡ: 20 ಓವರುಗಳಲ್ಲಿ 9 ವಿಕೆಟ್‌ಗೆ 144 (ಶಫಾಲಿ ವರ್ಮಾ 29, ಸ್ಮೃತಿ ಮಂದಾನ 31, ಹರ್ಮನ್‌ಪ್ರೀತ್ ಕೌರ್ 36; ಆಶ್ಲೆ ಗಾರ್ಡನರ್ 22ಕ್ಕೆ3, ಕಿಮ್ ಗಾರ್ತ್ 16ಕ್ಕೆ2, ಅನ್ನಾಬೆಲ್ ಸದರ್‌ಲ್ಯಾಂಡ್ 18ಕ್ಕೆ2, ಸೋಫಿ ಮಾಲಿನ 37ಕ್ಕೆ2)ಪಂದ್ಯದ ಆಟಗಾರ್ತಿ: ಜಾರ್ಜಿಯಾ ವೋಲ್.

ಆಸ್ಟ್ರೇಲಿಯಾ ತಂಡದ ಜಾರ್ಜಿಯಾ ವೋಲ್ 'ಎಕ್ಸ್' ಚಿತ್ರ

ಎಂಟರ ಘಟ್ಟಕ್ಕೆ ವೈಷ್ಣವಿ ಅಡ್ಕರ್ ಲಗ್ಗೆ

ಐಟಿಎಫ್ ಮಹಿಳಾ ಟೆನಿಸ್ ಟೂರ್ನಿ: ಶ್ರೀವಲ್ಲಿ, ಸಹಜಾ ನಿರ್ಗಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಷ್ಣವಿ ಅಡ್ಕರ್ ಅವರು ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯಲ್ಲಿ ಗುರುವಾರ ಎಂಟರ ಘಟ್ಟ ತಲುಪುವ ಮೂಲಕ ಭಾರತದ ಸವಾಲನ್ನು ಜೀವಂತವಾಗಿರಿಸಿದ್ದಾರೆ. ಆದರೆ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಮತ್ತು ಸಹಜಾ ಯಮಲಪಲ್ಲಿ ಅವರು ತಮಗಿಂತ ಮೇಲಿನ ಕ್ರಮಾಂಕದ ಆಟಗಾರ್ತಿಯರ ಎದುರು ಸೋಲನುಭವಿಸಿದರು.

ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಸಹಜಾ ಹೋರಾಟ ತೋರದೇ ಅಗ್ರ ಶ್ರೇಯಾಂಕದ ತಾಲಿಯಾ ಗಿಬ್ಸನ್ ಅವರಿಗೆ ಶರಣಾದರು. 16ರ ಸುತ್ತಿನ ಈ ಪಂದ್ಯದಲ್ಲಿ ಆಸ್ಟ್ರೇಲಿಯಾದ ಆಟಗಾರ್ತಿ 6–0, 6–0ಯಿಂದ 58 ನಿಮಿಷಗಳಲ್ಲಿ ಗೆದ್ದರು. ಗಿಬ್ಸನ್ ವಿಶ್ವ ಕ್ರಮಾಂಕದಲ್ಲಿ 111ನೇ ಸ್ಥಾನದಲ್ಲಿದ್ದಾರೆ.

543ನೇ ಕ್ರಮಾಂಕದ ಶ್ರೀವಲ್ಲಿ ರಶ್ಮಿಕಾ ಇನ್ನೊಂದು ಸೆಣಸಾಟದಲ್ಲಿ ಮೂರನೇ ಶ್ರೇಯಾಂಕದ ಹ್ಯಾನೆ ವಂಡೆವಿಂಕಿಲ್ ಅವರ ಎದುರು ಹೋರಾಟ ತೋರಿದರು. ಆದರೆ ಅವರ ಚೇತರಿಕೆ ಅಲ್ಪಕಾಲದ್ದಾಯಿತು. 124ನೇ ಕ್ರಮಾಂಕ ಹೊಂದಿರುವ ಬೆಲ್ಜಿಯಂನ ಹ್ಯಾನೆ 6–2, 6–7 (7), 6–1 ರಿಂದ ಭಾರತದ ಆಟಗಾರ್ತಿಯ ಹೋರಾಟವನ್ನು ಮೆಟ್ಟಿನಿಂತರು.

ಈ ನಿರಾಸೆಯ ನಡುವೆ, 21 ವರ್ಷ ವಯಸ್ಸಿನ ವೈಷ್ಣವಿ ಅಡ್ಕರ್ ಆತಿಥೇಯ ದೇಶದ ಭರವಸೆಯಾಗಿ ಉಳಿದರು. ಅವರು ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಹಿನ್ನಡೆಯಿಂದ ಚೇತರಿಸಿಕೊಂಡು ಎಂಟನೇ ಶ್ರೇಯಾಂಕದ ಮಾಯಿ ಹೊಟಾಮ (ಜಪಾನ್) ಅವರನ್ನು 2–6, 6–4, 7–6 ರಿಂದ ಸೋಲಿಸಿದರು. ವಿಶ್ವ ಕ್ರಮಾಂಕದಲ್ಲಿ 690ನೇ ಸ್ಥಾನದಲ್ಲಿರುವ ವೈಷ್ಣವಿ ಅವರು ವೈಲ್ಡ್ ಕಾರ್ಡ್ ಮೂಲಕ ಟೂರ್ನಿಯಲ್ಲಿ ಆಡುತ್ತಿದ್ದಾರೆ. ಹೊಟಾಮ ಕ್ರಮಾಂಕಪಟ್ಟಿಯಲ್ಲಿ 220ನೇ ಸ್ಥಾನದಲ್ಲಿದ್ದಾರೆ.

ಐದನೇ ಶ್ರೇಯಾಂಕದ ಪೊಲಿನಾ ಇಯಾಟ್ಸೆಂಕೊ ಅವರು 6–7 (6), 6–3, 6–2 ರಿಂದ ರುಮೇನಿಯಾದ ಅರಿನಾ ಗೇಬ್ರಿಯೆಲಾ ವಾಸಿಲೆಸ್ಕ್ಯು ಅವರನ್ನು ಪರಾಭವಗೊಳಿಸಿದರು.

ಏಳನೇ ಶ್ರೇಯಾಂಕದ ಎಲಿನಾ ಪ್ರಿಡಾನ್ಕಿನಾ 6–0, 6–1 ರಿಂದ ನೆದರ್ಲೆಂಡ್ಸ್‌ನ ಜಾಸ್ಮಿನ್ ಗಿಂಬ್ರೆರೆ ವಿರುದ್ಧ ಜಯಪಡೆದರು. ಎರಡನೇ ಶ್ರೇಯಾಂಕದ ಲನ್ಲನಾ ತರಾರುಡೀ 6–4, 6–4 ರಿಂದ ಮೀ ಯಮಾಗುಚಿ ಅವರನ್ನು ಸೋಲಿಸಿ ಎಂಟರ ಘಟ್ಟಕ್ಕೆ ಮುನ್ನಡೆದರು.

ಭಾರತದ ವೈಷ್ಣವಿ ಅಡ್ಕರ್ ಚಿತ್ರ: ಜನಾರ್ದನ ಬಿ.ಕೆ.

ಶೂಟಿಂಗ್ ಲೀಗ್ ಬಿಡ್ ಮೌಲ್ಯ ನೈಜವಲ್ಲ: ಸ್ಪಷ್ಟನೆ

ಬೆಂಗಳೂರು: ಕರ್ನಾಟಕ ಶೂಟಿಂಗ್ ಲೀಗ್ ಸ್ಪರ್ಧೆಗಾಗಿ ಈಚೆಗೆ ನಡೆಸಿದ ಬಿಡ್ ಪ್ರಕ್ರಿಯೆಯಲ್ಲಿ ಘೋಷಿಸಿದ್ದು 'ಅಣಕು ಮೌಲ್ಯ'ವಾಗಿದೆ. ಬಿಡ್‌ನಲ್ಲಿ ಘೋಷಣೆ ಮಾಡಿದ ಹಣವನ್ನು ಯಾವುದೇ ಸ್ಪರ್ಧಿಗೂ ನೀಡುವುದಿಲ್ಲ ಎಂದು ಕರ್ನಾಟಕ ರಾಜ್ಯ ರೈಫಲ್ ಸಂಸ್ಥೆ ಸ್ಪಷ್ಟನೆ ನೀಡಿದೆ.

'ಬಿಡ್ಡಿಂಗ್ ಪ್ರಕ್ರಿಯೆಯು ಸಂಪೂರ್ಣವಾಗಿ ಅಣಕು ಹಣದ ಮೂಲಕ ನಡೆಸಲ್ಪಟ್ಟಿದ್ದು, ಲೀಗ್‌ನ ವಿನ್ಯಾಸ ಮತ್ತು ತಂಡಗಳ ಹಂಚಿಕೆ ಉದ್ದೇಶಕ್ಕಾಗಿ ಮಾತ್ರ ಬಳಸಲಾಗಿದೆ. ಯಾವುದೇ ಶೂಟರ್‌ಗಳಿಗೆ ಬಿಡ್ಡಿಂಗ್ ವೇಳೆ ಉಲ್ಲೇಖಿಸಲಾದ ಮೊತ್ತವನ್ನು ನೈಜವಾಗಿ ಪಾವತಿಸುವುದಿಲ್ಲ. ರಾಜ್ಯದಲ್ಲಿ ಶೂಟಿಂಗ್ ಕ್ರೀಡೆಯ ಅಭಿವೃದ್ಧಿ ಮತ್ತು ಯುವ ಪ್ರತಿಭೆಗಳಿಗೆ ಉತ್ತಮ ಸ್ಪರ್ಧಾತ್ಮಕ ವೇದಿಕೆ ಒದಗಿಸುವ ಉದ್ದೇಶದಿಂದ ಈ ಲೀಗ್ ಅನ್ನು ಆಯೋಜಿಸಲಾಗಿದೆ' ಎಂದು ರೈಫಲ್ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

'ಕರ್ನಾಟಕ ಶೂಟಿಂಗ್ ಲೀಗ್' ಇದೇ 28 ಮತ್ತು ಮಾರ್ಚ್ 1ರಂದು ಮೈಸೂರು ರಸ್ತೆಯ ಸಾಯ್ ಆವರಣದಲ್ಲಿ ನಡೆಯಲಿದೆ.

ಲೀಗ್‌ನಲ್ಲಿ ಎಂಟು ಫ್ರ್ಯಾಂಚೈಸಿಗಳ ತಂಡಗಳು ಸ್ಪರ್ಧಿಸಲಿವೆ. ಮಂಗಳವಾರ ನಡೆದ ಅಣಕು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಫ್ರ್ಯಾಂಚೈಸಿಗಳು ತಮ್ಮ ತಂಡಕ್ಕೆ ತಲಾ 11 ಶೂಟರ್‌ಗಳನ್ನು ಆಯ್ಕೆ ಮಾಡಿಕೊಂಡವು.

'ಸಂಸ್ಥೆಯು ಬಿಡ್ ಪ್ರಕ್ರಿಯೆಯಲ್ಲಿ ಬಿಡ್ ಮೊತ್ತ ಪ್ರಕಟಿಸಲಾಗಿದೆ. ಅದನ್ನು ಮಾಧ್ಯಮಗಳ ಮೂಲಕ ಪ್ರಚಾರ ಕೂಡ ಮಾಡಲಾಗಿದೆ. ಆದರೆ ನಿಜವಾಗಿ ಹಣ ಕೊಡುವುದಿಲ್ಲ. ಇದರಿಂದಾಗಿ ನಮ್ಮ ಮಕ್ಕಳಿಗೆ ಪ್ರಾಯೋಜಕರು ಹಣ ವಿನಿಯೋಗಿಸಲು ಮುಂದೆ ಬರುತ್ತಿಲ್ಲ. ಬಿಡ್ ಹಣ ಸಿಕ್ಕಿದೆ ಸಾಕಲ್ಲ. ಮತ್ತೇಕೆ ಪ್ರಾಯೋಜಕತ್ವ ಬೇಕು ಎನ್ನುತ್ತಿದ್ದಾರೆ' ಎಂದು ಶೂಟರ್‌ವೊಬ್ಬರ ಪಾಲಕರು (ಹೆಸರು ಗೋಪ್ಯವಾಗಿಡಲು ಕೋರಿದ್ದಾರೆ) ಪ್ರಜಾವಾಣಿಗೆ ದೂರಿದರು.

ಈ ಹಿನ್ನೆಲೆಯಲ್ಲಿ ಸಂಸ್ಥೆಯು ಸ್ಪಷ್ಟೀಕರಣ ನೀಡಿದೆ.

ಹಿಂಬಡ್ತಿ ಹಾದಿಯಲ್ಲಿ ಡಿವೈಇಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಚನ್ ಷಟ್ಸಂಗ್ ಅವರ ಐದು ಗೋಲುಗಳ ನೆರವಿನಿಂದ ಬಿಟಿಎಂ ಫುಟ್‌ಬಾಲ್ ಕ್ಲಬ್ (ಎಫ್‌ಸಿ) ತಂಡವು ಬಿಡಿಎಫ್‌ಎ ಎ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಗುರುವಾರ 9–0ಯಿಂದ ಡಿವೈಇಎಸ್ ಎಫ್‌ಸಿ ತಂಡವನ್ನು ನಿರಾಯಾಸವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಿಟಿಎಂ ತಂಡದ ಆಟಗಾರರು ಗೋಲುಗಳ ಸುರಿಮಳೆಗೈದರು. ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕಿಳಿದ ಸೋಚನ್ (8ನೇ, 10ನೇ, 11ನೇ, 15ನೇ ಹಾಗೂ 65ನೇ ನಿಮಿಷ) ಎದುರಾಳಿ ತಂಡದ ರಕ್ಷಣಾ ವ್ಯವಸ್ಥೆಯನ್ನು ಪುಡಿಗಟ್ಟಿದರು. ಸುಭಾಷ್ ಕೆ. (42), ದೇವರಾಜ್ ಜೆ. (44ನೇ ನಿ.), ಧಾನೇಶ್ ವಸಂತ್ (71ನೇ ನಿ.) ಹಾಗೂ ಮೊಹಮ್ಮದ್ ಗುರ್ಫಾನ್ (90ನೇ ನಿ.) ತಲಾ ಒಂದು ಗೋಲು ಗಳಿಸಿದರು. ಡಿವೈಇಎಸ್ ತಂಡವು ಗೋಲಿನ ಖಾತೆ ತೆರೆಯುವಲ್ಲಿ ವಿಫಲವಾಯಿತು.

ಟೂರ್ನಿಯಲ್ಲಿ ನಿರ್ಲಕ್ಷ್ಯ ಧೋರಣೆಯನ್ನು ಮುಂದುವರಿಸಿರುವ ಡಿವೈಇಎಸ್ (ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ) ತಂಡವು ಗುರುವಾರದ ಪಂದ್ಯದಲ್ಲಿಯೂ 10 ಮಂದಿ ಆಟಗಾರರನ್ನು ಮಾತ್ರ ಕಣಕ್ಕಿಳಿಸಿತ್ತು. ಮುಖ್ಯ ಕೋಚ್ ಎಸ್. ಶಾಂತಿ ಅವರಾಗಲೀ, ಸಹಾಯಕ ಸಿಬ್ಬಂದಿಯಾಗಲೀ ಮೈದಾನದತ್ತ ಸುಳಿಯಲೇ ಇಲ್ಲ.

ದ್ವಿತೀಯ ಪಿಯು ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುವುದಕ್ಕಾಗಿ ತಂಡದ ಕೆಲವು ಆಟಗಾರರು ಗೈರಾಗಿದ್ದರೆ, ಇನ್ನೂ ಕೆಲವರು ಕೋಚ್ ಸಿಬ್ಬಂದಿಯ ಬೇಜವಾಬ್ದಾರಿ ನಡೆಯಿಂದಾಗಿ ಗೈರಾಗಿದ್ದಾರೆ ಎಂದು ತಿಳಿದುಬಂದಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಇಲಾಖೆಯ ಆಯುಕ್ತ ಚೇತನ್ ಆರ್. ಅವರು 'ಮುಖ್ಯ ಕೋಚ್ ವಿರುದ್ಧ ಕ್ರಮ ಜರುಗಿಸಲಾಗುವುದು. ಮುಂದಿನ ಪಂದ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ತಂಡವನ್ನು ಕಣಕ್ಕಿಳಿಸಲಾಗುವುದು' ಎಂದು ಹೇಳಿದರು.

ಡಿವೈಇಎಸ್ ತಂಡವು 13 ಪಂದ್ಯಗಳಿಂದ ಕೇವಲ 7 ಅಂಕ ಸಂಪಾದಿಸಿದ್ದು ಬಿ ಡಿವಿಷನ್‌ಗೆ ಹಿಂಬಡ್ತಿ ಪಡೆಯುವ ಹಾದಿಯಲ್ಲಿದೆ. ಇದೇ 24ರಂದು ರೂಟ್ಸ್ ಎಫ್‌ಸಿ ವಿರುದ್ಧ ನಡೆಯಲಿರುವ ಪಂದ್ಯವು ತಂಡದ ಪಾಲಿಗೆ ನಿರ್ಣಾಯಕವಾಗಲಿದೆ.

ಎ ಡಿವಿಷನ್ ಲೀಗ್‌ನ ಇನ್ನೊಂದು ಪಂದ್ಯದಲ್ಲಿ ಬೆಂಗಳೂರು ಈಗಲ್ಸ್ ಎಫ್‌ಸಿ ಹಾಗೂ ಎಜಿಒಆರ್‌ಸಿ ಎಫ್‌ಸಿ ತಂಡಗಳು 1–1 ಡ್ರಾ ಸಾಧಿಸಿದವು.

ಬಿ ಡಿವಿಷನ್ ಲೀಗ್ ಪಂದ್ಯದಲ್ಲಿ ಪಿಳ್ಳಣ್ಣ ಗಾರ್ಡನ್ ಎಫ್‌ಸಿ ತಂಡವು 1–0ಯಿಂದ ವೆಹಿಕಲ್ಸ್ ಎಫ್‌ಸಿ ತಂಡವನ್ನು ಮಣಿಸಿತು. ಪಿಳ್ಳಣ್ಣ ತಂಡದ ಪರ ಗ್ಯಾಸ್ಪರ್ ಅಂಥೋನಿ (8ನೇ ನಿ.) ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಸಾಂಘಿಕ ಪ್ರದರ್ಶನ ತೋರಿದ ಎಂಪೈರ್ ಎಫ್‌ಸಿ ತಂಡವು 3–0ಯಿಂದ ಅಲ್ ಫತೇ ಎಫ್‌ಸಿ ತಂಡವನ್ನು ಮಣಿಸಿತು. ಎಂಪೈರ್ ತಂಡದ ಮುಹಮ್ಮದ್ ಇಜಾಸ್ (39ನೇ ನಿ.), ಎಂ.ಹವ್ರೊಕಿಪ್ (52ನೇ ನಿ.) ಹಾಗೂ ಸಂಜೀವ್ ಡಿ. ನೊರೊನ್ಹಾ (55ನೇ ನಿ.) ತಲಾ ಒಂದು ಗೋಲು ಗಳಿಸಿದರು.